₹ 6 @vishwavaninews epaper.vishwavani.news vishwavani.news ಬೆಂಗಳೂರು | **ಹುಬ್ಬಳ್ಳಿ** | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಗುರುವಾರ 08.08.2024** **ಸಂಪುಟ:** 67 **ಸಂಚಿಕೆ:**92 **ಪುಟಗಳು:** 12 **ಪ್ರಧಾನ ಸಂಪಾದಕ:** ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ವಿನೇಶ್ ಫೋಗಟ್ ಅನರ್ಹ

ಭಾರತಕ್ಕೆ ಆಘಾತ

ಚಿನ್ನ ಕಸಿದ ತೂಕ

ಸಮಾಚಾರ ಸಣ್ಣದಲ್ಲ

ಸರಕಾರಿ ವಕೀಲರ ಹುದ್ದೆಗೆ ಅರ್ಜಿ ಆಹ್ವಾನ

ಹಾವೇರಿ: ಹಾವೇರಿ ಜಿಲ್ಲೆಯ ಜಿಲ್ಲಾ ಸರ್ಕಾರಿ ವಕೀಲರ ಹುದ್ದೆ ನೇಮಕಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಕನಿಷ್ಠ 10 ವರ್ಷಗಳ ಕಾಲ ವಕೀಲ ವೃತ್ತಿ ಪೂರೈಸಿರಬೇಕು, ಜಿಲ್ಲಾ ಬಾರ್ ಅಸೋಸಿಯೇಶನ್ ಸದಸ್ಯರಾಗಿರಬೇಕು ಹಾಗೂ ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಶರತ್ತುಗಳು ನಿಯಮ 1977ಗಳನ್ವಯ) ಎಲ್ಲಾ ಶರತ್ತುಗಳಿಗೆ ಅರ್ಹನಾಗಿರಬೇಕು. ಅರ್ಹ ಅಭ್ಯರ್ಥಿಗಳು ತಮ್ಮ ವೈಯಕ್ತಿಕ ವಿವರ ಹಾಗೂ ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ 31-08-2024ರೊಳಗಾಗಿ ಖುದ್ದಾಗಿ ಅಥವಾ ಅಂಚೆ ಮೂಲಕ ಜಿಲ್ಲಾಧಿಕಾರಿಗಳು, ಹಾವೇರಿ ಇವರಿಗೆ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ತಗುಲಿ ತಂದೆ-ಮಗನ ಸಾವು

ಹಾವೇರಿ: ಹೊಲದಲ್ಲಿರುವ ಪಂಪ್‌ಸೆಟ್ ದುರಸ್ತಿ ಮಾಡುವಾಗ ವಿದ್ಯುತ್ ತಂತಿ ತಗುಲಿ ತಂದೆ-ಮಗ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ಜಿಲ್ಲೆಯ ರಾಣೇಬೆನ್ನೂರು ತಾಲ್ಲೂಕಿನ ಪತ್ತೇಪುರ ಗ್ರಾಮದಲ್ಲಿ ಬುಧವಾರ ಬೆಳಗ್ಗೆ ನಡೆದಿದೆ. ಮೃತರನ್ನು ಕರಬಸಪ್ಪ ಕಡೇನಾಯಕನಹಳ್ಳಿ (50) ಹಾಗೂ ಅವರ ಪುತ್ರ ದರ್ಶನ ಕಡೇನಾಯಕನಹಳ್ಳಿ (26) ಎಂದು ಗುರುತಿಸಲಾಗಿದೆ. ಕರಬಸಪ್ಪ ಮತ್ತು ದರ್ಶನ ಇಬ್ಬರೂ ಸೇರಿಕೊಂಡು ಪಂಪ್ ಸೆಟ್ ದುರಸ್ತಿ ಮಾಡಲು ಮುಂದಾಗಿದ್ದರು. ಭತ್ತದ ಬೆಳೆಗೆ ನೀರು ಹಾಯಿಸಲು ಮೋಟಾರ್ ಆನ್ ಮಾಡಲು ಹೋದಾಗ ಈ ದುರ್ಘಟನೆ ನಡೆದಿದೆ. ವಿದ್ಯುತ್ ಸ್ಪರ್ಶಕ್ಕೆ ಪಂಪ್ ಸೆಟ್ ಮೇಲೆಯೇ ಬಿದ್ದು ಇಬ್ಬರೂ ಸ್ಥಳದಲ್ಲೇ ಅಸುನೀಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಹಲಗೇರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು. ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಮಳೆಗಾಲದಲ್ಲಿ ಈ ರೀತಿಯ ವಿದ್ಯುತ್ ಅವಘಡಗಳು ಸಂಭವಿಸುವ ಸಾಧ್ಯತೆ ಹೆಚ್ಚಿರುತ್ತದೆ. ಸಾರ್ವಜನಿಕರು ಮುಂಜಾಗ್ರತಾ ಕ್ರಮವಹಿಸಿ ಎಂದು ಹೆಸ್ಕಾಂ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ರುದ್ರಪ್ಪ ಆಂಗ್ಲ ಮಾಧ್ಯಮ ಪ್ರೌಢಶಾಲೆ ಹ್ಯಾಟ್ರಿಕ್

ಬ್ಯಾಡಗಿ: ಹಾವೇರಿ ಬಾಲಕಿಯರ ವಿಭಾಗದ ಜಿಲ್ಲಾ ಮಟ್ಟದ ಕಬಡ್ಡಿ ಕ್ರೀಡಾಕೂಟ ದಲ್ಲಿ ಮೋಟೆಬೆನ್ನೂರಿನ ಬಳ್ಳಾರಿ ರುದ್ರಪ್ಪ ಆಂಗ್ಲ ಮಾಧ್ಯಮ ಪ್ರೌಢಶಾಲೆ ಕ್ರೀಡಾಪಟುಗಳು ಹ್ಯಾಟ್ರಿಕ್ ಗೆಲುವು ಸಾಧಿಸಿದ್ದಾರೆ.

ರಾಣೆಬೆನ್ನೂರಿನ ಕರೂರು ಗ್ರಾಮದ ಎಜ್ಯೂಏಷ್ಯಾ ಶಾಲೆಯಲ್ಲಿ ನಡೆದ ಅಂತಿಮ ಪಂದ್ಯದಲ್ಲಿ ನಿಟ್ಟೂರು ಸೆಂಟ್ರಲ್ ಸ್ಕೂಲ್ ತಂಡವನ್ನು 33 ಅಂಕಗಳಿಂದ (42-09) ಬಹುತೇಕ ಏಕಪಕ್ಷೀಯವಾಗಿದ್ದ ಪಂದ್ಯದ ಮೊದಲಾರ್ಧದಲ್ಲಿ 16 (19-03) ಅಂಕಗಳ ಮುನ್ನಡೆ ಸಾಧಿಸಿತ್ತು.

ತಂಡದ ಪ್ರಮುಖ ಆಟಗಾರ್ತಿ ನಿವೇದಾ ಜಲಾಟಿಗೌಡ್ರ ಕರಾರುವಕ್ಕಾದ ದಾಳಿ ನೆರವಿನಿಂದ ಬಳ್ಳಾರಿ ರುದ್ರಪ್ಪ ಶಾಲಾ ತಂಡವು ಎದುರಾಳಿ ತಂಡದ ಆಟಗಾರ್ತಿಯರನ್ನು ಮಣ ಸುವಲ್ಲಿ ಯಶಸ್ವಿಯಾದರು.

ಇದಕ್ಕೂ ಮುನ್ನ ನಡೆದ ಸೆಮಿಫೈನಲ್ ಪಂದ್ಯದಲ್ಲಿ 22 ಅಂಕಗಳಿಂದ (37-15) ರಾಣೆಬೆನ್ನೂರಿನ ರೈನ್ ಬೋ ತಂಡ ವನ್ನು ಮಣ ಸಿತ್ತು, ಪಂದ್ಯಾಳಿಯಲ್ಲಿ ಆಡಿದ ಯಾವುದೇ ಪಂದ್ಯವನ್ನು ಸೋಲದೇ ಅಜೇಯರಾಗಿ ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿಕೊಂಡಿತು, ವಿಜೇತ ಕ್ರೀಡಾಪಟುಗಳಿಗೆ ದೈಹಿಕ ನಿರ್ದೇಶಕ ನಿಂಗಪ್ಪ ಮಡಿವಾಳರ ತರಬೇತಿ ನೀಡಿದ್ದರು. ವಿಜೇತ ಕ್ರೀಡಾಪಟುಗಳಿಗೆ ಸಂಸ್ಥೆಯ ಅಧ್ಯಕ್ಷ ಹಾಗೂ ಮಾಜಿ ಶಾಸಕ ವಿರೂಪಾಕ್ಷಪ್ಪ ಬಳ್ಳಾರಿ, ಪ್ರಾಚಾರ್ಯರಾದ ಶಾರದಾ ಬಳ್ಳಾರಿ ಮಾರ್ಗರೇಟ ರಾಣ ಸೇರಿದಂತೆ ಸಿಬ್ಬಂದಿ ಅಭಿನಂದಿಸಿದ್ದಾರೆ.

ಸದ್ಗತಿ ದೊರೆಯಬೇಕು ಎಂಬುದು ಎಲ್ಲರ ಬಯಕೆ

ಶಿರಸಿ ಸೀಮೆಯ ತೋರಣಸಿ, ಒಳಭಾಗಿಯ ಶಿಷ್ಯರ ಸೇವೆ ಸ್ವೀಕರಿಸಿ ಆಶೀರ್ವಚನ ನೀಡಿದ ಸ್ವರ್ಣವಲ್ಲೀ ಶ್ರೀ

ಶಿರಸಿ: ಮಾತು, ಮನಸ್ಸು, ಪ್ರಾಣಗಳಿಗೆ ಸಂಸ್ಕಾರ ನೀಡುವುದರಿಂದ ಇಹ ಹಾಗೂ ಪರದಲ್ಲಿ ಸುಖ ಸಿಗಲಿದೆ ಎಂದು ಸೋಂದಾ ಸ್ವರ್ಣವಲ್ಲೀ ಮಹಾ ಸಂಸ್ಥಾನದ ಮಠಾಧೀಶ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾ ಸ್ವಾಮೀಜಿಗಳು ನುಡಿದರು.

ಅವರು ಸ್ವರ್ಣವಲ್ಲೀಯಲ್ಲಿ ಸಂಕಲ್ಪಿತ ತಮ್ಮ 34ನೇ ಹಾಗೂ ತಮ್ಮ ಶಿಷ್ಯರಾದ ಕಿರಿಯ ಸ್ವಾಮೀಜಿ ಶ್ರೀ ಆನಂದಬೋಧೇಂದ್ರ ಸರಸ್ವತೀ ಸ್ವಾಮೀಜಿಗಳ ಪ್ರಥಮ ಚಾತುರ್ಮಾಸ್ಯ ವ್ರತಾಚರಣೆಯಲ್ಲಿ ಶಿರಸಿ ಸೀಮೆಯ ತೋರಣಸಿ ಹಾಗೂ ಒಳಭಾಗಿಯ ಶಿಷ್ಯರ ಸೇವೆ ಸ್ವೀಕರಿಸಿ ಆಶೀರ್ವಚನ ನುಡಿದರು.

ಬದುಕಿನಲ್ಲಿ ಒಳ್ಳೆಯದಾಗಬೇಕು. ಹಾಗೂ ಪರದಲ್ಲಿ ಸದ್ಗತಿ ದೊರೆಯಬೇಕು ಎಂಬುದಾಗಿ ಎಲ್ಲರೂ ಬಯಸುತ್ತಾರೆ. ಇವೆರಡಕ್ಕೂ ಮನಸ್ಸು - ಮಾತು - ಪ್ರಾಣ ಇವುಗಳಿಗೆ ಸಂಸ್ಕಾರ ಕೊಡುವುದರ ಮೂಲಕ ಸಾಧಿಸಿಕೊಳ್ಳಬೇಕು. ಇವು ಮೂರು ತುಂಬಾ ಸೂಕ್ಷ್ಮವಾದವುದಳು. ಇವುಗಳನ್ನು ಚೆನ್ನಾಗಿ ಸಂಸ್ಕಾರಕ್ಕೆ ಒಳಪಡಿಸಿದರೆ ಇಹದಲ್ಲಿ ಚೆನ್ನಾಗಿ ಇರಲು ಸಾಧ್ಯ ಹಾಗೂ ಪರದಲ್ಲಿ ಸದ್ಗತಿ ಪಡೆಯಲು ಸಾಧ್ಯ ಎಂದರು.

ಈ ಮೂರೂ ಕೂಡ ನಮ್ಮ ಜೊತೆಯಲ್ಲೇ ಎಷ್ಟೋ ಅನಾದಿ ಕಾಲದಿಂದ ನಮ್ಮ ಜೊತೆಯಲ್ಲೇ

ಇವೆ. ಮುಂದೆ ಮೋಕ್ಷ ಎನ್ನುವ ಸ್ಥಿತಿಯನ್ನು ಪಡೆಯುವವರೆಗೂ ನಮ್ಮ ಜೊತೆಯಲ್ಲಿಯೇ ಇರುತ್ತವೆ. ಆದ್ದರಿಂದ ಇವುಗಳ ಹಿಡಿತದಲ್ಲಿ ನಮ್ಮ ಅಭ್ಯುದಯ ಹಾಗೂ ನಮ್ಮ ಸದ್ಗತಿ ಇದೆ. ಮನಸ್ಸು - ಮಾತು - ಪ್ರಾಣಗಳನ್ನು ಉತ್ತಮ ಸಂಸ್ಕಾರಕ್ಕೆ ಒಳಪಡಿಸಿದರೆ ನಮ್ಮ ಒಳ್ಳೆಯ ಬದುಕಿಗೆ ಕಾರಣವಾಗುತ್ತದೆ ಎಂದು ವಿವರಿಸಿದರು.

ಸೂಕ್ಷ್ಮ ಸ್ಥಿತಿ ಇರುವ ಮಾತಿಗೆ ಸರಿಯಾದ ಸಂಸ್ಕಾರ ಕೊಡಬೇಕು. ಮಾತಿಗೆ ಉತ್ತಮ ಸಂಸ್ಕಾರ ಸಿಗುಲು ಮೌನ ಉತ್ತಮ ಸಾಧನ. ಪ್ರತಿ ಒಂದು ತಿಂಗಳಿಗೊಮ್ಮೆ ಆದರೂ ಮೌನವನ್ನು ಮಾಡಬೇಕು. ಮೃದುವಾಗಿ ಹಾಗೂ ಸತ್ಯವಾದ ಮಾತನ್ನು ಆಡಬೇಕು.

ಭಗವಂತ ಮಾತುಗಳನ್ನು ಹೇಗೆ ಆಡಬೇಕು ಎಂದು ವಿವರಿಸುವಾಗ ಈ ಅಂಶಗಳನ್ನು ಎತ್ತಿ ಹೇಳಿದ್ದಾನೆ. ದೇವರ ನಾಮ ಜಪ, ಭಜನೆ, ಸ್ತೋತ್ರ, ಇವುಗಳನ್ನು ಹೇಳುತ್ತಾ ನಮ್ಮ ಮಾತುಗಳನ್ನು ಅವುಗಳಲ್ಲಿಯೇ ತೊಡಗಿಸಬೇಕು. ಅದು ಈ ಮಾತಿಗೆ ಕೊಡುವ ಸಂಸ್ಕಾರವಾಗುತ್ತದೆ ಎಂದರು.

> ನಾವು ಮಾಡುವ ಜಪ ,ಯಜ್ಞ, ದಾನ, ತಪಸ್ಸು ಇವೆಲ್ಲವೂ ಕೂಡ ಮನಸ್ಸನ್ನು ಸಂಸ್ಕಾರ ಗೊಳಿಸುತ್ತವೆ. ಪ್ರತಿ ನಿತ್ಯವೂ ಯೋಗಾಸನ ಪ್ರಾಣಾಯಾಮ ಮಾಡುವುದರ ಮೂಲಕ ಅನೇಕ ರೋಗಗಳನ್ನು ನಾಶಪಡಿಸಿಕೊಳ್ಳಬಹುದು. ಹಾಗೆ ದೀರ್ಘವಾದ ಆಯುಷ್ಯ - ಆರೋಗ್ಯವನ್ನು ಪಡೆಯಬಹುದು. ಆದ್ದರಿಂದ ಇವುಗಳನ್ನು ಪ್ರತಿಯೊಬ್ಬರೂ ರೂಢಿಸಿಕೊಳ್ಳಬೇಕು.
>
> -ಸ್ವರ್ಣವಲ್ಲೀ ಶ್ರೀ

ಮನಸ್ಸು ಮತ್ತು ಪ್ರಾಣ ಇವೆರಡಕ್ಕೂ ಒಂದಕ್ಕೊಂದು ಪರಸ್ಪರ ಸಂಬಂಧ ಇದೆ. ಪ್ರಾಣವನ್ನು ಸರಿಯಾಗಿ ಸಂಸ್ಕಾರ ಗೊಳಿಸುವುದಕ್ಕೆ ಪ್ರಾಣಯಾಮ ಉತ್ತಮ ಸಾಧನ. ಮನಸ್ಸನ್ನು ಭಕ್ತಿಯ ಮೂಲಕ ಸಂಸ್ಕಾರ ಪಡಿಸಿಕೊಂಡರೆ, ಭಕ್ತಿ ಚೆನ್ನಾಗಿ ಬೆಳೆದರೆ ಆಗ ಪ್ರಾಣ ಸರಿಯಾಗಿ ಇರುತ್ತದೆ, ಮನಸ್ಸೂ ಕೂಡ ಸರಿಯಾಗಿ ಇರುತ್ತದೆ. ಪ್ರಾಣದಲ್ಲಿ ವ್ಯತ್ಯಾಸವಾದರೆ ಮನಸ್ಸಿನಲ್ಲೂ ಏರುಪೇರುಗಳು ಆಗುತ್ತವೆ ಎಂದರು.

ಮನಸ್ಸಿನ ಆಳ ತುಂಬಾ ಇದೆ. ಆದ್ದರಿಂದ ಇವು ಮೂರರ ಪೈಕಿ ಮನಸ್ಸು ತುಂಬಾ ಸೂಕ್ಷ್ಮ. ಈ ಮನಸ್ಸನ್ನು ನಿಗ್ರಹಿಸುವುದಕ್ಕೂ ಭಗವಂತ ಉಪಾಯಗಳನ್ನು ಹೇಳಿದ್ದಾನೆ. ಅವುಗಳೇ ಪ್ರಸನ್ನತೆ, ಸೌಮ್ಯತೆ, ಮೌನ, ಇನ್ನೊಬ್ಬರ ಬಗ್ಗೆ ಶುದ್ಧವಾದ ಭಾವ,ಆತ್ಮ ನಿಗ್ರಹ.

ಇವುಗಳ ಮೂಲಕ ಮನಸ್ಸನ್ನು ಸಂಸ್ಕಾರ ಗೊಳಿಸಲು ಸಾಧ್ಯ. ದೇವರ ಅಸ್ತಿತ್ವದ ಚಿಂತನೆಯು ನಮ್ಮಲ್ಲಿ ಇದ್ದರೆ ಅದು ಮನನ ಆಗುತ್ತದೆ. ನಾವು ಮಾಡುವ ಜಪ, ಯಜ್ಞ, ದಾನ, ತಪಸ್ಸು ಇವೆಲ್ಲವೂ ಕೂಡ ಮನಸ್ಸನ್ನು ಸಂಸ್ಕಾರ ಗೊಳಿಸುತ್ತವೆ ಎಂದರು.

ಸೀಮೆಯ ಮಾತೆಯರು ಮತ್ತು ಮಹನೀಯರು ಶ್ರೀ ಮಠಕ್ಕೆ ಆಗಮಿಸಿ ಅತ್ಯಂತ ಶ್ರದ್ಧಾ-ಭಕ್ತಿಯಿಂದ ತಮ್ಮ ಸೇವೆಯನ್ನು ಸಲ್ಲಿಸಿದರು. ಬೆಳಿಗ್ಗೆಯಿಂದ ಮಾತೆಯರು ಶಂಕರ ಸ್ತೋತ್ರ ಪಠಣ, ಭಗವದ್ಗೀತಾ ಪಠಣ ಹಾಗೂ ಲಲಿತಾ ಸಹಸ್ರ ನಾಮದಿಂದ ಅರ್ಚನೆಯನ್ನು ಮಾಡಿದರು.

ಮಹನೀಯರು ಗಾಯತ್ರೀ ಅನುಷ್ಠಾನ ವನ್ನು ಕೈಗೊಂಡರು. ಈ ಸಂದರ್ಭದಲ್ಲಿ ಸೀಮೆಯ ಪ್ರಮುಖ ಶ್ರೀಪಾದ ಹೆಗಡೆ ಸಣ್ಣಳ್ಳಿ, ಗುರುಪಾದ ಹೆಗಡೆ ಹಲಸಿನಹಳ್ಳಿ, ನರಸಿಂಹ ದೀಕ್ಷಿತ ಕಳವೆ, ಉದಯ ಹೆಗಡೆ ಮುಂಡಿಗೆಸರ ಉಪಸ್ಥಿತರಿದ್ದರು.

ಬೆಳೆ ಸಾಲ ಕೊಡದಿದ್ದಕ್ಕೆ ಮುತ್ತಿಗೆ

ಹೊನ್ನಾವರ: ತಾಲೂಕಿನ ಜಲವಳ್ಳಿ ವ್ಯವಸಾಯ ಸೇವಾ ಸಹಕಾರಿ ಸಂಘದ ಸಾಲಕಟ್ಟು ಬಾಕಿದಾರರ ಜತೆ ಜಾಮೀನುದಾರ ರಾಗಿರುವವರು ಬೆಳೆಸಾಲದಿಂದ ವಂಚಿತರಾಗಿದ್ದು, ಬೆಳೆಸಾಲ ಕೊಡದಿದ್ದಕ್ಕೆ ಆಕ್ರೋಶಗೊಂಡ ರೈತರಿಂದ ಸೊಸೈಟಿಗೆ ಮುತ್ತಿಗೆ ಹಾಕಿದ ಘಟನೆ ಬುಧವಾರ ನಡೆದಿದೆ.

ಸಾಲ ನೀಡುವ ಪೂರ್ವದಲ್ಲಿ ಸೊಸೈಟಿಯಿಂದ ಜಾಮೀನು ದಾರರಿಗು ಈ ಬಗ್ಗೆ ಏನು ಹೇಳಿಲ್ಲ. ಒಂದೊಮ್ಮೆ ಸಾಲಕಟ್ಟುವುದು ಬಾಕಿಯಾದಲ್ಲಿ ಜಾಮೀನುದಾರನಿಗು ಬೆಳೆಸಾಲ ಸಿಗುವುದಿಲ್ಲ ಎಂದಿದ್ದರೆ ನಾವು ಜಾಮೀನುದಾರರಾಗುತ್ತಿರಲಿಲ್ಲ. ಈಗ ಬೆಳೆಸಾಲ ಇಲ್ಲ ಎನ್ನುತ್ತಾರೆ ಎಂದು ಸೊಸೈಟಿ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಎರಡು ವರ್ಷದಿಂದ ಸಂಘದಿಂದ ಸಭೆಯು ನಡೆಸಿಲ್ಲ. ಎರಡು ವರ್ಷದಿಂದ ಯಾವೊಬ್ಬ ರೈತರಿಗೂ ಸಂಘದಿಂದ ಮಾಧ್ಯಮಿಕ ಸಾಲ ಲಭಿಸಿಲ್ಲ ಎಂದು ಆರೋಪಿಸಿದರು. ಬೆಳಿಗ್ಗೆ ಕಚೇರಿ ಆರಂಭವಾದ ಮೇಲೆ ಬಂದ ರೈತರು ಊಟಕ್ಕೂ ತೆರಳದೆ ಸೊಸೈಟಿಯ ಕಚೇರಿಯಲ್ಲಿಯೇ ಕುಳಿತಿದ್ದರು. ನಂತರ ಮಾಧ್ಯಮದವರೊಂದಿಗೆ ರೈತರು ತಮ್ಮ ಅಳಲನ್ನ ತೊಡಿಕೊಂಡರು. ಈ ಬಗ್ಗೆ ಸಂಘದ ಹಿರಿಯ ರೈತ ಸದಸ್ಯ ಕೇಶವ ನಾಯ್ಕ ಮಾತನಾಡಿ, ಜಾಮೀನುದಾರ ಕಟ್ಟುಬಾಕಿದಾರರಾಗಿದ್ದರಿಂದ ನಮಗೂ ಬೆಳೆಸಾಲ ನೀಡುತ್ತಿಲ್ಲ. ಸಾಲಗಾರನಿಗೆ ಹೇಳಿ ಸಾಲ ತುಂಬಿಸಿಕೊಡಿ ಎನ್ನುತ್ತಾರೆ. ಸೊಸೈಟಿಯವರು ನಮಗೂ ಸಹಕರಿಸಿ, ಸಾಲಗಾರರಿಗೆ ಸಾಲ ತುಂಬಲು ಹೇಳಿ ಎಂದಿದ್ದೆವು. ಆದರೆ ಅವರು ನಮಗೆ ಸಹಕರಿಸಿಲ್ಲ. ಬೆಳೆಸಾಲ, ಮಾಧ್ಯಮಿಕ ಸಾಲ ಸಕಾಲಕ್ಕೆ ಪೂರೈಸುತ್ತೇವೆ ಎಂದಿದ್ದರು. ನಾವೆಲ್ಲಾ ಬೆಳೆಸಾಲ ಸಂಪೂರ್ಣ ತುಂಬಿದ್ದೆವು. ಆದರೆ ಈಗ ಜಾಮೀನುದಾರರಾದ ನಮಗೂ ಬೆಳೆಸಾಲ ಕೊಡುತ್ತಿಲ್ಲ. ಒಂದೊಮ್ಮೆ ಸಾಲಕಟ್ಟುಬಾಕಿಯಾದರೆ ಜಾಮೀನುದಾರನು ಬೆಳೆಸಾಲ ಪಡೆಯಲು ಅನರ್ಹನಾಗುತ್ತಾನೆ ಎಂದು ಮೊದಲೇ ಹೇಳಬೇಕಿತ್ತು. ಈಗ ಸಾಲಗಾರ ಸಾಲ ತುಂಬಿದರೆ ಮಾತ್ರ ಜಾಮೀನುದಾರನಿಗೆ ಸಾಲ ಕೊಡುತ್ತೇವೆ ಎನ್ನುತ್ತಾರೆ. ಈ ಬಗ್ಗೆ ಆದೇಶ ಏನಾದರು ಇದೆಯೆ? ಇದ್ದರೆ ಲಿಖಿತವಾಗಿ ಕೊಡಿ ಎಂದರೆ ವ್ಯವಸ್ಥಾಪಕರು ಕೊಡಲಾಗುವುದಿಲ್ಲ ಎನ್ನುತ್ತಾರೆ. ಬೆಳೆಸಾಲ ಕೊಡದಿರುವುದಕ್ಕೆ ಇವರೆ ನೆರಹೊಣೆ, ಗಾಳಿಮಳೆಯಿಂದ ಅಡಕೆ ತೋಟಕ್ಕೆ ಹಾನಿಯಾಗಿದೆ. ಸಾಲಸಿಗದಿದ್ದರೆ ನಾವು ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎಂದು ಎಚ್ಚರಿಸಿದರು.

ಇನ್ನೊರ್ವ ರೈತ ಮಹೇಂದ್ರ ಜೈನ್ ಮಾತನಾಡಿ, ಬೆಳೆಸಾಲ ಸಂಪೂರ್ಣ ತುಂಬಿದ ರೈತರಿಗೂ ಸಹ ಸಾಲ ನೀಡುತ್ತಿಲ್ಲ. ಕಾರಣ ತಿಳಿಯುತ್ತಿಲ್ಲ.ರೈತರಿಂದ ಸಂಸ್ಥೆಯೋ ಅಥವಾ ಸಂಸ್ಥೆಯಿಂದ ರೈತರೋ ಎನ್ನುವುದು ತಿಳಿಯುತ್ತಿಲ್ಲ. ಈ ಬಗ್ಗೆ ಕೇಳೋಣವೆಂದರೆ ಸಂಘದ ಸಾಮಾನ್ಯ ಸಭೆ ನಡೆಸುತ್ತಿಲ್ಲ. ಸಂಘದ ಆಡಳಿತ ಮಂಡಳಿಯವರು ಈ ಬಗ್ಗೆ ನಮಗೆ ಸೂಕ್ತ ಸ್ಪಂದನೆ ನೀಡುತ್ತಿಲ್ಲ. ವ್ಯವಸ್ಥಾಪಕರು ಸರಿಯಾಗಿ ಉತ್ತರಿಸುತ್ತಿಲ್ಲ ಎಂದು ಆರೋಪಿಸಿದರು.

ರೈತ ಪ್ರಮೋದ್ ನಾಯ್ಕ ಮಾತನಾಡಿ, ನಮ್ಮ ಹೋರಾಟ ಮುಂದುವರೆಯುತ್ತದೆ. ಸಾಲ ಸಿಗುವವರೆಗೂ ಸೊಸೈಟಿ ಎದುರು ಹೋರಾಟ ನಡೆಸುತ್ತೇವೆ ಎಂದರು. ಇನ್ನು ವ್ಯವಸ್ಥಾಪಕರಿಗೆ ರೈತರು ದೂರವಾಣಿ ಮೂಲಕ ಸಂಪರ್ಕಿಸಿ ಸೊಸೈಟಿಗೆ ಬರುವಂತೆ ಹೇಳಿದರು. ಸಾಲಗಾರರಿಗೆ ಸಾಲ ತುಂಬುವ ಬಗ್ಗೆ ಲಿಖಿತವಾಗಿ ಬರೆದುಕೊಡಲು ಹೇಳಿ ನಂತರ ಸಾಲದ ವಿಚಾರಚಾಗಿ ಚರ್ಚಿಸುತ್ತೇವೆ ಎಂದು ವ್ಯವಸ್ಥಾಪಕ ಗಣೇಶ ನಾಯ್ಕ ಉತ್ತರಿಸಿದರು. ನೀವು ಸ್ಥಳಕ್ಕೆ ಬರುವವರೆಗೂ ನಾವು ತೆರಳಲ್ಲ ಎಂದ ರೈತರು ಬಿಗಿಪಟ್ಟು ಹಿಡಿದರು.

ಬೆಂಗಳೂರು ಚಲೋ ಆ.12ಕ್ಕೆ

ಹಾವೇರಿ: ಪ್ರಾಥಮಿಕ ಶಾಲಾ ಶಿಕ್ಷಕರ 2017ರ ಹೊಸ ವೃಂದದ ನೇಮಕಾತಿ ನಿಯಮವನ್ನು ಕೈ ಬಿಡಬೇಕು. 2016 ಕ್ಕಿಂತ ನೇಮಕವಾದ ಸೇವಾನಿರತ ಶಿಕ್ಷಕರಿಗೆ ಬಡ್ತಿಯಲ್ಲಿ ಅವಕಾಶ ಕೊಡಬೇಕು ಎಂದು ಆಗ್ರಹಿಸಿ ಇದೇ ಅಗಸ್ಟ್ 12 ಕ್ಕೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯಮಟ್ಟದ ಪ್ರತಿಭಟನೆ ನಡೆಯಲಿದೆ ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಜಿ.ಜಿ ಬೂದಿಹಾಳ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಘೋಷ್ಠಿ ನಡೆಸಿ ಮಾತನಾಡಿದ ಅವರು ರಾಜ್ಯದ 55 ಸಾವಿರ ಶಿಕ್ಷಕರು ಈ ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ. ಜಿಲ್ಲೆಯಲ್ಲಿ ಒಟ್ಟು ನಿಯೋಜಿಸಲಾದ 6330 ಪ್ರಾಥಮಿಕ ಶಾಲಾ ಶಿಕ್ಷಕರಲ್ಲಿ1452 ಹುದ್ದೆಗಳು ಖಾಲಿ ಇವೆ. 4878 ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದು ಇದರಲ್ಲಿ 2200 ಶಿಕ್ಷಕರು ವಿಷಯವಾರು ಶಿಕ್ಷಕರೆಂದು ಬಡ್ತಿ ಪಡೆದುಕೊಳ್ಳಲು ಅರ್ಹರಾಗಿದ್ದಾರೆ. ಜಿಲ್ಲೆಯಲ್ಲಿ 316 ಮುಖ್ಯೋಪಾಧ್ಯಾಯರ ಹುದ್ದೆ ಖಾಲಿ ಇದ್ದು ಮುಂಬಡ್ತಿಗೆ 233 ಸೇವಾ ಹಿರಿತನದ ಶಿಕ್ಷಕರಿಗೆ ಶೇಷ್ಠತೆ ಆಧಾರದಲ್ಲಿ ಬಡ್ತಿ ಸಿಗಬೇಕಾಗಿದೆ.2017 ಹೊಸ ನೇಮಕಾತಿ ನಿಯಮದಿಂದ ರಾಜ್ಯದ ಸೇವಾನಿರತ ಅರ್ಹ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅನ್ಯಾಯವಾಗಿದೆ. ಕೂಡಲೇ ರಾಜ್ಯ ಸರಕಾರ ಇದನ್ನು ಕೈ ಬಿಡಬೇಕು. ನಮ್ಮನ್ನು ವಿಷಯವಾರು ಶಿಕ್ಷಕರೆಂದು ಪರಿಗಣಿಸಿ ಶೇಷ್ಠತೆ ಆಧಾರದಲ್ಲ್ ಪ್ರೌಢಶಾಲಾ ಶಿಕ್ಷಕರೆಂದು ಪರಿಗಣಿಸಬೇಕು.್ ಮುಖ್ಯೋಪಾಧ್ಯಾಯ ಬಡ್ತಿಯನ್ನ್ನೀಡಬೇಕು. ಈಗಾಗಲೇ ಸಾಕಷ್ಟು ಬಾರಿ ಹೋರಾಟ ಮೂಲಕ ಸರಕಾರದ ಗಮನಕ್ಕೆ ತಂದರೂ ಯಾವುದೇ ಪ್ರಯೋಜನ ಆಗಿಲ್ಲ. ಈ ಬಾರಿ ಮೂರು ಹಂತದಲ್ಲಿ ಹೋರಾಟದ ರೂಪರೇಷವನ್ನು ಮಾಡಲಾಗಿದ್ದು ಮೊದಲ ಹಂತ ಹೋರಾಟದ ಶಾಸಕರಿಗೆ, ತಹಸೀಲ್ದಾರಗೆ ಪತ್ರ ಚಳವಳಿ ಕೈಗೊಂಡಿದ್ದು ಎರಡನೇ ಹಂತದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಿಗೆ, ಜಿಲ್ಲಾಧಿಕಾರಿಗಳಿಗೆ, ಜಿ.ಪಂ ಸಿ.ಇಓಗೆ ಮನವಿ ನೀಡಿದ್ದು, ಪ್ರತಿಭಟನೆಯನ್ನು ಬೆಂಗಳೂರ ಪ್ರೀಡಂ ಪಾರ್ಕ್ ನಲ್ಲಿ ಹಮ್ಮಿಕೊಳ್ಳಲಾಗಿದೆ. ಎಂದು ಹೇಳಿದರು. ಜಿಲ್ಲಾಧ್ಯಕ್ಷ ಜಿ.ಜಿ ಬೀದಿಹಾಳ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಚಳ್ಳಾಳ, ಇ.ಸಿ ಅಗಸಿಬಾಗಿಲ, ರವಿ ಗೋಣೆಪ್ಪನವರ ಹಾಜರಿದ್ದರು.

ಬ್ಯಾಟರಿ ಕಳ್ಳತನ: ಆರೋಪಿಗಳು ಮಾಲು ಸಹಿತ ಪೊಲೀಸ್ ವಶಕ್ಕೆ

ಯಲ್ಲಾಪುರ: ಕಾಳಮ್ಮನಗರದಲ್ಲಿ ನಿಲ್ಲಿಸಿಟ್ಟ ಟಿಪ್ಪರ್ ಲಾರಿಗಳ ಬ್ಯಾಟರಿ ಕಳ್ಳತನ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಅವರಿಂದ 40,000 ರೂಪಾಯಿ ಮೌಲ್ಯದ ಕಳ್ಳತನವಾದ ಬ್ಯಾಟರಿಗಳು ಮತ್ತು ಕೃತ್ಯಕ್ಕೆ ಬಳಸಿದ ವಾಹನವನ್ನು ವಶಪಡಿಸಿಕೊಂಡಿದ್ದಾರೆ.ಕಾಳಮ್ಮನಗರದ ಸಂಕೇತ ರಾಜೀವ ನಾಯ್ಕ, ತನ್ನ ನಾಲ್ಕು ಟಿಪ್ಪರ್ ಲಾರಿಗಳ ಬ್ಯಾಟರಿಗಳು ಮತ್ತು ಹೈಡ್ರಾಲಿಕ್ ಜಾಕ್ ಕಳ್ಳತನವಾಗಿರುವುದಾಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಹಳಿಯಾಳ ನಿವಾಸಿ ಸುಭಾನಿ ಹಸನಸಾಬ ಜಂಗಲೆ, ಸಿದ್ದಿ(25) ಮತ್ತು ಮಂಚಿಕೇರಿ ನಿವಾಸಿ ಅಬ್ದುಲಹಮೀದ ಮಜೀದಸಾಬ ಮುಜಾವರ(22) ಬಂಧಿತ ಆರೋಪಿಗಳು. ಈ ಕಾರ್ಯಾಚರಣೆಯಲ್ಲಿ ಸಿಪಿಐ ರಮೇಶ ಹಾನಾಪುರ ನೇತೃತ್ವದಲ್ಲಿ ಪಿಎಸ್ಐ ನಿರಂಜನ ಹೆಗಡೆ. ಪಿಎಸ್ಐ ಸಿದ್ದಪ್ಪ ಗುಡಿ ಹಾಗೂ ಸಿಬ್ಬಂದಿಗಳಾದ ಬಸವರಾಜ ಹಗರಿ, ಮಹ್ಮದ ಶಫೀ, ಉಮೇಶ ತುಂಬರಗಿ, ಮಹಾವೀರ ಡಿ. ಎಸ್. ಕಾಯಾಚರಣೆಯಲ್ಲಿ ಭಾಗವಹಿಸಿದ್ದರು.

ಕ್ರೀಡೆಯಲ್ಲಿ ಗೆಲುವು-ಸೋಲನ್ನು ಸಮನಾಗಿ ಸ್ವೀಕರಿಸಿ: ಭವರಲಾಲ್

ಧಾರವಾಡ: ಮುಂಬರುವ ದಿನದಲ್ಲಿ ಅಂತಾರಾಷ್ಟ್ರೀಯ ಯೋಗ ಸ್ಪರ್ಧೆಯಲ್ಲಿ ಧಾರವಾಡ ಜಿಲ್ಲೆಯ ಯೋಗಪಟುಗಳು ಭಾರತಕ್ಕೆ ಪದಕ ತಂದುಕೊಡಬೇಕು ಎಂದು ಯೋಗಾಸನದ ರಾಷ್ಟ್ರೀಯ ನಿರ್ದೇಶಕ, ಅಂತಾರಾಷ್ಟ್ರೀಯ ಯೋಗ ಗುರು ಭವರಲಾಲ್ ಆರ್ಯ ಹೇಳಿದರು.

ಧಾರವಾಡ ಜಿಲ್ಲಾ ಯೋಗಾಸನ ಸ್ಪೋರ್ಟ್ಸ್ ಅಸೋಸಿಯೇಷನ್ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಧಾರವಾಡ ಜಿಲ್ಲಾ ಯೋಗಾಸನ ಸ್ಪರ್ಧೆ 2024 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದು ಯೋಗಾಸನವನ್ನು ಭಾರತ ಸರಕಾರ ಕ್ರೀಡೆ ಎಂದು ಪರಿಗಣಿಸಿದೆ. ಯೋಗಾಸನ ಭಾರತ ರಾಷ್ಟೀಯ ಮಟ್ಟದಲ್ಲಿ ಮಾನ್ಯತೆ ಪಡೆದ ಸಾಂವಿಧಾನಿಕ ಸಂಸ್ಥೆಯಾಗಿದ್ದು, ಇದರ ಮಾರ್ಗದರ್ಶನದಲ್ಲಿ ಜಿಲ್ಲಾ, ರಾಜ್ಯ, ರಾಷ್ಟ್ರ, ಅಂತಾರಾಷ್ಟೀಯ ಮಟ್ಟದ ಸ್ಪರ್ಧೆಗಳಲ್ಲಿ ಆಯ್ಕೆಯಾದ ಕ್ರೀಡಾಪಟುಗಳಿಗೆ ಸರಕಾರದ ಎಲ್ಲಾ ರೀತಿಯ ಸೌಲಭ್ಯಗಳು ದೊರಕುತ್ತವೆ. ಹೀಗಾಗಿ ಪಾಲಕರು ತಮ್ಮ ಮಕ್ಕಳನ್ನು ಯೋಗಾಸನ ಭಾರತದ ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು ಎಂದರು. ಮುಂಬರುವ ಒಲಿಂಪಿಕ್ಸ್‌ನಲ್ಲಿ ಯೋಗವನ್ನು ಸೇರ್ಪಡೆಗೊಳಿಸಿದ್ದಾರೆ. ಸ್ಪರ್ಧೆ ಮತ್ತು ಜೀವನದಲ್ಲಿ ಸೋಲು ಗೆಲುವುಗಳು ಸಹಜ. ಇಂದು ಸೋತವರು ಮುಂದೊಂದು ದಿನ ಗೆಲ್ಲುತ್ತಾರೆ. ಆದರೆ ಸ್ಪರ್ಧೆಗಳಲ್ಲಿ ನಾವು ನೂರಕ್ಕೆ ನೂರು ಶೇಕಡಾ ನಮ್ಮ ಪ್ರಯತ್ನವನ್ನು ನೀಡಬೇಕು ಮತ್ತು ಗೆಲುವು, ಸೋಲುಗಳನ್ನು ಒಂದೇ ರೀತಿ ಸ್ವೀಕರಿಸಬೇಕು ಎಂದು ಸಲಹೆ ನೀಡಿದರು. ಯೋಗಾಸನ ಸ್ಪರ್ಧೆಯಲ್ಲಿ ವಿವಿಧ ವಿಭಾಗದಲ್ಲಿ ಮೊದಲ ಮೂರು ಸ್ಥಾನ ಪಡೆದವರು ಆ.17,18 ರಂದು ಚಿಕ್ಕಮಗಳೂರು ಜಿಲ್ಲೆಯ ಕಡೂರಿನಲ್ಲಿ ನಡೆಯಲಿರುವ 5ನೇ ವರ್ಷದ ರಾಜ್ಯ ಮಟ್ಟದ ಯೋಗಾಸನ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ.

ಗೋಕರ್ಣದಲ್ಲಿ ಮನೆಗೆ ನುಗ್ಗಿದ ನೀರು

ಗೋಕರ್ಣ: ಮಳೆ ನಿರಂತರವಾಗಿ ಸುರಿಯುತ್ತಿರುವುದರಿಂದಾಗಿ ಇಲ್ಲಿಯ ಜನಜೀವನ ಅಸ್ತವ್ಯಸ್ಥ ಗೊಂಡಿದ್ದು, ಸಾಕಷ್ಟು ಮನೆಗಳಿಗೆ ಹಾಗೂ ಅಂಗಡಿಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದಲ್ಲಿ ಹಾನಿ ಉಂಟು ಮಾಡಿದೆ. ಇನ್ನು ವಿವಿಧ ಅಂಗಡಿಗಳನ್ನು ಹೊಂದಿರುವ ಇಲ್ಲಿಯ ಗಂಜಿಗದ್ದೆಯಲ್ಲಿ ಅಂಗಡಿಗಳಿಗೆ ನೀರು ನುಗ್ಗಿ ವಾಹನ ಸಂಚಾರಕ್ಕೂ ತೊಂದರೆ ಉಂಟಾಗಿದೆ.

ಇನ್ನು ಅಘನಾಶಿನಿ ನದಿಯು ಕೂಡ ಸಾಕಷ್ಟು ಪ್ರಮಾಣದಲ್ಲಿ ಹರಿಯುತ್ತಿರುವುದರಿಂದ ನದಿ ಪ್ರದೇಶಗಳಲ್ಲಿ ಸದಾ ಆತಂಕ ಉಂಟುಮಾಡುತ್ತಲೇ ಇದೆ.

ಇನ್ನು ತಗ್ಗು ಪ್ರದೇಶಗಳಲ್ಲಿನ ಮನೆಗಳಿಗೂ ಕೂಡ ನೀರು ನುಗ್ಗಿದ್ದರಿಂದಾಗಿ ಸಾಕಷ್ಟು ಆಹಾರ ಸೇರಿದಂತೆ ಪರಿಕರಗಳು ಹಾನಿಗೊಳಗಾಗಿವೆ. ಪ್ರತಿವರ್ಷ ಕೂಡ ಮಳೆ ಜಾಸ್ತಿಯಾದರೆ ಇಂತಹ ಸಮಸ್ಯೆಗಳು ಸ್ಥಳೀಯರು ಅನುಭವಿಸುತ್ತಲೇ ಇರುವಂತಾಗಿದೆ.

ಅಘನಾಶಿನಿ ನದಿಗೆ ಹೊಂದಿಕೊಂಡಿರುವ ಮೂಡಂಗಿ, ಸಾಣಿಕಟ್ಟಾ, ಹೊಸಕಟ್ಟಾ, ಮಾದನಗೇರಿ, ಮೊರಬ ಹೀಗೆ ಹತ್ತಾರು ಗ್ರಾಮಗಳಲ್ಲಿನ ತಗ್ಗು ಪ್ರದೇಶದಲ್ಲಿರುವ ಮನೆಗಳಿಗೆ ನೀರು ನುಗ್ಗಿ ಅನಾಹುತ ಸೃಷ್ಟಿಸಿದೆ. ಈ ಬಾರಿ ಹೆಚ್ಚು ಸಮಸ್ಯೆ ಉಂಟಾಗಿದ್ದರಿಂದಾಗಿ ಅಧಿಕಾರಿಗಳಿಗೂ ಕೂಡ ತಕ್ಷಣ ಸ್ಥಳ ಪರಿಶೀಲನೆ ಮಾಡಲು ಸಾಧ್ಯವಾಗುತ್ತಿಲ್ಲ.

ಮಳೆ ಸ್ವಲ್ಪ ಕಡಿಮೆಯಾದ ಮೇಲೆ ನೀರು ಖಾಲಿಯಾಗುತ್ತದೆ. ಮತ್ತೆ ಹೆಚ್ಚಾದಾಗ ಪುನಃ ಮತ್ತೆ ಮನೆಗೆ ನೀರು ನುಗ್ಗುತ್ತದೆ. ಹೀಗಾಗಿ ಪದೇ ಪದೇ ಪರಿಹಾರ ನೀಡಲು ಕೂಡ ಕಾನೂನು ತೊಡಕಾಗಿದೆ. ಹೀಗಾಗಿ ಜನರೇ ಈಗ ತಮ್ಮ ಸುರಕ್ಷತೆಯನ್ನು ಮಾಡಿಕೊಳ್ಳುವ ಅನಿವಾರ್ಯತೆಗೆ ಬಂದಿದ್ದಾರೆ.

ಕ್ರಿ.ಮಿ ನಂ : 171/2024

ಮಾನ್ಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ವ ಜೆ ಎಮ್ ಎಫ್ ಸಿ ಹಾವೇರಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : 1) ಸುಭಾಸ ತಂದೆ ಶಿವಪ್ಪ ಸಂಜೀವಣ್ಣನವರ ಸಾ: ನೆಗಳೂರ ತಾ:ವ,ಜಿ: ಹಾವೇರಿ ಹಾಗೂ ಇನ್ನೊಬ್ಬರು.

ವಿರುದ್ಧ

ಎದುರುಗಾರರು : 1) ಜನನ ಮರಣ ನೋಂದಣಾಧಿಕಾರಿಗಳು.ಮೇ: ಉಪತಹಶೀಲ್ದಾರ ನಾಡ ಕಾರ್ಯಾಲಯ ಗುತ್ತಲ,ಸಾ:ಗುತ್ತಲ ತಾ॥ವ ಜಿ॥ ಹಾವೇರಿ. 2) ಗಾಮ ಲೆಕ್ಕಾಧಿಕಾರಿಗಳು,ಜನನ ಮರಣ ನೋದಣಾಧಿಕಾರಿಗಳು ನೆಗಳೂರ.

- ಇಸ್ತಿಯಾರ ನಾಮಾ -

ಈ ಪ್ರಕರಣದಲ್ಲಿ ಅರ್ಜಿದಾರನಾದ ನಾನು ಈ ಮೂಲಕ ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಿದ ನೋಟಿಸು ಏನೆಂದರೆ, ನಾವು ದಿನಾಂಕ :10-07-2024 ರಂದು ಮಾನ್ಯ ದಿವಾಣಿ ನ್ಯಾಯಾಧೀಶರು ವ ಜೆ ಎಮ್ ಎಫ್ ಸಿ ಹಾವೇರಿ ಇವರ ನ್ಯಾಯಾಲಯದಲ್ಲಿ ಇವರ ನ್ಯಾಯಾಲಯದಲ್ಲಿ ನನ್ನ ಅಜ್ಜಿಯಾದ ಶ್ರೀಮತಿ ರತ್ನವ್ವ ಕೋಂ ಹನುಮಂತಪ್ಪ ಸಂಜೀವಣ್ಣನವರ ಇವರು ದಿನಾಂಕ:19-06-2000 ರಂದು ಹಾವೇರಿ ಜಿಲ್ಲಾ ಹಾವೇರಿ ತಾಲೂಕ ನೆಗಳೂರ ಗ್ರಾಮದಲ್ಲಿ ಮೃತಪಟ್ಟ ಬಗ್ಗೆ ಎದುರುಗಾರರ ಮರಣ ನೋಂದಣಿ ವಹಿಯಲ್ಲಿ ನಮೂದ ಮಾಡುವ ಕುರಿತು ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಕಾರಣ ಶ್ರೀಮತಿ ರತ್ನವ್ವ ಕೋಂ ಹನುಮಂತಪ್ಪ ಸಂಜೀವಣ್ಣನವರ ಮರಣದ ದಾಖಲಾತಿ ಕುರಿತು ಸಾರ್ವಜನಿಕರ ಅಥವಾ ಹಿತಾಸಕ್ತಿವುಳ್ಳ ಯಾವುದೇ ವ್ಯಕ್ತಿಗಳ ತಂಟೆ ವ ತಕರಾರು ಇದ್ದಲ್ಲಿ ದಿನಾಂಕ :13/09/2024 ರಂದು ಬೆಳ್ಳಗ್ಗೆ 11:00 ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಮಾನ್ಯ ನ್ಯಾಯಾಲಯದವರು ಯಾರದು ಯಾವುದೇ ತಂಟೆ ತಕರಾರು ಇಲ್ಲಾ ಅಂತಾ ಪರಿಗಣಿಸಿ ಮುಂದಿನ ಆದೇಶವನ್ನು ಮಾಡುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟೀಸು.

ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ಇಂದು ದಿ:05-08-2024 ರಂದು ನೀಡಿದೆ.

ನ್ಯಾಯಾಧೀಶರ ಆದೇಶದ ಮೇರೆಗೆ
ಸಹಿ/- ಶ್ರೀ ಸಂತೋಷ ಆರ್ ಕದಂ
ಶಿರಸ್ತೆದಾರರು
ಮಾನ್ಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

ಸಹಿ/- (ಶ್ರೀ ಪಿ.ಎಸ್.ಚಳಗೇರಿ)
ಅರ್ಜಿದಾರರ ಪರ ವಕೀಲರು.
ಸ್ಥಳ : ಹಾವೇರಿ ದಿನಾಂಕ : 05-08-2024

ಮಾನ್ಯ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ

ಕ್ರಿಮಿನಲ್ ಮಿಸ್ ಸಂಖ್ಯೆ: 157/2024

ಅರ್ಜಿದಾರಳಿ : ಶ್ರೀಮತಿ ಎಸ್.ಹನುಮವ್ವ ಗಂಡ ಲೇಟ್ ಭೀಮಪ್ಪ ವಯಸ್ಸು :80 ವರ್ಷ, ವೃತ್ತಿ: ವ್ಯವಸಾಯ, ವಾಸ: ಕಡತಿ ಗ್ರಾಮ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು: ಮಾನ್ಯ ತಹಶಿಲ್ದಾರರು ಜನನ ಮತ್ತು ಮರಣ ನೊಂದಣಾಧಿಕಾರಿಗಳು ಕಾರ್ಯಲಯ ಹರಪನಹಳ್ಳಿ ತಾಲೂಕು.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಅರ್ಜಿದಾರಳ ಮಾವನಾದ ಬೇಗಾರ ಸಂಗಜ್ಜಿ ಹನುಮಪ್ಪ ತಂದೆ ಲೇಟ್ ದುರುಗಪ್ಪ ಇವರು ದಿನಾಂಕ 15.04.1990 ರಂದು ಹರಪನಹಳ್ಳಿ ತಾಲೂಕು ಕಡತಿ ಗ್ರಾಮದಲ್ಲಿ ,ಅರ್ಜಿದಾರಳ ಮನೆಯಲ್ಲಿ ಮರಣ ಹೊಂದಿದ್ದು ಅವರ ಮರಣ ಹೊಂದಿರುವ ಬಗ್ಗೆ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ, ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು ಪ್ರಕಣದ ದಿನಾಂಕ: 31.08.2024 ರಂದು ಇರುತ್ತದೆ. ಆದ್ದರಿಂದ ಸದರಿ ಮೇಲ್ಕಂಡ ವಿಚಾರದಲ್ಲಿ ಸಂಬಂಧಪಟ್ಟ ಯಾರಾದರು ತಕರಾರು ಸಲ್ಲಿಸಲು ಆಸಕ್ತಿ ಇದ್ದರೆ.ಮೇಲ್ಕಂಡ ದಿನಾಂಕದಂದು ಬೆಳಗ್ಗೆ 11-00 ಗಂಟೆಗೆ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಮಾನ್ಯ ಘನ ನ್ಯಾಯಾಲಯದಲ್ಲಿ, ಏಕ ಪಕ್ಷೀಯವಾಗಿ ತೀರ್ಮಾನಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಹಿರಿಯ ಸಿವಿಲ್, ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ.
ಅರ್ಜಿದಾರನ ಪರ ವಕೀಲರು
ಶ್ರೀ.ಬಿ.ರೇವನಗೌಡ
ದಿನಾಂಕ: 07.08.2024

CHANGE OF NAME

I, **SUSHANT KURANDWAD S/O BALABHEEM KURANDWAD** (Old Name) have changed my name and shall hereafter be known as **SUSHANT B KURANDWAD S/O BALABHEEM KURANDWAD** (New Name) R/o # 78/C, "Ashirwad", Tejaswi Nagar, Dharwad, Karnataka vide affidavit sworn before notary Venkatesh S Naik at Dharwad on Dt:05/08/2024

ಪಪಂ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ನಡೆದಿದೆ ಕಸರತ್ತು

ಮುಂಡಗೋಡ: ಪಟ್ಟಣ ಪಂಚಾಯಿತಿಯ ಎರಡನೇ ಅವಧಿಯ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ಪ್ರಕಟವಾಗುತ್ತಿದ್ದಂತೆ ಪಟ್ಟಣ ದಲ್ಲಿ ರಾಜಕೀಯ ಚಟುವಟಿಕೆ ಗರಿಗೆದರಿದೆ.

19 ಸದಸ್ಯರ ಸಂಖ್ಯಾ ಬಲ ಹೊಂದಿರುವ ಇಲ್ಲಿನ ಪಟ್ಟಣ ಪಂಚಾಯಿತಿಯಲ್ಲಿ ಬಿಜೆಪಿ ಬೆಂಬಲಿತ 10 ಸದಸ್ಯರು ಹಾಗೂ 9 ಜನ ಕಾಂಗ್ರೆಸ್ ಬೆಂಬಲಿತವಾಗಿ ಆಯ್ಕೆಯಾಗಿದ್ದರೂ, ಪಕ್ಷಾಂತರ ಪರ್ವದಲ್ಲಿ ಬದಲಾದ ವಿದ್ಯಮಾನಗಳಲ್ಲಿ ಕೂಡ ಕಾಂಗ್ರೆಸ್ ನಿಂದ ಇಬ್ಬರು ಬಿಜೆಪಿಗೆ ಹೋಗಿದ್ದರೆ ಬಿಜೆಪಿಯಿಂದ ಇಬ್ಬರು ಕಾಂಗ್ರೆಸ್‌ಗೆ ಹೋಗಿದ್ದಾರೆ. ಇದರಿಂದ ಯಾವುದೇ ಪಕ್ಷಕ್ಕೆ ಸದಸ್ಯರ ಸಂಖ್ಯಾ ಬಲದಲ್ಲಿ ವ್ಯತ್ಯಾಸವಾಗಿಲ್ಲ.

ಎರಡನೇ ಅವಧಿಗೆ ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆ ಹಾಗೂ ಉಪಾಧ್ಯಕ್ಷ ಸ್ಥಾನ ಹಿಂದುಳಿದ ವರ್ಗ ಅ ಮಹಿಳೆಗೆ ನಿಗದಿಪಡಿಸಿ ಸರ್ಕಾರ ಆದೇಶ ಹೊರಡಿಸಿದೆ.

ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಬಂದಿರುವುದರಿಂದ ಸದ್ಯ ಬಿಜೆಪಿ ಬಣದಲ್ಲಿ 6 ಜನ ಮಹಿಳಾ ಸದಸ್ಯರಿದ್ದು, ಕಾಂಗ್ರೆಸ್ ಬಣದಲ್ಲಿ 3 ಜನ ಮಹಿಳಾ ಸದಸ್ಯೆಯರಿರುವುದರಿಂದ ಎರಡೂ ಪಕ್ಷದಲ್ಲಿ ಆಕಾಂಕ್ಷಿಗಳ ಸಂಖ್ಯೆಗೇನು ಕಡಿಮೆ ಇಲ್ಲ. ಹಿಂದಿನ ಅವಧಿಯಲ್ಲಿ ಇಬ್ಬರು ಬಿಜೆಪಿ ಸದಸ್ಯೆಯರು ಅಧ್ಯಕ್ಷ ಸ್ಥಾನ ಅಲಕರಿಸಿದ್ದಾರೆ. ಅವರನ್ನು ಹೊರತು ಪಡಿಸಿದರೆ ಬಿಜೆಪಿಯ

> **ಅಸಮಾಧಾನ**
>
> ಹಿಂದಿನ ಅವದಿಗೂ ಕೂಡ ಅಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿ ಮಹಿಳೆಗೆ ಮೀಸಲಾತಿ ಇತ್ತು. ಈಗ ಮತ್ತೆ ಸಾಮಾನ್ಯ ಮಹಿಳೆ ಅಂತ ಮೀಸಲಾತಿ ಪ್ರಕಟವಾಗಿರುವುದರಿಂದ ಕೆಲ ಸದಸ್ಯರಲ್ಲಿ ಅಸಮಾಧಾನವನ್ನು ಉಂಟು ಮಾಡಿದೆ. ಸಾಮಾನ್ಯ ಅಂತ ಬಂದಿದ್ದರೇ, ಮಹಿಳೆ ಹಾಗೂ ಪುರುಷರಿಬ್ಬರಿಗೂ ಸ್ಪರ್ಧಿಸಲು ಅವಕಾಶ ಇರುತ್ತಿತ್ತು ಎಂಬ ಅಭಿಪ್ರಾಯ ಹೊಂದಿರುವ ಕೆಲ ಸದಸ್ಯರು ಕೋರ್ಟ್ ಮೊರೆ ಹೋಗುವ ಸಾಧ್ಯತೆ ಕೂಡ ಇದೆ.

ಇನ್ನುಳಿದ ನಾಲ್ಕು ಜನ ಸದಸ್ಯೆಯರಿಗೆ ಈ ಸಲ ಪಕ್ಷವು ಅವಕಾಶ ನೀಡಬಹುದು ಎನ್ನಲಾಗಿದೆ.

ಈ ಸಲವಾದರೂ ಅಧ್ಯಕ್ಷ ಸ್ಥಾನದ ಚುಕ್ಕಾಣಿ ಹಿಡಿಯಬೇಕು ಎಂದು ಪಣತೊಟ್ಟಿರುವ ಕಾಂಗ್ರೆಸ್ ಪಕ್ಷದ ಮೂರು ಜನ ಸದಸ್ಯೆಯರ ಪೈಕಿ ಅಲ್ಪಸಂಖ್ಯಾತ ಮಹಿಳೆಯರಿಗೆ ಆದ್ಯತೆ ನೀಡಲು ಕೆಲವು ಕಾಂಗ್ರೆಸ್ ಸದಸ್ಯರು ಒತ್ತಾಯಿಸುತ್ತಿದ್ದಾರೆ. ಈವರೆಗೂ ಪಟ್ಟಣ ಪಂಚಾಯತಕ್ಕೆ ಅಲ್ಪಸಂಖ್ಯಾತ ಮಹಿಳೆ ಅಧ್ಯಕ್ಷ ಆಗದಿರುವುದರಿಂದ ಈ ಬಾರಿಯಾದರೂ ಅವಕಾಶ ನೀಡುವಂತೆ ಕೆಲವು ಮುಸ್ಲಿಂ ಮುಖಂಡರು ಒತ್ತಾಯಿಸಿದ್ದಾರೆ.

ಮರಾಠ ನಿಗಮದಿಂದ ಹಲವು ಯೋಜನೆಗಳಿಗೆ ಅರ್ಜಿ ಆಹ್ವಾನ

ಹಾವೇರಿ: ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಿಂದ 2024-25ನೇ ಸಾಲಿಗೆ ಹಲವು ಯೋಜನೆಗಳಡಿ ಸಾಲ ಸೌಲಭ್ಯಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸ್ವಯಂ ಉದ್ಯೋಗ ನೇರ ಸಾಲ ಮತ್ತು ಸಹಾಯಧನ, ಗಂಗಾ ಕಲ್ಯಾಣ ನೀರಾವರಿ ಯೋಜನೆ, ಅರಿವು ಶೈಕ್ಷಣ ಕ ಸಾಲ, ರಾಜಶ್ರೀ ಶಾಹುಮಹಾರಾಜ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಸಾಲ ಯೋಜನೆ, ಮರಾಠ ಮಿಲ್ಟ್ರಿ ಹೋಟೆಲ್ ಯೋಜನೆ, ಸ್ವಯಂ ಉದ್ಯೋಗ ಸಾಲ ಯೋಜನೆ (ವಾಣಿಜ್ಯ ಬ್ಯಾಂಕ್‌ಗಳ ಸಹಯೋಗದೊಂದಿಗೆ), ಸ್ವಾವಲಂಬಿ ಸಾರಥಿ ಯೋಜನೆ ಹಾಗೂ ಸ್ವಾತಂತ್ರ್ಯ ಅಮೃತ್ ಮಹೋತ್ಸವ ಮುನ್ನಡೆ ಯೋಜನೆ ಸೌಲಭ್ಯಕ್ಕೆ ಪ್ರವರ್ಗ-3ಬಿ ಅಡಿಯಲ್ಲಿ 2ಎಯಿಂದ 2(ಎಫ್)ವರೆಗೆ ಬರುವ ಸಮುದಾಯದಕ್ಕೆ ಸೇರಿದ ಅಭ್ಯರ್ಥಿಗಳಿಂದ ಸೇವಾಸಿಂಧು ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಸೇವಾಸಿಂಧು ಪೋರ್ಟಲ್ http://sevasindhu.karnataka.gov.in ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ದಿನಾಂಕ 31-08-2024ರೊಳಗಾಗಿ ಅರ್ಜಿ ಸಲ್ಲಿಸಬೇಕು. ಶೈಕ್ಷಣ ಕ ಸಾಲ ಯೋಜನೆಗಳಿಗೆ ಕೊನೆಯ ದಿನಾಂಕ ಇರುವುದಿಲ್ಲ. ಸ್ವಾತಂತ್ರ್ಯ ಅಮೃತ್ ಮಹೋತ್ಸವ ಮುನ್ನಡೆ ಯೋಜನೆಯಡಿ ಮರಾಠ ಸಮುದಾಯದ ಯುವಜನತೆಯನ್ನು ಕೌಶಲ್ಯ ಅಭಿವೃದ್ಧಿಪಡಿಸಿ ಉದ್ಯೋಗಮುಖಿಗಳನ್ನಾಗಿಸಲು ಸರ್ಕಾರದ ಸಂಸ್ಥೆಗಳಾದ ಐಡಿಐ. ಜಿಟಿಟಿಸಿ, ಕೆಜಿಟಿಟಿಐ ಇತ್ಯಾದಿಗಳಲ್ಲಿ ಅಲ್ಪಾವಧಿ ಕೋರ್ಸಗಳ ಮೂಲಕ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲು ಕೌಶಲ್ಯ ಕರ್ನಾಟಕ ತಂತ್ರಾಂಶದ (https://www.kaushalkar.com) ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ನಿಗಮದ ವೆಬ್‌ಸೈಟ್ www.kmcdc.karnataka.gov.in ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದು ಅಥವಾ ನಿಗಮದ ಸಹಾಯವಾಣಿ ಸಂಖ್ಯೆ080-29903994 ಮತ್ತು 8867537799 ವೆಬ್‌ಸೈಟ್‌ನಲ್ಲಿ ಆಯಾ ಜಿಲ್ಲಾ ಕಚೇರಿಯ ದೂರವಾಣ ಸಂಖ್ಯೆಗಳನ್ನು ನೀಡಲಾಗಿದ್ದು, ಸಂಪರ್ಕಿಸಬಹುದೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ರೋಹಿತ್ ಪಡೆಗೆ ಹೀನಾಯ ಸೋಲು

ಲಂಕೆಗೆ ಏಕದಿನ ಸರಣಿ, 3ನೇ ಪಂದ್ಯದಲ್ಲಿ ಭಾರತಕ್ಕೆ 110 ರನ್‌ಗಳ ಸೋಲು

ಪುಟ ತೆರೆದಂತೆ...

ಪ್ರಶಸ್ತಿ ಬಂದ್ರೆ ಸಮ್ಮಾನ, ಅದಕ್ಕಿಂತ ಜಾಸ್ತಿ ಅನುಮಾನ!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6

ಇನ್ನೆಷ್ಟು ಕಾಲ ಈ ಸಾವಿನ ನರ್ತನ ನೋಡಬೇಕು?
ಸಂಗತ
ಡಾ.ವಿಜಯ್ ದರಡಾ
ಸಂ.ಗಮ | 7

ಮಾತಂದ್ರೆ ಮಾತು

ನಾನು ತಪ್ಪು ಮಾಡಿಲ್ಲ, ರಾಜೀನಾಮೆ ಕೊಡುವ ಪ್ರಮೇಯವೇ ಇಲ್ಲ. ನನ್ನ ಬಗ್ಗೆ ಮಾತನಾಡುವ ನೈತಿಕತೆ ಯಡಿಯೂರಪ್ಪಗೆ ಇಲ್ಲ. ಯಡಿಯೂರಪ್ಪ ಚೆಕ್ ಮೂಲಕ ಹಣ ಪಡೆದಿದ್ದರು. ಡಿ ನೋಟಿಫಿಷನ್ ಮಾಡಿದ್ದರು. ಅವರ ಪ್ರಕರಣ ಮತ್ತು ನನ್ನ ಪ್ರಕರಣ ಬೇರೆ ಬೇರೆ. ಮೈಸೂರಿನ ಸಮಾವೇಶದಲ್ಲಿ ಎಲ್ಲರ ಹಗರಣ ಜನರ ಮುಂದಿಡುತ್ತೇನೆ.

- ಸಿದ್ದರಾಮಯ್ಯ
ಸಿಎಂ

ದಾರಿದೀಪೋಕ್ತಿ

ಎಷ್ಟೇ ಜನರಾಗಲಿ, ಯಾರೇ ಮಾಡಲಿ, ತಪ್ಪು ತಪ್ಪೇ. ಯಾರೊಬ್ಬರೂ ಮಾಡದಿದ್ದರೂ ಸರಿಯೇ. ಸರಿಯಾದುದು ಯಾವತ್ತೂ ಸರಿಯೇ. ತಪ್ಪು ಎಂದೂ ಸರಿಯಾಗುವುದಿಲ್ಲ. ಹಾಗೆಯೇ ಸರಿಯಾದುದು ಎಂದೂ ತಪ್ಪಾಗುವುದಿಲ್ಲ.

ವಕ್ರತುಂಡೋಕ್ತಿ

ನಾವು ಆಗಾಗ ಕೇಕ್ ತಿನ್ನಬೇಕು. ಕಾರಣ ಇಂದು ಯಾರದ್ದೋ ಕೆಲವರ ಬರ್ಥ್‌ಡೇ ಆಗಿರುತ್ತದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಲಾಲ್‌ಬಾಗ್‌ನಲ್ಲಿ ಪುಷ್ಪ ಪ್ರದರ್ಶನ ಆರಂಭ ಸುದ್ದಿ



ಸಿಎಂ ಪ್ರಾಸಿಕ್ಯೂಷನ್; ರಾಜಭವನದ ರಾಜಕೀಯ ಫಲಿಸದು

ಎಚ್.ಎಸ್ ಚಂದ್ರಮೌಳಿ
ಹಿರಿಯ ವಕೀಲರು

ಬೆಂಗಳೂರು: ರಾಜ್ಯದಲ್ಲಿನ ಅತಿವೃಷ್ಟಿ, ತುಂಬಿದ ಅಣೆಕಟ್ಟುಗಳು, ಪ್ರವಾಹ, ಹಲವು ಹಗರಣಗಳ ಪ್ರಸ್ತಾಪ, ಅಬ್ರಹಾಂ, ರಾಜ್ಯಪಾಲರು, ಪಾದಯಾತ್ರೆ, ಜನಾಂದೋಲನ ಇತ್ಯಾದಿ ವರದಿಗಳು ಇತ್ತೀಚೆಗೆ ಸುದ್ದಿಮನೆಯನ್ನು ಆವರಿಸಿಕೊಂಡಿವೆ. ಇದೇ ವಿಷಯಗಳು ಸಾಮಾಜಿಕ ಜಾಲತಾಣಗಳಲ್ಲೂ ಚರ್ಚೆಯಾಗುತ್ತಿದೆ.

ಅದರಲ್ಲೂ ಕೆಲ ದಿನಗಳಿಂದ ಮೈಸೂರಿನ ಮುಡಾ ಹಗರಣ ಹೆಚ್ಚು ಚರ್ಚೆಯಲ್ಲಿದೆ. ನಾಡಿನ ಮುಖ್ಯಮಂತ್ರಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಖಾಸಗಿ ವ್ಯಕ್ತಿಯೊಬ್ಬರು ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ಈ ದೂರನ್ನು ಆಧರಿಸಿ ರಾಜ್ಯಪಾಲರು ''ನಿಮ್ಮ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿಯನ್ನು ಏಕೆ ನೀಡಬಾರದು'' ಎಂದು ಕಾರಣ ಕೇಳಿ ಮುಖ್ಯಮಂತ್ರಿಯವರಿಗೆ ಕೊಟ್ಟಿರುವ ನೋಟಿಸು ಇದೀಗ ಸಾಕಷ್ಟು ಚರ್ಚೆಯಾಗುತ್ತಿದೆ. ಅದರಲ್ಲಿಯೂ ಕಾನೂನು ಬಲ್ಲವರು, ಕಾನೂನಿನ ಅರಿವೇ ಇಲ್ಲದವರು ನೀಡುತ್ತಿರುವ ಪ್ರತಿಕ್ರಿಯೆಗಳು ನಾಗರಿಕರಲ್ಲಿ ಒಂದು ರೀತಿಯ ಗೊಂದಲವನ್ನು ಉಂಟು ಮಾಡಿ, ಯಾರು ಸರಿ, ಯಾವುದು ತಪ್ಪು ? ಎನ್ನುವ ಪ್ರಶ್ನೆಯನ್ನು ಮೂಡಿಸುತ್ತಿದೆ. ಈ ರೀತಿಯ ಗೊಂದಲದ ಸನ್ನಿವೇಶದಲ್ಲಿರುವಾಗ ನನ್ನ ವೃತ್ತಿಯ ಅನುಭವ ಮತ್ತು ನಾನು ಕಾನೂನನ್ನು ಅರ್ಥ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ನೆಲದ ಕಾನೂನನ್ನು ನನ್ನದೇ ರೀತಿಯಲ್ಲಿ ವಿಶ್ಲೇಷಿಸುತ್ತಿದ್ದೇನೆ.

ಕೆಲವೇ ದಿನಗಳ ಹಿಂದೆ ಸುಪ್ರೀಕೋರ್ಟ್ ನ್ಯಾಯಾಮೂರ್ತಿಗಳಾದ ನಾಗರತ್ನ ಅವರು ಸಮಾರಂಭವೊಂದರಲ್ಲಿ, ರಾಜ್ಯಪಾಲರುಗಳ ಬಗ್ಗೆ ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.



ಪರೋಕ್ಷವಾಗಿ ತಮಿಳುನಾಡು ಹಾಗೂ ಕೇರಳ ರಾಜ್ಯಗಳ ರಾಜ್ಯಪಾಲರ ಕರ್ತವ್ಯ ಪಾಲನೆಯ ಹಿನ್ನಲೆಯಲ್ಲಿ ಮಾತನಾಡಿರುವುದು ಇಂದಿಗೆ ಪ್ರಸ್ತುತವಾಗುತ್ತಿದೆ. ಕಾರ್ಯಕ್ರಮದಲ್ಲಿ ಅವರು, 'ಕೆಲವು ರಾಜ್ಯಪಾಲರು ಮಾಡಬಾರದ ಕೆಲಸವನ್ನು ಮಾಡುತ್ತಿದ್ದಾರೆ. ಮಾಡಬೇಕಾದ ಕೆಲಸವನ್ನು ಮಾಡುತ್ತಿಲ್ಲ. ಕ್ರಿಯಾಶೀಲರಾಗಬೇಕಾದವರು ನಿಷ್ಕ್ರಿಯ ರಾಗುತ್ತಿದ್ದಾರೆ' ಎಂದಿದ್ದರು. ಈ ಮಾತುಗಳ ಹಿನ್ನಲೆಯಲ್ಲಿ ಇಂದಿನ ಮೇಲ್ಕಾಣಿಸಿದ ಪ್ರಚಲಿತ ವಿಷಯಗಳ ಬಗ್ಗೆ ಒಂದು ಇಣುಕು ನೋಟ.

ಯಾವುದೇ ಪ್ರಾಥಮಿಕ ತನಿಖೆಯ ವರದಿಯಿಲ್ಲದೇ ಅರ್ಜಿದಾರರು ರಾಜಭವನದ ಕದವನ್ನು ತಟ್ಟಿ ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ ಅಭಿಯೋಜನೆಗೆ ಅನುಮತಿಯನ್ನು ಕೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಜುಲೈ 1ರಿಂದ ದೇಶಾದ್ಯಂತ ಜಾರಿಗೆ ಬಂದಿರುವ ಭಾರತೀಯ ನಾಗರಿಕ ಸುರಕ್ಷಾ ಸಂಹಿತ 2023ರ ಕಲಂ 223ನ್ನು ಗಮನಿಸಬೇಕು.

ಮುಡಾ ಪ್ರಕರಣದ ಹಿನ್ನೆಲೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅರ್ಜಿದಾರರು ಈಗಾಗಲೇ ಮೈಸೂರಿನ ಲೋಕಾಯುಕ್ತ ಪೊಲೀಸರಿಗೆ ದೂರನ್ನು ದಾಖಲು ಮಾಡಿ ತನಿಖೆ ನಡೆಸುವಂತೆ ಕೋರಿದ್ದಾರೆ. ಪೊಲೀಸರು ಈಗಾಗಲೇ ತನಿಖೆಯನ್ನು ಪ್ರಾರಂಭಿಸಲು ಕೆಲವೊಂದು ಕಾನೂನಿನ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದಾರೆ. 26.07.2018 ರಿಂದ ಭ್ರಷ್ಟಾಚಾರ ನಿಯಂತ್ರಣ ಕಾಯಿದೆಯ ಸೆಕ್ಷನ್ 17(ಎ) ಪ್ರಕಾರ, ಒಬ್ಬ ಸರಕಾರಿ ಮುಖ್ಯಸ್ಥರ ಮೇಲೆ ಯಾವುದೇ ದೂರು ಬಂದಾಗ ಪೊಲೀಸ್ ಅಧಿಕಾರಿಗಳು, ಬಂದ ದೂರಿನ ಮೇಲೆ ವಿಚಾರಣೆ ಅಥವಾ ತನಿಖೆಯನ್ನು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ನಡೆದ ವಿದ್ಯಮಾನಗಳ ಬಗ್ಗೆ, ಎಸಗಿರುವ ಅಪರಾಧಗಳ ಬಗ್ಗೆ (Public Servants Discharge of Official Function or Duties) ತನಿಖೆ ಮಾಡುವಾಗ ಕೆಲವೊಂದು ನಿಬಂಧನೆಗಳಿಗೆ ಒಳಪಡುತ್ತಾರೆ ಹಾಗೂ ಸಂಬಂಧಪಟ್ಟವರಿಂದ ಅನುಮತಿ ಪಡೆಯಬೇಕು ಎನ್ನುವುದು ಕಡ್ಡಾಯ. ಈ ಪ್ರಕರಣದಲ್ಲಿ, ಲೋಕಾಯುಕ್ತ ಪೊಲೀಸರು ಈ ನಿಬಂಧನೆಯನ್ನು ತನಿಖೆ ನಡೆಸುವ ಮುನ್ನ ಪಾಲಿಸಲೇಬೇಕಾಗುತ್ತದೆ.

→ 4

ಫೈನಲ್ ಸ್ಪರ್ಧೆಗೆ 100 ಗ್ರಾಂ ತೂಕ ಹೆಚ್ಚಳ ಅಡ್ಡಿ
ವಿನೇಶ್ ಫೋಗಟ್ ಅನರ್ಹ, ಭಾರತಕ್ಕೆ ಆಘಾತ

ಚಿನ್ನ ಕಸಿದ ತೂಕ

ಬೆಂಗಳೂರು: ಪ್ಯಾರಿಸ್ ಒಲಿಂಪಿಕ್ಸ್ ಕುಸ್ತಿಯಲ್ಲಿ ಫೈನಲ್ ತಲುಪಿದ್ದ ವಿನೇಶಾ ಫೋಗಟ್ ಅವರ ತೂಕ 100 ಗ್ರಾಂ ಹೆಚ್ಚಳವಾಗಿದ್ದಕ್ಕೆ ಅವರನ್ನು ಫೈನಲ್ ಪಂದ್ಯಕ್ಕೆ ಅನರ್ಹಗೊಳಿಸಲಾಗಿದೆ ಎಂದು ಇಂಡಿಯನ್ ಒಲಿಂಪಿಕ್ ಅಸೋಶಿಯೆಷನ್ ತಿಳಿಸಿದೆ. ಈ ಅನರ್ಹತೆಯಿಂದ ವಿನೇಶಾ ಅವರು ಪದಕ ವಂಚಿತರಾಗಿದ್ದಾರೆ. ಇದರಿಂದ ಕೋಟ್ಯಂತರ ಭಾರತೀಯರಿಗೆ ಆಘಾತವಾಗಿದೆ. ಒಲಿಂಪಿಕ್ಸ್‌ಗೆ ವಿನೇಶಾ ಫೋಗಟ್ ಅವರನ್ನು ಅನರ್ಹಗೊಳಿಸಿರುವ ನಿರ್ಣಯವನ್ನು ಮರುಪರಿಶೀಲಿಸುವಂತೆ ಯುಡಬ್ಲ್ಯುಡಬ್ಲ್ಯುಗೆ ಭಾರತೀಯ ಕುಸ್ತಿ ಫೆಡರೇಷನ್ ಮನವಿ ಸಲ್ಲಿಸಿದೆ.

ಸ್ಪರ್ಧೆಯ ನಿಯಮದ ಪ್ರಕಾರ ಸೆಮಿಫೈನಲ್ ಹಾಗೂ ಫೈನಲ್ ನಡೆಯುವ ಎರಡು ದಿನ ನಿಗದಿತ 50 ಕೆ.ಜಿ ತೂಕವನ್ನು ಸ್ಪರ್ಧಾಳುಗಳು ಕಾಯ್ದುಕೊಳ್ಳಬೇಕು. ವಿನೇಶಾ ಫೋಗಟ್ ಅವರು ಒಲಿಂಪಿಕ್ಸ್ ಕುಸ್ತಿಯಲ್ಲಿ ಫೈನಲ್ ತಲುಪುವ ಮೂಲಕ ಇತಿಹಾಸ ಬರೆದಿದ್ದರು. ಈ ಸಾಧನೆ ಮಾಡಿದ ಭಾರತದ ಮೊದಲ ಮಹಿಳಾ ಕುಸ್ತಿಪಟುವೆಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದರು.

ಸೋತಿದ್ದ ಸ್ಪರ್ಧಿ ಫೈನಲ್‌ಗೆ

ವಿನೇಶಾ ಫೋಗಟ್ ಅನರ್ಹರಾದ ಬೆನ್ನಲ್ಲೇ, ಕ್ಯೂಬಾದ ಯುಸೇನೆಯಲಿಸ್ ಗುಜ್ಮನ್ ಲೋಪೇಜ್‌ಗೆ ಫೈನಲ್‌ನಲ್ಲಿ ಆಡುವ ಅವಕಾಶ ದೊರೆತಿದ್ದು, ಅಮೆರಿಕದ ಸೆರಾ ಹಿಲ್ಡಿಬ್ರೇಟ್, ಲೋಪೇಜ್ ಮುಖಾಮುಖಿಯಾಗಲಿದ್ದಾರೆ.

- ಯುನೈಟೆಡ್ ವರ್ಲ್ಡ್ ರೆಸ್ಲಿಂಗ್‌ಗೆ ಪ್ರತಿಭಟನೆ ದಾಖಲು
- ಲೋಕಸಭೆಯಲ್ಲೂ ಪ್ರತಿಧ್ವನಿ, ಸೂಕ್ತ ಕ್ರಮಕ್ಕೆ ಪ್ರಧಾನಿ ಸೂಚನೆ
- ಒಲಿಂಪಿಕ್ಸ್ ಸಂಸ್ಥೆ ಕ್ರಮ ಖಂಡಿಸಿ ಸದನದಿಂದ ಹೊರನಡೆದ ಪ್ರತಿಪಕ್ಷ
- ಆಸ್ಪತ್ರೆಗೆ ದಾಖಲಾಗಿರುವ ವಿನೇಶಾ ಅವರನ್ನು ಸಂತೈಸಿದ ಪಿ.ಟಿ.ಉಷಾ

ವಿನೇಶಾ ಅವರೇ ನೀವು ಚಾಂಪಿಯನ್‌ಗಳಲ್ಲಿ ಚಾಂಪಿಯನ್ ಆಗಿದ್ದೀರಿ. ನಿಮ್ಮ ಬಗ್ಗೆ ಭಾರತವು ಹೆಮ್ಮೆ ಪಡುತ್ತದೆ. ಪ್ರತಿಯೊಬ್ಬರಿಗೂ ನೀವು ಸ್ಫೂರ್ತಿಯಾ ಗಿದ್ದೀರಿ. ಸ್ಪರ್ಧೆಯಲ್ಲಿ ನಿಮಗೆ ಹಿನ್ನೆಡೆಯಾಗಿರುವುದು ತುಂಬಾ ನೋವಿನ ಸಂಗತಿ. ಆದರೆ, ನೀವು ಈ ಸಂಕಷ್ಟದಿಂದ ಶೀಘ್ರವೇ ಹೊರಬರುತ್ತೀರಿ ಎಂಬುದನ್ನು ನಾನು ಬಲ್ಲೆ. ಸವಾಲುಗಳನ್ನು ಎದುರಿಸುವುದು ನಿಮ್ಮ ಸ್ವಭಾವವಾಗಿದೆ. ನಾವೆಲ್ಲರೂ ನಿಮ್ಮೊಂದಿಗಿದ್ದೇವೆ.

- ನರೇಂದ್ರ ಮೋದಿ, ಪ್ರಧಾನಿ

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ವಿನೇಶಾ ಫೋಗಟ್ ಅನರ್ಹಗೊಂಡಿರುವುದು ದುರದೃಷ್ಟಕರ. ವಿನೇಶಾ ಅವರ ಸ್ಥೈರ್ಯ, ಪುಟಿದೇಳಬಲ್ಲ ಗುಣ ಹಾಗೂ ಅರ್ಪಣಾ ಮನೋಭಾವ ಸದಾ ದೇಶವನ್ನು ಪ್ರೇರೆಪಿಸುತ್ತದೆ. ನೆನಪಿಡಿ, ಈ ಒಂದು ಕ್ಷಣದಿಂದಾಗಿ ನೀವು ದೇಶಕ್ಕಾಗಿ ಮಾಡಿದ ಅಪಾರ ಸಾಧನೆ ಹಾಗೂ ಹೆಮ್ಮೆ ಕುಗ್ಗಿಸಲು ಸಾಧ್ಯವಿಲ್ಲ. ಧೈರ್ಯವಾಗಿರು ವಿನೇಶಾ, ನಿಮ್ಮ ಮೇಲೆ ಹಾಗೂ ನಿಮ್ಮ ಅದ್ಭುತ ಪಯಣದಲ್ಲಿ ನಮಗೆ ನಂಬಿಕೆಯಿದೆ. ನೀವು ಎಂದೆಂದಿಗೂ ಚಾಂಪಿಯನ್.

- ಸಿದ್ದರಾಮಯ್ಯ ಸಿಎಂ

ಒಂದೇ ದಿನ 8.26 ಲಕ್ಷ ಪ್ರಯಾಣಿಕರ ಸಂಚಾರ

ನಮ್ಮ ಮೆಟ್ರೋ ಹೊಸ ದಾಖಲೆ

ಬೆಂಗಳೂರು: ನಮ್ಮ ಮೆಟ್ರೋದಲ್ಲಿ ದಿನದಿಂದ ದಿನಕ್ಕೆ ಪ್ರಯಾಣಿಕರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಮಂಗಳ ವಾರ ಒಂದೇ ದಿನದಲ್ಲಿ 8.26 ಲಕ್ಷ ಜನ ಸಂಚಾರ ನಡೆಸಿದ್ದಾರೆ.

ನಮ್ಮ ಮೆಟ್ರೊ ಹಿಂದಿನ ದಾಖಲೆಗಳನ್ನು ಮೀರಿ, ಮಂಗಳವಾರ ನಮ್ಮ ಮೆಟ್ರೊದಲ್ಲಿ 8.26,883 ಜನ ಪ್ರಯಾಣಿಸಿದ್ದಾರೆ. ಇದು ಹೊಸ ದಾಖಲೆಯಾಗಿದೆ. ಈ ಬಗ್ಗೆ ಬಿಎಂಆರ್‌ಸಿಎಲ್ ಪ್ರತಿಕ್ರಿಯಿಸಿದ್ದು, 'ನಮ್ಮ ಮೆಟ್ರೋ ಪ್ರಯಾಣದ ಪಾಲುದಾರರನ್ನಾಗಿ ಮಾಡಿದ್ದಕ್ಕೆ, ನಮ್ಮ ಪ್ರಯತ್ನವನ್ನು ಬೆಂಬಲಿಸಿದ್ದಕ್ಕೆ ಪ್ರಯಾಣಿಕರಿಗೆ ನಿಗಮದ ಧನ್ಯವಾದಗಳು' ಎಂದು ಹೇಳಿದೆ.

ಕಳೆದ 12 ವರ್ಷಗಳ ನಂತರ ದಾಖಲೆ ಪ್ರಮಾಣದಲ್ಲಿ ಅತ್ಯಧಿಕ ಪ್ರಯಾಣಿಕರು ಸಂಚಾರ ಮಾಡಿದ್ದಾರೆ. ಈ ಮೂಲಕ ನಮ್ಮ ಮೆಟ್ರೋದಲ್ಲಿ ಅತ್ಯಧಿಕ ಪ್ರಯಾಣಿಕರು ಸಂಚಾರ ಮಾಡಿದ ದಾಖಲೆ ಆ.6ರಂದು ದಾಖಲಾಗಿದೆ. ಹಿಂದಿನ ರೈಡರ್ಶಿಪ್ ದಾಖಲೆಗಳನ್ನು ಮೀರಿಸಿ, ಮಂಗಳವಾರ ನಮ್ಮ ಮೆಟ್ರೋ 8.26 ಲಕ್ಷಗಳ ಅತಿ ಹೆಚ್ಚು ಜನರು ಪ್ರಯಾಣಿಸಿದ ಹೊಸ ದಾಖಲೆಯಾಗಿದೆ ಎಂದು ತಿಳಿಸಿದೆ.

ಪರಶುರಾಮ ಕುಟುಂಬಕ್ಕೆ 50 ಲಕ್ಷ ರು. ಪರಿಹಾರ

ಕೊಪ್ಪಳ: ಯಾದಗಿರಿಯಲ್ಲಿ ನಿಗೂಢವಾಗಿ ಮೃತಪಟ್ಟ ಪಿಎಸ್‌ಐ ಪರಶುರಾಮ ಅವರ ನಿವಾಸಕ್ಕೆ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ಬುಧವಾರ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಕರಣವನ್ನು ಸರಕಾರ ಗಂಭೀರವಾಗಿ ಪರಿಗಣಿಸಿದೆ. ಘಟನೆಯಾದ ದಿನವೇ ಪ್ರಕರಣ ದಾಖಲಿಸಿ, ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ. ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಪರಶುರಾಮ ಅವರ ಪತ್ನಿಗೆ ಇಲಾಖೆಯಲ್ಲಿ ಸೂಕ್ತವಾದ ಉದ್ಯೋಗ ನೀಡುತ್ತೇವೆ. ಸರಕಾರದಿಂದ ಕುಟುಂಬಕ್ಕೆ 50 ಲಕ್ಷ ರು. ಪರಿಹಾರ ಕಲ್ಪಿಸಲಾಗುವುದು ಎಂದರು.

ರಾಜ್ಯಸಭೆ 12 ಸ್ಥಾನಕ್ಕೆ ಸೆ.3ರಂದು ಚುನಾವಣೆ

ದೆಹಲಿ: ಒಂಬತ್ತು ರಾಜ್ಯಗಳಲ್ಲಿ ಖಾಲಿ ಇರುವ 12 ರಾಜ್ಯಸಭಾ ಸ್ಥಾನಗಳಿಗೆ ಸೆ.3 ರಂದು ಚುನಾವಣೆ ನಡೆಯಲಿದೆ. ಆ.14 ರಂದು ಅಧಿಸೂಚನೆ ಹೊರಡಿಸಲಿದ್ದು, ನಾಮಪತ್ರ ಸಲ್ಲಿಸಲು ಆ.21 ಕಡೆದಿನ. ಸೆ.3 ರಂದು ಪ್ರತಿ ಸ್ಥಾನಕ್ಕೆ ಪ್ರತ್ಯೇಕವಾಗಿ ಮತದಾನ ನಡೆಸಿ ಅಂದೇ ಮಧ್ಯಾಹ್ನ ಫಲಿತಾಂಶ ಪ್ರಕಟಿಸಲಾಗುವುದು ಎಂದು ಚುನಾವಣಾ ಆಯೋಗ ಬುಧವಾರ ಘೋಷಿಸಿದೆ.

ಮರಳಿದ ಮನು ಭಾಕರ್ ಅದ್ದೂರಿ ಸ್ವಾಗತ

ದೆಹಲಿ: ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದ ಮೊದಲ ಭಾರತೀಯ ಅಥ್ಲೀಟ್ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿರುವ ಮನು ಭಾರ್ಕ ಅವರು ಬುಧವಾರ ಬೆಳಗ್ಗೆ ದೆಹಲಿಗೆ ಬಂದಿಳಿದಿದರು. ಅವರ ಬರುವಿಕೆಗಾಗಿ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾಯುತ್ತಿದ್ದ 100 ಜನರು ಕೋಚ್ ಜಸ್ಪಾಲ್ ರಾಣಾ ಮತ್ತು ಮನು ಭಾಕರ್ ಅವರ ಪೋಸ್ಟರ್, ಬ್ಯಾನರ್ ಹಿಡಿದು ಸ್ವಾಗತ ಕೋರಿದರು.

ನೇಪಾಳ: ಹೆಲಿಕಾಪ್ಟರ್ ಪತನ, ಐವರ ಸಾವು

ಕಠ್ಮಂಡು: ನೇಪಾಳ ರಾಜಧಾನಿ ಕಠ್ಮಂಡುವಿನ ವಾಯವ್ಯ ಭಾಗದಲ್ಲಿನ ಪರ್ವತಗಳ ಬಳಿ ಹೆಲಿಕಾಪ್ಟರ್‌ವೊಂದು ಬುಧವಾರ ಪತನಗೊಂಡಿದ್ದು, ಐವರು ಮೃತಪಟ್ಟಿದ್ದಾರೆ. ಏರ್ ಡೈನಾಸ್ಟಿ ಎಂಬ ಸಂಸ್ಥೆಗೆ ಸೇರಿದ 9ಎನ್-ಎಜೆಡಿ ಎಂಬ ಹೆಲಿಕಾಪ್ಟರ್ ಅವಘಡಕ್ಕೀಡಾಗಿದೆ. ಹೆಲಿಕಾಪ್ಟರ್‌ನಲ್ಲಿ ಐವರು ಪ್ರಯಾಣಿಸುತ್ತಿದ್ದರು, ಅದರಲ್ಲಿ ನಾಲ್ವರು ಚೀನಿ ಪ್ರವಾಸಿಗರಿದ್ದರು ಎಂದು ನೇಪಾಳದ ನಾಗರಿಕ ವಿಮಾನಯಾನ ಸಂಸ್ಥೆ ತಿಳಿಸಿದೆ.

ದರ್ಶನ್ ಬಟ್ಟೆ ಮೇಲೆ ರೇಣುಕಾಸ್ವಾಮಿ ರಕ್ತದ ಕಲೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನವಾಗಿರುವ ದರ್ಶನ್ ಬಟ್ಟೆಗಳ ಮೇಲೆ ರೇಣುಕಾಸ್ವಾಮಿ ರಕ್ತದ ಕಲೆಗಳು ಸಿಕ್ಕಿದ್ದು, ಇದರಿಂದ ಪ್ರಕರಣದಲ್ಲಿ ದರ್ಶನ್‌ಗೆ ಕಂಟಕವಾಗಲಿರುವ ಅತಿ ದೊಡ್ಡ ಸಾಕ್ಷ್ಯ ಪೊಲೀಸರಿಗೆ ಸಿಕ್ಕಂತಾಗಿದೆ. ದರ್ಶನ್ ಮನೆಯಲ್ಲಿ ವಶಪಡಿಸಿಕೊಂಡಿದ್ದ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಹಾಗೂ ಕಪ್ಪು ರೌಂಡ್ ನೆಕ್ ಶರ್ಟ್ ಅನ್ನು ಎಫ್‌ಎಸ್‌ಎಲ್‌ಗೆ ಪೊಲೀಸರು ಕಳುಹಿಸಿದ್ದರು. ಪರಿಶೀಲನೆಯಲ್ಲಿ ದರ್ಶನ್ ಬಟ್ಟೆಯ ಮೇಲೆ ರಕ್ತದ ಕಲೆಗಳು ಪತ್ತೆಯಾಗಿದ್ದವು. ಇವು ರೇಣುಕಾಸ್ವಾಮಿಯ ದೇಹದ ರಕ್ತ ಎಂಬುದು ಎಫ್‌ಎಸ್‌ಎಲ್ ವರದಿಯಲ್ಲಿ ದೃಢವಾಗಿದೆ ಎನ್ನಲಾಗಿದೆ.

ನದಿ ಪಾಲಾದ ಲಾರಿ | ಕಾರವಾರ-ಗೋವಾ ಸಂಚಾರ ಸ್ಥಗಿತ

ಕುಸಿದ ಕಾಳಿ ಸೇತುವೆ

- ರಸ್ತೆಯ ಎರಡೂ ಕಡೆಗಳಲ್ಲೂ ಪೊಲೀಸರ ನಿಯೋಜನೆ
- ಕುಸಿದು ಬಿದ್ದ ಸೇತುವೆ ನೋಡಲು ಜನರ ಭಾರಿ ದಂಡು

ಕಾರವಾರ: ಇಲ್ಲಿನ ಕೋಡಿಬಾಗದಲ್ಲಿರುವ ಕಾಳಿ ಸೇತುವೆಯು ಮಂಗಳವಾರ ತಡರಾತ್ರಿ ಕುಸಿದು ಬಿದ್ದಿದ್ದು, ಲಾರಿಯೊಂದು ನದಿ ಪಾಲಾಗಿದೆ.

ರಾತ್ರಿ 1 ಗಂಟೆ ವೇಳೆಗೆ ಕಾಳಿ ನದಿಯ ಹಳೆಯ ಸೇತುವೆಯು ಮೂರು ಕಡೆಗಳಲ್ಲಿ ಏಕಾಏಕಿ ಮುರಿದು ಬಿದ್ದಿತ್ತು. ಸೇತುವೆ ಮೇಲೆ ಸಾಗುತ್ತಿದ್ದ ಗೋವಾದಿಂದ ಕಾರವಾರ ಕಡೆಗೆ ಸಂಚರಿಸುತ್ತಿದ್ದ ಲಾರಿಯೊಂದು ನದಿಗೆ ಬಿದ್ದಿದೆ. ಲಾರಿ ಚಾಲಕ ಮುರುಗನ್ ಅವರನ್ನು ಸ್ಥಳೀಯ ಮೀನುಗಾರರು ರಕ್ಷಣೆ ಮಾಡಿದ್ದಾರೆ.

ಚತುಷ್ಪಥ ರಾಷ್ಟ್ರೀಯ ಹೆದ್ದಾರಿ-66ರಲ್ಲಿನ ಕಾಳಿ ನದಿಗೆ ಎರಡು ಸೇತುವೆಗಳಿವೆ. ಗೋವಾ ಕಡೆಯಿಂದ ಕಾರವಾರದತ್ತ ವಾಹನಗಳು ಸಂಚರಿಸುತ್ತಿದ್ದ ಸೇತುವೆಯು ಮುರಿದು ಬಿದ್ದಿದೆ. ಈ ಸೇತುವೆಯನ್ನು 1983ರಲ್ಲಿ ನಿರ್ಮಿಸ ಲಾಗಿತ್ತು. 2009ರಲ್ಲಿ ಸೇತುವೆಯ ಸಂಪೂರ್ಣ ದುರಸ್ತಿಗೆ ಪ್ರಯತ್ನಿಸಲಾಗಿತ್ತು. ಆದರೆ, ಅದು ಸಾಧ್ಯವಾಗಿರಲಿಲ್ಲ. ಭಾಗಶಃ ಮಾತ್ರ ದುರಸ್ತಿ ನಡೆಸಲಾಗಿತ್ತು.

2018ರಲ್ಲಿ ಇದೇ ಸೇತುವೆ ಪಕ್ಕದಲ್ಲಿ ಇನ್ನೊಂದು ಸೇತುವೆಯನ್ನು ನಿರ್ಮಿಸಲಾಗಿದೆ. ಸುರಕ್ಷತೆ ದೃಷ್ಟಿಯಿಂದ ಸದ್ಯ ಈ ಹೊಸ ಸೇತುವೆಯ ಮೇಲೆ ಲಘು ವಾಹನ ಸಂಚಾರಕಷ್ಟೇ ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಅವಕಾಶ ನೀಡಿದ್ದಾರೆ. ಇದರಿಂದ ಕಾರವಾರದಿಂದ ಗೋವಾ ಕಡೆಗೆ ವಾಹನ ಸಂಚಾರ ಸ್ಥಗಿತಗೊಂಡಿದೆ.

ಚತುಷ್ಪಥ ರಾಷ್ಟ್ರೀಯ ಹೆದ್ದಾರಿ-66ರಲ್ಲಿ ಕಾಳಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಸೇತುವೆ ಮುರಿದು ಬಿದ್ದಿದೆ.

ತಿದ್ದುಪಡಿ ವಿಧೇಯಕಕ್ಕೆ ಮುಸ್ಲಿಂ ಸಂಸದರಿಂದ ವಿರೋಧ | ಭಾರಿ ಗದ್ದಲವಾಗುವ ಸಾಧ್ಯತೆ

ಇಂದು ವಕ್ಫ್ ವಿಧೇಯಕ ಮಂಡನೆ

ದೆಹಲಿ: 1995ರ ವಕ್ಫ್ ಕಾಯಿದೆಗೆ ತಿದ್ದುಪಡಿ ಮಾಡಿರುವ ವಿಧೇಯಕ ಲೋಕಸಭೆಯಲ್ಲಿ ಗುರುವಾರ ಮಂಡನೆ ಆಗಲಿದೆ. ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ವಿಧೇಯಕ ಮಂಡಿಸಲಿದ್ದಾರೆ. ತಿದ್ದುಪಡಿ ವಿಧೇಯಕಕ್ಕೆ ಈಗಾಗಲೇ ಮುಸ್ಲಿಂ ಸಂಸದರು ವಿರೋಧ ವ್ಯಕ್ತಪಡಿಸಿದ್ದು, ಸದನದಲ್ಲಿ ಭಾರಿ ಗದ್ದಲವಾಗುವ ಸಾಧ್ಯತೆ ಇದೆ. ಬಹಳಷ್ಟು ಅಂಶಗಳಲ್ಲಿ ತಿದ್ದುಪಡಿ ಮಾಡಲಾಗಿರುವ ವಕ್ಫ್ ಕಾಯಿದೆ ಹೆಸರನ್ನು 'ಏಕೀಕೃತ ವಕ್ಫ್ ನಿರ್ವಹಣೆ, ಸಬಲೀಕರಣ, ದಕ್ಷತೆ ಮತ್ತು ಅಭಿವೃದ್ಧಿ ಕಾಯಿದೆ' (ಯುನಿಫೈಡ್ ವಕ್ಫ್ ಮ್ಯಾನೇಜ್‌ಮೆಂಟ್, ಎಂಪವರ್‌ಮೆಂಟ್, ಎಫಿಷಿಯೆನ್ಸಿ ಆ್ಯಂಡ್ ಡೆವಲಪ್‌ಮೆಂಟ್ ಆ್ಯಕ್ಟ್) ಎಂದು ಬದಲಿಸುವ ಪ್ರಸ್ತಾಪವಿದೆ.

ವಿಧೇಯಕದಲ್ಲಿ ಏನಿದೆ?

ಹೊಸ ತಿದ್ದುಪಡಿ ವಿಧೇಯಕವು ಮುಖ್ಯವಾಗಿ, ವಕ್ಫ್ ಮಂಡಳಿಯಿಂದ ಅಕ್ರಮ ಆಸ್ತಿಗಳನ್ನು ಬಿಡುಗಡೆಗೊಳಿಸುವ ಉದ್ದೇಶ ಹೊಂದಿದೆ. ಸೆಂಟ್ರಲ್ ವಕ್ಫ್ ಕೌನ್ಸಿಲ್ ಮತ್ತು ಸ್ಟೇಟ್ ವಕ್ಫ್ ಬೋರ್ಡ್ ರಚನೆ ಪ್ರಸ್ತಾಪವಿದೆ. ಈ ಎರಡೂ ಸಮಿತಿ-ಮಂಡಳಿಗಳಲ್ಲಿ ತಲಾ ಇಬ್ಬರು ಮುಸ್ಲಿಂ ಮಹಿಳೆಯರು ಹಾಗೂ ಒಬ್ಬರಾದರೂ ಮುಸ್ಲಿಮೇತರ ಸದಸ್ಯರು ಇರಬೇಕೆಂಬ ನಿಯಮ ಸೇರಿಸಲಾಗಿದೆ. ವಕ್ಫ್ ಆಸ್ತಿಗಳಿಂದ ಬರುವ ಎಲ್ಲ ಆದಾಯವನ್ನು ದಾನಕ್ಕಾಗಿ ಖರ್ಚು ಮಾಡಬೇಕು ಎಂದು ತಿದ್ದುಪಡಿ ವಿಧೇಯಕದಲ್ಲಿ ಸೂಚಿಸಲಾಗಿದೆ. ಸರಕಾರ ತಿದ್ದುಪಡಿ ವಿಧೇಯಕ ರಚನೆಗೂ ಮುನ್ನ 70 ಸಂಘಟನೆಗಳನ್ನು ಸಂಪರ್ಕಿಸಿ ಚರ್ಚಿಸಿದೆ ಎಂದು ಹೇಳಲಾಗಿದೆ.

ಸಿಎಂ ಬೆಂಬಲಿಸಿ ಜನಾಂದೋಲನ ಸಭೆ; 2 ಲಕ್ಷ ಜನರನ್ನು ಸೇರಿಸಲು ಸಿದ್ಧತೆ

ಬಲಪ್ರದರ್ಶನಕ್ಕೆ ಮೈಸೂರು ಸಜ್ಜು

ಬೆಂಗಳೂರು: ಮುಡಾ ಹಗರಣವನ್ನು ಮುಂದಿಟ್ಟುಕೊಂಡು ಬಿಜೆಪಿ-ಜೆಡಿಎಸ್ ಆರಂಭಿಸಿರುವ ಪಾದಯಾತ್ರೆಗೆ ಠಕ್ಕರ್ ಕೊಡಲು ಜನಾಂದೋಲನ ಯಾತ್ರೆ ನಡೆಯುತ್ತಿದೆ. ಇನ್ನೊಂದು ದಿನದಲ್ಲಿ ಈ ಎರಡೂ ಆಂದೋಲನಗಳು ಸಾಂಸ್ಕೃತಿಕ ನಗರಿ ಮೈಸೂರು ತಲುಪಲಿದ್ದು, ಎರಡೂ ಕಡೆಯವರು ತಮ್ಮ ಬಲಪ್ರದರ್ಶನಕ್ಕೆ ವೇದಿಕೆ ಸಿದ್ಧಪಡಿಸಿಕೊಂಡಿಸಿಕೊಂಡಿದ್ದಾರೆ.

ಈಗಾಗಲೇ ಮಂಡ್ಯದಿಂದ ಹೊರಟಿರುವ ಬಿಜೆಪಿ ಪಾದಯಾತ್ರೆ ಬುಧವಾರ ರಾತ್ರಿ ತೂಬಿನಕೆರೆಯಲ್ಲಿ ವಾಸ್ತವ್ಯ ಹೂಡಿದೆ. ಗುರುವಾರ ರಾತ್ರಿ ವೇಳೆಗೆ ಶ್ರೀರಂಗಪಟ್ಟಣ ತಲುಪಲಿದ್ದು, ಶುಕ್ರ ವಾರ ರಾತ್ರಿ ಮೈಸೂರು ತಲುಪಿ ಶನಿವಾರ ಬೆಳಗ್ಗೆ ಬೃಹತ್ ಸಮಾವೇಶ ನಡೆಸಲು ಬಿಜೆಪಿ-ಜೆಡಿಎಸ್ ನಾಯಕರು ಸಿದ್ಧತೆ ನಡೆಸಿದ್ದಾರೆ. ಇನ್ನೊಂದೆಡೆ ದೋಸ್ತಿಗಳು ಪಾದಯಾತ್ರೆ ಆರಂಭಿಸುವ ಒಂದು ದಿನ ಮೊದಲೇ ಜನಾಂದೋಲನ ಯಾತ್ರೆ ಆರಂಭಿಸಿದ್ದ ಕಾಂಗ್ರೆಸಿಗರು ಆ.9ರಂದೇ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಬೃಹತ್ ಸಮಾವೇಶ ನಡೆಸಲು ತೀರ್ಮಾನಿಸಿದ್ದಾರೆ. ದೇವರಾಜ ಅರಸು ರೀತಿಯಲ್ಲಿಯೇ ಸಿದ್ದರಾಮಯ್ಯ ಅವರಿಗೆ ಕಿರುಕುಳ ನೀಡಿ ಅಧಿಕಾರದಿಂದ ಕೆಳಗೆ ಇಳಿಸುವ ಷಡ್ಯಂತ್ರ ನಡೆದಿದೆ ಎನ್ನುವ ಆರೋಪವನ್ನು ಮುಂದಿಡುವ ಮೂಲಕ ಮೈಸೂರು ಭಾಗದಲ್ಲಿ ದೋಸ್ತಿಗಳ ವಿರುದ್ಧ 'ಜನಾಂದೋಲನ' ಮೂಡಿಸುವ ಪ್ರಯತ್ನಕ್ಕೆ ಸಿದ್ದರಾಮಯ್ಯ ಆಪ್ತರು ಮುಂದಾಗಿದ್ದಾರೆ.

ಪಾದಯಾತ್ರೆಯನ್ನು ದಾರಿ ತಪ್ಪಿಸುವ ಪ್ರಯತ್ನಗಳು ಕಾಂಗ್ರೆಸ್‌ನಿಂದ ನಡೆಯುತ್ತಿದೆ. ಅನಿವಾರ್ಯ ಬಂದರೆ ರಾಷ್ಟ್ರಪತಿಗಳನ್ನು ಭೇಟಿ ಮಾಡಲಾಗುವುದು. ಅಬ್ರಹಾಂ ಯಡಿಯೂರಪ್ಪರವರ ವಿರುದ್ಧವೂ ದೂರು ದಾಖಲಿಸಿದ್ದರು. ಅಂದು ಅಬ್ರಹಾಂರನ್ನು ಹೊಗಳಿದ ಕಾಂಗ್ರೆಸ್, ಇಂದು ಅಲ್ಲಗಳೆಯುತ್ತಿದೆ. ಇದ್ಯಾವ ನ್ಯಾಯ?

- ಆರ್.ಅಶೋಕ, ಪ್ರತಿಪಕ್ಷ ನಾಯಕ

ಸಿದ್ದರಾಮಯ್ಯ ಬಡವರ ಪರ ಕೆಲಸ ಮಾಡುತ್ತಿರುವುದು, ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿರುವುದು ಬಿಜೆಪಿ-ಜೆಡಿಎಸ್‌ನವರಿಗೆ ಸಹಿಸಲಾಗುತ್ತಿಲ್ಲ. ಆದ್ದರಿಂದಲೇ ನನ್ನ ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ನಡೆಸಿದ್ದಾರೆ. ಆದರೆ ಸರಕಾರವನ್ನು ಅಸ್ಥಿರಗೊಳಿಸಲು ಸಾಧ್ಯವಿಲ್ಲ.

- ಸಿದ್ದರಾಮಯ್ಯ ಮುಖ್ಯಮಂತ್ರಿ

ರಾಷ್ಟ್ರೀಯ ನಾಯಕರು ಭಾಗಿ?

ಪಾದಯಾತ್ರೆಯ ಸಮಾರೋಪ ಕಾರ್ಯಕ್ರಮದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಜೆಡಿಎಸ್ ವರಿಷ್ಠ ದೇವೇಗೌಡ ಸೇರಿದಂತೆ ಹಲವು ಪ್ರಮುಖ ನಾಯಕರಿಗೆ ಭಾಗವಹಿಸಲು ರಾಜ್ಯ ಬಿಜೆಪಿ ಮನವಿ ಮಾಡಿದೆ. ಆ ಮೂಲಕ ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್‌ಗೆ ಮುಜುಗರ ಉಂಟು ಮಾಡುವ ಲೆಕ್ಕಾಚಾರದಲ್ಲಿ ದೋಸ್ತಿಗಳಿದ್ದಾರೆ ಎನ್ನಲಾಗಿದೆ.

2 ಲಕ್ಷ ಜನ ಸೇರುವ ನಿರೀಕ್ಷೆ

ಪಾದಯಾತ್ರೆಗೆ ಸಡ್ಡು ಹೊಡೆಯುವ ರೀತಿಯಲ್ಲಿ ಕಾಂಗ್ರೆಸ್ ಜನಾಂದೋಲನ ಯಾತ್ರೆ ಆಯೋಜಿಸಲು ಮುಂದಾಗಿರುವ ಕಾಂಗ್ರೆಸ್, ಸುಮಾರು 2 ಲಕ್ಷ ಜನರನ್ನು ಸೇರಿಸುವ ಗುರಿ ಹೊಂದಿದೆ. ಜನಾಂದೋಲನದ ಸಮಾರೋಪ ಕಾರ್ಯಕ್ರಮದಲ್ಲಿ ಸುತ್ತಲಿನ ಜಿಲ್ಲೆಗಳಿಂದ ಜನರನ್ನು ಸೇರಿಸುವ ಲೆಕ್ಕಾಚಾರದಲ್ಲಿ ಕಾಂಗ್ರೆಸ್ ಇದ್ದು, ಅಂದೇ ಬಿಜೆಪಿ, ಜೆಡಿಎಸ್ ಅವಧಿಯ ಭ್ರಷ್ಟಾಚಾರ ಆರೋಪಗಳ ದಾಖಲೆ ಬಿಡುಗಡೆ ಮಾಡುವ ಸಾಧ್ಯತೆಯಿದೆ ಎನ್ನಲಾಗಿದೆ.

ಅವಾಮಿ ಪಾರ್ಟಿ ನಾಯಕರ ಮನೆ, ಕಚೇರಿಗಳ ಮೇಲೆ ದಾಳಿ

ಅವಾಮಿ ಲೀಗ್‌ನ 29 ಜನರ ಶವ ಪತ್ತೆ

ಢಾಕಾ: ಹಿಂಸಾಚಾರಕ್ಕೆ ಗುರಿಯಾಗುವ ಬಾಂಗ್ಲಾದೇಶದಲ್ಲಿ ಮಾಜಿ ಪ್ರಧಾನಿ ಶೇಖ್ ಹಸೀನಾ ಪಕ್ಷದ ನಾಯಕರ ಮೇಲೆ ಭೀಕರ ದಾಳಿ ನಡೆದಿದೆ. ದಂಗೆಕೋರರು ಅವಾಮಿ ಲೀಗ್ ನಾಯಕರ ಮನೆ, ಕಚೇರಿಗೆ ಬೆಂಕಿ ಇಟ್ಟಿದ್ದು ಮಂಗಳವಾರ ಸಂಜೆವರೆಗೆ ಮುಖಂಡರು ಹಾಗೂ ಅವರ ಕುಟುಂಬಸ್ಥರ 29 ಮೃತದೇಹಗಳು ಪತ್ತೆಯಾಗಿವೆ ಎಂದು ವರದಿಯಾಗಿದೆ.

ಅನೇಕ ನಾಯಕರ ಮನೆಯೊಳಗೆ ನುಗ್ಗಿ ದಾಂಧಲೆ ನಡೆಸಿ ಸಿಕ್ಕ ಸಿಕ್ಕ ವಸ್ತುಗಳನ್ನು ದಂಗೆಕೋರರು ಕದ್ದೊಯ್ದಿದ್ದಾರೆ. ಶೇಖ್ ಹಸೀನಾ ರಾಜೀನಾಮೆ ಬಳಿಕ ನೂರಾರು ಹಿಂದೂಗಳ ಮನೆ, ಮಳಿಗೆ , ದೇವಸ್ಥಾನಗಳನ್ನು ಧ್ವಂಸಗೊಳಸಿಲಾಗಿದೆ ಎಂದು ಬಾಂಗ್ಲಾದೇಶದ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಯೂನಸ್ ಪ್ರಧಾನಿ

ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ, ಆರ್ಥಿಕ ತಜ್ಞ ಮೊಹಮ್ಮದ್ ಯೂನಸ್ ಅವರು

ಬಾಂಗ್ಲಾದೇಶದ ಮಧ್ಯಂತರ ಸರಕಾರದ ಮುಖ್ಯಸ್ಥರಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. 84 ವರ್ಷದ ಅರ್ಥಶಾಸ್ತ್ರಜ್ಞ ಮೊಹಮ್ಮದ್ ಯೂನಸ್ ಅವರನ್ನು ಮಂಗಳವಾರ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರು ಮಧ್ಯಂತರ ಸರಕಾರದ ಮುಖ್ಯಸ್ಥರಾಗಿ ನೇಮಕ ಮಾಡಿದ್ದರು. ಅಧ್ಯಕ್ಷ ಶಹಾಬುದ್ದೀನ್ ಹಾಗೂ ತಾರತಮ್ಯ ವಿರೋಧಿ ವಿದ್ಯಾರ್ಥಿ ಆಂದೋಲನದ ಸಂಯೋಜಕರೊಂದಿಗೆ ನಡೆದ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಸಮಾಚಾರ ಸಣ್ಣದಲ್ಲ

ಲಾರಿಗೆ ಬೈಕ್ ಡಿಕ್ಕಿ; ಗರ್ಭಿಣಿ ಸಾವು

ಬೆಂಗಳೂರು: ಬೆಂಗಳೂರಿನ ಹೊರವಲಯ ನೆಲಮಂಗ ಲದ ಬಳಿ ನಡೆದ ಘೋರ

ಅಪಘಾತದಲ್ಲಿ, ಟಿಪ್ಪರ್ ಲಾರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಗರ್ಭಿಣಿ ಬಲಿಯಾಗಿದ್ದಾರೆ. ಹೊಟ್ಟೆ ಯಲ್ಲಿದ್ದ 8 ತಿಂಗಳ ಮಗು ಹೊರಬಂದು ಸಾವಿಗೀಡಾ ಗಿದೆ. ಮೃತ ಮಹಿಳೆಯನ್ನು ಎಡೇಹಳ್ಳಿ ಗ್ರಾಮದ ಸಿಂಚನ (30) ಎಂದು ಗುರುತಿಸಲಾಗಿದೆ. ಪತಿ ಮಂಜುನಾಥ್ ಗಾಯ ಗೊಂಡು ಪ್ರಾಣಾಪಾಯದಿಂದ ಪಾರಾಗಿ ದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲೂಕಿನ ಎಡೇಹಳ್ಳಿ ಬಳಿ ಘೋರ ದುರಂತ ಸಂಭವಿಸಿದೆ. ಬೈಕ್‌ನಲ್ಲಿ ಹೋಗುತ್ತಿದ್ದ ದಂಪತಿಗೆ ಟಿಪ್ಪರ್ ಲಾರಿ ಡಿಕ್ಕಿಯಾಗಿದೆ. 8 ತಿಂಗಳ ಗರ್ಭಿಣಿ ಮಹಿಳೆ ಸಾವನ್ನಪ್ಪಿದ್ದಾರೆ. ಟಿಪ್ಪರ್ ಮೈಮೇಲೆ ಹರಿದ ಪರಿಣಾಮ ಹೊಟ್ಟೆಯಲ್ಲಿದ್ದ ಮಗು ಕೂಡ ಹೊರಗೆ ಬಂದು ಅಸುನೀಗಿದೆ. ಅಪಘಾತದ ಬಳಿಕ ಟಿಪ್ಪರ್ ಲಾರಿ ಚಾಲಕ ಸ್ಥಳದಿಂದ ಪರಾರಿಯಾ ಗಿದ್ದಾನೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಅಕ್ರಮ ಹಣ ವರ್ಗಾವಣೆ: 19 ಜನರ ಬಂಧನ

ಬಾಗಲಕೋಟೆ: ಇಲ್ಲಿನ ಐಡಿಬಿಐ ಬ್ಯಾಂಕ್‌ನಲ್ಲಿರಿಸಿದ್ದ ಸರಕಾರಿ ಇಲಾಖೆಯ ವಿವಿಧ ಇಲಾಖೆಗಳ ಖಾತೆಗಳ ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಒಟ್ಟು 19 ಜನರ ಬಂಧನವಾಗಿದೆ. ಐಡಿಬಿಐ ಬ್ಯಾಂಕ್‌ನಲ್ಲಿಟ್ಟಿದ್ದ ಪ್ರವಾಸೋದ್ಯಮ ಇಲಾಖೆಯ ಮೂರು ಬ್ಯಾಂಕ್ ಖಾತೆಯಿಂದ ಒಟ್ಟು 2.47 ಕೋಟಿ ರು. ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಬಗ್ಗೆ ದೂರು ದಾಖಲಾಗುತ್ತಿದ್ದಂತೆ ಐಡಿಬಿಐ ಬ್ಯಾಂಕ್‌ನಲ್ಲಿರಿಸಿದ್ದ ಎಲ್ಲ ಸರಕಾರಿ ಇಲಾಖೆಗಳ ಪರಿಶೀಲಿಸಿದಾಗ ಮತ್ತೆ 4 ಇಲಾಖೆಗಳ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವ ಬಗ್ಗೆ ಗೊತ್ತಾಗಿದ್ದು, ಇಲ್ಲಿಯವರೆಗೆ ಒಟ್ಟು 5 ಇಲಾಖೆಯಿಂದ ಇಲ್ಲಿನ ನವನಗರದ ಎಪಿಎಂಸಿ ಆವರಣದಲ್ಲಿರುವ ಸಿಇಎನ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವಿರಾಮ
ಪ್ರತಿ ಭಾನುವಾರ

ಪಾದಯಾತ್ರೆಯಿಂದ ಕಾಂಗ್ರೆಸ್ ಭಯಭೀತಿಗೊಂಡಿದೆ: ವಿಧಾನಪರಿಷತ್ ಸದಸ್ಯ ಸಿ.ಟಿ ರವಿ

ಮುಡಾ ವಿಚಾರದಲ್ಲಿ ಸಿಎಂ ಅಮಾಯಕ ಅಲ್ಲ

ಮೈಸೂರು: ಮುಡಾ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ ಅಮಾಯಕ ಅಲ್ಲ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ ರವಿ ಕಟುವಾಗಿ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನನ್ನ ವಿರುದ್ಧ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲ ಎಂದು ಸಿದ್ದರಾಮಯ್ಯ ಹೇಳುತ್ತಾರೆ, ಆದರೆ, ಮುಡಾದಲ್ಲಿ ನಡೆದಿರೋದು, ವಾಲ್ಮೀಕಿ ನಿಗಮದ ಹಣ ಅಕ್ರಮವಾಗಿ ವರ್ಗಾವಣೆ ಆಗಿರುವುದು ಕಪ್ಪು ಚುಕ್ಕೆ ಅಲ್ವಾ? ಎಂದು ಪ್ರಶ್ನಿಸಿದರು.

ರೀಡೂ ಪಿತಾಮಹ ಯಾರು? ರೀಡೂ ಹೆಸರಿನಲ್ಲಿ 884 ಎಕರೆ ಡಿ ನೋಟಿಫಿಕೇಷನ್ ಮಾಡಲಾಯಿತು. ಇದು ಅಕ್ರಮ ಅಲ್ವಾ? ನಾವು ಮುಡಾ, ವಾಲ್ಮೀಕಿ ನಿಗಮದ ಹಗರಣಗಳ ವಿರುದ್ಧ ಪಾದಯಾತ್ರೆ ಮಾಡುತ್ತಿದ್ದೇವೆ. ಇದೊಂದು

ಜನಾಂದೋಲನ ಆಗಿ ಮಾರ್ಪಟ್ಟಿದೆ. ಇದನ್ನು ಕಂಡು ಕಾಂಗ್ರೆಸ್ ಭಯಭೀತಿಗೊಂಡಿದೆ ಎಂದು ಹೇಳಿದರು.

ಮುಡಾ ವಿಚಾರದಲ್ಲಿ ನೀವು ಅಮಾಯಕ ಅಲ್ಲ. ಸರ್ವೆ ನಂಬರ್ 464ರ ಜಾಗ 1997ರಲ್ಲಿ ನೋಟಿಫಿಕೇಷನ್ ಆಗಿತ್ತು. 1998ರಲ್ಲಿ ಡಿನೋಟಿಫಿಕೇಷನ್ ಹೇಗಾಯ್ತು? ಡಿನೋಟಿಫಿಕೇಷನ್ ಮಾಡಿದ ಪ್ರಭಾವಿ ಯಾರು ? ಆಗ ನೀವು ಉಪಮುಖ್ಯಮಂತ್ರಿ, ಮೈಸೂರು ಜಿಲ್ಲಾ ಉಸ್ತುವಾರಿ ಮಂತ್ರಿ ಆಗಿದ್ದಿರಿ. ನೀವು ಪ್ಲ್ಯಾನ್ ಮಾಡಿಯೇ ಡಿನೋಟಿಫಿಕೇಷನ್ ಮಾಡಿಸಿದ್ದೀರಿ ಎಂದು ದೂರಿದರು.

ಸಿಎಂ ರಾಜೀನಾಮೆ ನೀಡಲಿ

ಸಿಎಂ ಸಿದ್ದರಾಮಯ್ಯ ವಿರುದ್ಧವೇ ಭ್ರಷ್ಟಾಚಾರದ ಆರೋಪಗಳು ಕೇಳಿ ಬಂದಿವೆ. ಇದರ ನೈತಿಕ ಹೊಣೆ ಹೊತ್ತು ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಪ್ರಕರಣದ ನಿಷ್ಪಕ್ಷಪಾತ ತನಿಖೆಗೆ ಅವಕಾಶ ನೀಡಬೇಕು. ಮುಡಾ ಹಗರಣದ ಬಗ್ಗೆ ಹಾಲಿ ನ್ಯಾಯಾಧೀಶರಿಂದ ಹಾಗೂ ಸಿಬಿಐ ನಿಂದ ತನಿಖೆಯಾಗಬೇಕು. ನೀವು ಬಚಾವ್ ಆಗಲು ಯಡಿಯೂರಪ್ಪ ಅವರತ್ತ ಬೊಟ್ಟು ಮಾಡಬೇಡಿ. ಯಡಿಯೂರಪ್ಪ ತಪ್ಪು ಮಾಡಿದ್ದರೂ ಶಿಕ್ಷೆಯಾಗಲಿ, ಎಚ್.ಡಿ. ಕುಮಾರಸ್ವಾಮಿ ತಪ್ಪು ಮಾಡಿದ್ದರೂ ಶಿಕ್ಷೆ ಆಗಲಿ ಎಂದು ಸಿ.ಟಿ. ರವಿ ಹೇಳಿದರು.

ಮೀಸಲು ಹೋರಾಟ ದಮನಕ್ಕೆ ಷಡ್ಯಂತ್ರ

ದಾವಣಗೆರೆ: ಇತರೆ ಹಿಂದುಳಿದ ವರ್ಗಗಳ 2ಎ' ಮೀಸಲಾತಿ ಸೌಲಭ್ಯಕ್ಕೆ ಪಟ್ಟು ಹಿಡಿದಿರುವ ಪಂಚಮಸಾಲಿ ಸಮುದಾಯದ ಧ್ವನಿ ವಿಧಾನಸೌಧ ದಲ್ಲಿ ಮೊಳಗದಂತೆ ಮೀಸಲಾತಿ ಹೋರಾಟವನ್ನು

ಹತ್ತಿಕ್ಕುವ ವ್ಯವಸ್ಥಿತ ಹುನ್ನಾರವನ್ನು ರಾಜ್ಯ ಸರಕಾರ ಮಾಡುತ್ತಿದೆ ಎಂದು ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ವಿಧಾನಮಂಡಲದ ಅಧಿವೇಶನದಲ್ಲಿ ಮೀಸಲಾತಿ ಕುರಿತು ಮಾತನಾಡಲು ಸಮುದಾಯದ ಶಾಸಕರ ಕೋರಿಕೆಗೆ ವಿಧಾನಸಭೆ ಸಭಾಧ್ಯಕ್ಷರು ಸ್ಪಂದಿಸಿಲ್ಲ. ಶಾಸಕರ ಹಕ್ಕನ್ನು ನಿರಾಕರಿಸಿ ಅವಮಾನಿಸಲಾಗಿದೆ. ಬಿಜೆಪಿ ಅಧಿಕಾರವಧಿಯಲ್ಲಿ ಸಮುದಾಯದ ಶಾಸಕರ ಕೂಗಿಗೆ ಅಧಿವೇಶನದಲ್ಲಿ ಅವಕಾಶ ಸಿಗುತ್ತಿತ್ತು. ಸಿದ್ದರಾಮಯ್ಯ ಅವರ ಸರಕಾರದಲ್ಲಿ ಈ ಅವಕಾಶವೂ ಇಲ್ಲವಾಗಿದೆ ಎಂದು ದೂರಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯಲು ಲಿಂಗಾಯತರ ಪಾತ್ರ ಪ್ರಮುಖವಾಗಿದೆ. ಪಂಚಮಸಾಲಿ ಹೋರಾಟದ ಪರಿಣಾಮವಾಗಿ ಅನೇಕರು ಶಾಸಕರಾಗಿ ಆಯ್ಕೆಯಾಗಿದ್ದಾರೆ. ಸರಕಾರದ ಕಣ್ಣು ತೆರೆಸಲು ಸೆ.11ರಂದು ರಾಜ್ಯಮಟ್ಟದ ಪಂಚಮಸಾಲಿ ವಕೀಲರ ಸಮಾವೇಶವನ್ನು ಬೆಳಗಾವಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಮುಂಬರುವ ಚಳಿಗಾಲದ ಅಧಿವೇಶನದ ಹೊತ್ತಿಗೆ ಹೋರಾಟ ಉಗ್ರ ರೂಪ ಪಡೆಯಲಿದೆ ಎಂದು ಹೇಳಿದರು.

ಬಸವಣ್ಣನಿಗೆ ಅಪಚಾರ ಸಲ್ಲದು': ನಾವು ಭಾಷೆಯಿಂದ ಕನ್ನಡಿಗರು, ರಾಷ್ಟ್ರೀಯತೆಯಿಂದ ಭಾರತೀಯರು, ಧಾರ್ಮಿಕವಾಗಿ ಲಿಂಗಾಯತರು. ಬಸವಣ್ಣನವರ ತತ್ವಗಳಿಗೆ ಅಪಚಾರ ಆಗುವಂತೆ ಯಾರೊಬ್ಬರೂ ನಡೆದುಕೊಳ್ಳಬಾರದು' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ದೋಸ್ತಿ ಪಾದಯಾತ್ರೆಗೆ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ತಿರುಗೇಟು

ಬಿಜೆಪಿ ಅವಧಿಯ ಭ್ರಷ್ಟಾಚಾರ ತನಿಖೆಯಾಗಲಿ

ವಿಜಯಪುರ: ತಮ್ಮ ಪಕ್ಷದ ಭ್ರಷ್ಟಾಚಾರದ ಬಗ್ಗೆ ಬಿಜೆಪಿ ಶಾಸಕ ಯತ್ನಾಳ ಅವರೇ ಮಾತನಾಡಿದ್ದಾರೆ, ಅವರು ಹಾಗೆ ಮಾತನಾಡುತ್ತಾರೆ ಎಂದರೆ ಅವರಿಗೆ ಭ್ರಷ್ಟಾಚಾರದ ಮಾಹಿತಿ ಇದೆ ಎಂದು ಅರ್ಥ. ಹಾಗಾಗಿ ಬಿಜೆಪಿ ಅಧಿಕಾರದಲ್ಲಿನ ಭ್ರಷ್ಟಾಚಾರದ ಬಗ್ಗೆ ತನಿಖೆಯಾಗಬೇಕು ಎಂದು ಅಬಕಾರಿ ಸಚಿವ ಆರ್ .ಬಿ.ತಿಮ್ಮಾಪುರ ಒತ್ತಾಯಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯನವರನ್ನು ಕೆಳಗಿಳಿಸಿ ಡಿಕೆಶಿ ಸಿಎಂ ಆಗಲು ಹೀಗೆ ಮಾಡುತ್ತಿದ್ದಾರೆ ಎಂದು ಶಾಸಕ ಯತ್ನಾಳ ಆರೋಪ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಸಿಎಂ ಸಿದ್ದರಾಮಯ್ಯನವರ ಮೇಲೆ ಕಾಳಜಿ ಇರುವುದಕ್ಕೆ ತುಂಬಾ ಧನ್ಯವಾದಗಳು ಎಂದರು.

ಸಚಿವರು ಸರಿಯಾಗಿ ಕೆಲಸ ಮಾಡದಿದ್ದರೆ ಬದಲಾವಣೆ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ, ಅದೆಲ್ಲಾ ಹೈಕಮಾಂಡ್ ನೋಡಿಕೊಳ್ಳುತ್ತೆ, ಸದ್ಯಕ್ಕೆ ಸಂಪುಟ ವಿಸ್ತರಣೆ, ಬದಲಾವಣೆ ಯಾವುದೂ ಇಲ್ಲ ಎಂದರು. ಯಾದಗಿರಿ ಪಿಎಸ್‌ಐ ಅವರ ಸಾವಿನ ಕುರಿತು ಈಗಾಗಲೇ ಸಿಐಡಿ ತನಿಖೆಗೆ ಕೊಡಲಾಗಿದೆ. ತನಿಖೆ ಆಗುತ್ತಿದೆ, ತನಿಖೆ ಬಳಿಕ ತಪ್ಪಿತಸ್ಥರ ಮೇಲೆ ಕ್ರಮ ಆಗುತ್ತದೆ. ಸಿಐಡಿ ರಿಪೋರ್ಟ್ ಬಂದ ಮೇಲೆ ಯಾರದ್ದು ತಪ್ಪು ಎಂಬುದು ಗೊತ್ತಾಗುತ್ತದೆ.

-ಆರ್.ಬಿ.ತಿಮ್ಮಾಪುರ ಸಚಿವ

ಬಿಜೆಪಿ ಹಾಗೂ ಜೆಡಿಎಸ್ ನವರು ಯಾವ ಕಾರಣಕ್ಕೆ ಪಾದಯಾತ್ರೆ ಮಾಡುತ್ತಿದ್ದಾರೆ ಗೊತ್ತಿಲ್ಲ, ಅವರು ಜನರ ದಾರಿ ತಪ್ಪಿಸಲು ರಾಜಕೀಯವಾಗಿ ಪಾದಯಾತ್ರೆ ಮಾಡುತ್ತಿದ್ದಾರೆ. ಜನಪರವಾದ ಕೆಲಸ ಮಾಡುವ ಸಿಎಂ ಸಿದ್ದರಾಮಯ್ಯನವರಿಗೆ ಕಳಂಕ ತರಲು ಸುಳ್ಳು ಸುಳ್ಳು ಆರೋಪ ಮಾಡುತ್ತಿದ್ದಾರೆ. ಇವರ ಪಾದಯಾತ್ರೆ ಜನರ ಅನುಕೂಲಕ್ಕಾಗಿ ಅಲ್ಲ, ದಿನಾಲು ಬೆಳಗ್ಗೆ ಎದ್ದಕೂಡಲೆ ರಾಜಕಾರಣ ಮಾಡುತ್ತಾರೆ, ಇದರಿಂದ ಅವರಿಗೆ ಭಾರೀ ಹಿನ್ನಡೆ ಆಗುತ್ತದೆ ಎಂದು ಸಚಿವ ತಿಮ್ಮಾಪುರ ಹೇಳಿದರು.

ಸಿಎಂ ಪ್ರಾಸಿಕ್ಯೂಷನ್; ರಾಜಭವನದ ರಾಜಕೀಯ ಫಲಿಸದು

← ಮೊದಲಪುಟದಿಂದ

ನಾವು ಇಲ್ಲಿ ಕೊನೆಯ ಭಾಗವನ್ನು ಗಮನಿಸಬೇಕಾಗಿದೆ. ಮೂರು ತಿಂಗಳ ಹೆಚ್ಚುವರಿಯಾಗಿ ಒಂದು ತಿಂಗಳು ಅವಕಾಶ ಪಡೆದು ಪಡೆದು ಆ ಅವಧಿಯೊಳಗೆ ತನಿಖೆ ಅಥವಾ ವಿಚಾರಣೆಯ ಫಲಿತಾಂಶವನ್ನು ತಿಳಿಸಬೇಕಾಗಿರುತ್ತದೆ. ಮೇಲೆ ತಿಳಿಸಿರುವ ಕಲಂ ಪೊಲೀಸರಿಗೆ ಅನ್ವಯವಾಗುತ್ತದೆ. ಆದರೆ ಈ ಪ್ರಕರಣದಲ್ಲಿ ಅಬ್ರಾಹಂ ಎನ್ನುವ ವ್ಯಕ್ತಿ ಒಂದು ಕಡೆ ಪೊಲೀಸರನ್ನು ತನಿಖೆ ಮಾಡುವಂತೆ ಮನವಿಯನ್ನು ಮಾಡುವುದು, ಇನ್ನೊಂದು ಕಡೆ ಅದೇ ವ್ಯಕ್ತಿ ಖಾಸಗಿ ದೂರನ್ನು ನೀಡಲು ಅಗತ್ಯವಿರುವ ಅನುಮತಿ ನೀಡುವಂತೆ ರಾಜ್ಯಪಾಲರನ್ನು ಕೋರುವುದು ಕಾನೂನಿನ ಅಡಿಯಲ್ಲಿ ಕಾನೂನು ಬಾಹಿರವಾಗುತ್ತದೆ.

ಈ ಹಿಂದೆ ಸಿಆರ್‌ಪಿಸಿ 200 ಸೆಕ್ಷನ್‌ನಲ್ಲಿ ಖಾಸಗಿ ದೂರನ್ನು ದಾಖಲಿಸುವಾಗ ಇದ್ದ ವಿಧಾನಗಳಲ್ಲಿ ಬಿಎನ್‌ಎಸ್‌ಎಸ್ 223 ಸೆಕ್ಷನ್‌ನಲ್ಲಿ ಸಾಕಷ್ಟು ಮಾರ್ಪಾಡು ಮಾಡಿ ಹೊಸ ಸ್ವರೂಪವನ್ನು ನೋಡಬಹುದಾಗಿದೆ. ಹಳೆ ಕಲಾಂ ಪ್ರಕಾರ ಒಮ್ಮೆ ಖಾಸಗಿ ದೂರನ್ನು ನೀಡಿದ ಮೇಲೆ ನ್ಯಾಯಾಲಯವು ಸಂಜ್ಞೆಯಂತೆ (cognizance) ತೆಗೆದುಕೊಂಡು ಕೊಟ್ಟಿರುವ ದೂರಿನಲ್ಲಿ ಮೇಲ್ನೋಟಕ್ಕೆ ಆರೋಪಗಳಿಗೆ ಪೂರಕ ಸಾಕ್ಷ್ಯವನ್ನು ಒದಗಿಸಿ ಅನುಮತಿ ಪಡೆದುಕೊಂಡಲ್ಲಿ ಸಿಆರ್‌ಪಿಸಿ 204 ಸೆಕ್ಷನ್ ಪ್ರಕಾರ ಆರೋಪಿಗಳಿಗೆ ಸಮನ್ಸ್ ಅಥವಾ ವಾರಂಟ್ ಅನ್ನು ಜಾರಿಗೊಳಿಸುವ ಪ್ರಕ್ರಿಯೆಗಳು ನಡೆಯುತ್ತಿದ್ದವು, ಆದರೆ ಹೊಸ ಕಾನೂನಿನ ಅಡಿಯಲ್ಲಿ ಮಾರ್ಪಾಡಲಾದ ಈ ನಿಯಮಗಳು ಈ ಕೆಳ ಕಂಡಂತಿವೆ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತ 223 ಕಲಂನಲ್ಲಿ ನಿಬಂಧನೆಗಳು ಕೆಳಗಿನಂತಿದೆ

- **ಸರಕಾರಿ ನೌಕರನು ತನ್ನ ಪದೀಯ ಕರ್ತವ್ಯಗಳನ್ನು ನಿರ್ವಹಿಸುವಾಗ ಯಾವುದೇ ಅಪರಾಧವನ್ನು ಎಸಗಲಾಗಿದೆಯೆಂದು ಆರೋಪಿಸಿ ಆತನ ವಿರುದ್ಧ ನೀಡಲಾದ ದೂರಿನ ಮೇಲೆ:**

- ಅಂತಹ ಸರಕಾರಿ ನೌಕರನಿಗೆ ಹಾಗೆ ಆಪಾದಿಸಲಾದ ಘಟನೆಗೆ ಕಾರಣವಾದ ಸನ್ನಿವೇಶಗಳ ಬಗ್ಗೆ ಸಮರ್ಥನೆಗಳನ್ನು ಮಾಡಲು ಅವಕಾಶವನ್ನು ನೀಡದ ಹೊರತು: ಮತ್ತು,

- ಅಂತಹ ನೌಕರನ ವರಿಷ್ಠಾಧಿಕಾರಿಯಿಂದ ಘಟನೆಯ ವಾಸ್ತವ ಸಂಗತಿಗಳು ಮತ್ತು ಸಂದರ್ಭಗಳನ್ನು ಒಳಗೊಂಡ ವರದಿಯನ್ನು ಸ್ವೀಕರಿಸದ ಹೊರತು ಯಾವುದೇ ಮ್ಯಾಜಿಸ್ಟ್ರೇಟರು ಸಂಜ್ಞೆ (cognizance) ತೆಗೆದುಕೊಳ್ಳತಕ್ಕದಲ್ಲ.

ಒಟ್ಟಾರೆ ಮೇಲಿನ ಕಲಂ ನೋಡಿದಾಗ ಮೈಸೂರಿನ ಮುಡಾ ಹಗರಣವನ್ನು ನೆಲದ ಕಾನೂನಿನಡಿ ವಿಶ್ಲೇಷಿಸಿದಾಗ, ರಾಜ್ಯಪಾಲರು ಅನುಮತಿಯನ್ನು ನೀಡಿದ್ದಲ್ಲಿ ಆರೋಪಿಗಳಿಗೆ ಸಮನ್ಸ್ ನೀಡುವ ಮೊದಲು ಆಪಾದಿತ ವ್ಯಕ್ತಿಗೆ ನ್ಯಾಯಾಲಯದ ಮುಂದೆ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿರುವ ಹಿನ್ನೆಲೆಯಲ್ಲಿ ಏಕಾಏಕಿ ಬಂಧನಕ್ಕೆ ಅಥವಾ ನ್ಯಾಯಾಲಯಕ್ಕೆ ಹಾಜರಾಗುವಂತೆ ಆದೇಶಿಸಲು ಒಳಪಡಿಸಲು ಕಾನೂನಿನ ಅಡಿಯಲ್ಲಿ ಸಾಧ್ಯವಿಲ್ಲ. ಇದು ಆಪಾದಿತರಿಗೆ ಕಾನೂನಿನ ಅಡಿಯಲ್ಲಿ ಕೊಟ್ಟಿರುವ ಸುರಕ್ಷತೆಯಾಗಿರುತ್ತದೆ.

ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಒಂದೇ ಪ್ರಕರಣವನ್ನು ತನಿಖಾ ಸಂಸ್ಥೆ ಮತ್ತು ಖಾಸಗಿ ದೂರಿನ ಆಧರಿಸಿ ನ್ಯಾಯಾಲಯವು ಒಟ್ಟಿಗೆ ವಿಚಾರಣೆ ಮಾಡಲು ಕಾನೂನಿನಲ್ಲಿ ತೊಡಕಿದೆ. ಇದಕ್ಕಿಂತ ಮುಖ್ಯವಾಗಿ, ದೂರುದಾರರು ರಾಜ್ಯಪಾಲರಿಂದ ಪ್ರಾಸಿಕ್ಯೂಷನ್‌ಗೆ ಅನುಮತಿ ಪಡೆದ ಬಳಿಕ ಒಂದು ಪಕ್ಷ ದೂರು ದಾಖಲಿಸದಿದ್ದರೆ, ಆ ಅಭಿಯೋಜನೆಯ ಭವಿಷ್ಯವೇನು ಎನ್ನುವುದು ಯಕ್ಷಪ್ರಶ್ನೆಯಾಗಿಯೇ ಉಳಿದಿದೆ.

ಒಂದು ವೇಳೆ ಫಿರ್ಯಾದುದಾರರು ನ್ಯಾಯಾಲಯದ ಮೊರೆ ಹೋದರೆ ಕಲಂ Section 233ನೇ ಅಡಿಯಲ್ಲಿ ಎರಡು ವಿಚಾರಣೆಯೂ ನಡೆಯುತ್ತಿರುವ ಬಗ್ಗೆ ನ್ಯಾಯಾಲಯದ ಗಮನ ಸೆಳೆದಲ್ಲಿ ಅದೇ ಮ್ಯಾಜಿಸ್ಟ್ರೇಟರಿಗೆ ತನ್ನ ಮುಂದೆ ವಿಚಾರಣೆಯನ್ನು ನಿಲ್ಲಿಸುವ ಅಧಿಕಾರವಿರುತ್ತದೆ. ಮೇಲೆ ತಿಳಿಸಿರುವ ನೆಲದ ಕಾನೂನನ್ನು ವಿಶ್ಲೇಷಿಸಿದಾಗ ರಾಜ್ಯಪಾಲರು ಮಾನ್ಯ ಮುಖ್ಯಮಂತ್ರಿಗಳಿಂದ ಕಾರಣ ಕೇಳಿ ನೀಡಿರುವ ನೋಟಿಸ್ ಕಾನೂನುಬಾಹಿರವಾಗುತ್ತದೆ. ಒಮ್ಮೆ Sanction ಕೊಡಬೇಕೆಂದು ನಿರ್ಧರಿಸಿದರೂ ಮೇಲೆ ತಿಳಿಸಿದಂತೆ 3 Section 19 (ii) of Prevention of Corruption Actನಲ್ಲಿ ನ್ಯಾಯಾಲಯವು ಬರುವ ನಿಬಂಧನೆಗಳಂತೆ ಆದೇಶ ನೀಡಿದ್ದಲ್ಲಿ ಮಾತ್ರ ತನಿಖೆಗೆ ಅನುಮತಿ ಕೊಡುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಈಗಲೇ ಅನುಮತಿ ನೀಡಿದರೆ ಅದು ಅಕ್ರಮವಾಗುತ್ತದೆ. ಪೊಲೀಸರಿಗೆ ತನಿಖೆ ನಡೆಸುವ ಅಧಿಕಾರ ಮತ್ತು ಖಾಸಗಿ ದೂರುದಾರರಿಗೆ ಇರುವ ಅಧಿಕಾರಗಳು ಸಂಪೂರ್ಣವಾಗಿ ವಿಭಿನ್ನ ರೀತಿಯದಾಗಿರುತ್ತದೆ.

ಇನ್ನೊಂದು ಪ್ರಮುಖ ಅಂಶವೇನೆಂದರೆ ಮುಖ್ಯಮಂತ್ರಿಯವರು ಪ್ರಕರಣದಲ್ಲಿ ನೇರವಾಗಿ ಪಾಲ್ಗೊಳ್ಳದೇ ಇರುವುದರಿಂದ ಮತ್ತು ಅವರೇ ಫಲಾನುಭವಿಗಳಾಗದಿರುವುದರಿಂದ ಮೇಲೆ ಕಾಣಿಸಿದ ಕಾನೂನನ್ನು ಸಮಗ್ರವಾಗಿ ಪರಿಶೀಲಿಸಿದಾಗ ಅವರನ್ನು ನೆಲದ ಕಾನೂನಿನ ಅಡಿಯಲ್ಲೂ ಸಿಲುಕಿಸಲು ಸಾಧ್ಯವೇ ಇಲ್ಲ ಎಂಬ ಅಂಶಕ್ಕೆ ಪುಷ್ಟಿ ನೀಡುತ್ತದೆ. ರಾಜಕೀಯದಲ್ಲಿ Blame Game ಸಹಜ. ಇದನ್ನೆಲ್ಲ ಮೆಟ್ಟಿ ನಿಲ್ಲುವ ಶಕ್ತಿ ಮುಖ್ಯಮಂತ್ರಿಗಳಿಗಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ಇಡೀ ಸಂಪುಟ ಅವರ ಬೆನ್ನ ಹಿಂದೆ ಇರುವುದರಿಂದ ನನ್ನ ಅನಿಸಿಕೆಯಂತೆ ಮುಂದೆ ಯಾವುದೇ ರೀತಿಯಲ್ಲಿ ಅವರನ್ನು ಸಿಲುಕಿಸುವ ರಾಜಕೀಯ ತಂತ್ರಗಾರಿಕೆಗಳು ಫಲಿಸುವುದಿಲ್ಲ. ಕಾನೂನಿನ ಹೋರಾಟ ನಡೆಸಿದ್ದೇ ಆದಲ್ಲಿ ಮುಖ್ಯಮಂತ್ರಿಗಳು ಜಯಶಾಲಿಯಾಗುತ್ತಾರೆ.

ಮಗನನ್ನೇ ಹತ್ಯೆ ಮಾಡಿದ ತಂದೆ

ಚಿಕ್ಕಮಗಳೂರು: ತಂದೆಯೇ ತನ್ನ ಮಗನನ್ನು ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಿರುವ ಘಟನೆ ನಡೆದಿದೆ. ಮೂಡಿಗೆರೆ ತಾಲೂಕಿನ ಮಾಕೋನಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಇಂದಿರಾ ನಗರ ಎಂಬಲ್ಲಿ ಈ ಘಟನೆ ನಡೆದಿದೆ.

ತಂದೆ ಗೋಪಾಲಗೌಡ ತನ್ನ ಮಗ ಪ್ರಸನ್ನ(38 ವರ್ಷ) ಎಂಬುವರನ್ನು ಮಂಗಳವಾರ ರಾತ್ರಿ ಮಾಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಿದ್ದಾನೆ ಎನ್ನಲಾಗಿದೆ. ಇಂದಿರಾ ನಗರ ಮನೆಯಲ್ಲಿ ಒಟ್ಟಾಗಿ ವಾಸಿಸುತ್ತಿದ್ದ ತಂದೆ ಹಾಗೂ ಮಗ ಪರಸ್ಪರ ಜಗಳ ಮಾಡಿಕೊಂಡಿದ್ದು ಜಗಳ ವಿಕೋಪಕ್ಕೆ ಹೋಗಿ ಮನೆಯಲ್ಲಿದ್ದ ಹಾರೆಯಿಂದ ಮಗನ ತಲೆಗೆ ಹೊಡೆದಿದ್ದು ತೀವ್ರ ಗಾಯಗೊಂಡ ಮಗ ಪ್ರಸನ್ನ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಮೂಡಿಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಕೊಲೆ ಆರೋಪಿ ಗೋಪಾಲಗೌಡನನ್ನು ಬಂಧಿಸಿದ್ದಾರೆ.

ರಾಜ್ಯದ ಜಲಾಶಯಗಳ ಮಟ್ಟ

	ಜಲಾಶಯ	ಗರಿಷ್ಠ ಮಟ್ಟ	ಇಂದಿನ ಮಟ್ಟ	ಒಳಹರಿವು
1.	ಕೆಆರ್‌ಎಸ್	124.80	124.18	13,734
2.	ಕಬಿನಿ	2284	2283.46	7,359
3.	ಹಾರಂಗಿ	2859	2856.81	6,085
4.	ಹೇಮಾವತಿ	2922	2922	4,283
5.	ಆಲಮಟ್ಟಿ	1633	1632.50	67,394
6.	ತುಂಗಭದ್ರಾ	1704.81	1698.67	2,95,580
7.	ನಾರಾಯಣಪುರ	1615	1610.74	2,04,371

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–2271200, 2272200, ಫ್ಯಾಕ್ಸ್: 2275106,
ಇ–ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in
ಸಂ:ತುಮಪಾ/ತಾಂಶಾ/ಸಿಆರ್/03/2024–25 ದಿನಾಂಕ: 02.08.2024

ಇ–ಹರಾಜು ಪ್ರಕಟಣೆ

ಈ ಮೂಲಕ ಸಮಸ್ತ ನಾಕರೀಕರಿಗೆ ತಿಳಿಯಪಡಿಸುವುದೇನೆಂದರೆ, ತುಮಕೂರು ಮಹಾನಗರಪಾಲಿಕೆ, ತುಮಕೂರು ಈ ಕೆಳಕಂಡ ಬಾಬ್ತನ್ನು ದಿನಾಂಕ:01–09–2024 ರಿಂದ ದಿನಾಂಕ31–08–2025 ವರೆಗೆ (ಒಂದು ವರ್ಷದ ಅವಧಿಗೆ) ಬಸ್ ನಿಲುವಳಿ ಶುಲ್ಕ ವಸೂಲಾತಿ ದಿನಾಂಕ:12–08–2024 ರಂದು ಬೆಳಗ್ಗೆ ಇ–ಹರಾಜು (ಕೆಪಿಪಿಪಿ ಪೋರ್ಟಲ್ ಮುಖಾಂತರ) 11 ಗಂಟೆಗೆ ಹರಾಜು ಮಾಡಲಾಗುತ್ತದೆ. ಆಸಕ್ತಿ ಉಳ್ಳವರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಇ–ಹರಾಜಿನಲ್ಲಿ ಭಾಗವಹಿಸಬಹುದು.
ಹರಾಜು ಬಾಬ್ತು ವಿವರ: 1. ನಗರದ ಖಾಸಗಿ ಬಸ್ ನಿಲ್ದಾಣದ ನಿಲುವಳಿ ಶುಲ್ಕ ವಸೂಲಿ ಹಕ್ಕು (ಬಸ್ ಒಂದಕ್ಕೆ) ಬಾಬ್ತು: 1. ಪ್ರಾರಂಭಿಕ ಠೇವಣಿ ರೂ.50000/–2. ಸರ್ಕಾರಿ ಬಿಡ್ ಮೊತ್ತ ರೂ.1501200/–
1) ಹರಾಜಿನಲ್ಲಿ ಭಾಗವಹಿಸುವವರು ವಯಸ್ಕರಾಗಿರಬೇಕು. (18 ವರ್ಷ ಮೇಲ್ಪಟ್ಟು). 2) ಖಾಸಗಿ ಬಸ್ ನಿಲ್ದಾಣದ ಸಂಪೂರ್ಣ ಸ್ವಚ್ಛತೆಯನ್ನು ನಿರ್ವಹಣೆಯನ್ನು ಅಖೈರು ಬಿಡ್‌ದಾರರೇ ನಿರ್ವಹಿಸತಕ್ಕದ್ದು. ತಪ್ಪಿದಲ್ಲಿ ದಂಡವಿಧಿಸಿ ಟೆಂಡರ್ ರದ್ದುಪಡಿಸುವ ಅಧಿಕಾರವನ್ನು ಆಯುಕ್ತರು ಹೊಂದಿರುತ್ತಾರೆ. 3) ತುಮಕೂರು ಮಹಾನಗರಪಾಲಿಕೆ, ತುಮಕೂರು ರವರಿಗೆ ಯಾವುದೇ ತರಹದ ತೆರಿಗೆ ಬಾಕಿದಾರರಾಗಿದ್ದಲ್ಲಿ ಹರಾಜಿನಲ್ಲಿ ಭಾವಹಿಸಲು ಅವಕಾಶವಿರುವುದಿಲ್ಲ. 4) ಹರಾಜಿನಲ್ಲಿ ಭಾಗವಹಿಸುವವರು ನಿಗಧಿಪಡಿಸಿದ ಠೇವಣಿಯನ್ನು ಅನ್‌ಲೈನ್‌ನಲ್ಲಿ ಪಾವತಿಸಿ ಬಿಡ್‌ನಲ್ಲಿ ಭಾಗವಹಿಸಬಹುದು. ಹರಾಜನ್ನು ಬಿಡ್ ಮಾಡುವಾಗ ರೂ.5000/– ದರದಲ್ಲಿ ಹೆಚ್ಚು ಬಿಡ್ ಮಾಡಬೇಕು. 5) ಯಶಸ್ವಿ ಬಿಡ್‌ದಾರರ ಠೇವಣಿಯನ್ನು ಬಿಟ್ಟು ಉಳಿದ ಬಿಡ್‌ದಾರರಿಗೆ ಠೇವಣಿಯನ್ನು ಹಿಂದಿರುಗಿಸಲಾಗುವುದು. 6) ಹರಾಜು ಸಮಯದಲ್ಲಿ ಯಾವುದೇ ಕಾರಣವನ್ನು ಕೊಡದೆ ಹರಾಜನ್ನು ತಿರಸ್ಕರಿಸುವ ಹಾಗೂ ಯಾವುದೇ ಸಂದರ್ಭದಲ್ಲಿ ಯಾವುದೇ ರೀತಿಯ ಷರತ್ತುಗಳನ್ನು ಹೊಸದಾಗಿ ವಿಧಿಸುವ ಅಧಿಕಾರ ಹರಾಜು ಮಾಡುವ ಅಧಿಕಾರಿಗೆ ಇರುವುದು. ಈ ರೀತಿಯಾಗಿ ವಿಧಿಸುವ ಷರತ್ತುಗಳಿಗೆ ಬದ್ದವಾಗಿರಬೇಕು. 7) ಯಶಸ್ವಿ ಬಿಡ್‌ದಾರರು ಹರಾಜು ಮುಗಿದ ನಂತರ ಅಖೈರು ಬಿಡ್ ಮೊಬಲಗಿನ ಶೇಕಡ 25% ರಷ್ಟು ಮೊತ್ತವನ್ನು ಮೂರು ದಿನಗಳ ಒಳಗಾಗಿ ಪಾವತಿಸುವುದು. ಇನ್ನುಳಿದ ಶೇಕಡ 75% ರಷ್ಟನ್ನು ಹದಿನೈದು ದಿನಗಳ ಒಳಗಾಗಿ (ಕಛೇರಿಯ ನಗದು ಶಾಖೆಯಲ್ಲಿ ಪಾವತಿಸುವುದು.) ತಪ್ಪಿದಲ್ಲಿ ಅಖೈರು ಬಿಡ್ ಮೊಬಲಗಿನ ಶೇಕಡ 25% ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಯಶಸ್ವಿ ಬಿಡ್‌ದಾರರು ದಿನಾಂಕ:01–09–2024 ರಿಂದ 31–08–2025 ಅವಧಿಗೆ ಹರಾಜು ನಿಬಂಧನೆಗಳ ರೀತ್ಯ ವಸೂಲಿ ಮಾಡುವುದು. ಶುಲ್ಕ ವಸೂಲಿ ಮಾಡುವ ಪ್ರತಿ ಟಿಕೇಟ್/ರಸೀದಿಗಳನ್ನು ತುಮಕೂರು ಮಹಾನಗರಪಾಲಿಕೆ, ತುಮಕೂರು ಮೊಹರು ಹಾಕಿಸಿಕೊಂಡು ನಂತರ ವಸೂಲಿ ಮಾಡುವುದು. 8) ಮೇಲ್ಕಂಡ ಯಾವುದೇ ಷರತ್ತನ್ನು ಉಲ್ಲಂಘನೆ ಮಾಡಿದಲ್ಲಿ ಯಾವುದೇ ಕಾರವಣನ್ನು ನೀಡದೆ ಪಾವತಿ ಮಾಡಿರುವ ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಸದರಿ ವಸೂಲಾತಿ ಹಕ್ಕನ್ನು ವರ್ಗಾವಣೆ ಮತ್ತು ಒಳ ಒಪ್ಪಂದವನ್ನು ನಿಷೇಧಿಸಿದೆ. 9) ತುಮಕೂರು ಮಹಾನಗರಪಾಲಿಕೆ, ತುಮಕೂರು ಅಧಿಕಾರಿಗಳಿಗೆ ಶುಲ್ಕ ವಸೂಲಾತಿಯ ಬಗ್ಗೆ ಪರಿಶೀಲಿಸುವ ಹಕ್ಕು ಇರುತ್ತದೆ. 10) ಹರಾಜಿಗಾಗಿ ನಿಗಧಿಪಡಿಸಿದ ದಿನಾಂಕದಂದು ಸರ್ಕಾರದಿಂದ ಹಠಾತ್ ಆಗಿ ಘೋಷಣೆಯಾಗುವ ಸರ್ಕಾರಿ ರಜೆ ಬಂದ ಪಕ್ಷದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಹರಾಜು ಪ್ರಕ್ರಿಯೆ ಮುಂದೂಡುವ ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ. 11) ತುಮಕೂರು ಮಹಾನಗರಪಾಲಿಕೆ ವಿಧಿಸುವ ಎಲ್ಲಾ ಷರತ್ತುಗಳನ್ನು ಒಪ್ಪಿ ಯಶಸ್ವಿ ಬಿಡ್‌ದಾರರು ರೂ.500/– ಛಾಪಾ ಕಾಗದಲ್ಲಿ ನೋಟರಿಯಿಂದ ದೃಢೀಕರಿಸಿದ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ಹರಾಜನ್ನು ಅಂಗೀಕರಿಸುವ/ತಿರಸ್ಕರಿಸುವ/ಮರು ಹರಾಜು ಮಾಡುವ ವಿಶಿಷ್ಟ ಹಕ್ಕನ್ನು ತುಮಕೂರು ಮಹಾನಗನರಪಾಲಿಕೆ, ತುಮಕೂರು ಕಾಯ್ದಿರಿಸಿಕೊಂಡಿದೆ. 12) ಹೆಚ್ಚಿನ ಮಾಹಿತಿ ಪಾಲಿಕೆಯ ಕಂದಾಯ ಶಾಖೆಯಲ್ಲಿ ಕಂದಾಯಾಧಿಕಾರಿಗಳು, ತುಮಕೂರು ಮಹಾನಗರಪಾಲಿಕೆ ಇವರುಗಳನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ತುಮಕೂರು ಮಹನಾಗರ ಪಾಲಿಕೆ, ತುಮಕೂರು.
DIPR/TUM/204/KSMCA/2024-25

ಪುರಸಭೆ ಕಾರ್ಯಾಲಯ ಇಂಡಿ
ವೆಬ್‌ಸೈಟ್: www.inditown.mrc.gov.in,
ಇ–ಮೇಲ್:itstaff_ulb_indi@yahoo.co.in, ಫೋನ್/ಫ್ಯಾಕ್ಸ್:08359–225025
ಕ್ರ.ಸಂ:ಪು.ಸ.ಇಂ/ತಾ.ವಿ/2024–25 ದಿನಾಂಕ:.03.08.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಗೆ, ಈ ಮೂಲಕ ತಿಳಿಯಪಡಿಸುವದೇನೆಂದರೆ, ಇಂಡಿ ಪುರಸಭೆ ವ್ಯಾಪ್ತಿಯಲ್ಲಿ ಕಾಮಗಾರಿಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಕರೆಯಲಾಗಿದ್ದು ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು ಅದರಂತೆ ಆಸಕ್ತಿಯುಳ್ಳವರು ತಮ್ಮ ದರವಾರುಗಳನ್ನು http://kppp.karnataka.gov.in ಮತ್ತು GEM Portal ಮೂಲಕ ಸಲ್ಲಿಸಬಹುದಾಗಿದೆ.

ಅ.ನಂ	ಕಾಮಗಾರಿ ಹೆಸರು
01	DMA/2024-25/IND2704
02	DMA/2024-25/IND2706
03	DMA/2024-25/IND2291
04	DMA/2024-25/RD/WORK_INDENT19416/CALL-2
05	GEM/2024/B/5238849
06	GEM/2024/B/5238907
07	GEM/2024/B/5245978
08	DMA/2024-25/SE3006

ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳನ್ನು ವೆಬ್‌ಸೈಟ್ http://kppp.karnataka.gov.in ಮತ್ತು GEM Portal ನಲ್ಲಿ ಪಡೆಯಬಹುದು ಹಾಗೂ ಕಾರ್ಯಾಲಯದ ತಾಂತ್ರಿಕ ಶಾಖೆಯಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/– ಮುಖ್ಯಾಧಿಕಾರಿ, ಪುರಸಭೆ ಇಂಡಿ
ಸಹಿ/– ಆಡಳಿತಾಧಿಕಾರಿಗಳು, ಪುರಸಭೆ ಇಂಡಿ
ವಾಸಾಸಂಇ/ವಿಜಯಪುರ/158/ಕೆಎಸ್‌ಎಂಸಿಎ/2024–25

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ತುಮಕೂರು ಪ್ರಾದೇಶಿಕ ವಿಭಾಗ, ತುಮಕೂರು
ಇ–ಮೇಲ್: dcftmk_dcftmk@yahoo.co.in
ಸಂಖ್ಯೆ–ಬಿ2/ಬಿಯುಡಿ/ಸೇಲ್ಸ್/ವಿವ–19/2023–24
ದಿನಾಂಕ: 02.08.2024

ಮರು ಇ–ಹರಾಜು ಪ್ರಕಟಣೆ (ಎಂಎಸ್‌ಟಿಸಿ ಪೋರ್ಟಲ್ ಮುಖಾಂತರ)

2023–24ನೇ ಸಾಲಿನಲ್ಲಿ ತುಮಕೂರು ಪ್ರಾದೇಶಿಕ ಅರಣ್ಯ ವಿಭಾಗದ ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಹುಲಿಯೂರುದುರ್ಗ ಹೋಬಳಿ, ಪುರ ಗ್ರಾಮದ ಸ.ನಂ.77 ರ 41–12 ಎಕರೆ/ಗುಂಟೆ ಪ್ರದೇಶದಲ್ಲಿನ 1251–ನೀಲಗಿರಿ ಹಾಗೂ 65–ಇತರೆ ಜಾತಿಯ ಮರಗಳು ಮತ್ತು ಸುಗ್ಗನಹಳ್ಳಿ ಸ.ನಂ. 18 ರ 5–00 ಎಕರೆ/ಗುಂಟೆ ಪ್ರದೇಶದಲ್ಲಿನ 262–ನೀಲಗಿರಿ ಮತ್ತು 07 ವಿವಿಧ ಜಾತಿಯ ಮರಗಳು ಸೇರಿದಂತೆ ಒಟ್ಟು 1585 ನಿಂತ ಮರಗಳನ್ನು ಇ–ಹರಾಜು ಮೂಲಕ ತೆರವುಗೊಳಿಸುವ ಕಾಮಗಾರಿಯನ್ನು ಮೆ॥ ಎಂ.ಎಸ್.ಟಿ.ಸಿ., ಬೆಂಗಳೂರು, ಸಂಸ್ಥೆಯ ಮುಖಾಂತರ ಇ–ಹರಾಜನ್ನು ದಿನಾಂಕ:28–06–2024 ರಂದು ನಡೆಸಲಾಗಿದ್ದು, ಸದರಿ ಹರಾಜಿನಲ್ಲಿ ಯಶಸ್ವಿ ಬಿಡ್ಡುದಾರರು ಇ–ಟೆಂಡರ್ ಕಂ ಆಕ್ಷನ್ ನೋಟಿಫಿಕೇಶನ್ ನಲ್ಲಿರುವ ಷರತ್ತುಗಳನ್ವಯ ಬಿಡ್ ಮಾಡಿರುವ ಮೊತ್ತವನ್ನು ಪಾವತಿಸದೆ ಇರುವುದರಿಂದ ಸದರಿ ಹರಾಜನ್ನು ರದ್ದುಪಡಿಸಿದ್ದು. ಸದರಿ ಹರಾಜನ್ನು ದಿನಾಂಕ: 13–08–2024 ರಂದು ಮರು ಇ–ಹರಾಜು/ಟೆಂಡರ್ ನಡೆಸಲು ಉದ್ದೇಶಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಕಛೇರಿ ಕೆಲಸದ ದಿವಸಗಳಲ್ಲಿ ಅಥವಾ www.mstcecommerce.com ನಲ್ಲಿ ಪಡೆಯಬಹುದಾಗಿರುತ್ತದೆ.
SPECIES : 1. Nilagiri and Other trees, Standing Trees : 1585 Nos. Approx. Timber (in M3) : 20.884. Approx. Firewood (in tonne) : 249.255. Sale Schedule : Date : 13.08.2024. Time : 11.00 to 15.00, (11 AM to 03 PM)

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ತುಮಕೂರು ವಿಭಾಗ, ತುಮಕೂರು.
DIPR/TUM/211/KSMCA/2024-25

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ವಿಜಯನಗರ
E-mail:dhovijayanagara21@gmail.com. Telephone: 08394-227040
ಸಂಖ್ಯೆ:ಜಿಆಕುಕ/ಟೆಂಡರ್ ಪ್ರಕಟಣೆ/ಹೊರಗುತ್ತಿಗೆ/03/2024–25 ದಿನಾಂಕ:06–08–2024

ಟೆಂಡರ್ ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ವಿಜಯನಗರ ಇದರ ಅಧಿನದ ಸಂಸ್ಥೆಗಳಲ್ಲಿ ಸರ್ಕಾರದ ಆದೇಶದ ಮೇರೆಗೆ ಗ್ರೂಪ್–ಡಿ, ಸಫಾಯಿಕ ರ್ಮಚಾರಿ, ಇತರೆ ಅರೆ ವೈದ್ಯಕೀಯ ಸಿಬ್ಬಂದಿಯ ಮತ್ತು ಎಬಿ–ಎಆರ್‌ಕೆ ಕ್ಲೇಮ್ ಎಕ್ಸಿಕ್ಯೂಟೀವ್ ಸೇವೆಯನ್ನು 2024–25ನೇ ಸಾಲಿನಲ್ಲಿ ಹೊರ ಸಂಪನ್ಮೂಲ ಸಂಸ್ಥೆಗಳಿಂದ ಪಡೆಯಲು e-procurement (https://kppp.karnataka.gov.in) ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಅರ್ಜಿದಾರರು / ಸಂಸ್ಥೆದಾರರು ದಿನಾಂಕ:09–08–2024 ರ ಸಮಯ ಸಾಯಂಕಾಲ 04:00 ರಿಂದ ದಿನಾಂಕ: 17–08–2024 ರ ಸಮಯ ಸಾಯಂಕಾಲ 04:00 ವರೆಗೆ ಅರ್ಜಿಗಳನ್ನು ಅಪ್‌ಲೋಡ್ ಮಾಡಬಹುದಾಗಿದೆ. (ಟೆಂಡರಿನ ಅಂದಾಜು ಮೊತ್ತ ರೂ.178.65ಲಕ್ಷಗಳು).
ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 08394–227040 ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಮುದ್ದಾಂ ಪಡೆಯಬಹುದಾಗಿದೆ.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ವಿಜಯನಗರ
ವಾ.ಸಾ.ಸಂ.ಇ/ವಿಜಯನಗರ/2024–25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/175

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಚಿಕ್ಕೋಡಿ.
ದೂರವಾಣಿ: 08338–275101, ಇ–ಮೇಲ್: ee.rdws.ckd@gmail.com
ಸಂಖ್ಯೆ : ಕಾ.ಇಂ./ಗ್ರಾ.ಕು.ನೀ. & ನೈ./ವಿ.ಚಿ./ತಾಂ.ಶಾ./ಕೆಡಬ್ಲ್ಯು 3 & 4/ಟೆಂಡರ್/2024–25/36/791 ದಿನಾಂಕ : 05–08–2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕೆಡಬ್ಲ್ಯೂ – 3 & 4 (ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರಕಾರದ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ **ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಚಿಕ್ಕೋಡಿ ವ್ಯಾಪ್ತಿಯಲ್ಲಿ** ಈ ಕೆಳಗೆ ನಮೂದಿಸಿರುವ ಸರಬರಾಜು ಯೋಜನೆ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.

Work Indent No. : 8022/Call-3

1) ಟೆಂಡರ್ ಪೂರ್ವಬಾವಿ ಸಭೆ : 08–08–2024, ಕಾರ್ಯನಿರ್ವಾಹಕ ಅಭಿಯಂತರರು ಗಾ. ಕು. ನೀ. & ನೈ. ವಿಭಾಗ, ಚಿಕ್ಕೋಡಿ ಕಚೇರಿಯಲ್ಲಿ, 2) ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 09–08–2024 ಸಾಯಂಕಾಲ 17.00 ಘಂಟೆವರೆಗೆ, 3) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : 12–08–2024 ರ ಬೆಳಿಗ್ಗೆ 17.30 ಘಂಟೆ ನಂತರ ತೆರೆಯಲಾಗುವುದು.

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪ್ರೋರ್ಟಲ್ **(https://kppp.karnataka.gov.in)** ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ,
ಗ್ರಾ.ಕು.ನೀ. & ನೈ ವಿಭಾಗ, ಚಿಕ್ಕೋಡಿ.
ಡಿಐಪಿಆರ್/ಬೆಳಗಾವಿ/555/ಮಣಿಪಾಲ್/2024–25

ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಡಾ.ಬಿ.ಆರ್ ಅಂಬೇಡ್ಕರ್ ಭವನ, ಹಾಸನ
ದೂರವಾಣಿ:08172–268960, email:dswohassan@gmail.com
ಸಂ/ಉನಿಸಕಇಹಾ/ಡಿ3/ಸಿಬ್ಬಂದಿ/ಸಿಆರ್15/2024–25 ದಿನಾಂಕ 6–8–2024.

ಇ–ಟೆಂಡರ್ ಪ್ರಕಟಣೆ

2024–25 ಮತ್ತು 2025–26ರ ಸಾಲುಗಳಿಗೆ ಹಾಸನ ಜಿಲ್ಲೆ, ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ವಿದ್ಯಾರ್ಥಿ ನಿಲಯ/ವಸತಿ ಶಾಲೆಗಳಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಲು ಇ–ಟೆಂಡರ್ ಕರೆಯಲಾಗಿದ್ದು, ವಿವರ ಕೆಳಕಂಡಂತಿರುತ್ತದೆ. 1.ಟೆಂಡರ್ ಮೊತ್ತ ರೂ.38,78,50,000/– 2.ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ:8–8–2024 3.ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:9–9–2024. 4.ಟೆಂಡರ್ ಫಾರಂ ಡೌನ್‌ಲೋಡ್ ಮಾಡುವ ಇ–ಪ್ರೊಕ್ಯೂರ್‌ಮೆಂಟ್ ವಿಳಾಸ:https://eproc.karnataka.gov.in 5.ಸಂಪರ್ಕ ವಿಳಾಸ: ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಡಾ.ಬಿ.ಆರ್.ಅಂಬೇಡ್ಕರ್ ಭವನ, ಎಸ್.ಬಿ.ಜಿ.ಥಿಯೇಟರ್ ಎದುರು, ಹಾಸನ, ದೂರವಾಣಿ: 08172–268960

ಸಹಿ/–ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ, ಹಾಸನ
ವಾಸಾಸಂಇ/ಹಿಸನಿ/ಹಾಸನ/273/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ
ಕಾರ್ಯಪಾಲಕರ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.
ಇ–ಮೇಲ್:zped_cta@yahoo.com ದೂರವಾಣಿ ಸಂ:08194–222372
ಸಂ:ಪಂರಾಜ್‌ಇಂವಿ/ಚಿದು/ಇಇ/ತಾಂಶಾ/ಟೆಂಡರ್/2024–25/875 ದಿ:05.08.2024

ಟೆಂಡರ್ ಪ್ರಕಟಣೆ
(Through e-Procurement Portal Only)

ಚಿತ್ರದುರ್ಗ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ ಯೋಜನೆಯಡಿಯಲ್ಲಿ ವ್ಯಾಪ್ತಿಯ ವಿವಿಧ ಯೋಜನೆಯಡಿಯಲ್ಲಿ ಅನುಮೋದನೆಯಾದ 2 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಗಳ ಅಂದಾಜು ಮೊತ್ತ ಕನಿಷ್ಟ ರೂ: 27.80 ಲಕ್ಷ ಮತ್ತು ಗರಿಷ್ಠ ರೂ. 98.40 ಲಕ್ಷಗಳು ಒಟ್ಟು ರೂ. 126.20 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು ದಿನಾಂಕಗಳು ಈ ಕೆಳಕಂಡಂತಿವೆ:– (1) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ: 12.08.2024ರ : ಸಮಯ: 11.00 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 13.08.2024ರ : ಸಮಯ 16.00 (3) ತಾಂತ್ರಿಕ ಬಿಡ್ ತೆರೆಯುವ ದಿ: 14.08.2024ರ ಸಮಯ 16.01 ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (support@eprochelpdesk.com) or KPPP Helpdesk Phone No: tel:+91-8046010000, +91-8068948777 ಸಂಪರ್ಕಿಸಲು ಅಥವಾ ಈ ಕಛೇರಿ ದೂರವಾಣಿ ಸಂಖ್ಯೆ: 08194–222372 ಕಾರ್ಯಪಾಲಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

RO.No.174:DIPR/CTA/KSMCA/2024-25
ಸಹಿ/– ಕಾರ್ಯಪಾಲಕ ಅಭಿಯಂತರರು
ಪಂ.ರಾಜ್ ಇಂ.ವಿಭಾಗ, ಚಿತ್ರದುರ್ಗ

ಟ್ವೀಟೂ-ಖಾರಾ

ಕರ್ನಾಟಕ ಕಾಂಗ್ರೆಸ್

ಭ್ರಷ್ಟಾಚಾರದ ಆರೋಪ ಹೊತ್ತವರೇ ಇತರರ ಮೇಲೆ ಭ್ರಷ್ಟಾಚಾರದ ಸುಳ್ಳು ಆರೋಪ ಹೊರಿಸಿ ಪಾದಯಾತ್ರೆ ಮಾಡುವುದು ಈ ಶತಮಾನದ ದೊಡ್ಡ ಜೋಕ್. ಭ್ರಷ್ಟಾಚಾರ ಪ್ರಕರಣದಲ್ಲಿ ಹಾಗೂ ಪೋಕ್ಸೋ ಕಾಯ್ದೆಯಡಿಯಲ್ಲಿ ಆರೋಪಿಯಾದ ಯಡಿಯೂರಪ್ಪನವರು ಇನ್ನೊಬ್ಬರ ರಾಜೀನಾಮೆ ಕೇಳುವುದು ಕಾಮಿಡಿ ಅಲ್ಲವೇ? . BYVijayendra ಅವರೇ ನಿಮ್ಮ ನೈತಿಕತೆಯನ್ನು ನಿಮ್ಮವರೇ ಪ್ರಶ್ನಿಸುತ್ತಿದ್ದಾರೆ, ನಿಮ್ಮವರಿಗೇ ಉತ್ತರ ನೀಡುವ ಧೈರ್ಯ ತೋರಿಸಿ.

ಮಹಾಲಿಂಗಾಯ್ಯ, ಬಿ.ಎಂ

ಯತ್ನಾಳ್ ಗೆ next BJPಲಿ ticket ಸಿಗಲ್ಲ ಅಂತ ಗೊತ್ತಾಗಿ ನೀವು ಹೇಳಿರಬಹುದು ನಾವೇ ಕಾಂಗ್ರೆಸ್ ನಲ್ಲಿ ticket ಕೊಡ್ತೀವಿ ಅಂತ. ಅದಕ್ಕೇ ಏನೇನೋ ಬುಲ್ದೆ ಬಿಡ್ತಾನೆ. ಅವನ ಮಾತಿಗೆ ಕವಡೆ ಕಾಸಿನ ಕಿಮ್ಮತ್ತು ಇಲ್ಲ. ಹಿಂದೆ ಯಡಿಯೂರಪ್ಪ KJP ಕಟ್ಟಿದಾಗ ಇವರೆಲ್ಲಾ BJP ನಲ್ಲಿ ಇದ್ದು ಏನೇನು ಕಡಿದು ಕಟ್ಟೆ ಹಾಕಿದ್ರು ಅಂತ ನೋಡಿಕೊಳ್ಳಲಿ.

ಮುಡಾ ವಿಚಾರದಲ್ಲಿ ನಾನು ಯಾವುದೇ ತಪ್ಪು ಮಾಡಿಲ್ಲ

ಸರಕಾರ ಅಸ್ಥಿರಗೊಳಿಸಲು ಬಿಜೆಪಿ, ಜೆಡಿಎಸ್‌ನಿಂದ ಹುನ್ನಾರ

ಮೈಸೂರು: ಮುಡಾ ವಿಚಾರದಲ್ಲಿ ನಾನು ಯಾವುದೇ ತಪ್ಪು ಮಾಡಿಲ್ಲ ಮತ್ತು ಪ್ರಭಾವ ಬಳಸಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾದಿಂದ ಬದಲಿ ಭೂಮಿ ಕೊಡುವುದು ಬೇಡ ಎಂದು ನಾನು ಹೇಳಿದ್ದೆ. ನನ್ನ ಪತ್ನಿ ಬದಲಿ ನಿವೇಶನಕ್ಕೆ ಅರ್ಜಿ ಕೊಟ್ಟಾಗ ನಾನು ಸಿಎಂ ಆಗಿದ್ದೆ. ಸಿಎಂ ಆಗಿರುವ ತನಕ ಬದಲಿ ಭೂಮಿ ಕೊಡಬೇಡಿ ಎಂದು ನಾನು ಹೇಳಿದ್ದೆ. ಪ್ರಭಾವ ಬಳಸುವುದಿದ್ದರೆ ಅಂದೇ ಬಳಸುತ್ತಿದ್ದೆ ಎಂದರು.

- **2021ರಲ್ಲಿ ನನ್ನ ಪತ್ನಿಗೆ ಬದಲಿ ನಿವೇಶನ ಬಿಜೆಪಿ ಸರಕಾರ ನೀಡಲಾಗಿದೆ**
- **ರಾಜ್ಯಪಾಲರು ನೋಟಿಸ್‌ನಲ್ಲಿ ಉಲ್ಲೇಖಿಸಿರುವ ಆರೋಪಗಳು ನಿರಾಧಾರ**
- **ಜನಾಂದೋಲನ ಸಮಾವೇಶದಲ್ಲಿ ಬಿಜೆಪಿ- ಜೆಡಿಎಸ್‌ನ ಎಲ್ಲಾ ಹಗರಣಗಳು ಬಿಚ್ಚಿಡುತ್ತೇನೆ**

ಸಿಎಂ ಆಗಿ ಕೊಡಲು ಆಗಿತ್ತಿರಲಿಲ್ಲವಾ, ಬದಲಿ ಸೈಟ್‌ಗೆ ಮತ್ತೆ ನನ್ನ ಪತ್ನಿ 2021ರಲ್ಲಿ ಅರ್ಜಿ ಹಾಕಿದಾಗ ಬಿಜೆಪಿ ಸರಕಾರ ಕಾನೂನಾತ್ಮಕವಾಗಿ ಭೂಮಿ ನೀಡಿದೆ. ಮುಡಾ ವಿಚಾರದಲ್ಲಿ ನಾನು ಯಾವುದೇ ತಪ್ಪು ಮಾಡಿಲ್ಲ, ಪ್ರಭಾವ ಬಳಸಿಲ್ಲ. ಬಿ.ಎಸ್. ಯಡಿಯೂರಪ್ಪ ಜೈಲಿಗೆ ಹೋಗಿದ್ದ ಪ್ರಕರಣವೇ ಬೇರೆ. ಯಡಿಯೂರಪ್ಪ ಡಿನೋಟಿಫೈ ಮಾಡಿದ್ದರು. ಚೆಕ್ ಮೂಲಕ ಹಣ ಪಡೆದಿದ್ದರು. ಇಲ್ಲಿ ನಾನು ಯಾವುದೇ ಹಣ ಪಡೆದಿಲ್ಲ ಪ್ರಭಾವ ಬೀರಿಲ್ಲ ಎಂದು ಸ್ಪಷ್ಟಪಡಿಸಿದರು.

ಹಗರಣ ಬಿಚ್ಚಿಡುತ್ತೇನೆ: ಮೈಸೂರಿನಲ್ಲಿ ನಡೆಯುವ ಜನಾಂದೋಲನ ಸಮಾವೇಶದಲ್ಲಿ ಬಿಜೆಪಿ- ಜೆಡಿಎಸ್ ಸರಕಾರದ ಎಲ್ಲಾ ಹಗರಣಗಳನ್ನು ಬಿಚ್ಚಿಡುತ್ತೇನೆ ಎಂದು ಘೋಷಿಸಿದರು. ಜೆಡಿಎಸ್, ಬಿಜೆಪಿಯವರು ಯಾವ ಹಗರಣಗಳನ್ನು ಮಾಡಿದ್ದಾರೆ. ಎಲ್ಲವನ್ನೂ ಸಂಪೂರ್ಣವಾಗಿ ಸಮಾವೇಶದಲ್ಲಿ ತೆರೆದಿಡುತ್ತೇನೆ. ಇದೆಲ್ಲವನ್ನೂ ಹೇಳಲು ಸುದ್ದಿಗೋಷ್ಠಿಯನ್ನು ನಾನು ಕರೆದಿದ್ದೆ. ಆದರೆ, ಎಲ್ಲಾ ಸಮಾವೇಶದಲ್ಲೇ ಹೇಳಬೇಕೆಂದು ಸುದ್ದಿಗೋಷ್ಠಿ ರದ್ದು ಮಾಡಿದೆ. ಬಿಜೆಪಿ ಸರಕಾರದ ಹಗರಣ ಬಗ್ಗೆ ತನಿಖೆಯೂ ನಡೆಯುತ್ತಿದೆ ಎಂದರು.

ಪ್ರಭಾವ ಬೀರಿಲ್ಲ: ಮುಡಾ ನಿವೇಶನ ಹಂಚಿಕೆಯಲ್ಲಿ ಯಾವುದೇ ರೀತಿಯ ಪ್ರಭಾವವನ್ನು ನಾನು ಬೀರಿಲ್ಲ, ಕಾನೂನು ಪ್ರಕಾರವಾಗಿರುವ ಹಿನ್ನೆಲೆಯಲ್ಲಿಯೇ ಬಿಜೆಪಿ ಸರಕಾರದ ಅವಧಿಯಲ್ಲಿ 2021ರಲ್ಲಿ ನನ್ನ ಪತ್ನಿಗೆ ಬದಲಿ ನಿವೇಶನ ನೀಡಲಾಗಿದೆ. 2014ರಲ್ಲಿ ನಾನು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ನನ್ನ ಪತ್ನಿ, ಮುಡಾ ಅಕ್ರಮವಾಗಿ ನಮ್ಮ ಜಮೀನು ಸ್ವಾಧೀನಪಡಿಸಿಕೊಂಡಿರುವ ಹಿನ್ನೆಲೆಯಲ್ಲಿ ಬದಲಿ ನಿವೇಶನ ಕೋರಿ ಅರ್ಜಿ ಸಲ್ಲಿಸಿದ್ದಳು. ಆ ಸಂದರ್ಭದಲ್ಲಿ ನಾನು ಈ ಕುರಿತು ಯಾವುದೇ ಕ್ರಮಗಳನ್ನು ಕೈಗೊಂಡಿರಲಿಲ್ಲ ಎಂದು ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಸರಕಾರವನ್ನು ಅಸ್ಥಿರಗೊಳಿಸುವ ಉದ್ದೇಶದಿಂದ ನನ್ನ ಮೇಲೆ ಆಪಾದನೆಗಳನ್ನು ಮಾಡುತ್ತಿವೆ. ಆಪರೇಶನ್ ಕಮಲ ನಡೆಸಲು ಪ್ರಯತ್ನಿಸಿದರೂ, ಸರಕಾರ ಅಸ್ಥಿರಗೊಳಿಸಲು ಸಾಧ್ಯವಾಗದ ಕಾರಣ ಇದನ್ನು ಮಾಡುತ್ತಿದ್ದಾರೆ. ನಮ್ಮ ಸರಕಾರ ಗ್ಯಾರಂಟಿ ಯೋಜನೆಗಳನ್ನು ಕಳೆದ ಒಂದು ವರ್ಷದ ಅವಧಿಯಲ್ಲಿ ಯಶಸ್ವಿಯಾಗಿ ಜಾರಿಗೊಳಿಸಿ, ಬಡವರ ಪರವಾಗಿ ಕೆಲಸ ಮಾಡುತ್ತಿರುವುದನ್ನು ಸಹಿಸಲು ಅವರಿಗೆ ಸಾಧ್ಯವಾಗುತ್ತಿಲ್ಲ.

– ಸಿದ್ದರಾಮಯ್ಯ ಮುಖ್ಯಮಂತ್ರಿ

ಸಮರ್ಪಕವಾದ ದಾಖಲೆ ಸಲ್ಲಿಸಿದ್ದೇನೆ

ಮುಡಾ ಪ್ರಕರಣದಲ್ಲಿ ರಾಜ್ಯಪಾಲರು ನೀಡಿರುವ ನೋಟಿಸಿಗೆ ಈಗಾಗಲೇ ಉತ್ತರ ನೀಡಲಾಗಿದ್ದು, ಅದನ್ನು ರಾಜಪಾಲರು ಒಪ್ಪಿಕೊಳ್ಳುವ ನಂಬಿಕೆಯಿದೆ. ಮುಡಾದಿಂದ ಅಕ್ರಮವಾಗಿ ಸೈಟ್ ಪಡೆದ ಆರೋಪಕ್ಕೆ ಸಂಬಂಧಿಸಿ ರಾಜ್ಯಪಾಲರು ನೀಡಿರುವ ಶೋಕಾಸ್ ನೋಟಿಸ್‌ಗೆ ಸಮರ್ಪಕವಾದ ದಾಖಲೆ ಸಲ್ಲಿಕೆ ಮಾಡಿದ್ದೇನೆ. ಆದರೆ, ಇದು ರಾಜ್ಯಪಾಲರ ನೋಟಿಸ್‌ಗೆ ಸಚಿವ ಸಂಪುಟದಲ್ಲಿ ತೆಗೆದುಕೊಂಡ ನಿರ್ಣಯವನ್ನು ಒಳಗೊಂಡಿಲ್ಲ. ಪ್ರತ್ಯೇಕವಾಗಿ, ವೈಯಕ್ತಿಕವಾಗಿ ದಾಖಲೆಗಳ ಸಮೇತ ವಿವರ ನೀಡಿದ್ದೇನೆ. ರಾಜ್ಯಪಾಲರು ನೋಟಿಸ್‌ನಲ್ಲಿ ಉಲ್ಲೇಖಿಸಿರುವ ಆರೋಪಗಳು ನಿರಾಧಾರ. ಕಾನೂನಾತ್ಮಕವಾಗಿಯೇ ಪತ್ನಿಗೆ ಸೈಟ್ ಹಂಚಿಕೆಯಾಗಿದೆ ಎಂದು ಸಿಎಂ ಹೇಳಿದರು.

ಬಿಎಸ್‌ವೈ ಸಾರ್ವಜನಿಕ ಜೀವನದಿಂದ ನಿವೃತ್ತರಾಗಲಿ

ಈ ವಯಸ್ಸಿನಲ್ಲಿ ಪೋಕ್ಸೊ ಪ್ರಕರಣದಲ್ಲಿ ಸಿಲುಕಿರುವ ಯಡಿಯೂರಪ್ಪ ಅವರು ನ್ಯಾಯಾಲಯದ ದಯೆಯಿಂದ ಜೈಲು ಪಾಲಾಗದೆ ಬಚಾವಾಗಿದ್ದಾರೆ. 82ರ ವಯಸ್ಸಿನಲ್ಲಿ ಇಂತಹ ಪ್ರಕರಣದಲ್ಲಿ ಸಿಲುಕಿರುವ ಅವರಿಗೆ ನನ್ನ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ಇಲ್ಲ. ಅವರು ನೈತಿಕತೆ ಇದ್ದರೆ ಸಾರ್ವಜನಿಕ ಜೀವನದಿಂದ ನಿವೃತ್ತರಾಗಬೇಕು. ಯಡಿಯೂರಪ್ಪ ವಿರುದ್ಧ 20ಕ್ಕೂ ಅಧಿಕ ಪ್ರಕರಣ ಕುರಿತು ಮಾಹಿತಿ ನೀಡುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಘೋಷಿಸಿದರು.

ಭಂಡ ಕಾಂಗ್ರೆಸ್‌ನಿಂದ ನಾಡಿನ ಜನತೆಗೆ ಒಳ್ಳೆಯದಾಗಲ್ಲ

ಕಾಂಗ್ರೆಸ್ ಹಲವು ಭ್ರಷ್ಟಾಚಾರ ಹಗರಣಗಳಲ್ಲಿ ಸಿಲುಕಿದೆ

ಮಂಡ್ಯ: ಅಹಿಂದ ಹೆಸರು ಹೇಳಿ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರವು ಹಲವು ಭ್ರಷ್ಟಾಚಾರ ಹಗರಣಗಳಲ್ಲಿ ಸಿಲುಕಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು.

ಐದನೇ ದಿನವಾದ ಬುಧವಾರ ಮೈಸೂರು ಚಲೋ ಪಾದಯಾತ್ರೆಯು ಮುಂದುವರೆದಿದ್ದು,

ಈ ಸಂದರ್ಭದಲ್ಲಿ ಮಂಡ್ಯದಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಅವರು ಮಾತನಾಡಿ, ವಾಲ್ಮೀಕಿ ನಿಗಮದ ಹಗರಣ, ಮೈಸೂರಿನ ಸಾವಿರಾರು ಕೋಟಿಯ ಮುಡಾ ನಿವೇಶನ ಹಗರಣ ಇರಬಹುದು. ಇಂಥ ಭ್ರಷ್ಟ, ದುಷ್ಟ ಕಾಂಗ್ರೆಸ್ ಸರಕಾರ, ಇಂತಹ ಭ್ರಷ್ಟ ಮುಖ್ಯಮಂತ್ರಿಗಳಿಂದ ನಾಡಿನ ಜನತೆಗೆ ನ್ಯಾಯ ಕೊಡಲು ಸಾಧ್ಯವೇ ಎಂದು ಅವರು ಕೇಳಿದರು.

ಭ್ರಷ್ಟ ಮುಖ್ಯಮಂತ್ರಿಗಳಿಂದ ನಾಡಿನ ರೈತರ ಕಣ್ಣೀರು ಒರೆಸಲು ಸಾಧ್ಯವೇ? ಈ ನಾಡಿನ ದೀನದಲಿತರಿಗೆ ನ್ಯಾಯ ದೊರಕಿಸಲು ಸಾಧ್ಯವೇ? ಖಂಡಿತ ಸಾಧ್ಯವಿಲ್ಲ. ಸಿದ್ದರಾಮಯ್ಯನವರ ನೇತೃತ್ವದ ಸರಕಾರ ಹಗಲು ದರೋಡೆಯಲ್ಲಿ ನಿರತವಾಗಿದೆ. ವಾಲ್ಮೀಕಿ ನಿಗಮದ ದಲಿತ ಸಮುದಾಯದ ಲೆಕ್ಕಾಧಿಕಾರಿ ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆಡಳಿತ ಪಕ್ಷದ ಶಾಸಕನಿಗೆ ಹಣ ಕೊಟ್ಟರೂ ವರ್ಗಾವಣೆ ಆಗದೆ ಯಾದಗಿರಿಯಲ್ಲಿ ಪೊಲೀಸ್ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಂಥ ಭಂಡ ಸರಕಾರದಿಂದ ನಾಡಿನ ಜನತೆಗೆ ಒಳ್ಳೆಯದಾಗಲು ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಮಂತ್ರಿಯಾಗಿ ದಲಿತರ ಜಮೀನನ್ನು ನುಂಗಿದ್ದು, ಇದು ನ್ಯಾಯವೇ? ರಾಜ್ಯದ ಮುಖ್ಯಮಂತ್ರಿಯಾಗಿ ನೀವು ಲೂಟಿಗೆ ಇಳಿದಿದ್ದೀರಲ್ಲವೇ . ನಿವೇಶನಗಳು 12 ಜನರಿಗೆ ನೋಂದಣಿ ಆದ ಮೇಲೆ, 10 ವರ್ಷಗಳ ಬಳಿಕ ಬಡಾವಣೆ ನಿರ್ಮಿಸಿದ ಜಮೀನು ವಾಪಸ್ ಕೊಡಿ ಎಂದು ಕೇಳಿದ್ದಾರೆ. ಇದನ್ನು ಯಾರಾದರೂ ನಂಬುತ್ತಾರಾ. ಮುಡಾ ಹಗರಣದಲ್ಲಿ ಪ್ರತಿಯೊಂದು ಹಂತದಲ್ಲೂ ಸಿದ್ದರಾಮಯ್ಯನವರ ಪಾತ್ರ ಇದೆ.

–ಆರ್.ಅಶೋಕ್ ವಿಪಕ್ಷ ನಾಯಕ

ಪ್ರಶ್ನೆ ಪತ್ರಿಕೆ ಬದಲು ಉತ್ತರ ಪತ್ರಿಕೆ

ದಾವಣಗೆರೆ ವಿವಿ ವಾಣಿಜ್ಯ ವಿಭಾಗದ ಪರೀಕ್ಷೆಯಲ್ಲಿ ಯಡವಟ್ಟು

ದಾವಣಗೆರೆ: ವಿಶ್ವವಿದ್ಯಾಲಯದಲ್ಲಿ ನಡೆದ ಪದವಿ ವಿದ್ಯಾರ್ಥಿಗಳ ಬಿಕಾಂ 6ನೇ ಸೆಮಿಸ್ಟರ್ ಪರೀಕ್ಷೆಯ ವೇಳೆ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಪ್ರಶ್ನೆ ಪತ್ರಿಕೆಯನ್ನು ವಿತರಣೆ ಮಾಡುವುದು ಬಿಟ್ಟು, ಪ್ರಶ್ನೆ ಪತ್ರಿಕೆಗೆ ಸಿದ್ಧಪಡಿಸಲಾಗಿದ್ದ ಮಾದರಿ ಉತ್ತರ ಪತ್ರಿಕೆಗಳನ್ನು ವಿತರಣೆ ಮಾಡಲಾಗಿದೆ. ಪ್ರಶ್ನೆ ಪತ್ರಿಕೆ ಬದಲು ಉತ್ತರ ಪತ್ರಿಕೆ ನೀಡಿದ ಘಟನೆ ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ನಡೆದಿದೆ.

ದಾವಣಗೆರೆ ವಿಶ್ವ ವಿದ್ಯಾಲಯದಲ್ಲಿ ಮಂಗಳವಾರ ನಡೆಯುತ್ತಿದ್ದ ಬಿಕಾಂ ಪರೀಕ್ಷೆಯಲ್ಲಿ ಯಡವಟ್ಟು ಸಂಭವಿಸಿದೆ. ಪರೀಕ್ಷೆ ಬರೆಯಲು ಸಿದ್ಧರಾಗಿ ಬಂದಿದ್ದ ವಿದ್ಯಾರ್ಥಿಗಳಿಗೆ ಪ್ರಶ್ನೆ ಪತ್ರಿಕೆ ಕೊಡುವ ಬದಲು ಮಾದರಿ ಉತ್ತರ ಪತ್ರಿಕೆಯನ್ನು ನೀಡಲಾಗಿದೆ. ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆಗಳನ್ನು ನೀಡಿ ಅವರು ರಿಜಿಸ್ಟರ್ ನಂಬರ್ ನಮೂದಿಸಿ ಪ್ರಶ್ನೆ ಪತ್ರಿಕೆಗಾಗಿ ಕಾಯುತ್ತಿದ್ದರು. ಈ ವೇಳೆ ವಾರ್ನಿಂಗ್ ಬೆಲ್ ಆದ ತಕ್ಷಣವೇ ಪ್ರಶ್ನೆ ಪತ್ರಿಕೆಯ ಬಂಡಲ್‌ಗೆ ನಾಲ್ಕು ವಿದ್ಯಾರ್ಥಿಗಳಿಂದ ಸಹಿ ಮಾಡಿಸಿ ಅದನ್ನು ಸೀಲ್ ಓಪೆನ್ ಮಾಡಿ ಪ್ರಶ್ನೆ ಪತ್ರಿಕೆಗಳನ್ನು ಹಂಚುವ ರೀತಿಯಲ್ಲಿಯೇ ಹಂಚಿಕೆ ಮಾಡಿದ್ದಾರೆ. ಇನ್ನು ಪರೀಕ್ಷೆ ಬರೆಯುವ ಗಂಟೆ ಬಾರಿಸುತ್ತಿದ್ದಂತೆ ಪ್ರಶ್ನೆ ಪತ್ರಿಕೆ ಓಪನ್ ಮಾಡಿದ ವಿದ್ಯಾರ್ಥಿಗಳಿಗೆ ಶಾಕ್ ಆಗಿದೆ. ಇಲ್ಲಿ ಪ್ರಶ್ನೆ ಪತ್ರಿಕೆಯ ಬದಲು ಮಾದರಿ ಉತ್ತರ ಪತ್ರಿಕೆಯನ್ನು ನೀಡಲಾಗಿದೆ ಎಂಬುದು ತಿಳಿದು ಬಂದಿದೆ.

ದಾವಣಗೆರೆ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿರುವ 60 ಕಾಲೇಜುಗಳ ಪೈಕಿ 15 ಕಾಲೇಜುಗಳ ಪರೀಕ್ಷೆಯಲ್ಲಿ ಗೊಂದಲ ಸೃಷ್ಟಿಯಾಗಿದೆ. ಈ ಗೊಂದಲದಿಂದ ತಕ್ಷಣ ಎಚ್ಚೆತ್ತ ದಾವಣಗೆರೆ ವಿಶ್ವ ವಿದ್ಯಾಲಯದ ಪರೀಕ್ಷಾಂಗ ವಿಭಾಗದ ಕುಲಸಚಿವ ರಮೇಶ್ ಅವರು ಬಿಕಾಂ ಒಂದು ವಿಷಯದ ಪರೀಕ್ಷೆಯನ್ನು ನಿಲ್ಲಿಸುವಂತೆ ಆದೇಶ ಹೊರಡಿಸಿದ್ದಾರೆ. ನಂತರ ವಿದ್ಯಾರ್ಥಿಗಳಿಗೆ ಶೀಘ್ರವೇ ಮುಂದಿನ ದಿನಾಂಕದಲ್ಲಿ ಪರೀಕ್ಷಾ ದಿನಾಂಕವನ್ನು ತಿಳಿಸಲಾಗುವುದು ಎಂದು ತಿಳಿಸಿದ್ದಾರೆ.

ದಾವಣಗೆರೆ ವಿವಿಯಿಂದ ಸೀಲ್ಡ್ ಕವರಿನಲ್ಲಿ ಪ್ರಶ್ನೆಪತ್ರಿಕೆ ಸೆಟ್ ಆಗಿ ಹೋಗಿದೆ . ಈ ವೇಳೆ ಆ ಕವರ್ ನಲ್ಲಿ ಸ್ಕೀಂ ಆಫ್ ವ್ಯಾಲುವೇಷನ್ ಎಂದು ಪ್ರಿಂಟ್ ಆಗಿದೆ ಅದು ಮಿಸ್ ಆಗಿ ವಿದ್ಯಾರ್ಥಿಗಳಿಗೆ ದೊರಕಿದೆ.ಈ ಬಗ್ಗೆ ವಿಚಾರಣೆ ನಡೆಸಲಾಗುವುದು. ಎಲ್ಲಿ ತಪ್ಪಾಗಿದೆ ಎಂದು ವಿಚಾರಣೆ ನಡೆಸಿ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.

– ರಮೇಶ್ ಪರೀಕ್ಷಾಂಗ ಕುಲಸಚಿವ, ದಾವಣಗೆರೆ ವಿವಿ.

ಪರಶುರಾಮ್ ಕುಟುಂಬಕ್ಕೆ 50 ಲಕ್ಷ ಪರಿಹಾರ

ಮೃತ ಪಿಎಸ್‌ಐ ಮನೆಗೆ ಗೃಹ ಸಚಿವ ಜಿ.ಪರಮೇಶ್ವರ ಭೇಟಿ, ಪತ್ನಿಗೆ ಉದ್ಯೋಗ ಭರವಸೆ

ಕೊಪ್ಪಳ: ಯಾದಗಿರಿ ಪಿಎಸ್‌ಐ ಪರಶುರಾಮ ಸಾವು ಪ್ರಕರಣ ರಾಜಕೀಯ ತಿರುವು ಪಡೆಯುತ್ತಿದ್ದಂತೆ ರಾಜ್ಯ ಸರಕಾರ ಎಚ್ಚೆತ್ತುಕೊಂಡಿದ್ದು, ಸ್ವತಃ ಗೃಹ ಸಚಿವ ಜಿ.ಪರಮೇಶ್ವರ ಮೃತರ ಮನೆಗೆ ಭೇಟಿ ನೀಡಿ, ಸಾಂತ್ವನ ಹೇಳಿದರು.

ನಂತರ ಮಾತನಾಡಿ, ಪತ್ನಿ ಶ್ವೇತಾ ಅವರಿಗೆ ಉದ್ಯೋಗ ನೀಡುವ ಜೊತೆಗೆ, ಕುಟುಂಬಕ್ಕೆ 50 ಲಕ್ಷ ರು. ವಿಶೇಷ ಪರಿಹಾರ ನೀಡುವುದಾಗಿ ಘೋಷಣೆ ಮಾಡಿದರು.

ಕಾರಟಗಿ ತಾಲೂಕು ಸೋಮನಾಳ ಗ್ರಾಮಕ್ಕೆ ಆಗಮಿಸಿದ ಗೃಹ ಸಚಿವರು, ಮೃತರ ತಂದೆ-ತಾಯಿ ಹಾಗೂ ಪತ್ನಿ ಶ್ವೇತಾ ಅವರ ಜತೆಗೆ ಸುಮಾರು 1 ಗಂಟೆ ಕಾಲ ಚರ್ಚಿಸಿದರು. ತಂದೆ ಜನಕಮುನಿ, ತಾಯಿ ಗಂಗಮ್ಮ ಮಗನ ಸಾವಿನ ನೋವು ತೋಡಿಕೊಂಡರು. ನಮ್ಮ ಮಗನ ಸಾವಿಗೆ ನ್ಯಾಯ ಸಿಗಬೇಕು ಎಂದು ಒತ್ತಾಯಿಸಿದರು.

ಪಿಎಸ್‌ಐ ಪರಶುರಾಮ್ ಸಾವಿನ ನಂತರ ಈಗಾಗಲೇ ಮರಣೋತ್ತರ ಪರೀಕ್ಷೆ ಮಾಡಲಾಗಿದೆ. ವಿಧಿವಿಜ್ಞಾನ ಸಂಸ್ಥೆಯ ವರದಿಯ ನಿರೀಕ್ಷೆಯಲ್ಲಿದ್ದೇವೆ. ಈ ಸಾವು ಗೃಹ ಸಚಿವನಾಗಿ ನನಗೆ ನೋವು ತರಿಸಿದೆ. ಇಡೀ ಕುಟುಂಬದ ಜವಾಬ್ದಾರಿ ಮೃತ ಪರಶುರಾಮ್ ಮೇಲೆ ಇತ್ತು. ಅವರ ಅಗಲಿಕೆ ಇಡೀ ಕುಟುಂಬವನ್ನು ಸಂಕಷ್ಟಕ್ಕೆ ದೂಡಿದೆ. ಸರಕಾರ ಗಂಭೀರವಾಗಿ ಪರಿಗಣಿಸಿದ್ದು, ಈಗಾಗಲೇ ಸಿಐಡಿ ತನಿಖೆಗೆ ಒಪ್ಪಿಸಲಾಗಿದೆ. ತನಿಖಾ ವರದಿ ಆಧರಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾರಟಗಿ ತಾಲೂಕು ಸೋಮನಾಳ ಗ್ರಾಮಕ್ಕೆ ಆಗಮಿಸಿದ್ದ ಗೃಹ ಸಚಿವ ಜಿ.ಪರಮೇಶ್ವರ ಮೃತ ಪರಶುರಾಮ್ ತಂದೆ– ತಾಯಿ ಹಾಗೂ ಪತ್ನಿ ಶ್ವೇತಾ ಜತೆ ಚರ್ಚಿಸಿದರು.

ಸಮಾಚಾರ ಸಣ್ಣದಲ್ಲ

ವಿದ್ಯುತ್ ಶಾಕ್: ತಂದೆ-ಮಗ ಸಾವು

ಹಾವೇರಿ: ಪಂಪ್ ಸೆಟ್ ದುರಸ್ತಿ ಮಾಡುತ್ತಿದ್ದಾಗ ವಿದ್ಯುತ್ ತಗುಲಿ ತಂದೆ-ಮಗ ಸಾವನ್ನಪ್ಪಿರುವ ಘಟನೆ ಜಿಲ್ಲೆಯ ರಾಣೇಬೆನ್ನೂರು ತಾಲ್ಲೂಕಿನ ಪತ್ತೇಪುರ ಗ್ರಾಮದಲ್ಲಿ ಸಂಭವಿಸಿದೆ. ಮೃತರನ್ನು ಕರಬಸಪ್ಪ ಕಡೇನಾಯಕನಹಳ್ಳಿ(50) ಹಾಗೂ ಅವರ ಪುತ್ರ ದರ್ಶನ (26) ಎಂದು ಗುರುತಿಸಲಾಗಿದೆ. ಕರಬಸಪ್ಪ ಮತ್ತು ದರ್ಶನ ಇಬ್ಬರೂ ಸೇರಿಕೊಂಡು ಪಂಪ್‌ಸೆಟ್ ದುರಸ್ತಿ ಮಾಡಲು ಮುಂದಾಗಿದ್ದರು. ಭತ್ತದ ಬೆಳೆಗೆ ನೀರು ಹಾಯಿಸಲು ಮೋಟಾರ್ ಆನ್ ಮಾಡಲು ಹೋದಾಗ ಈ ದುರ್ಘಟನೆ ನಡೆದಿದೆ. ವಿದ್ಯುತ್ ಸ್ಪರ್ಶಕ್ಕೆ ಪಂಪ್‌ಸೆಟ್ ಮೇಲೆಯೇ ಬಿದ್ದು ಇಬ್ಬರೂ ಸ್ಥಳದಲ್ಲೇ ಅಸುನೀಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜೀನಾಮೆ ಕೇಳಲು ಬಿಜೆಪಿಗೆ ಅಧಿಕಾರವಿಲ್ಲ

ಶಿವಮೊಗ್ಗ: ಮುಖ್ಯಮಂತ್ರಿ ಸಿದ್ದರಾಮಯ್ಯನವರ ರಾಜೀನಾಮೆ ಕೇಳಲು ಬಿಜೆಪಿಗರಿಗೆ ಯಾವುದೇ ಅಧಿಕಾರವಿಲ್ಲ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ವಾಗ್ದಾಳಿ ನಡೆಸಿದರು. ಜಿ.ಪಂ. ಕಚೇರಿ

ಆವರಣದಲ್ಲಿ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿ ತಿಯ ಕಚೇರಿ ಉದ್ಘಾಟಿಸಿ ಅವರು ಮಾತನಾಡಿ, ಸಿಎಂ ಸಿದ್ದರಾಮಯ್ಯನವರ ರಾಜೀನಾಮೆ ಕೇಳಲು ಸಿ.ಟಿ.ರವಿ ಯಾರು? ನಾರಾಯಣಸ್ವಾಮಿ ಯಾರು? ಅವರೇನು ಕಾಂಗ್ರೆಸ್ ಪಕ್ಷದವರಾ ಎಂದು ಪ್ರಶ್ನಿಸಿದರು. ಈ ಬಗ್ಗೆ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ತೀರ್ಮಾನ ಮಾಡಬೇಕು. ಯಾರು ತಿಪ್ಪರಲಾಗ ಹೊಡೆದರೂ ಸಿದ್ದರಾಮಯ್ಯ ರಾಜೀನಾಮೆ ಕೊಡಲ್ಲ ಎಂದರು.

ಆತ್ಮಹತ್ಯೆಗೆ ಶರಣಾದ ಮುಖ್ಯೋಪಾಧ್ಯಾಯ

ವಿಜಯಪುರ: ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ಸಮೀಪದ ನಾಗೂರ ಗ್ರಾಮದ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯ ಸಿ.ಎಸ್.ಹಡಪದ ಶಾಲೆಯ ಶಿಕ್ಷಕರ ಕೊಠಡಿಯಲ್ಲೇ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಕಳೆದ 2 ವರ್ಷದಿಂದ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಹಡಪದ ಅವರು ಕಳೆದ ಒಂದು ವರ್ಷದಿಂದ ಪ್ರಭಾರಿ ಮುಖ್ಯೋಪಾಧ್ಯಾಯರಾಗಿ ಅಧಿಕಾರ ವಹಿಸಿಕೊಂಡಿದ್ದರು ಎನ್ನಲಾಗಿದೆ. ಶಾಲಾ ಅವಧಿಯಲ್ಲೇ ಮಧ್ಯಾಹ್ನ 3:30ರ ಸುಮಾರಿಗೆ ಶಿಕ್ಷಕರ ಕೊಠಡಿ ಯಲ್ಲಿ ಯಾರು ಇರದ ವೇಳೆ ನೇಣು ಬಿಗಿದುಕೊಂಡಿದ್ದಾರೆ. ಶಾಲೆ ಅವಧಿ ಮುಗಿದ ಬಳಿಕ ಪ್ರಕರಣ ಬೆಳಕಿಗೆ ಬಂದಿದೆ. ಆತ್ಮಹತ್ಯೆಗೆ ನಿಖರ ಕರಣ ತಿಳಿದುಬಂದಿಲ್ಲ, ಬಸವನ ಬಾಗೇವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

{ ಜಿ. ಪರಮೇಶ್ವರ } ಗೃಹ ಸಚಿವ

ಪಿಎಸ್‌ಐ ಪರಶುರಾಮ್ ಸಾವಿನ ಪ್ರಕರಣದಲ್ಲಿ ವಿರೋಧ ಪಕ್ಷಗಳ ಮಾತಿಗೆ ನಾನು ಉತ್ತರ ಕೊಡುವುದಿಲ್ಲ. ಕೇವಲ 7 ತಿಂಗಳಿಗೆ ಏಕೆ ವರ್ಗಾವಣೆ ಮಾಡಲಾಗಿದೆ ಎಂಬುದು ಕೂಡ ತನಿಖೆಯಲ್ಲಿ ಗೊತ್ತಾಗಲಿದೆ. ವರ್ಗಾವಣೆ ಮಾಡಿದ ಅಧಿಕಾರಿ ವಿರುದ್ಧ ಈ ಹಂತದಲ್ಲಿ ಕ್ರಮ ಕೈಗೊಳ್ಳಲು ಆಗದು. ತನಿಖೆ ವರದಿ ಮೊದಲು ನಮ್ಮ ಕೈ ಸೇರಲಿ. ನಂತರ ಮಾತನಾಡೋಣ.

ಬೆಳಗ್ಗೆ ಮದುವೆ, ಮಧ್ಯಾಹ್ನ ಜಗಳ, ಸಂಜೆ ಮರ್ಡರ್

ಕೋಲಾರ: ಪರಸ್ಪರ ಪ್ರೀತಿಸಿ ಒಪ್ಪಿ ಬುಧವಾರ ಬೆಳಗ್ಗೆ ಮದುವೆಯಾದ ನವಜೋಡಿ, ಮಧ್ಯಾಹ್ನ ಮಾರಕಾಸ್ತ್ರಗಳಿಂದ ಹೊಡೆದಾಡಿಕೊಂಡ ಪರಿಣಾಮ ನವವಧು ಸಾವನ್ನಪ್ಪಿದ್ದಾಳೆ. ಮದುಮಗನ ಸ್ಥಿತಿ ಚಿಂತಾಜನಕವಾಗಿದೆ.

ಕೋಲಾರ ಜಿಲ್ಲೆಯ ಕೆಜಿಎಫ್ ತಾಲ್ಲೂಕಿನ ಚಂಬರಸನಹಳ್ಳಿಯಲ್ಲಿ ಘಟನೆ ನಡೆದಿದೆ. ಆಂಧ್ರದ ಬೈನಪಲ್ಲಿ ಗ್ರಾಮದ ಲಿಖಿತಾಶ್ರೀ ಮೃತಪಟ್ಟಿದ್ದಾಳೆ. ಚಂಬರಸನಹಳ್ಳಿಯ ನವೀನ್ ಸ್ಥಿತಿ ಗಂಭೀರವಾಗಿದೆ. ಬುಧವಾರ ಬೆಳಗ್ಗ 11.30ಕ್ಕೆ ಮದುವೆ ನಡೆದಿದ್ದು ಕೆಲವೇ ಗಂಟೆಗಳಲ್ಲಿ ಗಂಡ ಹಂಡತಿ ಜಗಳ ಆಡಿಕೊಂಡಿದ್ದಾರೆ. ನಂತರ ರೂಂ ಸೇರಿದ ದಂಪತಿ ಹೊಡೆದಾಡಿಕೊಂಡಿದ್ದು ಇಬ್ಬರಿಗೂ ಗಂಭೀರ ಗಾಯಗಳಾಗಿದ್ದನ್ನು ಗಮನಿಸಿದ ನೆಂಟರು ದಂಪತಿಯನ್ನು ಕೆಜಿಎಫ್ ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಿದರೂ ಲಿಖಿತ ಕೊನೆಯುಸಿರೆಳಿದಿದ್ದಾರೆ. ಪ್ರಾಥಮಿಕ ಚಿಕಿತ್ಸೆಯ ನಂತರ ನವೀನನ್ನು ಕೋಲಾರದ ಮೆಡಿಕಲ್ ಕಾಲೇಜಿಗೆ ರವಾನೆ ಮಾಡಿದ್ದು ಐಸಿಯುದಲ್ಲಿ ಚಿಕಿತ್ಸೆ ಮುಂದುವರೆದಿದೆ. ಆಂಡರ್ಸನ್ ಪೇಟೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನವ ವಧು ಕೊಂದ ವರನ ಸ್ಥಿತಿ ಗಂಭೀರ

ಒಲ್ಲದ ಮದುವೆ- ಜಗಳದ ಗೊಡವೆ: ಪರಸ್ಪರ ಸಂಬಂಧಿಕರಾಗಿದ್ದ ಲಿಖಿತ ಶ್ರೀ ಮತ್ತು ನವೀನ್ ಮದುವೆ 4 ತಿಂಗಳ ಹಿಂದೆ ನಿಶ್ಚಯ ಆಗಿತ್ತಾದರೂ ನಂತರ ಕ್ಯಾನ್ಸಲ್ ಸಹಾ ಆಗಿತ್ತು. ಆದರೆ ಸಂಬಂಧಿಕರು, ಸ್ನೇಹಿತರ ಮಧ್ಯಸ್ತಿಕೆಯಿಂದಾಗಿ ಪುನಃ ಸಂಧಾನ ನಡೆದು ಕಳೆದವಾರ ಮದುವೆ ದಿನಾಂಕ ನಿಗದಿ ಮಾಡಲಾಗಿತ್ತು. ಮದುವೆ ಶಾಸ್ತ್ರದಲ್ಲಿ ಲಿಖಿತ ಲವಲವಿಕೆಯಿಂದ ಇದ್ದರೂ ನವೀನ್ ಅನ್ಯಮನಸ್ಕನಾಗಿ ಚಿಂತಾ ಕ್ರಾಂತನಾಗಿದ್ದನಾದರೂ ಎಲ್ಲವೂ ಸರಿ ಹೋಗುತ್ತದೆ ಎಂದು ನೆಂಟರು ಅಂದುಕೊಂಡಿದ್ದರು. ಆದರೆ ಮಧ್ಯಾಹ್ನ ಊಟ ಮಾಡುವಾಗಲೇ ಆರಂಭವಾದ ಗಲಾಟೆ ಸಂಜೆ 6 ಗಂಟೆ ವೇಳೆಗೆ ಕೊಲೆಯಲ್ಲಿ ಅಂತ್ಯಕಂಡಿದೆ.

ಕಾರ್ಖಾನೆಗೆ ಬೆಂಕಿ: ಒಬ್ಬ ಸಾವು

ಘಟನಾ ಸ್ಥಳಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸೊಸೆ ಹಿತಾ ಮೃನಾಲ್ ಭೇಟಿ

ಬೆಳಗಾವಿ: ಬೆಳಗಾವಿ ತಾಲೂಕಿನ ನಾವಗೆ ಗ್ರಾಮದ ಹೊರವಲಯದಲ್ಲಿರುವ ಸ್ನೇಹಂ ಅಂತಾರಾಷ್ಟ್ರೀಯ ಇನ್ಸುಲಿನ್ ಟೇಪ್ ಉತ್ಪಾದನಾ ಕಾರ್ಖಾನೆಗೆ ಬೆಂಕಿ ತಗುಲಿದ ಪರಿಣಾಮ ಘಟನೆಯಲ್ಲಿ ಓರ್ವ ಕಾರ್ಮಿಕ ಮೃತಪಟ್ಟಿದ್ದು ಮೂವರು ಗಂಭೀರವಾಗಿ ಗಾಯ ಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮಂಗಳವಾರ ರಾತ್ರಿ ನಾವಗೆ ಕಾರ್ಖಾನೆಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದ ಹೊತ್ತಿಕೊಂಡ ಬೆಂಕಿ ನೋಡ ನೋಡುತ್ತಿದ್ದಂತೆ ಇಡೀ ಕಾರ್ಖಾನೆ ವ್ಯಾಪಿಸಿತ್ತು. ಘಟನೆಯಲ್ಲಿ ಮಾರ್ಕಂಡೇಯ ನಗರದ ಯಲ್ಲಪ್ಪ ಗುಂಡ್ಯಾಗೋಳ (20) ಸಂಪೂರ್ಣ ಸುಟ್ಟು ಕರಕಲಾದ ಯುವಕ. ಬೆಳಗಾವಿಯ ಮಾರುತಿ ನಾರಾಯಣ ಕಳವೇಕರ (32), ಹಳೆ ಬೆಳಗಾವಿಯ ಯಲ್ಲಪ್ಪ ಸಲಗುಡೆ (35) ಝೂಪವಾಡಿಯ ರಂಜಿತ್ ಪಾಟೀಲ (39) ಈ ಮೂವರು ಕಾರ್ಮಿಕರು ಗಂಭೀರವಾಗಿ ಗಾಯಗೊಂಡಿದ್ದು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸುಮಾರು 12 ಗಂಟೆಗಳ ಕಾಲ ಬೆಂಕಿಯ ಆರ್ಭಟಕ್ಕೆ ಹೊತ್ತಿ ಉರಿದ ಕಾರ್ಖಾನೆ ಸಂಪೂರ್ಣ ಸುಟ್ಟು ಹೋಗಿದೆ. ಬೆಂಕಿ ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಹರಸಾಹಸಪಟ್ಟರು. ಘಟನಾ ಸ್ಥಳಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸೊಸೆ ಹಿತಾ ಮೃನಾಲ್ ಭೇಟಿ ನೀಡಿ ಮೃತ ಯುವಕನ ಕುಟುಂಬದವರಿಗೆ ಸಾಂತ್ವನ ಹೇಳಿದರು. ನಂತರ ಘಟನೆಯಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಒಡೆಯುತ್ತಿದ್ದವರನ್ನು ಭೇಟಿ ಯಾಗಿ ಆರೋಗ್ಯ ವಿಚಾರಿಸಿದರು. ಈ ಸಂದರ್ಭದಲ್ಲಿ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮಗನ ಕಳೇಬರ ಪ್ಲಾಸ್ಟಿಕ್ ಚೀಲದಲ್ಲಿ ಹೊತ್ತೊಯ್ದ ತಂದೆ

ಕಾರ್ಖಾನೆ ಅಗ್ನಿ ಅವಘಡದಲ್ಲಿ ಸಿಲುಕಿದ್ದ ಯುವ ಯಲ್ಲಪ್ಪ ಗುಂಡ್ಯಾಗೋಳ ದೇಹ ಸಂಪೂರ್ಣ ಸುಟ್ಟು ಕರಕಲಾಗಿತ್ತು. ಲಿಫ್ಟ್ ನಲ್ಲಿ ಸಿಲುಕಿದ ಸಂದರ್ಭದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಸಂಭವಿಸಿದ ಹಿನ್ನೆಲೆಯಲ್ಲಿ ಯುವಕ ಹೊರಬರಲಾಗದೆ ಜೀವ ಬಿಟ್ಟಿದ್ದಾನೆ. ಬುಧವಾರ ಯುವಕನ ಮೃತದೇಹ ಪತ್ತೆ ಹಚ್ಚಿದ ಅಗ್ನಿಶಾಮಕ ಸಿಬ್ಬಂದಿಗೆ ಮೃತದೇಹದ ಬೂದಿ ಮಾತ್ರ ಪತ್ತೆಯಾಗಿತ್ತು. ಎಫ್‌ಎಸ್‌ಎಲ್ ವರದಿ ನಂತರ ಅಳಿದುಳಿದ ದೇಹದ ತುಂಡನ್ನು ಜಿಲ್ಲಾಡಳಿತ ಒಂದು ಚೀಲದಲ್ಲಿ ಹಾಕಿ ತಂದೆಯ ಕೈಗೆ ಇಟ್ಟಿತ್ತು. ಈ ಸಂದರ್ಭದಲ್ಲಿ ಮಗನ ಕಳೇಬರವಿದ್ದ ಚೀಲ ಪಡೆದುಕೊಂಡ ಯಲ್ಲಪ್ಪನ ತಂದೆ ಕಣ್ಣೀರು ಹಾಕುತ್ತಿದ್ದ ದೃಶ್ಯ ಮನ ಕಲಕುವಂತಿತ್ತು.

ಮಂಗಳೂರು ವಿವಿಯಲ್ಲಿ ಎಸ್‌ಇಪಿ ಆರಂಭ

ಪದವಿ ತರಗತಿ ಆ. 12, ಸ್ನಾತಕೋತ್ತರ ಪದವಿ ತರಗತಿ ಸೆ.9ರಿಂದ ಆರಂಭ

ಮಂಗಳೂರು: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ರಾಜ್ಯ ಶಿಕ್ಷಣ ನೀತಿಯನ್ನು (ಎಸ್‌ಇಪಿ) 2024–25ನೇ ಸಾಲಿನಿಂದಲೇ ಜಾರಿಗೆ ತರುವ ನಿಟ್ಟಿನಲ್ಲಿ ರೂಪಿಸಿರುವ ಪಠ್ಯಕ್ರಮಗಳಿಗೆ ಕುಲಪತಿ ಪ್ರೊ.ಪಿ.ಎಲ್.ಧರ್ಮ ಅಧ್ಯಕ್ಷತೆಯಲ್ಲಿ ನಡೆದ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅನುಮೋದನೆ ಸಿಕ್ಕಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ನಿಖಾಯದ 27 ಕೋರ್ಸ್, ಕಲಾ ನಿಖಾಯದ 29 ಕೋರ್ಸ್‌ಗಳ ವಿವಿಧ ಸೆಮಿಸ್ಟರ್‌ಗಳ ಎಸ್‌ಇಪಿ ಪಠ್ಯಕ್ರಮಗಳಿಗೆ, ವಾಣಿಜ್ಯ ನಿಖಾಯದ 11 ಕೋರ್ಸ್‌ಗಳ ಮೊದಲ ಸೆಮಿಸ್ಟರ್‌ನ ಎಸ್‌ಇಪಿ ಪಠ್ಯಕ್ರಮಕ್ಕೆ ಮಾತ್ರ ಅನುಮೋದನೆ ನೀಡಲಾಯಿತು.

ಕುಲಪತಿ ಪ್ರೊ.ಪಿ.ಎಲ್.ಧರ್ಮ ಮಾತನಾಡಿ, ಪದವಿ ಕೋರ್ಸ್‌ಗಳಿಗೆ ರಾಜ್ಯ ಶಿಕ್ಷಣ ನೀತಿ ಆಯೋಗದ ಮಾರ್ಗಸೂಚಿಯನ್ವಯ ಅಧ್ಯಯನ ಮಂಡಳಿಗಳು ಪಠ್ಯಕ್ರಮಗಳನ್ನು ರೂಪಿಸಿವೆ. ಅಧ್ಯಯನ ಮಂಡಳಿಯ ಅಧ್ಯಾಪಕರಿಗೆ ಮುಕ್ತ ಸ್ವಾತಂತ್ರ್ಯ ನೀಡಿದ್ದೆವು. ಆಯಾ ಕ್ಷೇತ್ರದ ಈಚಿನ ಬೆಳವಣಿಗೆಗಳನ್ನು ಅವಲೋಕಿಸಿ ಉತ್ತಮ ಪಠ್ಯಕ್ರಮ ರೂಪಿಸಿದ್ದಾರೆ ಎಂದರು.

ಆ.12ರಿಂದ ಪದವಿ ತರಗತಿಗಳು ಆರಂಭ: 2024–25ನೇ ಸಾಲಿನ ಪದವಿ ತರಗತಿಗಳು ಆ.12ರಿಂದ, ಸ್ನಾತಕೋತ್ತರ ಪದವಿ ತರಗತಿಗಳು ಸೆ.9ರಿಂದ ಆರಂಭವಾಗಲಿವೆ. 2023–24ನೇ ಸಾಲಿನ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆ ಮೌಲ್ಯಮಾಪನ ಕಾರ್ಯ ಪ್ರಗತಿಯಲ್ಲಿದ್ದು, ಶೇ.70 ಪೂರ್ಣಗೊಂಡಿದೆ ಎಂದು ಕುಲಪತಿ ತಿಳಿಸಿದರು.

ಡಿಜಿಲಾಕರ್ ವ್ಯವಸ್ಥೆ

ಅಂಕಪಟ್ಟಿಗಳನ್ನು ಡಿಜಿಲಾಕರ್‌ನಲ್ಲಿ ಅಳವಡಿಸಬೇಕು ಎಂದು ಸರಕಾರ ಸೂಚನೆ ನೀಡಿದೆ. ಹಾಗಾಗಿ ಅದನ್ನು ಮುದ್ರಿಸಿಕೊಡಲು ಅವಕಾಶ ಇಲ್ಲ. ಅದನ್ನು ನಾವು ಪಾಲಿಸುತ್ತಿದ್ದೇವೆ. ವಿದ್ಯಾರ್ಥಿಗಳು ಅಂಕಪಟ್ಟಿಗಳನ್ನು ಡಿಜಿಲಾಕರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕು. ಎಲ್ಲ ಅಂಕಪಟ್ಟಿಗಳನ್ನು ನಾವು ನ್ಯಾಷನಲ್ ಅಕಾಡೆಮಿಕ್ ಡೆಪೊಸಿಟರಿ (ಎನ್‌ಎಡಿ) ಸಂಸ್ಥೆಗೆ ನೀಡಲಿದ್ದೇವೆ. ಅವರೇ ಅದನ್ನು ಕಾಲಕಾಲಕ್ಕೆ ಡಿಜಿಲಾಕರ್ ವ್ಯವಸ್ಥೆಯಲ್ಲಿ ಅಳವಡಿಸುತ್ತಾರೆ. ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ಅಂಕಪಟ್ಟಿಯಲ್ಲಿ ಅಂಕ ಮುದ್ರಿಸಲು ಅವಕಾಶವಿಲ್ಲ. ಕೇವಲ ದರ್ಜೆ ಮಾತ್ರ ನಮೂದಿಸಲಾಗುತ್ತದೆ. ಹೊಸ ವ್ಯವಸ್ಥೆ ಬಗ್ಗೆ ಅರಿವಿಲ್ಲದೇ ಕೆಲವು ವಿದ್ಯಾರ್ಥಿಗಳು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ ಎಂದರು.

ಮಂಗಳವಾರ ತಡರಾತ್ರಿ ನಡೆದ ಘಟನೆ | ಕಾರವಾರ–ಗೋವಾ ಸಂಚಾರ ಸ್ಥಗಿತ

ಮುರಿದುಬಿದ್ದ ಕಾಳಿ ಸೇತುವೆ, ಲಾರಿ ನದಿಗೆ

ಕಾರವಾರ: ಇಲ್ಲಿನ ಕೋಡಿಬಾಗದಲ್ಲಿರುವ ಕಾಳಿ ಸೇತುವೆಯು ಮಂಗಳವಾರ ತಡರಾತ್ರಿ ಕುಸಿದು ಬಿದ್ದಿದ್ದು, ಲಾರಿಯೊಂದು ನದಿ ಪಾಲಾಗಿದೆ.

ಮಂಗಲವಾರ ರಾತ್ರಿ 1 ಗಂಟೆ ವೇಳೆಗೆ ಕಾಳಿ ನದಿಯ ಹಳೆಯ ಸೇತುವೆಯು ಮೂರು ಕಡೆಗಳಲ್ಲಿ ಏಕಾಏಕಿ ಮುರಿದು ಬಿದ್ದಿತ್ತು. ಸೇತುವೆ ಮೇಲೆ ಸಾಗುತ್ತಿದ್ದ ಗೋವಾದಿಂದ ಕಾರವಾರ ಕಡೆಗೆ ಸಂಚರಿಸುತ್ತಿದ್ದ ಲಾರಿಯೊಂದು ನದಿಗೆ ಬಿದ್ದಿದೆ. ಲಾರಿ ಚಾಲಕ ಮುರುಗನ್ ಅವರನ್ನು ಸ್ಥಳೀಯ ಮೀನುಗಾರರು ರಕ್ಷಣೆ ಮಾಡಿದ್ದಾರೆ. ಚತುಷ್ಪಥ ರಾಷ್ಟ್ರೀಯ ಹೆದ್ದಾರಿ–66ರಲ್ಲಿನ ಕಾಳಿ ನದಿಗೆ ಎರಡು ಸೇತುವೆಗಳಿವೆ. ಗೋವಾ ಕಡೆಯಿಂದ ಕಾರವಾರದತ್ತ ವಾಹನಗಳು ಸಂಚರಿಸುತ್ತಿದ್ದ ಸೇತುವೆಯು ಮುರಿದು ಬಿದ್ದಿದೆ.

ಈ ಸೇತುವೆಯನ್ನು 1983ರಲ್ಲಿ ನಿರ್ಮಿಸಲಾಗಿತ್ತು. 2009ರಲ್ಲಿ ಸೇತುವೆಯ ಸಂಪೂರ್ಣ ದುರಸ್ತಿಗೆ ಪ್ರಯತ್ನಿಸಲಾಗಿತ್ತು. ಆದರೆ, ಅದು ಸಾಧ್ಯವಾಗಿರಲಿಲ್ಲ. ಭಾಗಶಃ ಮಾತ್ರ ದುರಸ್ತಿ ನಡೆಸಲಾಗಿತ್ತು. 2018ರಲ್ಲಿ ಇದೇ ಸೇತುವೆ ಪಕ್ಕದಲ್ಲಿ ಇನ್ನೊಂದು ಸೇತುವೆಯನ್ನು ನಿರ್ಮಿಸಲಾಗಿದೆ. ಸುರಕ್ಷತೆ ದೃಷ್ಟಿಯಿಂದ ಸದ್ಯ ಹೊಸ ಸೇತುವೆಯ ಮೇಲೆ ಸಂಚಾರ ನಿರ್ಬಂಧಿಸಿ ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಸೂಚಿಸಿದ್ದಾರೆ. ಹೀಗಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರವಾರದಿಂದ ಗೋವಾ ಕಡೆಗೆ ವಾಹನ ಸಂಚಾರ ಸ್ಥಗಿತಗೊಂಡಿದೆ.

ಕೋಡಿಬಾಗದಲ್ಲಿರುವ ಕಾಳಿ ಸೇತುವೆ ಕುಸಿದು ಬಿದ್ದಿರುವುದು.

ಕೇಂದ್ರ ಸರಕಾರ ಹೊಣೆ ಹೊರಬೇಕು

ಕಾಳಿನದಿ ಸೇತುವೆ ಕುಸಿತಕ್ಕೆ ಕೇಂದ್ರ ಸರಕಾರವೇ ಹೊಣೆ ಹೊರಬೇಕು. ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಲ್ಲಿ ಸಾಕಷ್ಟು ಅದ್ವಾನ ನಡೆದರೂ ಅವರು ಮೌನವಾಗಿರುವುದು ಅಚ್ಚರಿ ಮೂಡಿಸುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಹೇಳಿದರು. ಸೇತುವೆ ಕುಸಿತವಾದ ಸ್ಥಳಕ್ಕೆ ಭೇಟಿ ನೀಡಿ ಸುದ್ದಿಗಾರರ ಜತೆ ಮಾತ ನಾಡಿ, ರಾ. ಹೆದ್ದಾರಿ ಯೋಜನೆ ಕೇಂದ್ರ ಸರಕಾರಕ್ಕೆ ಸೇರಿರುವು ದರಿಂದ ರಾ. ಹೆದ್ದಾರಿ ಪ್ರಾಧಿಕಾರ, ಐಆರ್‌ಬಿ ಕಂಪನಿ ಮೇಲೆ ಕೇಂದ್ರದ ಹಿಡಿತ ಇದೆ. ಕಂಪನಿ ಈವರೆಗೆ ಹಲವು ಅವೈಜ್ಞಾನಿಕ ಕೆಲಸ ಮಾಡಿದ್ದರೂ ಅವರ ಮೇಲೆ ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ ಎಂದರು.

ವಿಶ್ವವಾಣಿ

ಸಂಪಾದಕೀಯ

ರಕ್ಷಣಾ ಕಾರ್ಯಕರ್ತರನ್ನು ಗೌರವಿಸೋಣ

ವಯನಾಡು ದುರಂತದಲ್ಲಿ ರಕ್ಷಣಾ ಕಾರ್ಯಾಚರಣೆ ಬಹುತೇಕ ಅಂತಿಮ ಘಟ್ಟ ತಲುಪಿದೆ. ಕಾರ್ಯಾಚರಣೆ ವೇಳೆ ಮುಂಡಕ್ಕೈ- ಚೂರಲ್ಮಲ ಮಧ್ಯೆ 24 ಗಂಟೆಗೊಳಗೆ ತಾತ್ಕಾಲಿಕ ತುರ್ತು ಸೇತುವೆಯನ್ನು ನಿರ್ಮಿಸಿ ನೂರಾರು ಜನರ ಪ್ರಾಣ ರಕ್ಷಣೆಯಲ್ಲಿ ಭಾಗಿಯಾಗಿದವರು ನಮ್ಮ ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಮದ್ರಾಸ್ ಎಂಜಿನಿಯರ್ಸ್ ಗ್ರೂಪ್‌ನ ಯೋಧರು. ಈ ತಂಡದ ಸದಸ್ಯರು ಪರಿಹಾರ ಕಾರ್ಯಾಚರಣೆ ಮುಗಿಸಿ ಬೆಂಗಳೂರಿನ ತಮ್ಮ ಮೂಲ ಶಿಬಿರಕ್ಕೆ ಮರಳಿದಾಗ ಇತರ ಯೋಧರು ವೀರೋಚಿತ ಸ್ವಾಗತ ನೀಡಿದರು. ಆದರೆ ಇವರನ್ನು ಸ್ವಾಗತಿಸಲು ನಮ್ಮ ಸರಕಾರದ ಪರವಾಗಿ ಅಲ್ಲಿ ಯಾರೂ ಇರಲಿಲ್ಲ. ಗಡಿ ಕಾಯುವ ಸೈನಿಕರು, ಯುದ್ಧದಲ್ಲಿ ಪಾಲ್ಗೊಂಡು ವೈರಿಗಳ ವಿರುದ್ಧ ಹೋರಾಡಿದ ಸೈನಿಕರನ್ನು ನಮ್ಮ ಸಮಾಜ ಗೌರವಿಸುತ್ತದೆ. ಆದರೆ ಪ್ರಾಕೃತಿಕ ವಿಕೋಪದಲ್ಲಿ ಪಾಲ್ಗೊಂಡು ನೂರಾರು ಜನರ ಪ್ರಾಣವುಳಿಸುವ ಯೋಧರಿಗೆ ಈ ರೀತಿಯ ವಿಶೇಷ ಗೌರವ ಸಿಗದೇ ಇರುವುದು ಬೇಸರದ ಸಂಗತಿ. ಇದೀಗ ಮಳೆ ಎಚ್ಚರಿಕೆಯ ನಡುವೆಯೇ ಗುಡ್ಡ ಕುಸಿತದಿಂದ ಮುಚ್ಚಿಹೋಗಿದ್ದ ರಸ್ತೆಗಳನ್ನು, ರೈಲು ಮಾರ್ಗವನ್ನು ಮತ್ತೆ ಪ್ರಯಾಣಕ್ಕೆ ತೆರವುಗೊಳಿಸಲಾಗುತ್ತಿದೆ. ಪ್ರಮುಖವಾಗಿ ಸಕಲೇಶಪುರದಲ್ಲಿ ಶಿರಾಡಿ ಘಾಟ್ ಹೆದ್ದಾರಿಯಲ್ಲಿ ವಾಹನ ಸಂಚಾರಕ್ಕೆ ಮತ್ತೆ ಅವಕಾಶ ಮಾಡಿಕೊಡಲಾಗಿದೆ. ಎಡಕುಮೇರಿ ಬಳಿ ಗುಡ್ಡ ಕುಸಿತದ ಕಾರಣಕ್ಕೆ ಸ್ಥಗಿತಗೊಂಡಿದ್ದ ರೈಲು ಸಂಚಾರ ಇಂದಿನಿಂದ (ಆಗಸ್ಟ್ 8) ಪುನರಾರಂಭಗೊಳ್ಳಲಿದೆ. ಅಂಕೋಲಾ ಹೆದ್ದಾರಿಯೂ ಈಗಾಗಲೇ ಸಂಚಾರಕ್ಕೆ ತೆರವಾಗಿದೆ. ಜೀವದ ಹಂಗು ತೊರೆದು ಹಗಲು ರಾತ್ರಿ ಎನ್ನದೇ ಇಲ್ಲಿ ಪರಿಹಾರ ಕಾರ್ಯಾಚರಣೆ ನಡೆಸಿದ್ದರಿಂದಲೇ ಇದು ಸಾಧ್ಯವಾಗಿದೆ. ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ರಾಷ್ಟ್ರೀಯ ವಿಪತ್ತು ನಿರ್ವಹಣಾ ದಳ (ಎನ್‌ಡಿಆರ್ ಎಫ್)ದ ಸದಸ್ಯರು, ನಾಗರಿಕ ಸಿಬ್ಬಂದಿ, ಅಧಿಕಾರಿಗಳು, ಸ್ಥಳೀಯ ಸ್ವಯಂ ಸೇವಾ ಸಂಘಟನೆಗಳ ಸದಸ್ಯರ ಸೇವೆಯನ್ನು ನಾವು ಗುರುತಿಸಲೇಬೇಕು. ಜುಲೈ 26ರಂದು ಸಕಲೇಶಪುರದ ಎಡಕುಮೇರಿಯ ಸೇತುವೆಯ ಕೆಳಭಾಗದಲ್ಲಿ ಸುಮಾರು 60 ಅಡಿ ಆಳಕ್ಕೆ ಮಣ್ಣು ಕುಸಿದಿತ್ತು. ಇದನ್ನು ಒಂದು ದಿನದ ಮಟ್ಟಿಗೆ ಹಾಗೆಯೇ ಬಿಟ್ಟಿದ್ದರೆ ಇಡೀ ಸೇತುವೆ ಉರುಳುವ ಅಪಾಯವಿತ್ತು. ರೈಲ್ವೆಯ 600ರಿಂದ 700 ಸಿಬ್ಬಂದಿ ಸುಮಾರು ನೂರು ವ್ಯಾಗನ್‌ನಷ್ಟು ಜಲ್ಲಿ, ಒಂದು ಲಕ್ಷ ಮರಳು ಚೀಲ ಬಳಸಿ ಜಡಿ ಮಳೆಯ ನಡುವೆಯೇ ಸಮರೋಪಾದಿಯಲ್ಲಿ ದುಡಿದು 10 ದಿನಗಳೊಳಗೆ ಹಳಿಯನ್ನು ಮರು ಸ್ಥಾಪಿಸಿದ್ದಾರೆ. ಇವರೆಲ್ಲರೂ ನಮ್ಮ ಯೋಧರು. ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಈ ನಾಗರಿಕ ಯೋಧರನ್ನು ಕರೆಸಿ ಗೌರವಿಸುವ ಕೆಲಸ ಆಗಬೇಕು.

ಸೊಂಪಾದಕೀಯ

ಇಂಗ್ಲಿಷ್ ಮಾತಾಡ್ಬೇಕು ಅಂದ್ರೆ..

ಇಂಗ್ಲಿಷ್ ಬರದಿದ್ದರೆ ಅದೊಂದು ಮಹಾಪರಾಧ ಎನ್ನುವ ಭಾವನೆ ಭಾರತೀಯರಲ್ಲಿ ಹೆಚ್ಚಾಗುತ್ತಿರುವುದನ್ನು ಗಮನಿಸಿ, ಅನೇಕರು ಇದನ್ನೇ ಬಂಡವಾಳ ಮಾಡಿಕೊಂಡು ಸ್ಪೋಕನ್ ಇಂಗ್ಲಿಷ್ ಕ್ಲಾಸ್‌ಗಳನ್ನು ಆರಂಭಿಸಿದ್ದರು. ಇದಾದ ಬಳಿಕ ಕಾನ್ವೆಂಟ್‌ಗೆ ಹೋದ್ರೆ ನಮ್ ಮಕ್ಳು ಇಂಗ್ಲಿಷ್‌ನಲ್ಲಿ ಪುಂಖಾನುಪುಂಖವಾಗಿ ಮಾತನಾಡುತ್ತಾರೆ ಎನ್ನುವ ಕಾರಣಕ್ಕೆ ಸಾಲ ಮಾಡಿ ಕಾನ್ವೆಂಟ್‌ಗೆ ಕಳಿಸೋದು ಈಗ ಸಾಮಾನ್ಯವಾಗಿದೆ. ಇಷ್ಟಾದರೂ ಅನೇಕ ಹುಡುಗರ ತಲೆಗೆ ಇಂಗ್ಲಿಷ್ ಹತ್ತೋಲ್ಲ ಅನ್ನೋ ಮಾತಿದೆ. ಈ ಪರಕೀಯ ಭಾಷೆಯನ್ನು ಕಲಿಯೋಕೆ, ಕಲಿಸೋಕೆ ಹತ್ತಾರು ಮಾರ್ಗಗಳನ್ನು ಅನೇಕರು ಕಂಡುಕೊಳ್ಳುತ್ತಿದ್ದಾರೆ. ಇಷ್ಟೆಲ್ಲ ಆದರೂ ಸರಿಯಾಗಿ ಇಂಗ್ಲಿಷ್ ಬರೋಲ್ಲ. ಇನ್ನೊಂದು ಭಾಗದಲ್ಲಿ ಒಂದು ಪೆಗ್ ಹೊಟ್ಟೆಗೆ ಬೀಳುತ್ತಿದ್ದಂತೆ ಷೇಕ್ಸ್‌ಪಿಯರ್ ನಾಚುವ ರೀತಿಯಲ್ಲಿ ನಮ್ಮ ಹುಡುಗ್ರು ಇಂಗ್ಲಿಷ್ ಶುರು ಹಚ್ಚಿಕೋತಾರೆ. ಅದರಲ್ಲಿಯೂ ಇಂಗ್ಲಿಷರು ಯಾವಾಗಲೂ ಕುಡಿಯೋ ಸ್ಕಾಚ್ ಏನಾದರೂ ಸಿಕ್ಕರಂತೂ, ಇಂಗ್ಲಿಷ್ ಬಿಟ್ಟು ಬೇರೆ ಭಾಷೆಯೇ ಬರೋಲ್ಲವೇನೋ ಎನ್ನುವ ರೀತಿಯಲ್ಲಿ ಮಾತಾಡ್ತಾರೆ. ಆದರೆ ಅನೇಕರಿಗೆ ಇಂಗ್ಲಿಷಿಗೂ ಎಣ್ಣೆಗೂ ಇರೋ ಸಂಬಂಧದ ಬಗ್ಗೆ ಗೊತ್ತಿಲ್ಲ. ಅದಕ್ಕೇ ಮಧ್ಯಪ್ರದೇಶದ ಒಂದು ಹಳ್ಳಿಯಲ್ಲಿ, 'ಇಂಗ್ಲಿಷ್ ಅನ್ನು ಮಾತಾಡಬೇಕಾ ಇಲ್ಲಿಗೆ ಬನ್ನಿ' ಅನ್ನೋ ಬೋರ್ಡ್ ಹಾಕಿದ್ದಾರಂತೆ. ಆದರೆ ಈ ಬೋರ್ಡ್ ಅನ್ನು ನೋಡಿಕೊಂಡು ಹೋದರೆ ನೀವು ಯಾವುದೇ ಶಾಲೆ ಅಥವಾ ಟುಟೋರಿಯಲ್‌ಗೆ ಹೋಗಲ್ಲ. ಬದಲಿಗೆ, ಮದ್ಯದ ಅಂಗಡಿಯಲ್ಲಿ ಹೋಗಿ ಕೂರುತ್ತೀರ. ಈ ಪೋಸ್ಟರ್ ಸದ್ಯಕ್ಕೆ ಸಾಮಾಜಿಕ ಜಾಲತಾಣದ ಹಾಟ್‌ಕೇಕ್ ಆಗಿದೆ. ಈ ಪೋಸ್ಟರ್‌ನ ಹಿಂದಿನ ರುವಾರಿ ಯಾರು ಅನ್ನೋದು ಗೊತ್ತಿಲ್ಲ. ಆದರೆ ಈ ಪೋಸ್ಟರ್ ಅನ್ನು ಸಿದ್ಧಪಡಿಸಿರೋನು ಮಾತ್ರ, ಒಂದಲ್ಲ ಎರಡು ಪೆಗ್ ಹಾಕಿದಾಗಲೇ ಐಡಿಯಾ ಸಿಕ್ಕಿದೆ ಅನ್ನೋದಂತು ಸ್ಪಷ್ಟ. ಏನೇ ಆಗ್ಲಿ, 'ಸರ್ವರೋಗಕ್ಕೂ ಸಾರಾಯಿ ಮದ್ದು' ಅನ್ನೋ ರೀತಿಯಲ್ಲಿ, ಮುಂದೊಂದು ದಿನ ಸರ್ವಭಾಷೆಗೂ ಸಾರಾಯಿಯೇ ಮೂಲ ಅನ್ನೋ ಗಾದೆ ಹುಟ್ಟಿಕೊಳ್ಳದಿದ್ದರೆ ಸಾಕಷ್ಟೆ!

ಸಂಪಾದಕರ ಸದ್ಯಶೋಧನೆ

ಜೈಲ್ ಸಿಂಗ್ ಸಣ್ಣತನ

ಇತ್ತೀಚೆಗೆ, 1966ನೇ ಬ್ಯಾಚಿನ ಐಪಿಎಸ್ ಅಧಿಕಾರಿ ಗುರ್ಬಚನ್ ಜಗತ್ ಅವರು ಬರೆದ ಅಂಕಣ ಬರಹವೊಂದನ್ನು ಓದುತ್ತಿದ್ದೆ. ಅವರು ಪಟಿಯಾಲದ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದಾಗ ನಡೆದ ಒಂದು ಪ್ರಸಂಗವನ್ನು ಮೆಲುಕು ಹಾಕಿದ್ದಾರೆ. ಆ ದಿನಗಳಲ್ಲಿ ಪತ್ರಿಕೆಗಳೆಂದರೆ, ಅಧಿಕಾರದಲ್ಲಿದ್ದವರು ಎಷ್ಟು ಹೆದರುತ್ತಿದ್ದರು ಎಂಬುದನ್ನು ಪ್ರತಿಪಾದಿಸಲು ಅವರು ಆ ಪ್ರಸಂಗವನ್ನು ಪ್ರಸ್ತಾಪಿಸಿದ್ದರು. ಆಗ ಗ್ಯಾನಿ ಜೈಲ್ ಸಿಂಗ್ ಅವರು ಪಂಜಾಬಿನ ಮುಖ್ಯಮಂತ್ರಿಯಾಗಿದ್ದರು. 1975ರ ಒಂದು ದಿನ, ಜೈಲ್ ಸಿಂಗ್ ಅವರು ತಮ್ಮ ಕಾರಿನಲ್ಲಿ ವಿಹಾರ ಹೊರಟಿದ್ದರು. ತಮ್ಮ ಕಾರಿನಲ್ಲಿ ಕುಳಿತುಕೊಳ್ಳುವಂತೆ ಗುರ್ಬಚನ್ ಜಗತ್‌ಗೆ ಹೇಳಿದರಂತೆ. ಮುಖ್ಯಮಂತ್ರಿಯವರ ಆದೇಶವನ್ನು ಮೀರಲು ಸಾಧ್ಯವೇ? ಗುರ್ಬಚನ್ ಜಗತ್ ಮುಖ್ಯಮಂತ್ರಿ ಕಾರಿನಲ್ಲಿ ಕುಳಿತರಂತೆ. ಕಾರು ಪಟಿಯಾಲ ಜೈಲಿನ ಮುಂದೆ ಹೋಗುತ್ತಿದ್ದಾಗ ಜೈಲ್ ಸಿಂಗ್, 'ಈಗ ಜೈಲಿನಲ್ಲಿರುವ ಖೈದಿಗಳಿಗೆ ಸುದ್ದಿಯ ಕೊರತೆ ಇಲ್ಲ ಬಿಡಿ' ಎಂದು ಹೇಳಿದರಂತೆ. ಗುರ್ಬಚನ್ ಜಗತ್‌ಗೆ ಮುಖ್ಯಮಂತ್ರಿಗಳ ವ್ಯಂಗ್ಯ ಅರ್ಥವಾಯಿತಂತೆ. ಕಾರಣ ಆ ದಿನಗಳಲ್ಲಿ 'ಹಿಂದ್ ಸಮಾಚಾರ್' ಸಮೂಹದ ಮಾಲೀಕ ಲಾಲಾ ಜಗತ್ ನಾರಾಯಣ ಅವರನ್ನು ಬಂಧಿಸಿ ಪಟಿಯಾಲ ಜೈಲಿನಲ್ಲಿ ಇರಿಸಲಾಗಿತ್ತು. ಆದರೆ ಕಾರಿನಲ್ಲಿ ಮುಖ್ಯಮಂತ್ರಿ ಜತೆಗಿದ್ದ ಐಎಎಸ್ ಅಧಿಕಾರಿಗೆ ಮುಖ್ಯಮಂತ್ರಿ ಹೇಳಿದ್ದು ಗೊತ್ತಾಗಲಿಲ್ಲ. ಅವರು, 'ಸಿಎಂ ಸಾಬ್, ಖೈದಿಗಳಿಗೇಕೆ ಸುದ್ದಿಯ ಕೊರತೆ ಇಲ್ಲ?' ಎಂದು ಕೇಳಿದರಂತೆ. ಅದಕ್ಕೆ ಜೈಲ್ ಸಿಂಗ್, 'ಪತ್ರಕರ್ತರನ್ನು ಜೈಲಿನಲ್ಲಿಟ್ಟರೆ, ಖೈದಿಗಳಿಗೆ ಪತ್ರಿಕೋದ್ಯಮ ಗೊತ್ತಾಗುತ್ತದೆ ಅಲ್ಲವೇ? ಪತ್ರಿಕಾ ಮಾಲೀಕರೇ ಈಗ ಜೈಲಿನಲ್ಲಿದ್ದಾರಲ್ಲ?' ಎಂದು ಹೇಳಿ ನಕ್ಕರಂತೆ. 'ಗುರ್ಬಚನ್ ಜಗತ್ ಜೀ, ಲಾಲಾ ಜಗತ್ ನಾರಾಯಣ ಅವರ ಆರೋಗ್ಯ ಹೇಗಿದೆಯಂತೆ?' ಎಂದು ಕೇಳಿದರಂತೆ. ಅದಕ್ಕೆ ಗುರ್ಬಚನ್ ಜಗತ್, 'ಜೈಲಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ' ಎಂದು ಹೇಳಿದರಂತೆ. 'ನೋಡಿ, ಈಗ ನಾವು ನಮ್ಮ ಅಧಿಕಾರವನ್ನು ಚೆನ್ನಾಗಿ ಚಲಾಯಿಸಬೇಕು. ಖುಷಿಯಿಂದ ರಾಜ್ಯವನ್ನಾಳಬೇಕು. (ಜೈಲಿನ ಕಡೆ ತೋರಿಸುತ್ತ) ಅಲ್ಲಿರುವವರು ಏನು ಬರೆಯುತ್ತಾರೆಂಬ ಬಗ್ಗೆ ಜಾಸ್ತಿ ತಲೆಬಿಸಿ ಮಾಡಿಕೊಳ್ಳಬಾರದು' ಎಂದರಂತೆ. ಲಾಲಾ ಜಗತ್ ನಾರಾಯಣ ಅವರು ಜೈಲು ಸೇರಿದ್ದರಿಂದ ಜೈಲ್ ಸಿಂಗ್ ನಿರಾಳರಾಗಿದ್ದರು. ಅದಕ್ಕೂ ಒಂದು ವಾರ ಮೊದಲು, ಜೈಲ್ ಸಿಂಗ್ ಪಟಿಯಾಲ ಜೈಲಿಗೆ ಭೇಟಿ ನೀಡಿ, ಲಾಲಾ ಜಗತ್ ನಾರಾಯಣರ ಆರೋಗ್ಯವನ್ನು ವಿಚಾರಿಸಿಕೊಂಡು ಬಂದಿದ್ದರು. ಆದರೆ ಅವರು ಜೈಲು ಸೇರುತ್ತಿದ್ದಂತೆ ಜೈಲ್ ಸಿಂಗ್ ವರಸೆಯೇ ಬದಲಾಗಿತ್ತು. 'ಆ ಮಹಾಶಯ (ಲಾಲಾ ಜಗತ್ ನಾರಾಯಣ) ನನ್ನನ್ನು ಪ್ರತಿದಿನ ಕಾಡಿದ. ಈ ದಿನ ಬೆಳಗ್ಗೆ ಏನು ಕಾದಿದೆಯೋ ಎಂಬ ಅಂಜಿಕೆಯಲ್ಲೇ ನಾನು ಪ್ರತಿ ಬೆಳಗನ್ನು ಸ್ವಾಗತಿಸಿದ್ದಾಯಿತು. ಅಂಥ ಮನುಷ್ಯ ಜೈಲು ಸೇರಿದ ಬಳಿಕ ಈಗ ನೆಮ್ಮದಿ ಸಿಕ್ಕಂತಾಗಿದೆ' ಎಂದು ಜೈಲ್ ಸಿಂಗ್ ತಮ್ಮ ಅಸಹನೆ ಮತ್ತು ಸಿಟ್ಟನ್ನು ತೋಡಿಕೊಂಡರಂತೆ. ಗುರ್ಬಚನ್ ಜಗತ್ ಅವರಿಗೆ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತವರು ಇಷ್ಟು ಸಣ್ಣದಾಗಿ ಯೋಚಿಸುತ್ತಾರಲ್ಲ ಎಂದು ಅನಿಸಿತಂತೆ. ಅಷ್ಟಕ್ಕೂ ಜೈಲ್ ಸಿಂಗ್ ಅವರು ಗುರ್ಬಚನ್ ಜಗತ್ ಅವರನ್ನು ತಮ್ಮ ಕಾರಿನಲ್ಲಿ ಕುಳ್ಳಿರಿಸಿಕೊಳ್ಳಲೂ ಕಾರಣವಿತ್ತು. ಅವರು ಲಾಲಾ ಜಗತ್ ನಾರಾಯಣ ಅವರಿಗೆ ಆತ್ಮೀಯರಾಗಿದ್ದರು. ಅವರು ಜೈಲಿನಲ್ಲಿರುವುದನ್ನು ಕಂಡು ಮುಖ್ಯಮಂತ್ರಿಗಳು ಸಂತಸಪಟ್ಟ ಸಂಗತಿಯನ್ನು ನೇರವಾಗಿ ನಾರಾಯಣರಿಗೆ ತಿಳಿಸಲಿ ಎಂಬುದೂ ಉದ್ದೇಶವಾಗಿತ್ತು. ಕಾರಣ ಎಂದೂ ಕಾರನ್ನೇರಿ ಎಂದು ಹೇಳದ ಜೈಲ್ ಸಿಂಗ್, ಆ ದಿನ ಗುರ್ಬಚನ್ ಜಗತ್ ಅವರನ್ನು ಮಾತ್ರ ತಮ್ಮ ವಾಹನದಲ್ಲಿ ಕುಳ್ಳಿರಿಸಿಕೊಂಡಿದ್ದರು. ಅದನ್ನು ಬಿಟ್ಟರೆ ಅವರಿಗೆ ಬೇರೆ ಕಾರಣಗಳೇ ಇರಲಿಲ್ಲ. ಅದಾದ ಬಳಿಕ ಲಾಲಾ ಜಗತ್ ನಾರಾಯಣರನ್ನು ಹಲವು ಸಲ ಭೇಟಿ ಮಾಡಿದರೂ, ಈ ವಿಷಯವನ್ನು ಮಾತ್ರ ಗುರ್ಬಚನ್ ಜಗತ್ ಬೇರೆಯವರಿಗೆ ಹೇಳಲಿಲ್ಲ. ಇಬ್ಬರೂ ನಿಧನರಾದ ಬಳಿಕ ಆ ಅಂಕಣದಲ್ಲಿ ಪ್ರಸ್ತಾಪಿಸಿದ್ದರು.

ಪ್ರಶಸ್ತಿ ಬಂದ್ರೆ ಸಮ್ಮಾನ, ಅದಕ್ಕಿಂತ ಜಾಸ್ತಿ ಅನುಮಾನ!

ಜೀವಮಾನದಲ್ಲಿ ಸ್ವಾಮಿ ವಿವೇಕಾನಂದರಿಗೆ, ರಾಮಕೃಷ್ಣ ಪರಮಹಂಸರಿಗೆ, ಮಹಾತ್ಮ ಗಾಂಧಿಯವರಿಗೆ ಯಾವ ಪ್ರಶಸ್ತಿ ಬಂದಿದೆ? ಸಾಧನೆ ಮಾಡಿ ಪ್ರಶಸ್ತಿ ಪಡೆಯದಿರುವುದೇ ದೊಡ್ಡ ಸಾಧನೆ. ಮಹಾತ್ಮ ಗಾಂಧಿ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಕೊಟ್ಟಿದ್ದರೆ ಅವರು ಅದನ್ನು ಪಡೆದ ಎಲ್ಲರ ಸಾಲಿಗೆ ಸೇರಿಬಿಡುತ್ತಿದ್ದರು. ಹತ್ತರಲ್ಲಿ ಹನ್ನೊಂದನೆಯವರಾಗುತ್ತಿದ್ದರು.

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್

vbhat@me.com

ಕೆಲವು ವರ್ಷಗಳ ಹಿಂದೆ ನಾನೊಂದು ವಕ್ರತುಂಡೋಕ್ತಿ ಬರೆದಿದ್ದೆ. ಅದೇನೆಂದರೆ, 'ಜೀವನದಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ಕೊಡುತ್ತಾರೆ. ಆದರೆ ಪ್ರಶಸ್ತಿ ಪಡೆದುಕೊಳ್ಳುವುದೇ ನಿಜವಾದ ಸಾಧನೆ'. ಇಂದು ಜೀವನದಲ್ಲಿ ಸಾಧನೆ ಮಾಡುವುದು ದೊಡ್ಡದಲ್ಲ. ನಮ್ಮ ನಡುವೆ ಅಗಾಧ ಸಾಧನೆ ಮಾಡಿದವರು ಅನೇಕರಿದ್ದಾರೆ. ಆದರೆ ಅವರಾರಿಗೂ ಪ್ರಶಸ್ತಿ ಬಂದಿಲ್ಲ.

ಅಂದರೆ ಸಾಧನೆ ಮಾಡಿದವರಿಗೆಲ್ಲ ಪ್ರಶಸ್ತಿ ಬಂದೇ ಬರುತ್ತದೆ ಎಂದು ಹೇಳಲಾಗುವುದಿಲ್ಲ. ಆದರೆ ಸಾಧನೆ ಮಾಡಿಯೂ ಪ್ರಶಸ್ತಿ ಪಡೆದುಕೊಂಡಿದ್ದರೆ ಅದು ನಿಜವಾದ ಪ್ರಶಸ್ತಿ. ಇನ್ನು, ಸಾಧನೆಯನ್ನೇ ಮಾಡದೇ ಪ್ರಶಸ್ತಿ ಪ(ಹೊ)ಡೆದುಕೊಂಡಿದ್ದಾರೆ ಅಂದರೆ ಅದು ಇನ್ನೂ ದೊಡ್ಡ ಸಾಧನೆ. ಅಂದರೆ ಸಾಧನೆಗೂ ಪ್ರಶಸ್ತಿಗೂ ಯಾವುದೇ ಸಂಬಂಧವಿಲ್ಲ.

ಇತ್ತೀಚೆಗೆ ನನಗೆ ಸ್ನೇಹಿತರೊಬ್ಬರು ಫೋನ್ ಮಾಡಿ, 'ನೀವು ನಮ್ಮ ಕಾರ್ಯಕ್ರಮಕ್ಕೆ ಬರಲು ಒಪ್ಪಿದ್ದು ಬಹಳ ಸಂತಸ ತಂದಿದೆ. ದಯವಿಟ್ಟು ನಿಮ್ಮ ಬಯೋಡಾಟಾ ಕಳಿಸಿಕೊಡಿ. ಅಂದು ನಿಮ್ಮನ್ನು ಪರಿಚಯಿಸುವ ಹೊಣೆಗಾರಿಕೆ ನನಗೇ ಕೊಟ್ಟಿದ್ದಾರೆ' ಎಂದು ಹೇಳಿದರು. ನಾನು ಆಯಿತು ಎಂದೆ. ಅವರ ಕೋರಿಕೆ ಮೇರೆಗೆ ಅದನ್ನು ಕಳಿಸಿಕೊಟ್ಟೆ. ಅದಾದ ಒಂದು ದಿನದ ನಂತರ ನನಗೆ ಅವರೇ ಪುನಃ ಫೋನ್ ಮಾಡಿ, 'ನಿಮಗೆ ಯಾವುದೇ ಪ್ರಶಸ್ತಿ ಬಂದಿಲ್ಲವಾ? ಏಕೆಂದರೆ ನಿಮಗೆ ಬಂದಿರುವ ಪ್ರಶಸ್ತಿ ಕಾಲಮ್ಮನ್ನು ಬ್ಲಾಂಕ್ ಬಿಟ್ಟಿದ್ದೀರಿ' ಎಂದು ಹೇಳಿದರು.

'ನನ್ನ ಪರಿಚಯದಲ್ಲಿ ಪ್ರಶಸ್ತಿಗಳನ್ನು ಹೇಳಬೇಕಿಲ್ಲ. ಅದರ ಬಗ್ಗೆ ಪ್ರಸ್ತಾಪಿಸದೇ ಪರಿಚಯಿಸಿ' ಎಂದೆ. ಆದರೂ ಅವರು ಕೇಳಲಿಲ್ಲ. 'ನಿಮಗೆ ಹಲವಾರು ಪ್ರಶಸ್ತಿಗಳು ಬಂದಿವೆ ಎಂಬುದು ಗೊತ್ತು. ಆ ಪೈಕಿ ಕೆಲವನ್ನಾದರೂ ಹೇಳಿ' ಎಂದರು.

ಅದಕ್ಕೆ ನಾನು ಹೇಳಿದೆ- 'ನಮಗೆ ಬಂದಿರುವ ಪ್ರಶಸ್ತಿಗಳನ್ನು ಹೇಳುವುದು ಅಭಿಮಾನದ ವಿಷಯ ಅಲ್ಲ, ಅದು ಅವಮಾನ. ಈ ಎಲ್ಲ ಪ್ರಶಸ್ತಿಗಳನ್ನು ಪಡೆದುಕೊಳ್ಳಲು ಅಥವಾ ಹೊಡೆದುಕೊಳ್ಳಲು ಇವರು ಯಾರ್‍ಯಾರಿಗೆ ದುಂಬಾಲು ಬಿದ್ದಿರಬಹುದು ಎಂಬ ಸಂದೇಹವಾದರೂ ಬರದೇ ಹೋಗುವುದಿಲ್ಲ. ಈ ದಿನಗಳಲ್ಲಿ ಪ್ರಶಸ್ತಿ ಪಡೆದುಕೊಳ್ಳುವುದೆಂದರೆ ನಮ್ಮ ಬಗ್ಗೆ ಗುಮಾನಿಗೆ ಅವಕಾಶ ನೀಡಿದಂತೆ. ಇವರು ಇಷ್ಟು ಸಾಧನೆ ಮಾಡಿದರೂ ಇವರಿಗೆ ಯಾವುದೇ ಪ್ರಶಸ್ತಿ ಕೊಟ್ಟಿಲ್ಲ ಎಂದು ಹೇಳಿದರೆ ಅದು ನಿಜವಾಗಿಯೂ ಅಭಿಮಾನದಿಂದ ಬೀಗುವ ವಿಷಯವೇ. ಇವರ ಸಾಧನೆ ನೋಡಿ ಈ ಪ್ರಶಸ್ತಿ ಕೊಡಲಾಗಿದೆ ಎಂದು ಹೇಳಿದರೆ ಸಂದೇಹಕ್ಕೆ ಹೊಗೆಯಾಡಲು ಅವಕಾಶ ನೀಡಿದಂತೆ.

ಅಷ್ಟಕ್ಕೂ ಜೀವಮಾನದಲ್ಲಿ ಸ್ವಾಮಿ ವಿವೇಕಾನಂದರಿಗೆ, ರಾಮಕೃಷ್ಣ ಪರಮಹಂಸರಿಗೆ, ಮಹಾತ್ಮ ಗಾಂಧಿಯವರಿಗೆ ಯಾವ ಪ್ರಶಸ್ತಿ ಬಂದಿದೆ? ಸಾಧನೆ ಮಾಡಿ ಪ್ರಶಸ್ತಿ ಪಡೆಯದಿರುವುದೇ ದೊಡ್ಡ ಸಾಧನೆ. ಮಹಾತ್ಮ ಗಾಂಧಿ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಕೊಟ್ಟಿದ್ದರೆ ಅವರು ಅದನ್ನು ಪಡೆದ ಎಲ್ಲರ ಸಾಲಿಗೆ ಸೇರಿಬಿಡುತ್ತಿದ್ದರು. ಹತ್ತರಲ್ಲಿ ಹನ್ನೊಂದನೆಯವರಾಗುತ್ತಿದ್ದರು. ಆದರೆ ಅವರಿಗೆ ಅದನ್ನು ಕೊಡಲಿಲ್ಲ. ಹೀಗಾಗಿ ಅವರು ಆ ಪ್ರಶಸ್ತಿಗಿಂತ ಎತ್ತರದಲ್ಲಿದ್ದಾರೆ. ನೀವು ಲಾಬಿ ಮಾಡದೇ ಪ್ರಶಸ್ತಿ ಪಡೆದರೂ, ಅರ್ಹತೆಯಿಂದಲೇ ಅದನ್ನು ಗಿಟ್ಟಿಸಿದರೂ, ಎಲ್ಲೋ ಒಂದು ಮೂಲೆಯಲ್ಲಿ ಸಣ್ಣ ಅನುಮಾನಕ್ಕಂತೂ ಕಾರಣರಾಗುತ್ತೇವೆ ಎಂಬುದು ಸುಳ್ಳಲ್ಲ. ಆದ್ದರಿಂದ ದಯವಿಟ್ಟು ಪ್ರಶಸ್ತಿ ಬಗ್ಗೆ ಪ್ರಸ್ತಾಪಿಸಲೇಬೇಕು ಅಂದರೆ, ಇವರಿಗೆ ಯಾವುದೇ ಪ್ರಶಸ್ತಿ ಬಂದಿಲ್ಲ ಎಂದು ಹೇಳಿಬಿಡಿ, ಮರ್ಯಾದೆಯಾದರೂ ಉಳಿದೀತು. ನನಗೆ ಬಂದ ಪ್ರಶಸ್ತಿಗಳ ಹೆಸರುಗಳನ್ನೆಲ್ಲ ಹೇಳಿ ನಾನೇ ಕೈಯಾರ ನನ್ನ ಮರ್ಯಾದೆ ಕಳೆದುಕೊಳ್ಳಲು ಏಕೆ ಅವಕಾಶ ನೀಡಲಿ?'

ಇಂದು ಅಂಥ ಪರಿಸ್ಥಿತಿ ಬಂದಿದೆ. ನಮಗೆ ಬಂದ ಪ್ರಶಸ್ತಿ, ಸನ್ಮಾನಗಳನ್ನು ಹೇಳಿಕೊಂಡರೆ ಅದು ನೆಗೆಟಿವ್. ಖಂಡಿತವಾಗಿಯೂ ಅದು ಅಭಿಮಾನದ ಸಂಗತಿಯಲ್ಲ. ನೀವು ಹೆಚ್ಚು ಹೆಚ್ಚು ಪ್ರಶಸ್ತಿ ಪಡೆದುಕೊಂಡಿದ್ದೀರಿ ಎಂದರೆ, ಜನ ನಿಮ್ಮನ್ನು ಪ್ರಶಸ್ತಿಕೋರ, ಪ್ರಶಸ್ತಿಗೆ ಹಪಹಪಿಸುವವ, ಲಾಬಿ ಮಾಡಿ ಗಿಟ್ಟಿಸಿಕೊಂಡವ, ಹಣ ಕೊಟ್ಟು ಹೊಡೆದುಕೊಂಡವ, ಪ್ರಭಾವ ಬೀರಿ ಪಡೆದುಕೊಂಡವ ಎಂದು ಭಾವಿಸುತ್ತಾರೆ. ಕಾರಣ ಇಂದು ಪ್ರಶಸ್ತಿಗಳನ್ನು ಈ ಅಂಶಗಳಿಂದಲೇ ಕೊಡಮಾಡುತ್ತಾರೆ. ನಿಜವಾದ ಸಾಧಕರಿಗೆ ಸರಕಾರಿ ಪ್ರಶಸ್ತಿ ಸಿಗುವುದೇ ಇಲ್ಲ. ಯಾಕೆಂದರೆ ಅವರು ಪ್ರಶಸ್ತಿಗೆ ಅರ್ಜಿ ಹಾಕಿರುವುದಿಲ್ಲ.

ದುರ್ದೈವವೆಂದರೆ, ನೀವು ಅರ್ಜಿ ಹಾಕದಿದ್ದರೆ ನಿಮಗೆ ಯಾವ ಸರಕಾರಿ ಪ್ರಶಸ್ತಿಯೂ ಬರುವುದಿಲ್ಲ. ಅರ್ಜಿ ಹಾಕದಿದ್ದರೂ ನಿಮ್ಮನ್ನು ಆಯ್ಕೆ ಮಾಡಿದರೆ, ಅದು ಸ್ವಜನಪಕ್ಷಪಾತ ಎಂದು ಜನರು ಪರಿಗಣಿಸಬಹುದು ಎಂದು ಸರಕಾರ ಭಾವಿಸುತ್ತದೆ. ಹೀಗಾಗಿ ಅರ್ಜಿ ಹಾಕಲೇಬೇಕು ಎಂದು ಸರಕಾರ ಅಪೇಕ್ಷಿಸುತ್ತದೆ. ಆದರೆ ಮಾನ, ಮರ್ಯಾದೆ ಇದ್ದವರು ನನಗೆ ಪ್ರಶಸ್ತಿ ಕೊಡಿ, ಸನ್ಮಾನ ಮಾಡಿ ಎಂದು ಹೇಳುವುದಿಲ್ಲ. ಹೀಗೆ ಮಾಡದಿದ್ದರೆ ಸರಕಾರ ನಿಮಗೆ ಪ್ರಶಸ್ತಿ ಕೊಡುವುದಿಲ್ಲ.

ಕರ್ನಾಟಕದಲ್ಲಿ ಸಾಹಿತ್ಯ, ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆಯಿತ್ತ ಸಾವಿರಾರು ಜನರಿಗೆ ಈಗಲೂ ಸರಕಾರ ಕೊಡಮಾಡುವ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿ ಬಂದಿಲ್ಲ. ಇಂದು ರಾಜ್ಯ, ದೇಶ, ವಿದೇಶಗಳಲ್ಲಿ ಅತ್ಯಂತ ಬೇಡಿಕೆಯಲ್ಲಿರುವ ಕಲಾವಿದರಿಗೆ ಈವರೆಗೆ ಪ್ರಶಸ್ತಿ ಸಿಕ್ಕಿಲ್ಲ. ಅದಕ್ಕೆ ಕಾರಣವೇನೆಂದರೆ, ಅವರು ಪ್ರಶಸ್ತಿಗೆ ಅರ್ಜಿ ಹಾಕಿಲ್ಲ. ಅರ್ಜಿ ಹಾಕದಿದ್ದರೂ ಆ ಪ್ರಶಸ್ತಿ ಕೊಟ್ಟರೆ ಅವರ ಮೇಲೆ ವಿಶೇಷ ಮಮತೆ ತೋರಿದ ಆಪಾದನೆಗೆ ಗುರಿಯಾಗಬೇಕಾದೀತೆಂದು ಅಂಥವರಿಗೆ ಯಾರೂ ಕೊಟ್ಟಿಲ್ಲ.

ಈ ಬಗ್ಗೆ ಕೇಳಿದ ಬಳಿಕ ಕೆಲವರು ಸಾಧಕರೊಂದಿಗೆ ಈ ಕುರಿತು ಪ್ರಸ್ತಾಪಿಸಿ, 'ನಿಮಗೆ ರಾಜ್ಯೋತ್ಸವ ಪ್ರಶಸ್ತಿ ಬಾರದಿರುವುದು ಅದಕ್ಕಿಂತ ದೊಡ್ಡ ಪ್ರಶಸ್ತಿ. ನೀವು ಲಾಬಿ ಮಾಡಿಲ್ಲ ಎಂಬುದು ಖಾತ್ರಿ ಆಯಿತು. ಈ ವರ್ಷ ಸರಕಾರ ಅದಾಗಿಯೇ ಕೊಟ್ಟರೂ ಜನರಿಗೆ ಸಂದೇಹ ಬಂದರೂ ಬಂದೀತು' ಎಂದೆ. ಎಂಥ ಸಂಕಟ ನೋಡಿ. ಸಾಧನೆ ಮಾಡಿಯೂ ಪ್ರಶಸ್ತಿ ಬರದಿದ್ದರೆ ಬೇಸರ. ಬಂದಿತೆನ್ನಿ, ಇನ್ನೂ ಬೇಸರ. ಅಷ್ಟರ ಮಟ್ಟಿಗೆ ಪ್ರಶಸ್ತಿ, ಸನ್ಮಾನಗಳು ಬೆಲೆ, ಪ್ರತಿಷ್ಠೆಗಳನ್ನು ಕಳೆದುಕೊಂಡುಬಿಟ್ಟಿವೆ. ಇವರು ಅಪೂರ್ವ ಸಾಧಕರು. ಆದರೆ ಯಾವುದೇ ಪ್ರಶಸ್ತಿ ಪಡೆದುಕೊಂಡಿಲ್ಲ ಅಥವಾ ಇವರಿಗೆ ಯಾವುದೇ ಪ್ರಶಸ್ತಿ ಕೊಟ್ಟಿಲ್ಲ ಅಥವಾ ಬಂದಿಲ್ಲ ಎಂದು ಹೇಳಿದರೇ ಅದು ನಿಜವಾದ ಗೌರವ.

ರಾಜ್ಯೋತ್ಸವ ಪ್ರಶಸ್ತಿಯನ್ನು ಹೈಕೋರ್ಟಿನ ಕಣ್ಗಾವಲಿನಲ್ಲಿ ಕೊಡುವ ಪರಿಸ್ಥಿತಿ ಬಂದಿದೆ. ನಾಚಿಕೆ, ಮಾನ, ಮರ್ಯಾದೆಗೆ ಬೆಲೆ ಕೊಡುವವರು ಮತ್ತು ಅಂಜುವವರು ಯಾರೂ ಪ್ರಶಸ್ತಿಗೆ ಆಸೆಪಡುವುದಿಲ್ಲ. ಪ್ರಶಸ್ತಿಯನ್ನು ಪಡೆದರೆ ತನ್ನನ್ನು ಮಿಕ್ಕವರಂತೆ 'ಕಳ್ಳ'ನನ್ನು ನೋಡುವಂತೆ ಸಂದೇಹದಿಂದ ನೋಡಬಹುದು ಎಂದು ಭಾವಿಸುವಂತಾಗಿದೆ. ಕೆಲವು ಸಂಭಾವಿತರನ್ನು ಭೇಟಿ ಮಾಡಿ ನಿಮಗೆ ಪ್ರಶಸ್ತಿ ಕೊಡುತ್ತೇವೆ ಎಂದು ಹೇಳಿದರೆ, ಖಂಡಿತವಾಗಿಯೂ ಅವರು ಬೇಡ ಅಂತಾನೇ ಹೇಳುತ್ತಾರೆ.

ಟೈಮ್ಸ್ ಆಫ್ ಇಂಡಿಯಾ ಸಂಸ್ಥೆ ಪ್ರತಿವರ್ಷ ಜ್ಞಾನಪೀಠ ಪ್ರಶಸ್ತಿಯನ್ನು ನೀಡುತ್ತದೆ. ಇದನ್ನು ಭಾರತದ ನೊಬೆಲ್ ಪ್ರಶಸ್ತಿ ಎಂದು ಭಾವಿಸಬಹುದು. ಸಾಹಿತ್ಯ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡಿದವರಿಗೆ ಈ ಪ್ರಶಸ್ತಿ ಕೊಡುತ್ತಾರಷ್ಟೆ. ದಿಲ್ಲಿಯ 'ಹಿಂದುಸ್ತಾನ್ ಟೈಮ್ಸ್' ಪತ್ರಿಕೆ ಜ್ಞಾನಪೀಠ ಪುರಸ್ಕಾರಕ್ಕೆ ಸಮವಾಗಿ 'ಸರಸ್ವತಿ ಸಮ್ಮಾನ್' ಪ್ರಶಸ್ತಿಯನ್ನು ಸ್ಥಾಪಿಸಿತು. ಜ್ಞಾನಪೀಠ ಪ್ರಶಸ್ತಿಗಿಂತ ಸರಸ್ವತಿ ಸಮ್ಮಾನ್ ಪ್ರಶಸ್ತಿ ಜತೆಗೆ ಕೊಡುವ ಹಣ ಅಥವಾ ಗೌರವಧನ ಹೆಚ್ಚು. 'ಸರಸ್ವತಿ ಸಮ್ಮಾನ್' ಸಹ ಭಾರತದ ಸಾಹಿತ್ಯ ವಲಯದಲ್ಲಿ ತನ್ನದೇ ಆದ ಘನತೆಯನ್ನು ಹೊಂದಿದೆ. ಈ ಪ್ರಶಸ್ತಿಗೆ ಪಾತ್ರರಾದ ಮೊದಲ ಕನ್ನಡಿಗರೆಂದರೆ ಡಾ. ಎಸ್.ಎಲ್. ಭೈರಪ್ಪ. ಅವರಿಗೆ ಜ್ಞಾನಪೀಠ ಬರದಿದ್ದರೇನಂತೆ, ಅದಕ್ಕೆ ಸಮನಾದ ಅಥವಾ ಮಿಗಿಲಾದ 'ಸರಸ್ವತಿ ಸಮ್ಮಾನ್' ಬಂತಲ್ಲ ಎಂದು ಎಲ್ಲಾ ಕನ್ನಡಿಗರಿಗೆ ಸಂತಸವಾಯಿತು.

ಅದಾಗಿ ಎರಡು ಮೂರು ವರ್ಷಗಳ ನಂತರ ಈ ಪ್ರಶಸ್ತಿ ಮಾಜಿ ಮುಖ್ಯಮಂತ್ರಿ, ಕೇಂದ್ರದ ಮಾಜಿ ಸಚಿವ ಮತ್ತು ರಾಜಕಾರಣಿ ವೀರಪ್ಪ ಮೊಯಿಲಿ ಅವರಿಗೆ ಬಂತು. ಎಲ್ಲಿಯ ಭೈರಪ್ಪ? ಎಲ್ಲಿಯ ವೀರಪ್ಪ? ಮೊದಲನೆಯವರು ಸರಸ್ವತಿ ಸಮಾನ್ ಪುರಸ್ಕೃತರು ಮತ್ತು ಎರಡನೆಯವರು ಸರಸ್ವತಿ ಸಮ್ಮಾನ್ ವಿಜೇತರು! ಮೊದಲನೆಯವರು ಆ ಪ್ರಶಸ್ತಿ ಪಡೆದುಕೊಂಡವರು ಮತ್ತು ಎರಡನೆಯವರು ಹೊಡೆದುಕೊಂಡವರು!

ಇದು ಎಂಥವರಿಗಾದರೂ ಅರ್ಥವಾಗುವಂಥದ್ದು. ನಟ ಸಾರ್ವಭೌಮ ಎಂಬ ಬಿರುದನ್ನೂ ನೀವು ಒಮ್ಮೆ ಡಾ.ರಾಜ್‌ಕುಮಾರ್ ಅವರಿಗೆ ಕೊಟ್ಟ ನಂತರ ಮತ್ಯಾರಿಗೂ ಕೊಡಲಾಗುವುದಿಲ್ಲ. ಅದನ್ನು ಅವರ ಯೋಗ್ಯತೆ, ಸಾಮರ್ಥ್ಯ, ಅರ್ಹತೆ ಇರುವವರಿಗಿಂತ ಬೇರೆ ಯಾರಿಗೆ ಕೊಟ್ಟರೂ ಡಾ.ರಾಜ್ ಅವರಿಗೆ ಅಗೌರವ ತೋರಿಸಿದಂತೆ ಅಥವಾ ಆ ಬಿರುದಿನ ಮಹತ್ವವನ್ನು ಕಮ್ಮಿ ಮಾಡಿದಂತೆ. ಭೈರಪ್ಪನವರಿಗೂ ವೀರಪ್ಪ ಮೊಯಿಲಿಗೂ ಯಾವ ಹೋಲಿಕೆ? ಯಾವಾಗ ಸರಸ್ವತಿ ಸಮ್ಮಾನ್ ಪ್ರಶಸ್ತಿಯನ್ನು ಮೊಯಿಲಿಗೆ ಕೊಟ್ಟರೋ, ಅದರ ಮಹತ್ವವೇ ಹೊರಟು ಹೋಯಿತು. ಇದರಿಂದ ಭೈರಪ್ಪನವರಿಗೂ ತುಸು ಇರುಸು ಮುರುಸು, ಕಸಿವಿಸಿ ಆಗಿರಲಿಕ್ಕೂ ಸಾಕು. ಒಂದು ವೇಳೆ ಈ ಪ್ರಶಸ್ತಿಯನ್ನು ಒಟ್ಟಿಗೆ ಮೊಯಿಲಿ ಅವರ ಜತೆ ಸ್ವೀಕರಿಸುವಂತಾದರೆ ಖಂಡಿತವಾಗಿಯೂ ಭೈರಪ್ಪನವರು ಅದನ್ನು ತಿರಸ್ಕರಿಸುತ್ತಿದ್ದರು.

ಮಹಾತ್ಮ ಗಾಂಧಿ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಕೊಟ್ಟು ಅದನ್ನು ನಂತರ ರಾಹುಲ್ ಗಾಂಧಿ ಅವರಿಗೆ ಕೊಟ್ಟರೆ ಆ ಪ್ರಶಸ್ತಿಯ ಬೆಲೆಯೇನು? ಅಲ್ಲದೇ ಮಹಾತ್ಮ ಗಾಂಧಿ ಬೆಲೆ ಏನು? ಪ್ರಶಸ್ತಿಯ ಪಾವಿತ್ರ್ಯ ಹಾಳು ಮಾಡಬೇಕೆಂದರೆ ಅದನ್ನು ಮನಸೋ ಇಚ್ಛೆ ಕಂಡ ಕಂಡವರಿಗೆಲ್ಲ ಕೊಟ್ಟು ಬಿಡಬೇಕು.

ಪ್ರತಿವರ್ಷ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 'ನಾಡಪ್ರಭು ಕೆಂಪೇಗೌಡ' ಪ್ರಶಸ್ತಿಯನ್ನು ನೀಡುತ್ತದೆ. ಕೆಲ ವರ್ಷ ಈ ಪ್ರಶಸ್ತಿಯನ್ನು ಹೋಗಿ ಹೋಗಿ ಐದುನೂರು ಚಿಲ್ಲರೆ ಜನರಿಗೆ ಸಾಮೂಹಿಕ ವಿವಾಹದಲ್ಲಿ ತಾಳಿ ಹಂಚಿದ ಹಾಗೆ ಹಂಚಿದ ನಿದರ್ಶನಗಳಿವೆ. ಇದರಿಂದ ಪ್ರಶಸ್ತಿ ಪಡೆದ ಕೆಲವರಿಗಾದರೂ ತೀವ್ರ ಮುಜುಗರ, ಅವಮಾನ ಆಗಿರಲಿಕ್ಕೆ ಸಾಕು. ಅದಕ್ಕಿಂತ ಹೆಚ್ಚಾಗಿ ಇದು ನಾಡಪ್ರಭು ಕೆಂಪೇಗೌಡರಿಗೆ ಮಾಡಿದ ಅವಮಾನ.

ಅನೇಕ ಸಲ ಆ ಪ್ರಶಸ್ತಿಯನ್ನು ಕಳ್ಳಕಾಕರಿಗೆ, ನಿಂದಿತರಿಗೆ, ತಲೆಹಿಡುಕರಿಗೆ, ಕಂಟಕರಿಗೆಲ್ಲ ಕರೆದು ಹಂಚಿರುವ ಉದಾಹರಣೆಯಿದೆ. ಜನ ಕಚ್ಚಾಡಿ, ಪರದಾಡಿ ಈ ಪ್ರಶಸ್ತಿಯನ್ನು ಎತ್ತಿಕೊಂಡು ಹೋಗುತ್ತಾರೆ. ಪ್ರಶಸ್ತಿಯ ಜತೆ ದುಡ್ಡನ್ನೂ ನೀಡುವುದರಿಂದ, ಪ್ರಶಸ್ತಿಗೆ ಭಾಜನರಲ್ಲದವರೂ ಬಂದು ಅದನ್ನು ಸ್ವೀಕರಿಸಿ ಎದ್ದುಹೋಗಿರುವ ಉದಾಹರಣೆಯಿದೆ. ಇದರಿಂದ ನಿಜವಾಗಿಯೂ ಅರ್ಹರಾದವರಿಗೆ ಆದ ಮುಖಭಂಗ ಅಷ್ಟಿಷ್ಟಲ್ಲ. ಯೋಗ್ಯರನ್ನೂ, ಕಳ್ಳಕಾಕರನ್ನೂ ಒಂದೇ ತಕ್ಕಡಿಯಲ್ಲಿಟ್ಟರೆ ಏನಾಗಬೇಡ?

ಅಷ್ಟಕ್ಕೂ ಒಂದು ಪ್ರಶಸ್ತಿಯನ್ನು ಅಷ್ಟು ಜನರಿಗೆ ಕೊಡ್ತಾರಾ? ಅದೇನು ಕಲ್ಲು ಹರಳಾ? ಒಂದು ಪ್ರಶಸ್ತಿಯನ್ನು ಹೇಗೆ ಕೊಡಬೇಕು ಎಂದು ಗೊತ್ತಿಲ್ಲದವರು, ಸೂಕ್ಷ್ಮ ಸಂವೇದನೆ ಇಲ್ಲದವರು ನಮ್ಮ ನಗರವನ್ನು ಆಳುತ್ತಿದ್ದಾರೆ ಅಂದ್ರೆ ಇವರ ನೈತಿಕ ಮಟ್ಟ ಯಾವ ಹಂತಕ್ಕೆ ಹೋಗಿರಬಹುದು? ನಿಜಕ್ಕೂ ಭಯವಾಗುತ್ತದೆ.

ನೊಬೆಲ್ ಪ್ರಶಸ್ತಿಯನ್ನು ಪ್ರತಿ ವರ್ಷ ಆರು ಜನರಿಗೆ ಮಾತ್ರ ಕೊಡಲಾಗುತ್ತಿದೆ. ರಸಾಯನ ಶಾಸ್ತ್ರ, ಸಾಹಿತ್ಯ, ಭೌತ ಶಾಸ್ತ್ರ, ಶಾಂತಿ, ಅರ್ಥಶಾಸ್ತ್ರ ಮತ್ತು ಮೆಡಿಸಿನ್ ಈ ಆರು ಕ್ಷೇತ್ರಗಳಲ್ಲಿ ಅಸಾಧಾರಣ ಸೇವೆ, ಸಾಧನೆ ಮಾಡಿದ ಮಹನೀಯರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. 1901ರಿಂದ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ರಾಯಲ್ ಸ್ವೀಡಿಷ್ ಅಕಾಡೆಮಿ ಆಫ್ ಸೈನ್ಸಸ್ ನೀಡುತ್ತಾ ಬಂದಿದೆ. ನೊಬೆಲ್ ಶಾಂತಿ ಪ್ರಶಸ್ತಿಯನ್ನು ನಾರ್ವೆಯ ಓಸ್ಲೋದಲ್ಲಿ ನೀಡಿದರೆ, ಉಳಿದವುಗಳನ್ನು ಸ್ಟಾಕ್‌ಹೋಮ್‌ನಲ್ಲಿ ನೀಡಲಾಗುತ್ತದೆ. ನೊಬೆಲ್ ಪ್ರಶಸ್ತಿ ಘೋಷಿಸುವ ದಿನಾಂಕದಲ್ಲೂ ಬದಲಾವಣೆ ಆಗುವುದಿಲ್ಲ, ಒಂದು ಪ್ರಶಸ್ತಿಯನ್ನು ಯಾವುದೇ ಕಾರಣಕ್ಕೂ ಮೂರಕ್ಕಿಂತ ಹೆಚ್ಚು ಜನರಿಗೆ ಹಂಚುವುದಿಲ್ಲ.

ಕಳೆದ 122 ವರ್ಷಗಳಲ್ಲಿ ಸುಮಾರು ಒಂದು ಸಾವಿರ ಜನರಿಗೆ ಮತ್ತು ಸಂಘಸಂಸ್ಥೆಗಳಿಗೆ ಮಾತ್ರ ಇದನ್ನು ನೀಡಲಾಗಿದೆ. ಪ್ರಶಸ್ತಿ ಘೋಷಿಸಿದ ನಂತರ ಅದಕ್ಕೆ ಭಾಜನರಾದವರು ತೀರಿಹೋದರೆ ಪ್ರದಾನ ಮಾಡುತ್ತಾರೆ, ಆದರೆ ಯಾರಿಗೂ ಮರಣೋತ್ತರವಾಗಿ ಇದನ್ನು ನೀಡಲಾಗುವುದಿಲ್ಲ. ಎಲ್ಲವೂ ಕರಾರುವಾಕ್ಕು. ಅದಕ್ಕಾಗಿಯೇ ನೊಬೆಲ್ ಪ್ರಶಸ್ತಿ ಪಾವಿತ್ರ್ಯ ಉಳಿದುಕೊಂಡಿದೆ. ಅದರ ಬಗ್ಗೆ ಇಂದಿಗೂ ಜನರಿಗೆ ಜಗತ್ತಿನಾದ್ಯಂತ ಗೌರವ, ಘನತೆ ಇದೆ.

ಪ್ರಶಸ್ತಿಗಳನ್ನು ಪಂಚಕಜ್ಜಾಯ, ಕಲ್ಲು ಸಕ್ಕರೆ, ಶೇಂಗಾಬೀಜದಂತೆ ಹಂಚಬಾರದು. ಅದಕ್ಕೆ ಅದರದೇ ಆದ ಪಾವಿತ್ರ್ಯವಿದೆ. ಮರ್ಯಾದೆ ಇದೆ. ಪ್ರಶಸ್ತಿಗೆ ಆಯ್ಕೆ ಮಾಡುವವರಿಗೆ ಮಾನವಿರಬೇಕು. ಆಯ್ಕೆ ಪ್ರಕ್ರಿಯೆಗೆ ಮಾನದಂಡವಿರಬೇಕು. ಅಪಾತ್ರರಿಗೆ ಈ ಕೆಲಸ ಕೊಡಬಾರದು. ಅಪಾತ್ರರು ಪ್ರಶಸ್ತಿ ಆಯ್ಕೆಯನ್ನೂ ಮಾಡಬಾರದು, ನೀಡಲೂ(ಪ್ರದಾನ) ಬಾರದು. ದುರಂತವೇನೆಂದರೆ, ಇವೆರಡೂ ಕಾರ್ಯವನ್ನು ಮಾಡುತ್ತಿರುವವರು ಅವರೇ ಆಗಿದ್ದಾರೆ. ಹೀಗಾಗಿ ಪ್ರಶಸ್ತಿಗಳೆಲ್ಲ ಮೌಲ್ಯ, ಮಹತ್ವ ಕಳೆದುಕೊಳ್ಳುತ್ತಿವೆ.

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರಿಗೆ ಪ್ರಶಸ್ತಿ ಘೋಷಿಸಬಹುದು. ಆದರೆ ಕೊಡುವವರು ಯಾರು ಎಂಬುದು ಸಹ ಮುಖ್ಯವಾಗುತ್ತದೆ. ರಾಜ್ಯದ ಮುಖ್ಯಮಂತ್ರಿಗಳಿಗಿಂತ ಕಡಿಮೆ ತೂಕದ, ಸ್ಥಾನಮಾನದ ಯಾರೂ ಅವರಿಗೆ ಪ್ರಶಸ್ತಿ ಕೊಡಬಾರದು. ಮುಖ್ಯಮಂತ್ರಿಗಳಿಗೆ ಅನಾರೋಗ್ಯವೆಂದು ಅಬಕಾರಿ ಸಚಿವರನ್ನು ಕಳಿಸಿಕೊಟ್ಟರೆ ಏನಾದೀತು? ಈ ವಿವೇಕವು ಪ್ರಶಸ್ತಿ ಸಂಘಟಕರಿಗೆ, ಕೊಡುವವರಿಗೆ ಇರಬೇಕು. ಹೀಗಾಗಿ ಪ್ರಶಸ್ತಿ ಕೊಡುವವರು, ಘೋಷಿಸುವವರು, ಪ್ರದಾನ ಮಾಡುವವರು ಯಾರು ಎಂಬುದು ಮುಖ್ಯವಾಗುತ್ತದೆ. ಇದರ ಅರಿವು ಇಲ್ಲದ ಯಾರೇ ಪ್ರಶಸ್ತಿ ಕೊಟ್ಟರೂ, ಇಸಗೊಂಡರೂ ಅದು ಅಪಚಾರವಾಗುತ್ತದೆ, ಯಡವಟ್ಟಾಗುತ್ತದೆ, ಕಮಂಗಿತನವಾಗುತ್ತದೆ.

ಪ್ರಶಸ್ತಿ ತೆಗೆದುಕೊಳ್ಳುವವರಿಗೂ ಇದರ ಪ್ರಜ್ಞೆ ಇರಬೇಕು. ಯಾರೋ ಕೊಡ್ತಾರೆ ಅಂತ ಸ್ವೀಕರಿಸಬಾರದು. ಪ್ರಶಸ್ತಿ ಅಂದರೆ ನಮ್ಮ ವ್ಯಕ್ತಿತ್ವಕ್ಕೆ ಕೊಡುವ ಬೆಲೆ, ಗೌರವ. ಅದನ್ನು ನಾವಾಗಿ ನಾವೇ ಕಳೆದುಕೊಳ್ಳಬಾರದು. ಒಂದು ಪ್ರಶಸ್ತಿ ನಾವ್ಯಾರು ಎಂಬುದನ್ನು ನಿರ್ಧರಿಸುವುದಕ್ಕೆ ಆಸ್ಪದ ನೀಡಬಾರದು. ಲಾಬಿ ಮಾಡಿ ಪ್ರಶಸ್ತಿ ಪಡೆಯುವುದೆಂದರೆ, ಅತ್ತೂ ಕರೆದು ಔತಣ ಮಾಡಿಸಿಕೊಂಡಂತೆ. ಪ್ರಶಸ್ತಿಗಾಗಿ ನಮ್ಮ ಬಯೋಡಾಟವನ್ನು ಬೇರೆಯವರಿಗೆ ಕೊಡುತ್ತಿದ್ದೇವೆಂದರೆ, ನಾವು ಅಷ್ಟರಮಟ್ಟಿಗೆ ಮರ್ಯಾದೆ ಬಿಟ್ಟವರು ಎಂದರ್ಥ.

ಯಾವ ಪ್ರಶಸ್ತಿಯೂ ನಮ್ಮ ಯೋಗ್ಯತೆ ಹೆಚ್ಚು ಮಾಡುವುದಿಲ್ಲ. ಆದರೆ ಅದಕ್ಕಾಗಿ ಆಸೆ ಪಟ್ಟು ಲಾಬಿ ಮಾಡಿ ಪಡೆದರೆ ನಮ್ಮ ಯೋಗ್ಯತೆ ಕಡಿಮೆ ಆಗುವುದಂತೂ ನಿಶ್ಚಿತ.

ನಮ್ಮ ಯೋಗ್ಯತೆಯೇ ನಮಗೆ ಆಸ್ತಿ, ಅಲ್ಲ ಸನ್ಮಾನ, ಪ್ರಶಸ್ತಿ!

ಶ್ರೀಸಾಮಾನ್ಯರ ಜೀವ ತೀರಾ ಅಗ್ಗವಾಗಿದೆ

ಕಳಕಳಿ

ಸಿಂಚನ ಎಂ.ಕೆ.

vveditoped@gmail.com

ಬಹುತೇಕರಿಗೆ ತಿಳಿದಿರುವ ಮಹಾಭಾರತದ ಸ್ವಾರಸ್ಯಕರ ಪ್ರಸಂಗವಿದು. 'ಈ ಪ್ರಪಂಚದ ಪರಮ ಅದ್ಭುತ ಯಾವುದು?' ಎಂದು ಯಕ್ಷನು ಯುಧಿಷ್ಠಿರನನ್ನು ಪ್ರಶ್ನಿಸುತ್ತಾನೆ. ಅದಕ್ಕೆ ಯುಧಿಷ್ಠಿರ, 'ಪ್ರತಿದಿನ ತಮ್ಮ ಕಣ್ಣ ಮುಂದೆಯೇ ಸಾವು-ನೋವುಗಳಾಗುವುದನ್ನು ಕಂಡರೂ, ಮನುಷ್ಯರು ತಮಗೆ ಮಾತ್ರ ಸಾವು ಬರುವುದೇ ಇಲ್ಲ ಎಂಬ ಭ್ರಮೆಯಲ್ಲಿ ಬದುಕುತ್ತಿರುವುದು' ಎಂದು ಉತ್ತರಿಸುತ್ತಾನೆ. ಹೌದಲ್ಲವೇ? ಜಗತ್ತಿನಾದ್ಯಂತ ಕಾಣಬರುತ್ತಿರುವ ಅಪಘಾತ, ಹತ್ಯೆ, ಆತ್ಮಹತ್ಯೆ, ಖಿನ್ನತೆ, ಪ್ರಾಕೃತಿಕ ವಿಕೋಪ ಮೊದಲಾದ ದುರಂತಕರ ಸಂಗತಿಗಳನ್ನು ಇಂದಿನ ತಾಂತ್ರಿಕ ಯುಗದಲ್ಲಿ ಅಂಗೈಯಲ್ಲಿನ ಮೊಬೈಲ್‌ನಿಂದಲೇ ತಿಳಿದುಕೊಳ್ಳುತ್ತೇವೆ. ಆದರೂ ಅದು ನಮ್ಮ ಅನುಭವಕ್ಕೆ ಬರುವವರೆಗೆ, 'ಅವೆಲ್ಲಾ ಬೇರೆಯವರ ಜೀವನದಲ್ಲಿ ಮಾತ್ರ ಸಂಭವಿಸುವಂಥವು, ನಮ್ಮ ಜೀವನದಲ್ಲಿ ಅವೆಲ್ಲಾ ಘಟಿಸುವುದಿಲ್ಲ' ಎಂಬ ಗ್ರಹಿಕೆಯಿಂದಾಗಿ ಜಾಗ್ರತೆಯಿಂದಿರದೆ, ಸಿದ್ಧತೆ ಮಾಡಿಕೊಳ್ಳದೆ ಬದುಕುತ್ತಿರುತ್ತೇವೆ. ಇದು ಸಾರ್ವಜನಿಕರ ರಕ್ಷಣೆಯ ಹೊಣೆ ಹೊತ್ತಿರುವ ಸರಕಾರಕ್ಕೂ ಅನ್ವಯಿಸುವ ಮಾತು. ಕಳೆದ ವಾರ ಇಡೀ ದೇಶವನ್ನೇ ತಲ್ಲಣಗೊಳಿಸಿದ, ಕೇರಳದ ವಯನಾಡಿನ ಚೂರಮಾಲಾ ಮತ್ತು ಮುಂಡಕ್ಕೈ ಪ್ರದೇಶದಲ್ಲಿ ಸಂಭವಿಸಿದ ಭೂಕುಸಿತದ ದುರಂತದ ವಿಷಯದಲ್ಲೂ ಇದು ಸಾಬೀತಾಗಿದೆ.

ಈ ಭೂಕುಸಿತಕ್ಕೆ ಪ್ರಾಕೃತಿಕ ವಿಕೋಪ ಪ್ರಮುಖ ಕಾರಣ ಎಂಬುದು ಸರಿ. ಆದರೆ ಈ ವಿಕೋಪವು ದುಪ್ಪಟ್ಟು, ಹತ್ತುಪಟ್ಟು ಹೆಚ್ಚಾಗಿ 'ಪ್ರೊಮ್ಯಾಕ್ಸ್' ಹಂತ ತಲುಪಲು ಮಾನವ ನಿರ್ಮಿತ ಕಾರಣಗಳೇ ದೊಡ್ಡ ಇನ್‌ಪುಟ್ ಆಗಿಬಿಟ್ಟಿವೆ. ಎರಡು ದಿನಗಳ ಅಂತರದಲ್ಲಿ ಅತಿವೇಗವಾಗಿ 572 ಮಿ.ಮೀ. ದಾಖಲೆಯ ಮಳೆಯಾಗಿ, 400ಕ್ಕಿಂತ ಹೆಚ್ಚು ಜೀವಗಳನ್ನು ಬಲಿತೆಗೆದುಕೊಂಡಿದೆ. ರಾಷ್ಟ್ರೀಯ ಸುದ್ದಿವಾಹಿನಿ ಮೂಲಗಳ ಪ್ರಕಾರ, 2011ರಲ್ಲಿ ಮಾಧವ್ ಗಾಡ್ಗಿಲ್ ನೇತೃತ್ವದ ತಂಡವು ಪಶ್ಚಿಮ ಘಟ್ಟಗಳ ಸಂಪೂರ್ಣ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯವಾಗಿ ಘೋಷಿಸಬೇಕೆಂದು ವರದಿಮಾಡಿತ್ತು. ಆ ಭೂಪ್ರದೇಶವನ್ನು ಕೃಷಿ, ಗಣಿಗಾರಿಕೆಗಳಿಗೆ ಬಳಸದಂತೆ ನಿರ್ಬಂಧ ಹೇರುವುದರ ಜತೆಗೆ, ಯಾವುದೇ ಹೊಸ ರಸ್ತೆ, ರೈಲುಮಾರ್ಗ, ಪ್ರವಾಸೋದ್ಯಮ, ಜಲವಿದ್ಯುತ್ ಯೋಜನೆಗಳ ವಿಸ್ತರಣೆ ಮಾಡದಂತೆ ಸೂಚನೆ ನೀಡಬೇಕೆಂದು ತಿಳಿಸಿತ್ತು. ನಮ್ಮ ಸರಕಾರವು ಈ ವರದಿಯನ್ನು ಭಾಗಶಃ ಪಾಲನೆ ಮಾಡುವುದಿರಲಿ, ಅದನ್ನು ಸಾರ್ವಜನಿಕವಾಗಿ ಬಿಡುಗಡೆಗೊಳಿಸಿ ಅರಿವು ಮೂಡಿಸುವ ಗೋಜಿಗೂ ಹೋಗದೆ 8 ತಿಂಗಳ ಕಾಲ ಬೆಚ್ಚಗೆ ಇಟ್ಟುಕೊಂಡಿತ್ತು. ನಂತರ ನ್ಯಾಯಾಲಯದ ನಿರ್ದೇಶನದಂತೆ ಈ ವರದಿ ಬಿಡುಗಡೆಯಾದ ಮೇಲೆ, ಸರಕಾರವು ಅದರಲ್ಲಿ ಸಾಕಷ್ಟು ಬದಲಾವಣೆ ಮಾಡಿ ಜಾರಿಗೊಳಿಸಿತು. ಆ ಸೂಕ್ಷ್ಮ ಪ್ರದೇಶಗಳ ಸ್ಥಳೀಯರ ಮೇಲೆಯೇ ಗೂಬೆ ಕೂರಿಸಿ, ಅವರ ಕಾರಣದಿಂದಲೇ ವರದಿಯನ್ನು ಬದಲಾಯಿಸಿರುವುದಾಗಿ ಹೇಳಿ, ಅವರು ಕಟ್ಟಿದ ತೆರಿಗೆ ಹಣದಿಂದಲೇ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾ, ಕಟ್ಟಡಗಳನ್ನು ಕಟ್ಟಿ ಲಾಭ ಗಳಿಸುತ್ತಾ, ಅವರ ಅಘೋಷಿತ ಹತ್ಯೆಗೆ ಅವರೇ ಪರೋಕ್ಷವಾಗಿ ಹಣ ನೀಡುವಂತೆ ಮಾಡಿ, ಅಂದೇ ಇಂದಿನ ಭೂಕುಸಿತದ ಮರಣಶಾಸನವನ್ನು ರಚಿಸಿತು. ಕಸ್ತೂರಿ ರಂಗನ್ ಅವರ ಸುಧಾರಿತ ವರದಿಯ ಶಿಫಾರಸಿನಂತೆ ಪಶ್ಚಿಮ ಘಟ್ಟದ ಶೇ.38ರಷ್ಟು ಭಾಗವನ್ನು ಮಾತ್ರ ಸೂಕ್ಷ್ಮ ವಲಯವಾಗಿ ಘೋಷಿಸುವ ಕಾರ್ಯವೂ ಆಗಲಿಲ್ಲ.

ಅಧಿಕ ಪ್ರಮಾಣದಲ್ಲಿ ಅರಣ್ಯ ಪ್ರದೇಶಗಳನ್ನು ಕಡಿದು ವಾಣಿಜ್ಯ ಬೆಳೆಗಳನ್ನು ಬೆಳೆಯಲಾಯಿತು, ರೆಸಾರ್ಟ್/ಹೋಮ್ ಸ್ಟೇಗಳ ನಿರ್ಮಾಣವಾಯಿತು, ಗಣಿಗಾರಿಕೆಗೆ ಅವಕಾಶ ದೊರೆಯಿತು, ಪ್ರಕೃತಿಯ ಸಮತೋಲನ ತಪ್ಪಿಹೋಯಿತು. ಒಬ್ಬ ಮನುಷ್ಯನ ಜೀವನದಲ್ಲಿ ಸಮತೋಲನ ತಪ್ಪಿದರೇನೇ ಅದರಿಂದ ಸುಧಾರಿಸಿಕೊಳ್ಳುವುದು ಎಷ್ಟು ಕಠಿಣ, ಹಾಗಿರುವಾಗ ಮನುಷ್ಯನಂಥ ಅಸಂಖ್ಯಾತ ಜೀವಿಗಳನ್ನು ಪೋಷಿಸುವ ಪ್ರಕೃತಿಯ ಸಮತೋಲನ ತಪ್ಪಿದರೆ ಸುಧಾರಣೆ ಮತ್ತೆಷ್ಟು ಕಠಿಣವಾಗಬಹುದು?! ಸಾರ್ವಜನಿಕ ರಕ್ಷಣೆಯ ಜವಾಬ್ದಾರಿಯನ್ನು ಅರೆಕ್ಷಣ ಮರೆತ ಸರಕಾರ, ಆರ್ಥಿಕ ದೃಷ್ಟಿಯಿಂದ ಇಂಥ ಪರಿಸರ ಸೂಕ್ಷ್ಮ ವಲಯಗಳಲ್ಲೂ ಅಭಿವೃದ್ಧಿ ಮಾಡಿ ಲಾಭಗಳಿಸುವ ಯತ್ನ ಮಾಡಿದರೂ, ಅದರಿಂದಾಗಿ ಪ್ರಕೃತಿಯ ಸಮತೋಲನ ತಪ್ಪಿ ಹೀಗೆ ದುರಂತ ಸಂಭವಿಸಿದ ಮೇಲೆ ಅದನ್ನು ಸರಿಪಡಿಸಲು, ಅಭಿವೃದ್ಧಿಗೆ ಮಾಡಿದ್ದಕ್ಕಿಂತ ಹೆಚ್ಚು ಹಣವನ್ನು ಖರ್ಚುಮಾಡಬೇಕಾಗುತ್ತದೆ. 'ಚಿಕಿತ್ಸೆಗಿಂತ ಮುಂಜಾಗ್ರತೆ ಕ್ರಮ ಉತ್ತಮ' ಎಂದು ಎಲ್ಲರೂ ಹೇಳುತ್ತಾರೆ; ಆದರೆ ಯಾರೂ ಅದರ ಕಡೆಗೆ ಹೆಚ್ಚು ಗಮನ ಹರಿಸುವುದಿಲ್ಲ. ಒಂದು ವೇಳೆ ಗುಡ್ಡಗಾಡು ಪ್ರದೇಶದಲ್ಲಿ ಅಭಿವೃದ್ಧಿ ಚಟುವಟಿಕೆಗಳು ಅವಶ್ಯಕವಾಗಿದ್ದರೂ, ಅದು ವೈಜ್ಞಾನಿಕ ನೆಲೆಗಟ್ಟಿನ/ಪಾರಿಸರಿಕ ಪ್ರಾಮುಖ್ಯದ ಕಾಮಗಾರಿಯಾದರೆ ಹಾನಿಯ ತೀವ್ರತೆಯಾದರೂ ಕಡಿಮೆಯಾಗುತ್ತದೆ. ಆದರೆ ಸರಕಾರವು ತನ್ನ ಯೋಜನೆಗಳಿಗೆ ಮುಡಿಪಾಗಿಟ್ಟ ಹಣದ ಸಿಂಹಪಾಲು ಯೋಜನೇತರವಾಗಿ ಕೆಲ ರಾಜಕಾರಣಿಗಳ/ಅಧಿಕಾರಿಗಳ ಸ್ವಾರ್ಥಸಾಧನೆಗೆ ಬಳಕೆಯಾಗುವುದರಿಂದ ಮತ್ತು ಕಾರ್ಯಪರಿಣತಿಗಿಂತ ಹೆಚ್ಚಾಗಿ ಸ್ನೇಹ ಆಣತಿಯನುಸಾರ ಪ್ರಾಜೆಕ್ಟ್‌ಗಳು ಲಭ್ಯವಾಗುವುದರಿಂದ, ಗುಣಮಟ್ಟದ ಕಾಮಗಾರಿಗಳು ನಡೆಯುತ್ತಿಲ್ಲ. ನಮ್ಮ ರಾಜ್ಯದ ಶಿರೂರು ಗುಡ್ಡ ಕುಸಿತವು ಇದಕ್ಕೊಂದು ಜ್ವಲಂತ ಉದಾಹರಣೆ. ಗುಡ್ಡಗಾಡು ಪ್ರದೇಶಗಳಲ್ಲಿ ರಸ್ತೆ ನಿರ್ಮಿಸುವಾಗ ಅದಕ್ಕೆ ತಡೆಗೋಡೆಗಳನ್ನು ನಿರ್ಮಿಸಿ ಸಮತೋಲನವನ್ನು ಕಾಪಾಡಬೇಕಾಗುತ್ತದೆ. ಜತೆಗೆ ಗೋಡೆಯನ್ನು ಯಾವ ಕೋನದಲ್ಲಿ ನಿರ್ಮಿಸಬೇಕು ಹಾಗೂ ತೇವಾಂಶ ನಿರ್ವಹಣೆಗೆ ಎಲ್ಲೆಲ್ಲಿ ರಂಧ್ರಗಳನ್ನು ಕೊರೆಸಬೇಕು ಎಂಬ ವಿಷಯಗಳನ್ನೂ ಪರಿಗಣಿಸಬೇಕಾಗುತ್ತದೆ. ಆದರೆ ಅದು ಆಗುವುದೇ ಇಲ್ಲ!

ಶ್ರೀಸಾಮಾನ್ಯರ ಜೀವ ತೀರಾ ಅಗ್ಗವಾಗಿದೆ ಎಂಬುದಕ್ಕೆ ಮತ್ತಷ್ಟು ಉದಾಹರಣೆಗಳಿವೆ. ಸಾಮಾನ್ಯರಾದರೂ 'ಅಸಾಮಾನ್ಯ' ಎನಿಸಿಕೊಳ್ಳುವ ಐಎಎಸ್ ಅಧಿಕಾರಿ ಆಗಬೇಕೆಂಬ ಕನಸು ಹೊತ್ತು ರಾಜಧಾನಿಗೆ ಬಂದ ಮೂವರು ವಿದ್ಯಾರ್ಥಿಗಳು, ವ್ಯವಸ್ಥೆಯ ಭ್ರಷ್ಟತೆಯಿಂದಾಗಿ ನೆಲಮಹಡಿಯ ಗ್ರಂಥಾಲಯಕ್ಕೆ ನುಗ್ಗಿದ ನೀರಿನಲ್ಲಿ ಮುಳುಗಿ ಪ್ರಾಣ ಬಿಡಬೇಕಾಯಿತು. ಭಾರಿ ಮೊತ್ತದ ಬೋಧನಾ ಶುಲ್ಕವನ್ನು ಸಂಗ್ರಹಿಸುವ ತಥಾಕಥಿತ ಕೋಚಿಂಗ್ ಸೆಂಟರ್‌ಗಳು, ಅದರ ಅರ್ಧ ಮೊತ್ತಕ್ಕಾದರೂ ಸರಿಹೊಂದುವಂಥ ವ್ಯವಸ್ಥೆಯನ್ನು ಕಲ್ಪಿಸುವುದಿಲ್ಲ. ಪತ್ರಿಕಾ ವರದಿಯೊಂದರ ಪ್ರಕಾರ, ರಾಜ್ಯದ ಬೆಂಗಳೂರು, ಧಾರವಾಡ ಕೋಚಿಂಗ್ ಸೆಂಟರ್‌ಗಳಲ್ಲಿ ಕೂಡ ನೆಲಮಹಡಿಯಲ್ಲೇ ಗ್ರಂಥಾಲಯವಿರುವುದು ಕಂಡುಬಂದಿದೆ. ವಾಹನಗಳ ನಿಲುಗಡೆ ತಾಣದಲ್ಲೇ ಮಕ್ಕಳಿಗೆ ಓದುವ ವ್ಯವಸ್ಥೆ ಮಾಡಿರುವ ಭೂಪರೂ ಇದ್ದಾರೆ. ನೈತಿಕತೆಯ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಪ್ರವಚನ ನೀಡುವ ಪ್ರತಿಷ್ಠಿತ ಕೋಚಿಂಗ್ ಸೆಂಟರ್‌ಗಳ ಪ್ರಾಧ್ಯಾಪಕರು ಇಂಥ ಅವ್ಯವಸ್ಥೆಯ ಬಗ್ಗೆ ಏಕೆ ಮೌನ ವಹಿಸಿದ್ದಾರೆ? ಇದಕ್ಕೆ ಅವರ ಸಹಮತ ಕೂಡ ಇದೆಯೇ? ಅವರು ಈ ಅನಾಹುತವನ್ನು ಹೇಗೆ ಸಮರ್ಥಿಸಿಕೊಳ್ಳುವರು? ಆ ಮಕ್ಕಳ ಜೀವ ಏನಾದರೇನು, ಮತ್ತೊಬ್ಬರು ಅವರ ಸ್ಥಾನಕ್ಕೆ ಬರುತ್ತಾರೆ. ಇವರಿಗೆ ಸಿಗಬೇಕಾದ ಬೋಧನಾ ಶುಲ್ಕ ಹಾಗೂ ಉಸಿರುಗಟ್ಟಿಸುವ ಪುಟ್ಟ ಕೋಣೆಗಳ ಪಿಜಿ ಬಾಡಿಗೆಹಣ ಸಿಕ್ಕೇ ಸಿಗುತ್ತದೆ!

ದೆಹಲಿಯಲ್ಲಿ ನಡೆದ ಭಯಂಕರ ಅಗ್ನಿ ಅವಘಡದಲ್ಲಿ ಆಸ್ಪತ್ರೆಯಲ್ಲೇ 7 ಹಸುಗೂಸುಗಳ ಸಜೀವದಹನವಾಗಿದೆ. ಪ್ರಪಂಚದ ಪರಿಚಯವೇ ಇಲ್ಲದ ಕಂದಮ್ಮಗಳು ಅದರ ಕ್ರೂರದೃಷ್ಟಿಗೆ ಸಿಲುಕಿ ಬಲಿಯಾಗುವಂತಾಯಿತು. ಸಾಕಷ್ಟು ಆಪದ್ಬಾಂಧವರು ಅನೇಕ ಮಕ್ಕಳನ್ನು ರಕ್ಷಿಸುವಲ್ಲಿ ಯಶಸ್ವಿಯಾದರು. ಅನಧಿಕೃತ ವೈದ್ಯರಿಂದ ಸ್ಥಾಪನೆಯಾದ ಅನಧಿಕೃತ ಆಸ್ಪತ್ರೆಯ ಅಪ್ರಾಮಾಣಿಕ ವ್ಯವಸ್ಥೆಯನ್ನು ಭೇದಿಸಲು, ಹಸುಗೂಸುಗಳು ತಮ್ಮ ಜೀವವನ್ನೇ ಬೆಲೆಯಾಗಿ ತೆರಬೇಕಾಯಿತಲ್ಲಾ! ಇಂಥ ಕೋಮಲ ದೇಹದ ಕಂದಮ್ಮಗಳ ಬಲಿ ಪಡೆಯುವುದಕ್ಕಿಂತ ದೊಡ್ಡ ಪಾಪವು ಮತ್ತಾವುದೂ ಇರಲು ಸಾಧ್ಯವಿಲ್ಲ ಎನಿಸುತ್ತದೆ!

ಕೇರಳದ ಭೂಕುಸಿತದಿಂದ ಕೆಲವು ಮಕ್ಕಳು ಪೋಷಕರನ್ನು ಕಳೆದುಕೊಂಡು ತಬ್ಬಲಿಗಳಾದರೆ, ಕೆಲವು ಪೋಷಕರು ಮಕ್ಕಳನ್ನು ಕಳೆದುಕೊಂಡಿದ್ದಾರೆ. ಈ ಭೀಕರತೆಗೆ ಸಾಕ್ಷಿಯಾಗಿ ಸತ್ತು ಬದುಕಿದವರು ಮತ್ತೊಮ್ಮೆ ಬದುಕನ್ನು ಕಟ್ಟಿಕೊಳ್ಳಬೇಕಿದೆ. ಲಘುವಾಗಿ ಆಹಾರವನ್ನು ಸೇವಿಸುತ್ತಾ ಸುದೀರ್ಘ ಕಾರ್ಯಾಚರಣೆಯಲ್ಲಿ ತೊಡಗಿರುವ, ತಮ್ಮ ಪ್ರಾಣವನ್ನು ಒತ್ತೆಯಿಟ್ಟು ನಮ್ಮ ಪ್ರಾಣವನ್ನು ಕಾಪಾಡುವ ಸೈನಿಕರ ಋಣವನ್ನು ಈ ಜನ್ಮದಲ್ಲಿ ತೀರಿಸಲಾಗುವುದಿಲ್ಲ. ನಾವು ಸ್ವಲ್ಪ ದಿನಗಳ ಮಟ್ಟಿಗೆ ನಮ್ಮ ಊರಿನಿಂದ ದೂರವಾದರೆ ಏನೋ ಕಳೆದುಕೊಂಡಂತೆ ಭಾಸವಾಗುತ್ತದೆ. ಹೀಗಿರುವಾಗ, ಒಮ್ಮೆಲೇ ತಮ್ಮ ಊರಿನ ಸರ್ವನಾಶವನ್ನು ಕಂಡು ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡ ಜನರ ಸ್ಥಿತಿ ಹೇಗಾಗಿರಬೇಡ! ದೂರದಲ್ಲಿದ್ದುಕೊಂಡು ಇವನ್ನೆಲ್ಲ ನೋಡುತ್ತಿರುವ ನಮಗೆ ಇದೊಂದು ಆಘಾತಕಾರಿ ಸಿನಿಮಾ ಕಥೆಯಂತೆ ತೋರಬಹುದು; ಆದರೆ ಅದನ್ನು ಅನುಭವಿಸಿದವರಿಗೆ ಮಾತ್ರ ಅದರ ನಿಜವಾದ ನೋವು ತಿಳಿದಿರುತ್ತದೆ.

ಉತ್ತಮ ಕಾರ್ಯಗಳಿಗೆ ಶ್ರೇಯಸ್ಸನ್ನು ಪಡೆದುಕೊಳ್ಳುವ ಸರಕಾರವು ಕಳಪೆ ಕಾರ್ಯಗಳಿಗೆ ಹೊಣೆ ಹೊತ್ತು ನಿಂದನೆಯನ್ನೂ ಸ್ವೀಕರಿಸಬೇಕಾಗುತ್ತದೆ. ಒಬ್ಬ ಪ್ರಸಿದ್ಧ ವ್ಯಕ್ತಿಗೆ ಜೀವಬೆದರಿಕೆ ಬಂದರೆ ನಮ್ಮ ಸರಕಾರ ಎಷ್ಟೆಲ್ಲಾ ಭದ್ರತೆಯನ್ನು ಒದಗಿಸುತ್ತದೆ, ಆದರೆ ಸಾಮಾನ್ಯರ ಜೀವಕ್ಕೆ ಸಂಚಕಾರ ಒದಗಿದಾಗ ಏಕೆ ಭದ್ರತೆಯನ್ನು ಒದಗಿಸುವುದಿಲ್ಲ? ಪಶ್ಚಿಮ ಘಟ್ಟ ಪ್ರದೇಶದ ವಾಸಿಗಳಿಗೆ ದಶಕಗಳ ಹಿಂದೆಯೇ ಜೀವ ಬೆದರಿಕೆ ಒದಗಿದ್ದರೂ ಏಕೆ ಭದ್ರತೆಯನ್ನು ಒದಗಿಸಲಿಲ್ಲ? ರಾಜಕೀಯ ಸಿದ್ಧಾಂತಗಳ ಸಂಘರ್ಷದಲ್ಲಾಗಲಿ, ಸುದ್ದಿ ಮಾಧ್ಯಮಗಳ ಚರ್ಚೆಯಲ್ಲಾಗಲಿ, ಸರಕಾರದ ಪ್ರಮುಖ ಕಾರ್ಯಕಲಾಪಗಳಲ್ಲಾಗಲಿ, ತಮಗೆ ಲಾಭದಾಯಕವಲ್ಲದಿದ್ದರೆ ಜನನಾಯಕರು ಸಾಮಾನ್ಯರ ಸಮಸ್ಯೆಗಳ ಬಗ್ಗೆ ಮಾತನಾಡುವುದೇ ಇಲ್ಲವೇಕೆ? ಹೇಳುವವರು-ಕೇಳುವವರು ಯಾರೂ ಇಲ್ಲ ಎಂದೇ? ಒಂದು ದೇಶದಲ್ಲಿ ಸರಕಾರದ ಅವಶ್ಯಕತೆ ಹೆಚ್ಚಾಗಿರುವುದು ಸಾಮಾನ್ಯ ವರ್ಗದವರಿಗೇ ಹೊರತು ಪ್ರಭಾವಿಗಳಿಗಲ್ಲ. ಆದ್ದರಿಂದ ಸರಕಾರವು ಸಾಮಾನ್ಯ ವರ್ಗದವರಿಗೆ ಹೆಚ್ಚಿನ ಆದ್ಯತೆ ನೀಡಬೇಕು. ನಮ್ಮ ಸರಕಾರವು ಬಂಡವಾಳಶಾಹಿ ವ್ಯವಸ್ಥೆಯನ್ನು ಹೊಂದಿಲ್ಲ.

(ಲೇಖಕಿ ಹವ್ಯಾಸಿ ಬರಹಗಾರ್ತಿ)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇದು ಒಳ್ಳೆಯ ಸಂದೇಶ

ಇಂದು ಕಂಡಕಂಡವರಿಗೆ, ಕಂಡಕಂಡ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ಕೊಡುವ ಪದ್ಧತಿ ಮಿತಿ ಮೀರಿದ್ದು ಆ ಪದವಿಗೆ ಬೆಲೆಯೇ ಇಲ್ಲದಂತಾಗಿದೆ. ಯಾರೋ ಯಾವುದೋ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ ಅಥವಾ ಮಾಡುತ್ತಿದ್ದಾರೆಂದರೆ ಅಂಥವರಿಗೆ ವಿ.ವಿ.ಗಳು ಘಟಿಕೋತ್ಸವದ ಸಮಯದಲ್ಲಿ ಗೌರವ ಡಾಕ್ಟರೇಟ್ ಘೋಷಿಸಿಬಿಡುತ್ತವೆ. ಕೆಲವೊಮ್ಮೆ ಹೀಗೆ ಘೋಷಿಸಲ್ಪಟ್ಟವರಿಗೇ ಮುಜುಗರವಾಗುವ ಸ್ಥಿತಿಯನ್ನೂ ಕಂಡಾಗಿದೆ. ಭಾರತದ ರಾಜಕಾರಣಿಯೊಬ್ಬರಿಗೆ ವಿದೇಶಿ ವಿಶ್ವವಿದ್ಯಾಲಯವೊಂದು ಗೌರವ ಡಾಕ್ಟರೇಟ್ ಘೋಷಿಸಿದಾಗ, ಹಾಗೆ ಹೆಸರಿಸಲ್ಪಟ್ಟ ವ್ಯಕ್ತಿ ಅದರ ಸ್ವೀಕಾರಕ್ಕೆ ವಿದೇಶಕ್ಕೆ ಹೋಗಿಯೂ ಆಗಿತ್ತು; ಆದರೆ ತರುವಾಯದಲ್ಲಿ ಅವರಿಗೆ ಏನನಿಸಿತೋ ಏನೋ, ತಮ್ಮನ್ನು ಯಾರೂ 'ಡಾಕ್ಟರ್' ಎಂಬ ವಿಶೇಷಣದೊಂದಿಗೆ ಸಂಬೋಧಿಸಬಾರದು ಎಂಬ ಮನವಿ ಅವರಿಂದಲೇ ಬಂದಿತ್ತು. ಹೀಗಾಗಿ ಅವರ ಹೆಸರಿನ ಹಿಂದೆ ಇಂದಿಗೂ ಯಾರೂ ಆ ವಿಶೇಷಣವನ್ನು ಜೋಡಿಸುತ್ತಿಲ್ಲ.

ಡಾಕ್ಟರೇಟ್ ಎನ್ನುವುದು ಸತತ ಸಂಶೋಧನೆಯಿಂದ ವಿಶೇಷವಾದದ್ದೇನನ್ನೋ ಕಂಡುಹಿಡಿದು, ಸೂಕ್ತ ಮಾರ್ಗದರ್ಶಕರನ್ನು ಹೊಂದಿ, ಸಮಗ್ರ ಪ್ರಬಂಧ ಮಂಡಿಸಿ, ಅದು ವಿಶ್ವವಿದ್ಯಾಲಯದ ಹಂತದಲ್ಲಿ ನುರಿತವರಿಂದ ಅವಲೋಕಿಸಲ್ಪಟ್ಟು, ಬರೆದ ಪ್ರಬಂಧ ನಿಜಕ್ಕೂ ಸ್ವಂತದ್ದೋ ಅಥವಾ ಕೃತಿಚೌರ್ಯದ ಪರಿಣಾಮವೋ, ಆ ಪ್ರಬಂಧ ವಿಷಯದ ಮೇಲೆ ಏನಾದರೂ ಹೊಸಬೆಳಕು ಚೆಲ್ಲುವಂಥದ್ದೋ ಇತ್ಯಾದಿ ಚರ್ಚೆ-ವಿಮರ್ಶೆ- ವಿಶ್ಲೇಷಣೆಗಳಾಗಿ, ಮತ್ತೆ 'ವೈವಾ' ಅಂತ ಸಂದರ್ಶನ ನಡೆದು, ಅದರಲ್ಲೂ ಉತ್ತೀರ್ಣಗೊಂಡವರಿಗೆ ಕೊಡಮಾಡುವ ಪದವಿ. ಇದು ಪರಿಶ್ರಮಕ್ಕೆ ಸಿಗುವ ಫಲವೇ ಹೊರತು 'ಗೌರವ' ಸೂಚಕವಲ್ಲ.

ಇಲ್ಲಿ ಇನ್ನೊಂದು ವಿಶೇಷವೆಂದರೆ, ನಟ, ರಾಜಕಾರಣಿ, ಕ್ರೀಡಾಪಟು, ಸಾಮಾಜಿಕ ಕಾರ್ಯಕರ್ತ ಅಂತೆಲ್ಲ ಕರೆಯಿಸಿಕೊಳ್ಳುವವರು ತಂತಮ್ಮ ಕೆಲಸದ ಫಲವನ್ನು ಅನುಭವಿಸಿಯೇ ಇರುತ್ತಾರೆ. ನಟ ಸುದೀಪ್ ತಮ್ಮ ನಟನೆಗೆ ಉತ್ತಮ ಗೌರವಧನ ಪಡೆದೇ ಇರುತ್ತಾರೆ. ಅದಕ್ಕೆ ಮತ್ತೆ ಗೌರವ ಡಾಕ್ಟರೇಟ್ ಕೊಡುವ ಅವಶ್ಯಕತೆಯಾದರೂ ಏನು? ಕೊಡುವ ಸಮ್ಮಾನ, ಪ್ರಶಸ್ತಿ ಗೌರವಯುತವಾಗಿರಬೇಕೇ ಹೊರತು ಪ್ರಸಾದ ಹಂಚಿದ ಹಾಗೆ ಅಥವಾ ಮೀಸಲಾತಿ ಲೆಕ್ಕದಲ್ಲಿ ಕೊಡುವಂಥದ್ದಾಗಬಾರದು. ಅಂದಾಗ ಮಾತ್ರ ಅದಕ್ಕೊಂದು ಅರ್ಥ ಬರುವುದು. ಇಲ್ಲವಾದರೆ, ಸುದೀಪ್ ನಿರಾಕರಿಸಿದಂತೆ, 'ಗೌರವ ಡಾಕ್ಟರೇಟ್' ಅನ್ನು ಒಪ್ಪಿಕೊಳ್ಳುವುದಕ್ಕಿಂತ ನಿರಾಕರಿಸುವವರ ಸಂಖ್ಯೆಯೇ ಜಾಸ್ತಿ ಆದೀತು. ಗೌರವ ಡಾಕ್ಟರೇಟ್ ತನ್ನ 'ಗೌರವ'ವನ್ನು ಮೊದಲು ಕಾಪಾಡಿಕೊಳ್ಳಬೇಕು!

- ಶಂಕರನಾರಾಯಣ ಭಟ್, ಮಾಡಗೇರಿ

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ನ್ಯಾಕ್

● **ಪ್ರಭಾಕರ ಶರ್ಮ, ಚಾಮರಾಜಪೇಟೆ**
ಪ್ರತಿ ಮನೆಯಲ್ಲೂ ಹೆಂಡತಿಯೇ ಬಾಸ್ ಆಗಿರುವುದೇಕೆ?
- ಗಂಡನ ಜತೆ ಮೊದಲೇ ಮ್ಯಾಚ್ ಫಿಕ್ಸಿಂಗ್ ಆಗಿರುತ್ತದೆ!

● **ವಿ. ಹೇಮಂತಕುಮಾರ, ಬೆಂಗಳೂರು**
ಹಣಕ್ಕೂ ಬುದ್ಧಿಗೂ ಸಂಬಂಧ ಇಲ್ಲ ಅಂತಾರೆ ನಿಜಾನಾ ಭಟ್ರೇ?
- ಅದಕ್ಕಾಗಿಯೇ ಕೆಲವರಿಗೆ ದರಿದ್ರ ಹೋದರೂ ದರಿದ್ರಬುದ್ಧಿ ಹೋಗುವುದಿಲ್ಲವಲ್ಲ ಅನ್ನೋದು!

● **ರೂಪ ಶರವಣ, ತ್ಯಾಗರಾಜನಗರ**
ಮೋಸ ಹೋದ ಮೇಲೆಯೇ ಎಲ್ಲರಿಗೂ ಬುದ್ಧಿ ಬರುತ್ತಲ್ವ?
- ಇನ್ನು ಕೆಲವರಿಗೆ ಪದೇ ಪದೇ ಮೋಸ ಹೋಗುತ್ತಿರಬೇಕಂತೆ!

● **ತ್ಯಾಗರಾಜ ಬಿ.ಗೌಡ, ಮಂಡ್ಯ**
ರಾಜಕೀಯದಲ್ಲಿ ನಿವೃತ್ತಿ ಆಗಲು ಒಳ್ಳೆಯ ಸಮಯ ಯಾವುದು?
- ಹಿಂದಿನ ವರ್ಷ!

● **ರವಿ ಬಾಕಳೆ, ಶಿರಾ**
ನನ್ನ ಮಾತು ಕೇಳದಿದ್ದರೆ ಬಂಡಾಯ ಅಂತಾಳಲ್ಲ ನನ್ನ ಹೆಂಡತಿ?
- ಒಳಒಪ್ಪಂದ ಮಾಡಿಕೊಳ್ಳೋಣ ಎಂದು ಹೇಳಬಾರದೇ?!

● **ಜಗನ್ನಾಥ ಸಿ.ಕೆ., ದಾಂಡೇಲಿ**
ಜಯವೀರ ವಿಕ್ರಂ ಸಂಪತ್ ಗೌಡರ ಹೆಸರು ಯಾಕೆ ಅಷ್ಟು ಉದ್ದ ಭಟ್ರೇ?
- ಅವರ ಅಪ್ಪ ಹೆಸರಿಡುವ ಬದಲು ವಾಕ್ಯವನ್ನೇ ಇಟ್ಟರಂತೆ!

● **ಧಾರಿಣಿ, ಬಸವೇಶ್ವರನಗರ**
ಹೇಮಾಮಾಲಿನಿಗೆ ವಯಸ್ಸಾಗುವುದಿಲ್ಲವಾ?
- ಅರವತ್ತರ ನಂತರ ಅವಳು ಕೌಂಟ್ ಮಾಡುವುದನ್ನೇ ಬಿಟ್ಟುಬಿಟ್ಟಿದ್ದಾಳಂತೆ!

● **ವಿಶ್ವನಾಥ ಜಿ.ಪಾಟೀಲ, ದಾವಣಗೆರೆ**
ಭಟ್ರೇ, ಪ್ರೀತಿ ಮಾಡು ಅಂತ ಕೋಪದಲ್ಲಿ ಹೇಳ್ತಾಳಲ್ಲ?
- ಇದು ವಿಕೋಪಕ್ಕೆ ಹೋಗದಿದ್ದರೆ ಸಾಕು!

● **ಎಂ ಪರಮೇಶ್ವರ, ಮದ್ದಿಹಳ್ಳಿ**
ಭಟ್ರೇ, ಇತ್ತೀಚಿನ ದಿನಗಳಲ್ಲಿ ಏಕವಚನ ಮಾಮೂಲಿ ಆಗ್ಗಿದೆಯಲ್ಲ?
- ಅಂದ್ರೆ ಜನರ ಮಧ್ಯೆ ಸಲುಗೆ ಹೆಚ್ಚುತ್ತಿದೆ ಎಂದರ್ಥ!

● **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಡಿ.ಕೆ.ಶಿವಕುಮಾರ್ ಈ ಮಧ್ಯೆ ಮಾತಾಡಿದ್ರೆ ಶಿಸ್ತು ಮುಖ್ಯ ಅಂತಾರಲ್ಲ? ಏನು ಇದರ ಮರ್ಮ?
- ಯಾವುದು ಕಮ್ಮಿಯಾಗಿರುತ್ತೋ ಅದರ ಬಗ್ಗೆಯೇ ಹೆಚ್ಚಿನ ಗಮನವಿರುತ್ತದಲ್ಲ?!

● **ನಾಗೇಶ ತುರುವೇಕೆರೆ, (ಇಮೇಲ್ ಮೂಲಕ)**
ಭಟ್ರೇ, ಪ್ರಕಾಶ ರೈ ನನಗೆ ಆಶಾವಾದಿಯಂತೆ ಕಾಣುತ್ತಾನಲ್ಲ?
- ಹೂಂ.. ಜನ ಇನ್ನೂ ತನ್ನ ಮಾತನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಾರೆ ಎಂದು ಆತ ಭಾವಿಸಿದ್ದಾನಲ್ಲ?!

ಇನ್ನೆಷ್ಟು ಕಾಲ ಈ ಸಾವಿನ ನರ್ತನ ನೋಡಬೇಕು?

ಭೂಕುಸಿತದ ಭೀತಿ ವಯನಾಡಿನಿಂದ ಹಿಡಿದು ಹಿಮಾಲಯದವರೆಗೂ ಇದೆ. ಇದು ಒಂದು ಕಡೆಯಾದರೆ, ಅತ್ತ ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧಕ್ಕೆ ಅಮೆರಿಕ ಕೂಡ ಪ್ರವೇಶ ಮಾಡಿದರೆ ಕತೆ ಏನಾಗುತ್ತದೆ ಎಂದು ಭಯವಾಗುತ್ತಿದೆ.

ಸಂಗತ
ಡಾ.ವಿಜಯ್ ದರಡಾ
vveditoped@gmail.com

ಈ ಸಾವಿನ ರುದ್ರನರ್ತನ ಮತ್ತು ವಿನಾಶವನ್ನು ನೋಡಿ ತುಂಬಾ ವಿಚಲಿತನಾಗಿದ್ದೇನೆ. ಕೇರಳದ ವಯನಾಡಿನಲ್ಲಿ ಸಂಭವಿಸಿದ ಭಯಾನಕ ಭೂಕುಸಿತವು 300ಕ್ಕೂ ಹೆಚ್ಚು ಮುಗ್ಧ ಜೀವಗಳನ್ನು ಬಲಿ ತೆಗೆದುಕೊಂಡಿದೆ. ಇದೇ ವೇಳೆ, ಹಿಮಾಚಲ ಪ್ರದೇಶದಿಂದ ಹಿಡಿದು ಉತ್ತರಾಖಂಡದವರೆಗಿನ ಹಿಮಾಲಯದ ಪರ್ವತ ಶ್ರೇಣಿಯಲ್ಲಿ ಉಂಟಾಗುತ್ತಿರುವ ಭೂಕುಸಿತ ಕೂಡ ಭಯ ಹುಟ್ಟಿಸುವಂತಿದೆ. ಇಂಥ ಎಲ್ಲ ನೈಸರ್ಗಿಕ ದುರಂತಗಳಿಗೆ ಮೂಲಕಾರಣ ಸರಕಾರಗಳ ನಿರ್ಲಕ್ಷ್ಯ ಮತ್ತು ವಿವೇಚನೆರಹಿತ ಯೋಜನೆಗಳು ಎಂದು ಹೇಳುವುದರಲ್ಲಿ ನನಗೆ ಯಾವುದೇ ಹಿಂಜರಿಕೆಯಿಲ್ಲ. ನಾನಿಲ್ಲಿ ನಿರ್ಲಕ್ಷ್ಯ ಎಂಬ ಪದ ಏಕೆ ಬಳಸುತ್ತಿದ್ದೇನೆ ಅಂದರೆ, ಒಂದಲ್ಲಾ ಒಂದು ದಿನ ಹೀಗಾಗುತ್ತದೆ ಎಂಬುದು ಸರಕಾರಗಳಿಗೆ ಹಿಂದೆಯೇ ಗೊತ್ತಿತ್ತು. ಆದರೂ ಅವು ಅಪಾಯಕಾರಿ ಪ್ರದೇಶಗಳಲ್ಲಿ ಬದುಕುತ್ತಿರುವ ಜನರಿಗೆ ಇದರ ಬಗ್ಗೆ ಅರಿವು ಮೂಡಿಸಿ, ಎಚ್ಚರಿಕೆ ನೀಡಿ, ಅವರನ್ನು ಅಲ್ಲಿಂದ ಸ್ಥಳಾಂತರ ಮಾಡುವ ಕೆಲಸ ಮಾಡಲಿಲ್ಲ. ಅದಕ್ಕೆ ಏಕೈಕ ಕಾರಣವೇನೆಂದರೆ, ಅವರು ಬಡವರು! ಈ ಪ್ರದೇಶಗಳಲ್ಲಿ ನೆಲ ಸಮತಟ್ಟು ಮಾಡಿ ಸೋಕಾಲ್ಡ್ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ಹಾಗೂ ಕೃಷಿ ಚಟುವಟಿಕೆಯನ್ನು ವಿಸ್ತರಿಸಲು ಮರಗಳನ್ನು ಕಡಿಯಲಾಗುತ್ತಿತ್ತು. ವರ್ಷದಿಂದ ವರ್ಷಕ್ಕೆ ಈ ಸ್ಥಳಗಳು ಅಪಾಯದ ಮುನ್ಸೂಚನೆಯನ್ನು ಹೆಚ್ಚಿಸುತ್ತಾ ಹೋಗಿದ್ದವು. ಹಾಗಿರುವಾಗ ಅಲ್ಲಿ ವಾಸಿಸುವ ಬಡ ಜನರಿಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಬೇರೆ ಸ್ಥಳದಲ್ಲಿ ಮನೆಗಳನ್ನು ಕಟ್ಟಿಕೊಡಬಹುದಿತ್ತಲ್ಲವೇ? ಆದರೆ ದುರದೃಷ್ಟವಶಾತ್ ಯಾರೂ ಅದರ ಬಗ್ಗೆ ಯೋಚನೆಯನ್ನೇ ಮಾಡಲಿಲ್ಲ. ಏಕೆಂದರೆ ಯಾರಿಗೂ ಅಲ್ಲಿ ಬದುಕುತ್ತಿರುವ ಬಡ ಜನರ ಬಗ್ಗೆ ಕಳಕಳಿಯಿರಲಿಲ್ಲ!

ಇದು ನಮ್ಮ ದೇಶದ ಕತೆಯಾಯಿತು. ಈಗ ಒಮ್ಮೆ ಮಧ್ಯಪ್ರಾಚ್ಯದ ಕಡೆ ನೋಡೋಣ. ಅಲ್ಲಿ ಹಮಾಸ್ ಮತ್ತು ಇಸ್ರೇಲ್ ನಡುವೆ ನಡೆಯುತ್ತಿರುವ ಯುದ್ಧದಲ್ಲಿ ಸಿಲುಕಿ ಜೀವಭಯದಿಂದ ನಡುಗುತ್ತಿರುವ ಸಾಮಾನ್ಯ ಪ್ಯಾಲೆಸ್ತೀನಿ ನಾಗರಿಕರ ಬಗ್ಗೆ ಯಾರೂ ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಹಮಾಸ್‌ನವರು ಇಸ್ರೇಲ್ ಮೇಲೆ ದಾಳಿ ನಡೆಸಿದಾಗ ಅಕ್ಟೋಬರ್‌ನಲ್ಲಿ ನಾನೊಂದು ಅಂಕಣ ಬರೆದಿದ್ದೆ. ಈ ಯುದ್ಧದಲ್ಲಿ ಅತಿಹೆಚ್ಚು ನಷ್ಟ ಅನುಭವಿಸುವವರು ಮುಗ್ಧ ಪ್ಯಾಲೆಸ್ತೀನಿ ಜನಸಾಮಾನ್ಯರು ಎಂದು ಅದರಲ್ಲಿ ಹೇಳಿದ್ದೆ. ಈಗ ಆಗುತ್ತಿರುವುದು ಕೂಡ ಅದೇ. ಪಾಪದ ಜನರು, ಏನೂ ತಪ್ಪು ಮಾಡಿಲ್ಲದ ಸಂಸಾರಸ್ಥರು ಕಷ್ಟ ಅನುಭವಿಸುತ್ತಿದ್ದಾರೆ. ಗಾಜಾಪಟ್ಟಿಯಲ್ಲಿ ಹೆಚ್ಚುಕಮ್ಮಿ 40,000 ಪ್ಯಾಲೆಸ್ತೀನಿಯನ್ನರು ಹತ್ಯೆಯಾಗಿದ್ದಾರೆ. 85,000ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಮಹಿಳೆಯರು ಮತ್ತು ಮಕ್ಕಳು ಅತಿಹೆಚ್ಚು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಯುದ್ಧಕ್ಕೆ ಕೊನೆಯೆಂಬುದೇ ಇರುವಂತೆ ಕಾಣಿಸುತ್ತಿಲ್ಲ. ಸದ್ಯಕ್ಕಂತೂ ಎರಡು ದೇಶಗಳ ನಡುವಿನ ಸಮಸ್ಯೆಗೆ ಪರಿಹಾರವೂ ತೋಚುತ್ತಿಲ್ಲ. ಈಗ ನೋಡಿದರೆ ಹಮಾಸ್‌ನ ಅತ್ಯುಚ್ಚ ರಾಜಕೀಯ ನಾಯಕ ಇಸ್ಮಾಯಿಲ್ ಹನಿಯೆ ಕೂಡ ಹತ್ಯೆಗೀಡಾಗಿದ್ದಾರೆ. ಅವರ ಹತ್ಯೆಯ ಬಳಿಕ ಎದ್ದಿರುವ ಪ್ರಶ್ನೆ: ಮುಂದೇನು? ಹನಿಯೆ ಹತ್ಯೆಯು ಇರಾನ್‌ಗೆ ಪ್ರತಿಷ್ಠೆಯ ವಿಷಯವಾಗಿ ಮಾರ್ಪಟ್ಟಿದೆ. ಏಕೆಂದರೆ ಅವರು ಹತ್ಯೆಯಾಗಿದ್ದು ಇರಾನ್‌ನಲ್ಲಿ. ಅವರು ಇರಾನ್‌ಗೆ ಆ ದೇಶದ ಹೊಸ ಅಧ್ಯಕ್ಷ ಮಸೌದ್ ಪೆಜೆಷ್ಕಿಯಾನ್ ಅವರ ಅಧಿಕಾರ ಸ್ವೀಕಾರ ಸಮಾರಂಭಕ್ಕೆ ಅತಿಥಿಯಾಗಿ ತೆರಳಿದ್ದರು. ಅದೇ ಸಮಾರಂಭಕ್ಕೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಕೂಡ ಭಾರತವನ್ನು ಪ್ರತಿನಿಧಿಸಿ ತೆರಳಿದ್ದರು. ಸಮಾರಂಭದ ನಂತರ ಹನಿಯೆ ಅವರು ಇರಾನ್‌ನ ನೂತನ ಅಧ್ಯಕ್ಷರನ್ನು ಭೇಟಿಯಾಗಿ ಶುಭ ಕೋರಿದ್ದರು. ಬಳಿಕ ದೇಶದ ಅತಿಥಿಯಾಗಿ ಇರಾನ್‌ನ ರಾಜಧಾನಿ ತೆಹರಾನ್‌ನಲ್ಲಿರುವ ಅತ್ಯಂತ ಭದ್ರತೆಯ ಮತ್ತು ದೇಶದ ಉತ್ಕೃಷ್ಟ ರಕ್ಷಣಾ ಪಡೆಯಾದ ಇಸ್ಲಾಮಿಕ್ ರೆವೊಲ್ಯೂಷನರಿ ಗಾರ್ಡ್



ಕೋರ್‌ನವರ ತೀವ್ರ ಕಣ್ಗಾವಲಿನಲ್ಲಿದ್ದ ಪ್ರದೇಶದಲ್ಲಿ ಅವರು ತಂಗಿದ್ದರು. ಆದರೂ ಅವರನ್ನು ಹತ್ಯೆಗೈಯಲಾಯಿತು. ಇದರ ಜವಾಬ್ದಾರಿಯನ್ನು ಇಸ್ರೇಲ್ ಬಹಿರಂಗವಾಗಿ ಹೊತ್ತುಕೊಂಡಿಲ್ಲ. ಆದರೆ ಎಲ್ಲರೂ ಇದು ಇಸ್ರೇಲ್‌ನದೇ ಕೆಲಸ ಎಂದು ದೋಷಾರೋಪಣೆ ಮಾಡುತ್ತಿದ್ದಾರೆ. ಈ ಹಿಂದೆಯೂ ಹನಿಯೆನನ್ನು ಹತ್ಯೆಗೈಯಲು ನಾಲ್ಕು ಬಾರಿ ವಿಫಲ ಯತ್ನಗಳಾಗಿದ್ದವು. ಅವರ ಕುಟುಂಬದ 10 ಸದಸ್ಯರನ್ನು ಹತ್ಯೆಗೈಯಲಾಗಿತ್ತು. ಆ ಹತ್ಯೆಯ ಹೊಣೆಯನ್ನು ಸ್ವತಃ ಇಸ್ರೇಲ್ ತೆಗೆದುಕೊಂಡಿತ್ತು. ಹನಿಯೆ ಹತ್ಯೆಯ ಬಳಿಕ ಇರಾನ್‌ನ ಪರಮೋಚ್ಚ ನಾಯಕ ಅಯೋತೊಲ್ಲಾ ಅಲಿ ಖೊಮೇನಿ ಹೇಳಿಕೆ ನೀಡಿ, ಹನಿಯೆ ಸಾವಿನ ಸೇಡು ತೀರಿಸಿಕೊಳ್ಳುವುದು ಇರಾನ್‌ನ ಆದ್ಯ ಕರ್ತವ್ಯ ಎಂದು ಹೇಳಿದ್ದರು. ಇಸ್ರೇಲ್‌ನ ದಿನಪತ್ರಿಕೆಯೊಂದು ಮೂಲಗಳನ್ನು ಉಲ್ಲೇಖಿಸಿ ಮಾಡಿರುವ ವರದಿಯ ಪ್ರಕಾರ ಅಯೋತೊಲ್ಲಾ ಖೊಮೇನಿ ಈಗಾಗಲೇ ಇಸ್ರೇಲ್ ಮೇಲೆ ದಾಳಿ ನಡೆಸುವಂತೆ ಇರಾನ್‌ನ ಮಿಲಿಟರಿಗೆ ಆದೇಶ ನೀಡಿದ್ದಾರೆ. ಒಂದು ವೇಳೆ ಇರಾನ್ ಈ ಹತ್ಯೆಯ ಬಳಿಕ ಏನೂ ಮಾಡದೆ ಸುಮ್ಮನೆ ಕುಳಿತರೆ ಅದು ದುರ್ಬಲ ದೇಶ ಎಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬ್ರ್ಯಾಂಡ್ ಆಗಬೇಕಾಗುತ್ತದೆ. ತಾನು ದುರ್ಬಲ ದೇಶವೆಂದು ಗುರುತಿಸಿಕೊಳ್ಳಲು ಇರಾನ್‌ಗೆ ಬಿಲ್‌ಕುಲ್ ಇಷ್ಟವಿಲ್ಲ.

ಇಷ್ಟೆಲ್ಲ ಆಗುತ್ತಿರುವಾಗ ಅಮೆರಿಕ ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಅದು ಈಗಾಗಲೇ ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ತಡೆಯುವಂತೆ ಇರಾನ್ ಮೇಲೆ ಪರೋಕ್ಷವಾಗಿ ಒತ್ತಡ ಹೇರಲಾರಂಭಿಸಿದೆ. ಅದೇ ವೇಳೆ, ಅಮೆರಿಕದ ರಕ್ಷಣಾ ಸಚಿವ ಲಾಯ್ಡ್ ಆಸ್ಟಿನ್ ಅವರು ಇರಾನ್‌ಗೆ ನೇರವಾದ ಎಚ್ಚರಿಕೆ ಕೂಡ ನೀಡಿದ್ದಾರೆ. ಒಂದು ವೇಳೆ ಇಸ್ರೇಲ್ ಮೇಲೇನಾದರೂ ಇರಾನ್ ದಾಳಿ ಆರಂಭಿಸಿದರೆ ಇಸ್ರೇಲ್‌ನ ನೆರವಿಗೆ ಅಮೆರಿಕ ಧಾವಿಸಲಿದೆ ಎಂದು ಅವರು ಹೇಳಿದ್ದಾರೆ. ಇದರ ಅರ್ಥ, ಇಸ್ರೇಲ್ ಮತ್ತು ಇರಾನ್ ನಡುವೆ ಯುದ್ಧ ಆರಂಭವಾದರೆ ಅಮೆರಿಕ ನೇರವಾಗಿ ಮಧ್ಯಪ್ರವೇಶ ಮಾಡುತ್ತದೆ. ಅಂದರೆ ಅದೂ ರಣರಂಗಕ್ಕೆ ಇಳಿಯುತ್ತದೆ. ಈ ಸನ್ನಿವೇಶದಲ್ಲಿ ಚೀನಾದ ಪಾತ್ರವನ್ನೂ ಗಮನಿಸುವುದು ಮುಖ್ಯ. ಗಾಜಾಪಟ್ಟಿಯಲ್ಲಿ ನಡೆಯುತ್ತಿರುವ ಹತ್ಯಾಕಾಂಡವನ್ನು ಕಡೆಗಣಿಸಲು ಸಾಧ್ಯವಿಲ್ಲ ಎಂದು ಇತ್ತೀಚೆಗಷ್ಟೇ ಚೀನಾ ಹೇಳಿದೆ. ನನ್ನ ಪ್ರಕಾರ ಚೀನಾ ಇಂಥ ವಾಗ್ಯುದ್ಧದಲ್ಲಿ ತೊಡಗಿಸಿಕೊಳ್ಳಬಹುದೇ ಹೊರತು ಮಧ್ಯಪ್ರಾಚ್ಯದ ಸಂಘರ್ಷದಲ್ಲಿ ಸ್ವತಃ ಪ್ರವೇಶ ಮಾಡಿ ಮೈಮೇಲೆ ಅಪಾಯ ಎಳೆದುಕೊಳ್ಳುವಂಥ ಕೆಲಸವನ್ನು ಮಾಡುವುದಿಲ್ಲ. ಹಾಗಿದ್ದರೆ ಹಮಾಸ್‌ಗೆ ಚೀನಾ ಆರ್ಥಿಕ ನೆರವು ನೀಡಲಿದೆಯೇ? ಅಂಥ ಸಾಧ್ಯತೆ ಹೆಚ್ಚಿದೆ.

ಈಗ ಮೂಡುವ ಇನ್ನೊಂದು ಪ್ರಶ್ನೆ, ಪ್ರಸ್ತುತ ಪರಿಸ್ಥಿತಿಯಲ್ಲಿ ಸೌದಿ ಅರೇಬಿಯಾ ಏನು ಮಾಡುತ್ತದೆ? ಏಕೆಂದರೆ ಅದು ಮಧ್ಯಪ್ರಾಚ್ಯದ ಅತ್ಯಂತ ಪ್ರಬಲ ಮತ್ತು ಶ್ರೀಮಂತ ದೇಶಗಳಲ್ಲಿ ಒಂದು. ಸೌದಿ ಅರೇಬಿಯಾ ಯಾವಾಗಲೂ ತಾನು ಮುಸ್ಲಿಂ ದೇಶಗಳಿಗೆ ನಾಯಕನಾಗಬೇಕು ಎಂಬ ಮಹತ್ವಾಕಾಂಕ್ಷೆ ಹೊಂದಿದೆ. ಅದರ ಜತೆಗೆ ಅದು ಇಸ್ರೇಲ್ ಮತ್ತು ಅಮೆರಿಕದೊಂದಿಗೆ ಒಳ್ಳೆಯ ಸಂಬಂಧವನ್ನೂ ಇರಿಸಿಕೊಂಡಿದೆ. ಸದ್ಯದಲ್ಲೇ ಇಸ್ರೇಲ್ ಮತ್ತು ಸೌದಿ ಅರೇಬಿಯಾದ ನಡುವೆ ಶಾಂತಿ ಒಪ್ಪಂದವೊಂದು ಏರ್ಪಡುವುದಿದೆ. ವಿಶ್ವಸಂಸ್ಥೆಯಲ್ಲಿ ನಿಂತು ಇಸ್ರೇಲ್‌ನ ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಾಹು ಕೂಡ ಇದನ್ನು ಹೇಳಿದ್ದರು. 'ಇಸ್ರೇಲ್ ಮತ್ತು ಸೌದಿ ಅರೇಬಿಯಾ ನಡುವೆ ಶಾಂತಿ ಒಪ್ಪಂದ ಏರ್ಪಡುವುದು ಅನಿವಾರ್ಯ. ಅದರಿಂದ ಅರಬ್-ಇಸ್ರೇಲಿ ಸಂಘರ್ಷ ಕೊನೆಯಾಗುತ್ತದೆ. ತನ್ಮೂಲಕ ಇಸ್ರೇಲ್ ಮತ್ತು ಇನ್ನಿತರ ಅರಬ್ ದೇಶಗಳ ನಡುವಿನ ಸಂಬಂಧ ಸಹಜ ಸ್ಥಿತಿಗೆ ಬರುತ್ತದೆ. ಇದು ಪ್ಯಾಲೆಸ್ತೀನ್ ಜತೆಗೆ ಶಾಂತಿ ಸ್ಥಾಪನೆಯ ಪ್ರಕ್ರಿಯೆಯನ್ನು ಮುಂದಕ್ಕೆ ಕೊಂಡೊಯ್ಯುವುದಕ್ಕೂ ನೆರವಾಗುತ್ತದೆ' ಎಂದು ನೆತನ್ಯಾಹು ಹೇಳಿದ್ದರು. ಆದರೆ ಅಷ್ಟರಲ್ಲೇ ಇಸ್ರೇಲ್ ಮೇಲೆ ಹಮಾಸ್ ಭೀಕರ ದಾಳಿ ನಡೆಸಿ ಸಾವಿರಾರು ನಾಗರಿಕರನ್ನು ಕೊಂದುಹಾಕಿತು. ಅಲ್ಲಿಗೆ, ಹಮಾಸ್‌ನಿಂದ ಸೌದಿ ಅರೇಬಿಯಾ ಅಂತರ ಕಾಯ್ದುಕೊಂಡಿದ್ದರೂ ಇಸ್ರೇಲ್ ಜತೆಗಿನ ಶಾಂತಿ ಸ್ಥಾಪನೆಯ ಸಾಧ್ಯತೆಗಳು ಧ್ವಂಸಗೊಂಡವು.

ಇನ್ನೊಂದು ಕಡೆ, ಟರ್ಕಿಯ ಅಧ್ಯಕ್ಷ ರೀಸೆಪ್ ತಯ್ಯಿಪ್ ಎರ್ಡೋಗನ್ ಕೂಡ 'ಅಗತ್ಯಬಿದ್ದರೆ ನಾವು ಇಸ್ರೇಲ್ ಮೇಲೆ ದಾಳಿ ನಡೆಸುತ್ತೇವೆ' ಎಂದು ಹೇಳಿದ್ದಾರೆ. ಅದಕ್ಕೆ ಬಹಳ ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿರುವ ಇಸ್ರೇಲ್, 'ಅಂಥ ಯಾವುದೇ ದುಸ್ಸಾಹಸಕ್ಕೆ ಕೈಹಾಕಿದರೂ ನಿಮಗೆ ಸದ್ದಾಂ ಹುಸೇನ್‌ಗೆ ಆದ ಗತಿಯೇ ಬಂದೆರಗುತ್ತದೆ' ಎಂದು ಹೇಳಿದೆ. ಇದರರ್ಥ ಇಷ್ಟೆ. ಎಂಥದೇ ಬೆದರಿಕೆಗೂ ಇಸ್ರೇಲ್ ಜಗ್ಗುವುದಿಲ್ಲ. ಅದು ಯಾರ ಮುಂದೆಯೂ ಮಂಡಿಯೂರುವುದಿಲ್ಲ. ಅಯ್ಯೋ ದೇವರೇ, ಈ ಪ್ರದೇಶಕ್ಕೆ ಅದೆಂಥಾ ದುರ್ಗತಿ ಬಂದೆರಗಿದೆಯೋ. ಯಾರೂ ಹೊಂದಾಣಿಕೆಗೆ ಸಿದ್ಧರಿಲ್ಲ. ಯಾರೂ ರಕ್ತಪಾತದ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ.

ಮಧ್ಯಪ್ರಾಚ್ಯದ ಇತಿಹಾಸವೇ ಹಾಗಿದೆ. ನೀವೊಮ್ಮೆ ಹಿಂತಿರುಗಿ ನೋಡಿದರೆ, ಸದಾಕಾಲ ಈ ಪ್ರದೇಶ ರಕ್ತದ ಕಲೆಗಳನ್ನು ತೊಳೆಯುತ್ತಲೇ ದಿನ ದೂಡುತ್ತಾ ಬಂದಿದೆ. ಇರಾಕ್ ಯುದ್ಧ ನಿಮಗೆ ನೆನಪಿರಬಹುದು. ಅದರಲ್ಲಿ ಲಕ್ಷಾಂತರ ಮುಗ್ಧ ಜನರು ಹತ್ಯೆಗೀಡಾಗಿದ್ದರು. ಇರಾಕ್‌ನ ಪ್ರಮುಖ ನಗರವಾದ ಮೊಸುಲ್ ಸಂಪೂರ್ಣ ಸ್ಮಶಾನವಾಗಿ ಮಾರ್ಪಟ್ಟಿದ್ದು ಅನೇಕರಿಗೆ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಈಗ ಇಸ್ರೇಲ್ ಮತ್ತು ಹಮಾಸ್ ನಡುವೆ ನಡೆಯುತ್ತಿರುವ ಯುದ್ಧಕ್ಕೆ ಇರಾನ್, ಟರ್ಕಿ, ಲೆಬನಾನ್ ಹಾಗೂ ಅಮೆರಿಕ ಕೂಡ ಕೈಜೋಡಿಸಿದರೆ ಕತೆ ಏನಾಗಬಹುದು ಎಂಬುದನ್ನು ಊಹಿಸಿ. ಖಂಡಿತ ಅಲ್ಲೊಂದು ಮಾರಣ ಹೋಮವೇ ನಡೆಯುವುದರಲ್ಲಿ ಯಾವುದೇ ಅನುಮಾನವಿಲ್ಲ. ಮಧ್ಯಪ್ರಾಚ್ಯದ ಸಮುದ್ರಕ್ಕೆ ಇನ್ನಷ್ಟು ರಕ್ತ ಹರಿದು ಹೋಗುತ್ತದೆ.

ನನಗೆ ಸಾಹಿರ್ ಲೂಧಿಯಾನ್ವಿಯ ಸಾಲುಗಳು ನೆನಪಾಗುತ್ತವೆ: 'ಜಂಗ್ ತೋ ಖುದ್ ಹಿ ಏಕ್ ಮಸ್ಲಾ ಹೈ, ಜಂಗ್ ಕ್ಯಾ ಮಸ್ಲೋಂ ಕಾ ಹಾಲ್ ದೇಗಿ! ಆಗ್ ಔರ್ ಖೂನ್ ಆಜ್ ಬಕ್ಷೇಗಿ, ಭೂಕ್ ಔರ್ ಎತಿಯಾಜ್ ಕಲ್ ದೇಗಿ!' (ಯುದ್ಧವೇ ಒಂದು ದೊಡ್ಡ ಸಮಸ್ಯೆ, ಅದು ಯಾವ ಸಮಸ್ಯೆಗೆ ಪರಿಹಾರ ನೀಡುತ್ತದೆ! ಇಂದು ಬೆಂಕಿ ಉರಿಯುತ್ತದೆ, ರಕ್ತ ಹರಿಯುತ್ತದೆ, ಹಸಿವು ಹಾಗೂ ದುರ್ಭಿಕ್ಷ ನಾಳೆ ಬರುತ್ತದೆ!). ಇದನ್ನು ನೆನಪಿಸಿಕೊಳ್ಳುತ್ತಲೇ ನನ್ನಲ್ಲಿ ಮೂಡುವ ಭಾವನೆಗಳು ಈ ಸಾಲುಗಳನ್ನು ಇನ್ನಷ್ಟು ಬೆಳೆಸುತ್ತವೆ: 'ಸಂಭಲ್ ಜಾವೋ ಮೌತ್ ಕೇ ಸೌದಾಗರೋ, ಮೌತ್ ಇನ್ಸಾನಿಯತ್ ಖಾತಿ ಹೈ, ಆಜ್ ಕಿಸಿ ಔರ್ ಕಿ ಬಾರಿ ಹೈ, ಕಲ್ ತುಮ್ಹೇ ಭಿ ನಿಗಲ್ ಲೇಗಿ!' (ಹುಷಾರಾಗಿರಿ ಸಾವಿನ ವ್ಯಾಪಾರಿಗಳೇ, ಸಾವು ಮಾನವೀಯತೆಯನ್ನು ತಿನ್ನುತ್ತದೆ! ಇಂದು ಬೇರೆಯವರ ಸರದಿಯಿರಬಹುದು, ನಾಳೆ ನಿಮ್ಮ ಸರದಿಯೂ ಬರುತ್ತದೆ!!).

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ನಾರದ ಸಂಚಾರ
ಕಲಹಪ್ರಿಯ
naadigru@gmail.com

ಕಾಲವಷ್ಟೇ ಹೇಳಬಲ್ಲದು

ಇದು ದೆಹಲಿಯ ಆಮ್ ಆದ್ಮಿ ಪಕ್ಷದ ಪಾಳಯದಿಂದ ಹೊರಬಿದ್ದಿರುವ ಸುದ್ದಿ. ಇದರ ಕೇಂದ್ರಬಿಂದು ಕೈಲಾಶ್ ಗೆಹ್ಲೋಟ್. ದೆಹಲಿ ವಿಧಾನಸಭಾ ಸದಸ್ಯರೂ, ಸಂಪುಟ ಸಚಿವರೂ ಆಗಿರುವ ಇವರು, ಕಾರಣವಲ್ಲದ ಕಾರಣಕ್ಕೆ ಸುದ್ದಿಯಾಗಿದ್ದಾರೆ. ಮುಂದಿನ ವರ್ಷ ದೆಹಲಿ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಆ ಸಂಬಂಧವಾಗಿ ಚರ್ಚಿಸಲು ಹಮ್ಮಿಕೊಳ್ಳಲಾಗಿದ್ದ ಆಮ್ ಆದ್ಮಿ ಪಕ್ಷದ ಸಭೆಗೆ ಕೈಲಾಶ್ ಗೆಹ್ಲೋಟ್ ಅವರು ಚಕ್ಕರ್ ಹಾಕಿದ್ದೇ ಇದಕ್ಕೆ ಕಾರಣ. ಇದು ಒಂದಷ್ಟು ಗುಸುಗುಸುಗಳಿಗೂ ಕಾರಣವಾಗಿದೆಯೆನ್ನಿ! ಏಕೆಂದರೆ, ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಏಕಪ್ರಕಾರವಾಗಿ ಪ್ರಶ್ನಿಸಲ್ಪಟ್ಟವರಲ್ಲಿ ಕೈಲಾಶ್ ಗೆಹ್ಲೋಟ್ ಕೂಡ ಒಬ್ಬರು. ಆ ಬೆಳವಣಿಗೆಯಾದಾಗಿನಿಂದ ಕೈಲಾಶ್ ಅವರು ರಾಜಕೀಯ ಕಾರ್ಯಚಟುವಟಿಕೆಗಳಿಗಿಂತ ಸರಕಾರಿ ಆಡಳಿತದ ಮೇಲೆಯೇ ಹೆಚ್ಚೆಚ್ಚು ಗಮನವನ್ನು ಕೇಂದ್ರೀಕರಿಸುತ್ತಿದ್ದಾರಂತೆ. ಈ ವಿಷಯದಲ್ಲಿ ಅವರು ಎಷ್ಟರ ಮಟ್ಟಿಗೆ ಬದ್ಧರಾಗಿದ್ದಾರೆಂದರೆ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲರನ್ನು ಮೇ ತಿಂಗಳಿನಲ್ಲಿ ಸೆರೆವಾಸದಿಂದ ಜಾಮೀನಿನ ಮೇಲೆ ಹೊರಬಿಟ್ಟಾಗ ಹಮ್ಮಿಕೊಳ್ಳಲಾಗಿದ್ದ ಸನ್ಮಾನ ಸಮಾರಂಭದ ವೇದಿಕೆಯ ಮೇಲೂ ಕೈಲಾಶ್ ಗೆಹ್ಲೋಟ್ ಅವರು ಕಾಣಿಸಿಕೊಂಡಿರಲಿಲ್ಲ. ಹೀಗಾಗಿ, ಒಂದಿಡೀ ಲೋಕಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಮೇಲ್ನೋಟಕ್ಕೆ ಕಾಣಿಸುವಂತೆ ಕಣ್ಣಿನ ಶಸ್ತ್ರಚಿಕಿತ್ಸೆಗಾಗಿ ಬ್ರಿಟನ್‌ನಲ್ಲಿ ಠಿಕಾಣಿ ಹೂಡಿದ್ದ ಆಮ್ ಆದ್ಮಿ ಪಕ್ಷದ ಸಂಸದ ರಾಘವ್ ಚಡ್ಡಾ ಅವರು ಅಲ್ಲಿಂದ ಶೀಘ್ರವಾಗಿ ಮರಳಿ, ಪಕ್ಷದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುತ್ತಿರುವ ಪ್ರತ್ಯೇಕ ಬಣದೊಳಗೆ ತೂರಿಕೊಳ್ಳಬೇಕಾಗಿ ಬಂತು.

ಬಹುತೇಕರಿಗೆ ಗೊತ್ತಿರುವಂತೆ, ಚಡ್ಡಾ ಅವರು ಆಮ್ ಆದ್ಮಿ ಪಕ್ಷದ ಪರವಾಗಿ ಸಂಸತ್ತಿನಲ್ಲಿ ಬಹಳಷ್ಟು ಸಲ ಮಾತನಾಡಿದ್ದು, ಇದರ ವಿಡಿಯೋಗಳನ್ನು ಪಕ್ಷವು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹಂಚಿಕೊಳ್ಳುತ್ತಿದೆ. ಈ ಬೆಳವಣಿಗೆಗಳು ಚಡ್ಡಾ ಅವರ ಅದೃಷ್ಟ ಖುಲಾಯಿಸುತ್ತಿರುವುದರ ದ್ಯೋತಕವೇ? ಇದನ್ನು ಕಾಲವಷ್ಟೇ ಹೇಳಬಲ್ಲದು.

ಧ್ವಜಾರೋಹಣ ಭಾಗ್ಯ

ಇನ್ನೊಂದು ವಾರದಲ್ಲಿ ದೇಶಾದ್ಯಂತ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮ ಕಾಣಬರಲಿದೆ. ಈ ವೇಳೆ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಪ್ರಧಾನ ಮಂತ್ರಿಯವರು ಧ್ವಜಾರೋಹಣ ಮಾಡಿ, ಐತಿಹಾಸಿಕ ಕೆಂಪುಕೋಟೆಯಿಂದ ರಾಷ್ಟ್ರದ ಜನತೆಯನ್ನು ಉದ್ದೇಶಿಸಿ ಮಾತನಾಡುವುದು ವಾಡಿಕೆ. ಅಂತೆಯೇ ದೇಶದ ಎಲ್ಲಾ ರಾಜ್ಯಗಳಲ್ಲೂ ಈ ಧ್ವಜಾರೋಹಣವನ್ನು ಅಲ್ಲಲ್ಲಿನ ಮುಖ್ಯಮಂತ್ರಿಗಳು ನೆರವೇರಿಸುವುದು ನಿಮಗೆ ಗೊತ್ತಿರುವ ಸಂಗತಿಯೇ. ಆದರೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲರಿಗೆ ಈ ಸಲ ಈ ಭಾಗ್ಯವಿಲ್ಲ, ಕಾರಣ ದೆಹಲಿ ಅಬಕಾರಿ ನೀತಿ ಹಗರಣದ ಸಂಬಂಧವಾಗಿ ಅವರು ಸೆರೆವಾಸದಲ್ಲಿದ್ದಾರೆ. ಹೀಗಾಗಿ ಧ್ವಜಾರೋಹಣದ ಸದವಕಾಶ ಸಚಿವೆ ಅತಿಶಿ ಮರ್ಲೆನಾ ಅವರಿಗೆ ಒದಗಿದೆ. ಸ್ವತಃ ಕೇಜ್ರಿವಾಲರೇ ದೆಹಲಿ ಲೆಫ್ಟಿನೆಂಟ್ ಗವರ್ನರ್‌ಗೆ ಪತ್ರ ಬರೆದು ಈ ವಿಷಯವನ್ನು ತಿಳಿಸಿದ್ದಾರಂತೆ. ಅತಿಶಿ ಅವರಿಗೆ ಸದ್ಯಕ್ಕೆ ಧ್ವಜಾರೋಹಣದ ಅವಕಾಶ ಸಿಕ್ಕಿದೆ, ಇದು ಹಾಗೆಯೇ ಮುಂದುವರಿದು ಅವರಿಗೆ ಇನ್ನೂ ಉನ್ನತ ಸ್ಥಾನವನ್ನು ದಕ್ಕಿಸಿಕೊಡುವ ನಿಟ್ಟಿನಲ್ಲಿ ಬಲ ಮತ್ತು ವರ್ಚಸ್ಸನ್ನು ತುಂಬಲಿದೆಯೇ? ಎಂದು ಅವರ ಅಭಿಮಾನಿಗಳು ಕುತೂಹಲಗೊಂಡಿದ್ದಾರಂತೆ. ಇದು ನಾರದರಿಗೆ ಸದ್ಯಕ್ಕೆ ಕೇಳಿಸಿರುವ ಗುಸುಗುಸು!

ಕಾಶಿಯಂತೆ ತೀರ್ಥಕ್ಷೇತ್ರವಾಗುವುದೇ ನಮ್ಮ ಕೊಲ್ಲೂರು ಕಾರಿಡಾರ್?

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ವಿಶ್ವಪ್ರಸಿದ್ಧ ಲೇಖಕ ಮಾರ್ಕ್ ಟ್ವೇನ್ ಅವರು ಭಾರತವನ್ನು ಕುರಿತಂತೆ, 'India is the cradle of human race, birthplace of human speech, mother of history, the grandmother of legend & great grandmother of tradition. Our most valuable & most instructive materials in the history of man are treasured up in India only' ಎಂದಿದ್ದಾರೆ. ಮತ್ತೊಂದೆಡೆ, 'ವಾರಾಣಸಿಯು ಇತಿಹಾಸಕ್ಕಿಂತಲೂ ಪುರಾತನವಾದುದು. ಮಾನವನ ಸಂಪ್ರದಾಯ-ಆಚರಣೆಗಳಿಗಿಂತಲೂ ಹಳೆಯದಾದುದು. ವಿಶ್ವದ ಅತ್ಯಂತ ಪುರಾತನ ಐತಿಹಾಸಿಕ ಸ್ಥಳಗಳಿಗಿಂತಲೂ ಎರಡುಪಟ್ಟು ಹಿನ್ನೆಲೆ ಹೊಂದಿರುವಂಥದು' ಎಂದಿದ್ದಾರೆ.

'ಕಾಶ್ಯಂ ಮರಣಂ ಮುಕ್ತಿ' ಎಂಬಂತೆ ಕಾಶಿಯಲ್ಲಿ ಮರಣ ಹೊಂದಿದವರಿಗೆ ಮುಕ್ತಿ ದೊರೆಯುತ್ತದೆ ಎಂಬುದು ಹಿಂದೂಗಳಲ್ಲಿನ ನಂಬಿಕೆ. ಭಾರತೀಯರ ಆಧ್ಯಾತ್ಮಿಕ ಆತ್ಮದ ಸಂಕೇತವೂ ಕಾಶಿ ಎಂಬ ಮಾತಿದೆ. 2020ರ ಮೊದಲು ಕಾಶಿ ವಿಶ್ವನಾಥನ ಮಂದಿರ ನೋಡಲು ಹೋದವರು ಅಲ್ಲಿನ ಕಿರಿದಾದ, ಇಕ್ಕಟ್ಟಿನ ಕಾಲುದಾರಿಗಳನ್ನು ಕಂಡು 'ನಮ್ಮ ಧಾರ್ಮಿಕ ಶ್ರದ್ಧಾಕೇಂದ್ರ ಹೀಗಿದೆಯಲ್ಲ' ಎಂದುಕೊಳ್ಳುತ್ತಿದ್ದುದಂತೂ ಸುಳ್ಳಲ್ಲ. ಆದರೀಗ ಕಾಶಿಯ ಚಿತ್ರಣವೇ ಬದಲಾಗಿದೆ.

ಈ ಮೂಲಕ, ಇಂದು ಕಾಶಿಯು ಜಗತ್ಪ್ರಸಿದ್ಧ ಧಾರ್ಮಿಕ ಮತ್ತು ಆಧ್ಯಾತ್ಮಿಕ ಯಾತ್ರಾಸ್ಥಳಗಳಲ್ಲಿ ಪ್ರಮುಖವೆನಿಸಿದೆ. ನೂರಾರು ಕುಟುಂಬಗಳು ಇಲ್ಲಿನ ಉಪ ಆದಾಯದ ಬೆಂಬಲ ಪಡೆದಿವೆ. ಜತೆಗೆ, ಶತಮಾನಗಳಿಂದ ನಿರ್ಲಕ್ಷ್ಯಕ್ಕೊಳಗಾಗಿದ್ದ ವಾರಾಣಸಿಯನ್ನು ಮೋದಿ ಸರಕಾರವು ಕಾರಿಡಾರ್ ಮೂಲಕ ಪುನರುತ್ಥಾನ ಮಾಡಿತೆನ್ನಬಹುದು.

ಮೋದಿಯವರಿಗೆ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳ ಅಭಿವೃದ್ಧಿಯಿಂದ ಆರ್ಥಿಕ ಸುಧಾರಣೆ ಖಂಡಿತ ಸಾಧ್ಯ ಎಂಬ ಸ್ಪಷ್ಟ ಅರಿವಿದೆ. ಕೇದಾರನಾಥ ಕಾರಿಡಾರ್ ಯೋಜನೆಯಿರಬಹುದು, ಚಾರ್ ಧಾಮ್ ಕಾರಿಡಾರ್, ಕಾಶ್ಮೀರದ ಪುರಾತನ ದೇಗುಲಗಳ ಪುನಃಸ್ಥಾಪನಾ ಕಾರಿಡಾರ್, ವೈಷ್ಣೋದೇವಿ ಕಾರಿಡಾರ್, ಅಮರನಾಥ ಯಾತ್ರಾ ಕಾರಿಡಾರ್, ಅಯೋಧ್ಯೆ ಪುನಃಸ್ಥಾಪನಾ ಕಾರಿಡಾರ್ ಯೋಜನೆಗಳಿರಬಹುದು ಮತ್ತು ಕಾಶಿ ಸೇರಿದಂತೆ ಇತ್ತೀಚಿನ ಉಜ್ಜೈನ್ ಮಹಾಕಾಲ ಕಾರಿಡಾರ್ ಯೋಜನೆಗಳಿರಬಹುದು ಇವೆಲ್ಲವೂ ಧಾರ್ಮಿಕ ಪ್ರವಾಸಿ ಯೋಜನೆಗಳ ಮೂಲಕ ಆರ್ಥಿಕತೆಗೆ ಬಲತುಂಬುವ ಮೋದಿಯವರ ದೂರದೃಷ್ಟಿಯ ಪರಿಕಲ್ಪನೆಗಳೇ ಆಗಿವೆ.

ಪುರಾತನ ಮಹತ್ವ ಮತ್ತು ಐತಿಹ್ಯವಿರುವ ಸ್ಥಳದಲ್ಲಿ ಸಕಲ ವ್ಯವಸ್ಥೆಗಳ ಮೂಲಕ ಕಾರಿಡಾರ್ ಯೋಜನೆಯನ್ನು ಹಮ್ಮಿಕೊಂಡರೆ ಸ್ಥಳೀಯರಿಗೆ ಉದ್ಯೋಗ ದೊರೆಯುತ್ತದೆ, ಸ್ಥಳೀಯ ಉತ್ಪನ್ನಗಳು ಮಾರಾಟವಾಗುತ್ತವೆ. ಸ್ಥಳೀಯ ಕರಕುಶಲ ಉತ್ಪನ್ನ ಮತ್ತು ಪರಿಕರಗಳಿಗೆ ಬೇಡಿಕೆಯ ಜತೆಗೆ ಅವುಗಳ ಮಾರುಕಟ್ಟೆ ಮತ್ತು ಪ್ರಚಾರವ್ಯಾಪ್ತಿಯೂ ಹೆಚ್ಚುತ್ತದೆ. ಮೇಲಾಗಿ ಇಂಥ ಯೋಜನೆಗಳಿಂದ ರಾಜ್ಯ ಮತ್ತು ದೇಶದ ಬೊಕ್ಕಸಕ್ಕೆ ನಿವ್ವಳ ಆದಾಯವು ಹರಿದುಬರುವ ಸಾಧ್ಯತೆ ಹೆಚ್ಚಿರುತ್ತದೆ.

ಮೇಲೆ ಹೇಳಿದಂತೆ, 2019ರ ಮಾರ್ಚ್‌ನಲ್ಲಿ ಯೋಜನೆಯನ್ನು ಘೋಷಿಸಿ ಜಾರಿಗೊಳಿಸಿದ್ದಲ್ಲದೆ ಮತ್ತೆ ಕಾಶಿ ವಿಶ್ವನಾಥ ಕಾರಿಡಾರ್ ಅನ್ನು ಪ್ರಧಾನಿ ಮೋದಿಯವರೇ 2021ರ ಡಿಸೆಂಬರ್ 13ರಂದು ಉದ್ಘಾಟಿಸಿದರು. ಅವರ ಕನಸಿನ 'ಕಾಶಿ ಕಾರಿಡಾರ್' ಯೋಜನೆಯನ್ನು 5,000 ಹೆಕ್ಟೇರ್ ಪ್ರದೇಶದಲ್ಲಿ ನಿರ್ಮಿಸಲಾಗಿದೆ. 800 ಕೋಟಿ ರು. ವೆಚ್ಚದ ಈ ಯೋಜನೆಯು ಪುರಾತನ ದೇವಾಲಯವನ್ನು ಗಂಗಾನದಿಯ ದಡಕ್ಕೆ ಸಂಪರ್ಕಿಸುತ್ತದೆ. ಈ ಯೋಜನೆಯು ಕಾಶಿ ವಿಶ್ವನಾಥ ದೇವಾಲಯ ಮತ್ತು ಗಂಗಾನದಿಯ ಉದ್ದಕ್ಕೂ ಇರುವ ಘಾಟ್‌ಗಳನ್ನು ಸಂಪರ್ಕಿಸುತ್ತದೆ. ಈ ಯೋಜನೆಯ ಮೊದಲ ಹಂತವನ್ನು 339 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿದೆ. ಮೊದಲ ಹಂತವು ಸುಮಾರು 5 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಹರಡಿಕೊಂಡಿದ್ದು 23 ಕಟ್ಟಡಗಳನ್ನು ಒಳಗೊಂಡಿದೆ. ಈ ಯೋಜನೆಯ ಅನುಷ್ಠಾನದ ಸಂದರ್ಭದಲ್ಲೇ, ಮುಚ್ಚಿಹೋಗಿದ್ದ ಸುಮಾರು 40ಕ್ಕೂ ಹೆಚ್ಚು ಪ್ರಾಚೀನ ದೇವಾಲಯಗಳನ್ನು ಮರುಶೋಧಿಸಿ ಪುನಃಸ್ಥಾಪಿಸಲಾಗಿದೆ.

ಇದು ಹೀಗಿದ್ದರೆ, ಮಧ್ಯಪ್ರದೇಶದ ಅತ್ಯಂತ ಪುರಾತನ ನಗರವಾದ ಅವಂತಿಪುರ, ಅಂದರೆ ಇಂದಿನ ಉಜ್ಜಯಿನಿಯು ಮಹಾಕಾಲ ನೆಲೆಸಿರುವ ದ್ವಾದಶ ಜ್ಯೋತಿರ್ಲಿಂಗ ಕ್ಷೇತ್ರವಾಗಿದ್ದು, ಇಲ್ಲಿ ಕೈಗೊಂಡ ಕಾರಿಡಾರ್ ಯೋಜನೆಯನ್ನು 'ಮಹಾಕಾಲ ಕಾರಿಡಾರ್' ಎಂದೇ ಕರೆಯಲಾಗಿದೆ. ಸುಮಾರು 850 ಕೋಟಿ ರು.ಗಳ ಈ ಯೋಜನೆಯು ಉಜ್ಜಯಿನಿ ನಗರವನ್ನು ಜಾಗತಿಕ ಪ್ರವಾಸಿ ತಾಣವನ್ನಾಗಿ ಮಾಡುವಲ್ಲಿ ಸಫಲವಾಗಿದೆ ಎನ್ನಬಹುದು.

ಬಹುನಿರೀಕ್ಷಿತ 'ಪುರಿ ಹೆರಿಟೇಜ್ ಕಾರಿಡಾರ್' (ಶ್ರೀಮಂದಿರ ಪರಿಕ್ರಮ) ಯೋಜನೆಯನ್ನು ಅಂತಾರಾಷ್ಟ್ರೀಯ ಪ್ರವಾಸಿ ಸ್ಥಳವಾಗಿ ಪರಿವರ್ತಿಸುವ ಉದ್ದೇಶದಿಂದ 2019ರ ಡಿಸೆಂಬರ್‌ನಲ್ಲಿ ಅನಾವರಣಗೊಳಿಸಲಾಯಿತು. ಸುಮಾರು 800 ಕೋಟಿ ರು.ಗಳ ಈ ಯೋಜನೆಯು ಮೇಘನಾದ ಪಚೇರಿ (12ನೇ ಶತಮಾನದ ದೇವಾಲಯದ ಹೊರಗೋಡೆ) ಸುತ್ತಲೂ ಅಡೆತಡೆಯಿಲ್ಲದ 75 ಮೀಟರ್ ಕಾರಿಡಾರ್ ನಿರ್ಮಾಣವನ್ನು ಹೊಂದಿದೆ.

ವಾರಾಣಸಿಯ ವಿಶ್ವನಾಥ ದೇವಸ್ಥಾನದ ಕಾರಿಡಾರ್ ಮಾದರಿಯಲ್ಲಿ ಗುವಾಹಟಿಯ ನೀಲಾಚಲ್ ಬೆಟ್ಟದ ಮೇಲಿರುವ ಕಾಮಾಖ್ಯ ದೇವಸ್ಥಾನದಲ್ಲಿ ಕಾರಿಡಾರ್ ನಿರ್ಮಿಸಲು ಅಸ್ಸಾಂ ಸರಕಾರ ಯೋಜಿಸುತ್ತಿದೆ. ದೇವಾಲಯದ ಸುತ್ತಲಿನ ಸಂಚಿತ ಬಯಲು ಪ್ರದೇಶವು ಪ್ರಸ್ತುತ 3,000 ಚದರ ಅಡಿಗಳಿಂದ 1,00,000 ಚದರ ಅಡಿಗಳಿಗೆ ಹೆಚ್ಚಾಗುತ್ತದೆ. ಇದರಿಂದ ಪ್ರತಿವರ್ಷ ಜೂನ್‌ನಲ್ಲಿ ನಡೆಯುವ ಅಂಬುಬಾಚಿ ಮೇಳದಲ್ಲಿ ಭಾಗವಹಿಸಲು ಲಕ್ಷಾಂತರ ಯಾತ್ರಿಕರಿಗೆ ಅನುಕೂಲವಾಗಲಿದೆ.

ಇದಲ್ಲದೆ, ಬೆಂಗಳೂರಿನ ಶ್ರೀಮಂತ ಪರಂಪರೆಯನ್ನು ಸಂರಕ್ಷಿಸುವ ಪ್ರಯತ್ನದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ದಕ್ಷಿಣ ವಲಯದಲ್ಲಿ ಲಾಲ್‌ಬಾಗ್ ಗಡಿ ಗೋಪುರದಿಂದ ಕೆಂಪಾಂಬುಧಿ ಕೆರೆಯವರೆಗಿನ 12 ಕಿ.ಮೀ. ಉದ್ದದಷ್ಟು ಪ್ರದೇಶದಲ್ಲಿ 'ನಾಡಪ್ರಭು ಕೆಂಪೇಗೌಡ ಹೆರಿಟೇಜ್ ಕಾರಿಡಾರ್' ನಿರ್ಮಾಣವನ್ನು ಘೋಷಿಸಿದೆ.

ಕಾಶಿ ವಿಶ್ವನಾಥನ ಮಂದಿರದಂತೆ ಬೈಂದೂರು ವಿಧಾನಸಭಾ ಕ್ಷೇತ್ರದಲ್ಲೂ ಒಂದು ಶಕ್ತಿಪೀಠವಿದೆ. ಪುರಾತನ ಮತ್ತು ಪವಿತ್ರ ಕ್ಷೇತ್ರಗಳಲ್ಲಿ ಪ್ರಮುಖವಾದ, ಕರ್ನಾಟಕ ಮತ್ತು ಕೇರಳ ರಾಜ್ಯಗಳಲ್ಲಿನ ಜನರ ಶ್ರದ್ಧಾಭಕ್ತಿಯ ಕೇಂದ್ರಗಳಲ್ಲಿ ಒಂದೆನಿಸಿದ, ಕೊಡಚಾದ್ರಿ ಬೆಟ್ಟದ ಸಾಲಿನ ಸೌಪರ್ಣಿಕಾ ನದಿಹರಿವಿನಲ್ಲಿ ಮಂಗಳೂರಿನಿಂದ 147 ಕಿ.ಮೀ.ನಷ್ಟು ಅಂತರದಲ್ಲಿ ನೆಲೆಗೊಂಡಿರುವ ಕೊಲ್ಲೂರಿನ ಶ್ರೀ ಮೂಕಾಂಬಿಕಾ ತಾಯಿಯ ಕ್ಷೇತ್ರವು ಪ್ರತಿವರ್ಷವೂ ಲಕ್ಷಗಟ್ಟಲೆ ಯಾತ್ರಾರ್ಥಿಗಳನ್ನು ಆಕರ್ಷಿಸುತ್ತದೆ. ಜಗದ್ಗುರು ಆದಿಶಂಕರಾಚಾರ್ಯರು ಸುಮಾರು 1200 ವರ್ಷಗಳಷ್ಟು ಹಿಂದೆಯೇ ಇಲ್ಲಿನ ದೇವಸ್ಥಾನದಲ್ಲಿ ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಿದರು, ಮೂಕಾಂಬಿಕಾ ದೇವಿಯು ಶಕ್ತಿ, ಸರಸ್ವತಿ ಮತ್ತು ಮಹಾಲಕ್ಷ್ಮಿಯ ಒಂದು ಅವತಾರ ಎಂಬುದಾಗಿ ಪರಿಗಣಿಸಲ್ಪಟ್ಟಿರುವುದರಿಂದ, ಮೂಕಾಂಬಿಕಾ ದೇವಸ್ಥಾನವು ಕರ್ನಾಟಕದಲ್ಲಿನ 'ಸಪ್ತ ಮುಕ್ತಿಸ್ಥಳ' (ಕೊಲ್ಲೂರು, ಉಡುಪಿ, ಸುಬ್ರಹ್ಮಣ್ಯ, ಕುಂಭಾಶಿ, ಕೋಟೇಶ್ವರ, ಶಂಕರನಾರಾಯಣ ಮತ್ತು ಗೋಕರ್ಣ) ತೀರ್ಥಯಾತ್ರಾ ತಾಣಗಳ ಪೈಕಿ ಒಂದೆನಿಸಿದೆ. ಹಾಗಾಗಿ ಈ ಕ್ಷೇತ್ರವು ಉತ್ತರ ಭಾರತದ ಇತರೆ ಪವಿತ್ರ ಕ್ಷೇತ್ರಗಳಂತೆ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರವಾಸಿ ಕೇಂದ್ರವಾಗಿ ಜಾಗತಿಕ ಮಟ್ಟದಲ್ಲಿ ಬೆಳೆಯುವ ಎಲ್ಲ ಅರ್ಹತೆ, ಲಕ್ಷಣ ಮತ್ತು ಸೌಕರ್ಯಗಳನ್ನು ಹೊಂದಿದೆ.

ಈ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಸ್ಥಳೀಯ ಜನರು ಹಲವು ದಶಕಗಳಿಂದ ಒತ್ತಾಯಿಸುತ್ತಲೇ ಬಂದಿದ್ದಾರೆ. ಇನ್ನಾದರೂ 'ಕೊಲ್ಲೂರು ಕಾರಿಡಾರ್ ಯೋಜನೆ'ಯನ್ನು ಘೋಷಿಸಿ, ದೇಶ-ವಿದೇಶದಲ್ಲಿ ನೆಲೆಸಿರುವ ತಾಯಿಯ ಭಕ್ತರು ಉಳಿದುಕೊಂಡು ದರ್ಶಿಸಲು ಬೇಕಾದ ಮೂಲಸೌಕರ್ಯಗಳ ನಿರ್ಮಾಣ ಸೇರಿದಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಈ ಜಾಗೃತ ಸ್ಥಳವನ್ನು ಗುರುತಿಸಿ ಬೆಳೆಸುವ ಅಗತ್ಯವಿದೆ. ಕಾರಿಡಾರ್ ಯೋಜನೆಯಿಂದ ಏನು ಲಾಭ? ಮೂಕಾಂಬಿಕಾ ಶಕ್ತಿಪೀಠ ಹೇಗೆ ಅಭಿವೃದ್ಧಿ ಹೊಂದಲಿದೆ, ಯಾರಿಗೆ ಲಾಭವಾಗಲಿದೆ? ಎಂಬೆಲ್ಲ ಪ್ರಶ್ನೆಗಳು ಜನಸಾಮಾನ್ಯರ ಮುಂದಿವೆ. ವಾಸ್ತವದಲ್ಲಿ ಮೂಕಾಂಬಿಕಾ ಕಾರಿಡಾರ್ ಯೋಜನೆ ಕಾರ್ಯರೂಪಕ್ಕೆ ಬಂದರೆ ಹಲವು ಲಾಭಗಳಿವೆ. ಈ ಮೂಲಕ ಧಾರ್ಮಿಕ ಪ್ರವಾಸೋದ್ಯಮಕ್ಕೆ ಹೊಸ ರೂಪ ಸಿಗಲಿದೆ. ಕ್ಷೇತ್ರಕ್ಕೆ ಬರುವ ಭಕ್ತರು ಮತ್ತು ಪ್ರವಾಸಿಗರ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಲಿದೆ. ಈ ಮೂಲಕ ಸ್ಥಳೀಯ ಆರ್ಥಿಕತೆಯು ಸುಸ್ಥಿರತೆಯ ಹಳಿಗೆ ಬರಲಿದೆ. ಪ್ರವಾಸೋದ್ಯಮಕ್ಕೆ ಹೊಂದಿಕೊಂಡಿರುವ ಎಲ್ಲ ಉದ್ಯಮಗಳೂ ಅಭಿವೃದ್ಧಿ ಕಾಣಲಿವೆ. ಯುವ ಪ್ರತಿಭೆಗಳ ಪ್ರತಿಭಾ ಪಲಾಯನ ತಪ್ಪಲಿದೆ. ನಮ್ಮೂರಿನಲ್ಲಿ ಪದವಿ, ಸ್ನಾತಕೋತ್ತರ ಪದವಿ ಪೂರೈಸಿದವರಿಗೆ ನಮ್ಮೂರಿನಲ್ಲಿಯೇ ಗೌರವಯುತವಾದ ಉದ್ಯೋಗವೂ ದೊರೆಯಲಿದೆ. ಮೂಕಾಂಬಿಕಾ ಕಾರಿಡಾರ್ ಯೋಜನೆಯು ಕ್ಷೇತ್ರದ ಸಮೃದ್ಧಿಗೆ ಮೇಲ್ಪಂಕ್ತಿಯಾಗಿ ನಿಲ್ಲಲಿದೆ. ಈ ಮೂಲಕ ರಾಜ್ಯದ ಅಭಿವೃದ್ಧಿ, ಉನ್ನತಿಗೂ ಪ್ರೇರಣೆಯಾಗಿ ನಿಲ್ಲಬಲ್ಲ ಶಕ್ತಿಪೀಠ ಇದಾಗಲಿದೆ.

ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ವಿಷಯಗಳಲ್ಲಿ ಧಾರ್ಮಿಕ ಪ್ರವಾಸೋದ್ಯಮವೂ ಒಂದಾಗಿದೆ. ದೇವಸ್ಥಾನಕ್ಕೆ ಬಂದ ಭಕ್ತರು, ಆ ಪರಿಸರದ ಎಲ್ಲ ದೇವಸ್ಥಾನಗಳನ್ನು ಸುಲಭವಾಗಿ ಸಂದರ್ಶಿಸಲು ಅನುಕೂಲವಾಗುವಂತೆ 'ಟೆಂಪಲ್ ಸರ್ಕ್ಯೂಟ್' ರಚನೆ ಮಾಡುವುದಕ್ಕೆ ಇದು ಅನುಕೂಲಕರ. ಇದರಿಂದ ಒಂದು ದೇವಸ್ಥಾನದಿಂದ ಇನ್ನೊಂದು ದೇವಸ್ಥಾನಕ್ಕೆ ಸುಲಭ ಪಯಣದ ಸಂಪರ್ಕ ಸಾಧ್ಯವಾಗುವುದು. ಇದಕ್ಕೆ ಬೈಂದೂರು ಕ್ಷೇತ್ರ ಬಹುಹಿತವಾಗಿದೆ. ಇದಕ್ಕೆ ಉಡುಪಿ ಜಿಲ್ಲೆಯೂ ಅಷ್ಟೇ ಪೂರಕವಾಗಿದೆ. ಕೊಲ್ಲೂರು ಕಾರಿಡಾರ್ ರಚನೆಯಾದ ನಂತರದಲ್ಲಿ ಕೊಲ್ಲೂರಿಗೆ ಬರುವ ಪ್ರತಿ ಭಕ್ತರು ಬೈಂದೂರು ಕ್ಷೇತ್ರದ 'ಟೆಂಪಲ್ ಸರ್ಕ್ಯೂಟ್' ಸುತ್ತುವಂತಾಗಲಿದೆ.

ಕೊಲ್ಲೂರು ಶ್ರೀ ಮೂಕಾಂಬಿಕೆಯ ದರ್ಶನ ಪಡೆದು ಶ್ರೀ ಕ್ಷೇತ್ರ ಮಾರಣಕಟ್ಟೆ ಶ್ರೀ ಬ್ರಹ್ಮಲಿಂಗ ಸ್ವಾಮಿ, ಕಮಲಶಿಲೆಯ ಶ್ರೀ ಬ್ರಾಹ್ಮೀ ದುರ್ಗಾ ಪರಮೇಶ್ವರಿ ದೇವಿ, ಹಟ್ಟಿಯಂಗಡಿಯ ಶ್ರೀ ಗಣಪತಿ, ಗುಡ್ಡಾಮಡಿಯ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಗುಜ್ಜಾಡಿಯಲ್ಲಿ ಗುಹೆಯೊಳಗೆ ಕುಳಿತಿರುವ ಶ್ರೀ ಗುಹೇಶ್ವರ, ಮರವಂತೆಯ ಶ್ರೀ ವರಾಹ ಸ್ವಾಮಿ, ಕಿರಿಮಂಜೇಶ್ವರದ ಶ್ರೀ ಅಗಸ್ತ್ಯ, ಉಪ್ಪುಂದದ ಶ್ರೀ ದುರ್ಗಾಪರಮೇಶ್ವರಿ ಹಾಗೂ ಬೈಂದೂರಿನ ಶ್ರೀ ಸೇನೇಶ್ವರ ದೇವರ ದರ್ಶನ ಪಡೆಯಲು ಭಕ್ತರಿಗೆ 'ಟೆಂಪಲ್ ಸರ್ಕ್ಯೂಟ್' ಅನುಕೂಲವಾಗಲಿದೆ. ಮೂಕಾಂಬಿಕಾ ಕಾರಿಡಾರ್ ಆಯಿತೆಂದರೆ ಕ್ಷೇತ್ರದಲ್ಲಿರುವ ಎಲ್ಲ ದೇವಸ್ಥಾನಗಳೂ ಇನ್ನಷ್ಟು ಅಭಿವೃದ್ಧಿಯ ಜತೆಗೆ ಜನಮನ್ನಣೆ ಪಡೆಯಲಿವೆ, ಭಕ್ತರ ಸಂಖ್ಯೆ ಹೆಚ್ಚಾಗಲಿದೆ. ದೇವಸ್ಥಾನದ ಆದಾಯವೂ ವೃದ್ಧಿಯಾಗಲಿದೆ, ಸ್ಥಳೀಯ ಆರ್ಥಿಕತೆಗೆ ಚೈತನ್ಯ ದೊರೆಯಲಿದೆ.

ಪ್ರವಾಸೋದ್ಯಮದ ವಿಷಯವಾಗಿ ಕರಾವಳಿ ಜಿಲ್ಲೆಗಳು ತಮ್ಮದೇ ಆದ ಪ್ರಾಮುಖ್ಯವನ್ನು ಪಡೆದಿವೆ. ಇಲ್ಲಿ ಸರ್ಕ್ಯೂಟ್ ಟೂರಿಸಂ ಮಾಡಬೇಕು ಎಂಬ ಯೋಜನೆಯು ಪ್ರವಾಸೋದ್ಯಮ ಇಲಾಖೆಯ ಕಡತದಲ್ಲೇ ಉಳಿದುಕೊಂಡಿದೆ. ದೇವಸ್ಥಾನಕ್ಕೆ ಬರುವ ಭಕ್ತರು ದೇವರ ದರ್ಶನ ಮಾಡಿದ ನಂತರ, ಬೀಚ್ ಸಹಿತ ವಿವಿಧ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಬೇಕು ಮತ್ತು ಬೀಚ್ ನೋಡಲು ಬರುವ ಭಕ್ತರು ಅಲ್ಲಿಂದ ದೇವಸ್ಥಾನಗಳನ್ನು ಸುತ್ತುವಂತಾಗಬೇಕು ಎನ್ನುವ ದೃಷ್ಟಿಯೊಂದಿಗೆ ಸರ್ಕ್ಯೂಟ್ ಟೂರಿಸಂ ಪರಿಕಲ್ಪನೆ ಹುಟ್ಟಿಕೊಂಡಿತ್ತು. ಆದರೆ ಸರಿಯಾದ ಕಾಯಕಲ್ಪ ಸಿಗದ ಹಿನ್ನೆಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಲ್ಲಿ ಅದು ಬಾಕಿಯಾಗಿದೆ.

ಭಕ್ತರು ಕೊಲ್ಲೂರು ದೇವಿಯ ದರ್ಶನದ ನಂತರ ಮುರುಡೇಶ್ವರದಲ್ಲಿ ಈಶ್ವರನಿಗೆ ನಮಸ್ಕರಿಸಿ ಉಡುಪಿ ಕಡೆಗೆ ಬರುತ್ತಿದ್ದಂತೆ ಕುಂದಾಪುರ ದಾಟಿದ ತಕ್ಷಣವೇ ಕುಂಭಾಶಿಯಲ್ಲಿ ಶ್ರೀ ಸಿದ್ಧಿವಿನಾಯಕ, ಉಡುಪಿಯಲ್ಲಿ ಮಧ್ವಾಚಾರ್ಯರು ಸ್ಥಾಪಿಸಿರುವ ಶ್ರೀಕೃಷ್ಣ ಮಠ, ಉಚ್ಚಿಲದಲ್ಲಿನ ಶ್ರೀ ಮಹಾಲಕ್ಷ್ಮೀ, ಮಂಗಳೂರಿನಲ್ಲಿನ ಶ್ರೀ ಗೋಕರ್ಣನಾಥೇಶ್ವರ, ಕಟೀಲು ಶ್ರೀ ದುರ್ಗಾಪರಮೇಶ್ವರಿ, ಪೊಳಲಿಯ ಶ್ರೀ ರಾಜರಾಜೇಶ್ವರಿ, ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿ, ಸೌತಡ್ಕದ ಶ್ರೀ ಗಣಪತಿ, ಕುಕ್ಕೆಯಲ್ಲಿನ ಶ್ರೀ ಸುಬ್ರಹ್ಮಣ್ಯ ದೇವರಿಗೆ ನಮಸ್ಕರಿಸಿ ಅಲ್ಲಿಂದ ಪ್ರಯಾಣವನ್ನು ಮುಂದುವರಿಸಬಹುದಾದ ಸುಲಭ ವ್ಯವಸ್ಥೆಯನ್ನು ಕರಾವಳಿಯಲ್ಲಿ ರೂಪಿಸಲು ಕೊಲ್ಲೂರು ಕಾರಿಡಾರ್ ಮುಂದೆ ಖಂಡಿತವಾಗಿಯೂ ಸರಕಾರಿ ವ್ಯವಸ್ಥೆಗೆ ಪ್ರೇರಣೆಯಾಗಲಿದೆ.

ಕರಾವಳಿಯಲ್ಲಿ ಭಕ್ತರಿಗೆ ಅಥವಾ ಪ್ರವಾಸಿಗರಿಗೆ ಗುಣಮಟ್ಟದ ಸೌಲಭ್ಯಗಳನ್ನು ಈಗಾಗಲೇ ಒದಗಿಸಲಾಗುತ್ತಿದೆ. ಇದಕ್ಕೆ ದೇವಸ್ಥಾನದ ಆಡಳಿತ ಮಂಡಳಿಗಳು, ಖಾಸಗಿ ವಸತಿಗೃಹಗಳ ಆಡಳಿತ ಮಂಡಳಿಗಳು ಹಾಗೂ ಇಲ್ಲಿಯ ಸ್ಥಳೀಯ ಆಡಳಿತ ಸಂಸ್ಥೆಗಳು ಈಗಾಗಲೇ ಗುಣಮಟ್ಟದ ವ್ಯವಸ್ಥೆಯನ್ನು ಒದಗಿಸುತ್ತಿದ್ದು, ಕೊಲ್ಲೂರು ಕಾರಿಡಾರ್ ನಿರ್ಮಾಣವಾದರೆ ಅವು ಇನ್ನಷ್ಟು ಮೇಲ್ದರ್ಜೆಗೆ ಏರಲಿವೆ.

2015ರಲ್ಲಿ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಪ್ರಾರಂಭಿಸಿದ ರಾಷ್ಟ್ರೀಯ ಪರಂಪರೆ ನಗರ ಅಭಿವೃದ್ಧಿ ಮತ್ತು ವರ್ಧನೆ ಯೋಜನೆಯು ಈ ವಿಧಾನಕ್ಕೆ ಸಾಕ್ಷಿಯಾಗಿದೆ. ಗುರುತಿಸಲಾದ ಪಾರಂಪರಿಕ ತಾಣಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೋರ್ ಹೆರಿಟೇಜ್ ಮೂಲಸೌಕರ್ಯವನ್ನು ಹೆಚ್ಚಿಸುವುದರ ಮೇಲೆ ಕೇಂದ್ರೀಕರಿಸುವ ಮೂಲಕ ದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ಮತ್ತು ಪುನರುಜ್ಜೀವನಗೊಳಿಸುವ ಗುರಿಯನ್ನು ಹೊಂದಿದೆ.

ಇದಲ್ಲದೆ, ಈ ಪ್ರಯತ್ನಗಳು ಪ್ರವಾಸೋದ್ಯಮದ ಸಾಧ್ಯತೆಗಳನ್ನು ಗಮನಾರ್ಹವಾಗಿ ಹೆಚ್ಚಿಸುತ್ತವೆ, ಸ್ಥಳೀಯರಿಗೆ ಆರ್ಥಿಕ ಅವಕಾಶಗಳನ್ನು ಉತ್ತೇಜಿಸುತ್ತವೆ ಮತ್ತು ನಗರದ ಆದಾಯಕ್ಕೆ ಕೊಡುಗೆ ನೀಡುತ್ತವೆ. ಹಳೆಯ ನಗರ ಪ್ರದೇಶಗಳಿಗೆ ಹೊಸ ಜೀವನ ಕಲ್ಪಿಸಿದಂತಾಗುತ್ತದೆ.

ದೇವಾಲಯಗಳು ಮತ್ತು ಪರಂಪರೆಯ ಕಾರಿಡಾರ್‌ಗಳಂಥ ಉಪಕ್ರಮಗಳ ಮೂಲಕ ಭಾರತೀಯ ನಗರಗಳ ಮರುವಿನ್ಯಾಸವು ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ, ಪ್ರವಾಸೋದ್ಯಮ ಬೆಳವಣಿಗೆ ಮತ್ತು ಆರ್ಥಿಕ ಅವಕಾಶಗಳಂಥ ಧನಾತ್ಮಕ ಫಲಿತಾಂಶಗಳನ್ನು ತಂದಿದೆ. ಈ ಯೋಜನೆಗಳು ಐತಿಹಾಸಿಕ ಪ್ರದೇಶಗಳನ್ನು ಪುನರುಜ್ಜೀವನಗೊಳಿಸುವುದರ ಜತೆಗೆ, ನಗರದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುತ್ತವೆ ಮತ್ತು ಸಾಂಸ್ಕೃತಿಕ ಆಚರಣೆಗಳನ್ನು ಹೊರಜಗತ್ತಿಗೆ ತೆರೆದಿಡುತ್ತವೆ ಎಂಬುದನ್ನು ಅಧಿಕಾರದಲ್ಲಿರುವ ರಾಜ್ಯ ಸರಕಾರಗಳು ಗಮನಿಸಬೇಕಿರುವುದು ಪ್ರಸ್ತುತದ ಅಗತ್ಯಗಳಲ್ಲಿ ಒಂದಾಗಿದೆ.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 92

ಸಮಾಚಾರ ಸಣ್ಣದಲ್ಲ

ಬಾಂಗ್ಲಾ ಹಿಂದೂಗಳ ರಕ್ಷಿಸಿ: ಸದ್ಗುರು ಆಗ್ರಹ

ದೆಹಲಿ: ಬಾಂಗ್ಲಾದೇಶದಲ್ಲಿ ಹಿಂದೂಗಳನ್ನೇ ಗುರಿಯಾಗಿಸಿ ಹಿಂಸಾಚಾರ ನಡೆಸಲಾಗುತ್ತಿದೆ ಎಂದು ಸದ್ಗುರು ಜಗ್ಗಿ ವಾಸುದೇವ್ ಮತ್ತು ಬಾಬಾ ರಾಮದೇವ್ ಕಿಡಿಕಾರಿದ್ದಾರೆ. ಇಂಥ ಹಿಂಸೆಯಿಂದ ಹಿಂದೂಗಳನ್ನು ರಕ್ಷಿಸುವುದು ನಮ್ಮ ಜವಾಬ್ದಾರಿ. ಭಾರತ ಸರಕಾರ ತಕ್ಷಣವೇ ಬಾಂಗ್ಲಾದಲ್ಲಿನ ಹಿಂದೂಗಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಭಾರತ ದೇಶ ಎಂದೂ 'ಮಹಾ'ಭಾರತ ಎನಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಸದ್ಗುರು ಹೇಳಿದ್ದಾರೆ. ಯಾವುದೇ ಮಾರ್ಗದಿಂದಾದರೂ ಹಿಂದೂಗಳನ್ನು ರಕ್ಷಿಸಿ ಎಂದು ಕೇಂದ್ರ ಸರಕಾರಕ್ಕೆ ಬಾಬಾ ರಾಮದೇವ್ ಮನವಿ ಮಾಡಿದ್ದಾರೆ.

ಝೀಕಾ 66 ಪ್ರಕರಣ

ಪುಣೆ: ಮಹಾರಾಷ್ಟ್ರ ರಾಜ್ಯದ ಪುಣೆ ಜಿಲ್ಲೆಯಲ್ಲಿ 66 ಮಂದಿಗೆ ಝೀಕಾ ಸೋಂಕು ತಗುಲಿರುವುದು ಬುಧವಾರ ದೃಢಪಟ್ಟಿದೆ. ಇವರಲ್ಲಿ 26 ಮಂದಿ ಗರ್ಭಿಣಿಯರೂ ಇದ್ದಾರೆ ಎಂಬುದು ಕಳವಳಕಾರಿಯಾಗಿದೆ. ಗರ್ಭಿಣಿಯರನ್ನು ಪ್ರತ್ಯೇಕ ವಾರ್ಡ್‌ಗಳಲ್ಲಿ ಇರಿಸಿ ಗಮನವಿಟ್ಟು ನೋಡಿಕೊಳ್ಳಲಾಗುತ್ತಿದೆ. ಅಲ್ಲದೇ, ಝೀಕಾ ಸೋಂಕು ತಗುಲಿದ್ದ 60-80 ವರ್ಷದ ವಯೋಮಿತಿಯ ನಾಲ್ವರು ರೋಗಿಗಳು ಮೃತಪಟ್ಟಿದ್ದಾರೆ.

{ನಿರ್ಮಲಾ ಸೀತಾರಾಮನ್} ಕೇಂದ್ರ ವಿತ್ತ ಸಚಿವೆ

ಬ್ಯಾಂಕ್‌ಗಳಲ್ಲಿ ದೇಶದ ಜನರು ಆರಂಭಿಸಿರುವ ಜನಧನ್ ಮತ್ತು ಸಾಮಾನ್ಯ ಉಳಿತಾಯ ಖಾತೆಗಳಲ್ಲಿ ಕನಿಷ್ಠ ಮೊತ್ತದ ಠೇವಣಿಯನ್ನು ಕಾಯ್ದುಕೊಳ್ಳಬೇಕಾದ ಅಗತ್ಯವೇ ಇಲ್ಲ. ಚೆಕ್ ವಹಿವಾಟು ಇರುವುದು ಸೇರಿದಂತೆ ನಿಗದಿತ ಠೇವಣಿ ಕಾಯ್ದಿರಿಸಲೇಬೇಕಾದ ಕೆಲವು ಬ್ಯಾಂಕ್ ಖಾತೆಗಳಲ್ಲಿ ಮಾತ್ರ ನಿರ್ದಿಷ್ಟ ಮೊತ್ತವನ್ನು ಸದಾ ಕಾಯ್ದುಕೊಳ್ಳಬೇಕಿದೆ.

ರಾಷ್ಟ್ರಾಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್‌ರಿಂದ ನೇಮಕ ಆದೇಶ
ಯೂನಸ್ ನೇಮಕಕ್ಕೆ ಸೇನಾಪಡೆಯ ಮೂರೂ ವಿಭಾಗ ಬೆಂಬಲ

ಬಾಂಗ್ಲಾ ಮಧ್ಯಂತರ ಸರಕಾರ ರಚನೆ-ಯೂನಸ್ ಮುಖ್ಯಸ್ಥ

ಢಾಕಾ: ವಿದ್ಯಾರ್ಥಿಗಳ ಹಿಂಸಾತ್ಮಕ ಪ್ರತಿಭಟನೆಯ ಪರಿಣಾಮ ಅವಾಮಿ ಲೀಗ್ ಪಕ್ಷದ ಚುನಾಯಿತ ಸರಕಾರ ಆರು ತಿಂಗಳಿಗೇ ಪತನಗೊಂಡಿದ್ದು, ಬಾಂಗ್ಲಾದೇಶ ದಲ್ಲಿ ಈಗ ಮಧ್ಯಂತರ ಸರಕಾರ ರಚನೆಯಾಗಿದೆ. ನೂತನ ಸರಕಾರದ ಮುಖ್ಯಸ್ಥರಾಗಿ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ, ಗ್ರಾಮೀಣ ಬ್ಯಾಂಕ್ ಸ್ಥಾಪಕ ಮೊಹಮ್ಮದ್ ಯೂನಸ್ ನೇಮಕಗೊಂಡಿದ್ದಾರೆ.

ಜನರಿಂದ ಕಳೆದ ಜನವರಿಯಲ್ಲಿ ಚುನಾಯಿತವಾಗಿದ್ದ ಸಂಸತ್ತನ್ನು ವಿಸರ್ಜಿಸಿದ ಬಾಂಗ್ಲಾದೇಶದ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್, ಬುಧವಾರ ಮಧ್ಯಂತರ ಸರಕಾರ ರಚನೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಮುಹಮ್ಮದ್ ಯೂನುಸ್ ಅವರನ್ನು ಹಂಗಾಮಿ ಸರಕಾರದ ಮುಖ್ಯಸ್ಥರನ್ನಾಗಿ ನೇಮಿಸಿದ್ದಾರೆ.

ಸದ್ಯಕ್ಕೆ ಮಧ್ಯಂತರ ಸರಕಾರ ರಚನೆಯಾಗಿದ್ದು, ಮುಖ್ಯಸ್ಥರ ನೇಮಕವೂ ಆಗಿದೆ. ವಿವಿಧ ರಾಜಕೀಯ ಪಕ್ಷಗಳ ಜತೆ ಚರ್ಚಿಸಿದ ನಂತರ ಮಧ್ಯಂತರ ಸರ್ಕಾರದ ಇತರೆ ಸದಸ್ಯರ ನೇಮಕವನ್ನು ಅಂತಿಮಗೊಳಿಸಲಾಗುವುದೆಂದು ರಾಷ್ಟ್ರಾಧ್ಯಕ್ಷರ ಪತ್ರಿಕಾ ಕಾರ್ಯದರ್ಶಿ ಜಾಯ್‌ನಲ್ ಅಬೆದಿನ್ ಬುಧವಾರ ಸುದ್ದಿ ಸಂಸ್ಥೆಗಳಿಗೆ ತಿಳಿಸಿದ್ದಾರೆ. ಯೂನಸ್ ಅವರ ನೇಮಕಕ್ಕೆ ಬಾಂಗ್ಲಾದೇಶ ಸೇನಾಪಡೆಗಳು ಬೆಂಬಲ ನೀಡಿವೆ. ಸದ್ಯ ತಲೆದೋರಿದ್ದ ಆಡಳಿತದ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ಸಿಕ್ಕಿದಂತಾಗಿದೆ. ಸಂಸತ್ ವಿಸರ್ಜನೆ ಬಳಿಕ ರಾಷ್ಟ್ರಾಧ್ಯಕ್ಷರು ಸೇನಾಪಡೆಗಳ ಮೂರೂ ವಿಭಾಗಗಳ ಮುಖ್ಯಸ್ಥರು ಹಾಗೂ 'ತಾರ ತಮ್ಯ ವಿರೋಧಿ ವಿದ್ಯಾರ್ಥಿ ಆಂದೋಲನ'ದ 13 ವಿದ್ಯಾರ್ಥಿ ಮುಖಂಡರೊಂದಿಗೆ ಚರ್ಚಿಸಿದ ಬಳಿಕ ಮಧ್ಯಂತರ ಸರಕಾರ ರಚನೆ ಮತ್ತು ಮುಖ್ಯಸ್ಥರ ನೇಮಕ ಆದೇಶ ಹೊರಡಿಸಿದ್ದಾರೆ.

ಮಾಜಿ ಸಚಿವರಿಬ್ಬರ ಸೆರೆ: ನಿರ್ಗಮಿತ ಪ್ರಧಾನಿ ಶೇಖ್ ಹಸೀನಾ ನೇತೃತ್ವದ ಅವಾಮಿ ಲೀಗ್ ಪಕ್ಷದ ಸರಕಾರದಲ್ಲಿ ದೂರಸಂಪರ್ಕ ಸಚಿವರಾಗಿದ್ದ ಝುನೈದ್ ಅಹಮದ್ ಪಲಕ್ ಮತ್ತು ವಿದೇಶಾಂಗ ಸಚಿವರಾಗಿದ್ದ ಹಸನ್ ಮಹಮದ್ ಅವರನು ಹಝರತ್ ಶಹಜಲಾಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬುಧವಾರ ಬಂಧಿಸಲಾಗಿದೆ. ದೇಶ ತೊರೆಯಲು ಮುಂದಾಗಿದ್ದ ಇಬ್ಬರೂ ಮಾಜಿ ಸಚಿವರನ್ನು ವಿಮಾನ ನಿಲ್ದಾಣದ ಅಧಿಕಾರಿಗಳು ಬಂಧಿಸಿ ಢಾಕಾ ಪೊಲೀಸರ ವಶಕ್ಕೆ ಒಪ್ಪಿಸಿದರು ಎಂದು 'ಡೈಲಿ ಇಂಗ್ಲಿಷ್' ಪತ್ರಿಕೆ ವರದಿ ಮಾಡಿದೆ.

ಬಾಂಗ್ಲಾ ಸಂಸತ್ ಭವನದೆದುರು ಬುಧವಾರ ಸೇರಿದ್ದ ವಿದ್ಯಾರ್ಥಿಗಳು.

ಇಂದು ಪ್ರಮಾಣವಚನ

ಮಧ್ಯಂತರ ಸರಕಾರ ರಚನೆಯಾ ಗಿದ್ದು, ಮುಖ್ಯಸ್ಥರ ನೇಮಕವೂ ಆಗಿದೆ. ನೂತನ ಸರಕಾರದ ಮುಖ್ಯಸ್ಥರಾಗಿ ರಾಷ್ಟ್ರಾಧ್ಯಕ್ಷರಿಂದ ಬುಧವಾರ ನೇಮಕಗೊಂಡಿರುವ ನೊಬೆಲ್ ಪ್ರಶಸ್ತಿ ಪುರಸ್ಕೃತ ಪ್ರೊ. ಮೊಹಮ್ಮದ್ ಯೂನಸ್ ಅವರು ಗುರುವಾರ ಪ್ರಮಾಣವಚನ ಸ್ವೀಕರಿಸುವರು ಎಂದು ಬಾಂಗ್ಲಾದೇಶ ಸೇನಾಪಡೆ ಮುಖ್ಯಸ್ಥ ಚೀಫ್ ಜನರಲ್ ವಾಕರ್ ಉಸ್‌ಮಾನ್ ಪ್ರಕಟಿಸಿದರು.

'ಅತ್ಯುತ್ತಮವಾದುದನ್ನೇ ಮಾಡೋಣ'

'ನಮ್ಮ ಈ ಹೊಸ ವಿಜಯವನ್ನು ಸರಿಯಾಗಿ ಬಳಸಿಕೊಂಡು ದೇಶಕ್ಕೆ ಅತ್ಯುತ್ತಮವಾದುದನ್ನೇ ಮಾಡೋಣ. ಇಂಥದೊಂದು ವಿಶೇಷ ಅವಕಾಶ ನಮ್ಮ ತಪ್ಪುಗಳಿಂದಾಗಿ ಕೈತಪ್ಪಿ ಹೋಗದಿರುವಂತೆ ನೋಡಿಕೊಳ್ಳೋಣ' ಎಂದು ಮೊಹಮ್ಮದ್ ಯೂನಸ್ ಬುಧವಾರ 'ರಾಯಿಟರ್' ಸುದ್ದಿಸಂಸ್ಥೆಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಹೇಳಿದ್ದಾರೆ. ಇನ್ನೊಂದೆಡೆ, ಬಂಧನದಿಂದ ಬಿಡುಗಡೆಯಾದ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿರುವ ಮಾಜಿ ಪ್ರಧಾನಿ ಖಲೀದಾ ಝಿಯಾ, ಸರ್ವ ಧರ್ಮಗಳ ಜನರು ಗೌರವ ಪಡೆಯುವಂತಹ ಪ್ರಜಾಪ್ರಭುತ್ವ ದೇಶವನ್ನು ನಾವೆಲ್ಲರೂ ಸೇರಿಕೊಂಡು ನಿರ್ಮಾಣ ಮಾಡಬೇಕಿದೆ ಎಂದಿದ್ದಾರೆ.



ವಿದ್ಯಾರ್ಥಿಗಳ ಪರಾಕ್ರಮಕ್ಕೆ ದೇಶ ಸ್ವತಂತ್ರ

ಢಾಕಾ: ಭ್ರಷ್ಟಾಚಾರ ಆರೋಪದಡಿ 17 ವರ್ಷಗಳ ಜೈಲು ಶಿಕ್ಷೆ ಅನುಭವಿಸುತ್ತಿದ್ದ ಬಾಂಗ್ಲಾದೇಶದ ಮಾಜಿ ಪ್ರಧಾನಿ ಬೇಗಂ ಖಲೀದಾ ಜಿಯಾ, ರಾಷ್ಟ್ರಾಧ್ಯಕ್ಷ ಮೊಹಮ್ಮದ್ ಶಹಾಬುದ್ದಿನ್ ಅವರು ಆದೇಶದ ಮೇರೆಗೆ ಬುಧವಾರ ಬಿಡುಗಡೆಯಾಗಿದ್ದಾರೆ.

ಜೈಲು ಶಿಕ್ಷೆಯಲ್ಲಿದ್ದರೂ ಅನಾರೋಗ್ಯ ನೆಪವೊಡ್ಡಿ ಆಸ್ಪತ್ರೆಗೆ ದಾಖಲಾಗಿದ್ದ ಖಲೀದಾ, ಆಸ್ಪತ್ರೆಯ ವಾರ್ಡ್‌ನಲ್ಲಿ ಮಲಗಿದ್ದಲ್ಲಿಂದಲೇ ದೇಶದ ಜನತೆಗೆ ಸಂದೇಶ ನೀಡಿದ್ದಾರೆ. ಆರೂವರೆ ವರ್ಷಗಳ ಬಳಿಕ ಖಲೀದಾ ಜಿಯಾ ಮೊದಲ ಬಾರಿಗೆ ದೇಶದ ಜನರನ್ನುದ್ದೇಶಿಸಿ ಮಾತನಾಡಿದ್ದಾರೆ.

'ಈ ಗೆಲುವು ನಮ್ಮನ್ನು ಹೊಸ ಆರಂಭಕ್ಕೆ ತಂದು ನಿಲ್ಲಿಸಿದೆ. ಬಹುಕಾಲದ ಭ್ರಷ್ಟಾಚಾರ, ಪ್ರಜಾಪ್ರಭುತ್ವದ ಭಗ್ನಾವಶೇಷಗಳನ್ನು ಅಳಿಸಿ ಹಾಕಿ ಸಮೃದ್ಧವಾದ ಹೊಸ ಬಾಂಗ್ಲಾದೇಶವನ್ನು ನಿರ್ಮಿಸಬೇಕಿದೆ. ವಿದ್ಯಾರ್ಥಿಗಳು, ಯುವಜನತೆ ದೇಶದ ಭವಿಷ್ಯ. ಯಾವ ಕನಸಿಗಾಗಿ ಅವರು ತಮ್ಮ ರಕ್ತ ಹರಿಸಿದರೋ ಆ ಕನಸನ್ನು ನಾವು ನನಸು ಮಾಡುತ್ತೇವೆ. ಅಸಾಧ್ಯವನ್ನು ಸಾಧ್ಯವಾಗಿಸಲು ಜೀವಪಣಕ್ಕಿಟ್ಟು ಹೋರಾಡಿದ ಎಲ್ಲಾ ಯುವಜನತೆಯ ಶೌರ್ಯಕ್ಕೆ ಹೃತ್ಪೂರ್ವಕ ಧನ್ಯವಾದ ತಿಳಿಸುತ್ತೇನೆ' ಎಂದು ಖಲೀದಾ ವಿಡಿಯೋ ಸಂದೇಶದಲ್ಲಿ ಹೇಳಿದ್ದಾರೆ.

ಮಾಜಿ ಪ್ರಧಾನಿ 2018ರಲ್ಲಿ ಭ್ರಷ್ಟಾಚಾರ ಆರೋಪದಡಿ ಜೈಲು ಸೇರಿದ್ದರು. ಶಿಕ್ಷೆ ಅವಧಿಯಲ್ಲಿ ಚುನಾವಣೆ ಸ್ಪರ್ಧೆಯಿಂದ ನಿರ್ಬಂಧಿಸಲಾಗಿತ್ತು. ಜೈಲಿನಲ್ಲಿರುವ ಬದಲು ಅನಾರೋಗ್ಯ ನೆಪವೊಡ್ಡಿ ಶಿಕ್ಷೆ ಅವಧಿಯ ಬಹಳಷ್ಟು ಸಮಯವನ್ನು ಜಿಯಾ ಆಸ್ಪತ್ರೆಯಲ್ಲೇ ಕಳೆದಿದ್ದಾರೆ.

ಭಾರತೀಯ ಸಿಬ್ಬಂದಿ, ಕುಟುಂಬ ವಾಪಸ್

ದೆಹಲಿ: ಢಾಕಾ ಭಾರತೀಯ ರಾಯಭಾರ ಕಚೇರಿ ಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರಲ್ಲಿ ಅತ್ಯಗತ್ಯ ವಲ್ಲದ ಸಾಮಾನ್ಯ ಸಿಬ್ಬಂದಿ ಹಾಗೂ ರಾಜತಾಂತ್ರಿಕ ಅಧಿಕಾರಿಗಳು ಮತ್ತು ಅವರ ಕುಟುಂಬವನ್ನು ದೇಶಕ್ಕೆ ವಾಪಸ್ ಕರೆಸಿಕೊಳ್ಳಲಾಗಿದೆ. ಶಿಶುಗಳು ಸೇರಿದಂತೆ ಒಟ್ಟು 206 ಸಿಬ್ಬಂದಿ ಮತ್ತು ಕುಟುಂಬದವರು ಏರ್ ಇಂಡಿಯ ವಿಮಾನ ಮೂಲಕ ಭಾರತಕ್ಕೆ ವಾಪಸಾಗಿದ್ದಾರೆ.

ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ರಾಜೀನಾಮೆ ನಂತರದ ಬೆಳವಣಿಗೆಯಲ್ಲಿ ಬುಧವಾರ ಏರ್ ಇಂಡಿಯದ ಮೊದಲ ವಿಮಾನ ಢಾಕಾದಿಂದ ಭಾರತೀಯರನ್ನು ಹೊತ್ತು ದೆಹಲಿಗೆ ಬಂದಿಳಿದಿದೆ.

ಹಸೀನಾ ಅವರ ರಾಜೀನಾಮೆ ಬಳಿಕವೂ ಬಾಂಗ್ಲಾದೇಶ ಪ್ರಕ್ಷುಬ್ಧ ವಾಗಿದೆ. ಮುಂಜಾಗ್ರತಾ ಕ್ರಮವಾಗಿ ವಿವಿಧ ಉದ್ದೇಶಗಳಿಗೆ ಬಾಂಗ್ಲಾ ದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಜತಾಂತ್ರಿಕ ಸಿಬ್ಬಂದಿ ಮತ್ತು ಅವರ ಕುಟುಂಬದವರು ಹಾಗೂ ಸದ್ಯ ಅನಿವಾರ್ಯವಲ್ಲದ ಸಿಬ್ಬಂದಿ ಯನ್ನು ಭಾರತಕ್ಕೆ ಕರೆತರಲಾಗಿದೆ. ಢಾಕಾ ವಿಮಾನ ನಿಲ್ದಾಣದಲ್ಲಿ ಮೂಲ ಸೌಕರ್ಯಗಳ ಸಮಸ್ಯೆಯಿದ್ದರೂ ಏರ್ ಇಂಡಿಯ ಸಂಸ್ಥೆ ಮಂಗಳವಾರ ವಿಶೇಷ ವಿಮಾನವನ್ನು ಬಾಂಗ್ಲಾಗೆ ಕಳುಹಿಸಿ ಭಾರತೀಯರನ್ನು ಸುರಕ್ಷಿತವಾಗಿ ದೆಹಲಿಗೆ ಕರೆತರಲು ನೆರವಾಗಿದೆ. ಬಾಂಗ್ಲಾದೇಶದಲ್ಲಿ ಮೀಸಲು ವಿರೋಧಿ ಹೋರಾಟ ಹಿಂಸೆಗೆ ತಿರುಗಿದಾಗಿನಿಂದ ಈವರೆಗೆ ಒಟ್ಟು 450ಕ್ಕೂ ಅಧಿಕ ಮಂದಿ ಜೀವ ಕಳೆದುಕೊಂಡಿದ್ದಾರೆ. ಹಿಂಸಾಚಾರ ಬುಧವಾರವೂ ಮುಂದು ವರೆದಿದೆ. ಹಸೀನಾ ರಾಜೀ ನಾಮೆ ಬಳಿಕ ನಡೆದ ಹಿಂಸಾಚಾರದಲ್ಲಿ 140 ಮಂದಿ ಸಾವನ್ನಪ್ಪಿದ್ದಾರೆ.

ಹಿಂದೂಗಳ ಮೇಲೆ ದಾಳಿ: ಅಲ್ಪಸಂಖ್ಯಾತರು, ಅದರಲ್ಲೂ ಹಿಂದೂಗಳ ಮೇಲೆ ಗುರಿಯಿಟ್ಟಂತೆ ದಾಳಿ ನಡೆಸಲಾಗುತ್ತಿದೆ. ಭಾರತೀಯ ರಾಜತಾಂತ್ರಿಕ ಅಧಿಕಾರಿ ಪ್ರಣಯ್ ವರ್ಮಾ ಮತ್ತಿತರೆ ಅಧಿಕಾರಿಗಳು ಬಾಂಗ್ಲಾ ಅಧಿಕಾರಿಗಳು ಹಾಗೂ ಸೇನೆಯ ಜತೆ ಸಂಪರ್ಕದಲ್ಲಿರಲು ಪ್ರಯತ್ನಿಸುತ್ತಿದ್ದಾರೆ. ಬಾಂಗ್ಲಾದೇಶ ದಲ್ಲಿರುವ ಭಾರತೀಯ ನಾಗರಿಕರ ಸುರಕ್ಷತೆಗೆ ಕ್ರಮ ಕೈಗೊಳ್ಳುವಂತೆ ಭಾರತ ಆಗ್ರಹಿಸಿದೆ.

ಅಮೆರಿಕ ಖಂಡನೆ

ವಾಷಿಂಗ್ಟನ್: ಬಾಂಗ್ಲಾದೇಶದಲ್ಲಿ ಕೆಲವು ದಿನಗಳಿಂದ ನಡೆಯುತ್ತಿರುವ ಹಿಂಸಾತ್ಮಕ ಪ್ರತಿಭಟನೆ ಈಗ ಧರ್ಮ ಕೇಂದ್ರಿತವಾಗಿ ಬದಲಾಗಿರುವುದನ್ನು ಅಮೆರಿಕ ಖಂಡಿಸಿದೆ. ನಡೆಯುತ್ತಿರುವುದನ್ನು ಗಮನಿಸುತ್ತಿದ್ದೇವೆ. ಅನ್ಯ ಧರ್ಮೀಯರನ್ನು ಗುರಿಯಾಗಿಟ್ಟು ದಾಳಿ ನಡೆಸುತ್ತಿರುವುದು ಸ್ವೀಕಾರಾರ್ಹವಲ್ಲ ಎಂದು ಅಮೆರಿಕದ ಗೃಹ ಖಾತೆ ವಕ್ತಾರ ಹೇಳಿದ್ದಾರೆ. ಹಿಂಸಾತ್ಮಕ ಪ್ರತಿಭಟನೆ, ಧರ್ಮಕೇಂದ್ರಿತ ದಾಳಿ ಘಟನೆಗಳ ತನಿಖೆ ನಡೆಸಬೇಕು ಎಂದೂ ಶ್ವೇತಭವನ ಒತ್ತಾಯಿಸಿದೆ.

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬೋಗಾದಿ
ಮೈಸೂರು ತಾಲ್ಲೂಕು ಮತ್ತು ಜಿಲ್ಲೆ -570026
ದೂರವಾಣಿ ಸಂ: 0821-2331099
Web :www.bogaditown.mrc.gov.in
E. mail :itstaff_ulb_bogadi@yahoo.com
ಸಂ:ಪ.ಪಂ.ಬೋಗಾದಿ/ತಾ.ಶಾ./ಟೆಂಡರ್.ಸಿ.ಆರ್.04/2024-25
ದಿನಾಂಕ: 05.08.2024

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2022-23ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ ಮತ್ತು 2024-25ನೇ ಸಾಲಿನ 15ನೇ ಹಣಕಾಸು ಯೋಜನೆ ಅನುದಾನದಲ್ಲಿ ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸಂಬಂಧಿತ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಇ-ಪ್ರೋಕ್ಯೂರ್‌ಮೆಂಟ್ ಸೆಲ್‌ನಲ್ಲಿ ನೋಂದಾಯಿತಅರ್ಹ ಸಿವಿಲ್ ಗುತ್ತಿಗೆದಾರರುಗಳಿಂದ ಇ-ಪೋರ್ಟಲ್ https://kppp.karnataka.gov.in ಮೂಲಕ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಅರ್ಹ ಸಿವಿಲ್ ಗುತ್ತಿಗೆದಾರರು ತಮ್ಮ ಐಟಂವಾರು ಟೆಂಡರ್‌ಗಳನ್ನು KW-1 ರಂತೆ ಪ್ರಮಾಣಿತ ಟೆಂಡರ್ ದಸ್ತಾವೇಜಿನ ನಿಯಮಗಳಂತೆ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ.

1)INDENT No.DMA/2023-24/WS/WORK_INDENT 14434/CALL-2 ಅಂದಾಜು ಮೊತ್ತ ರೂ.7.00 ಲಕ್ಷಗಳು, ಇ.ಎಂ.ಡಿ ರೂ.17,500/-
2)INDENTNo.DMA/2023-24/WS/WORK_INDENT 14436/CALL-2 ಅಂದಾಜು ಮೊತ್ತ ರೂ.14.00 ಲಕ್ಷಗಳು, ಇ.ಎಂ.ಡಿ ರೂ.35,000/-
3)INDENTNo.DMA/2024-25/WS/WORK_INDENT 19577/CALL-2 ಅಂದಾಜು ಮೊತ್ತ ರೂ.16.70 ಲಕ್ಷಗಳು, ಇ.ಎಂ.ಡಿ ರೂ.41,750/-
4)INDENTNo.DMA/2024-25/WORK_INDENT 19599/CALL-2 (Reserved for ST Bidders) ಅಂದಾಜು ಮೊತ್ತ ರೂ.18.40 ಲಕ್ಷಗಳು, ಇ.ಎಂ.ಡಿ ರೂ.23,000/- ಗಳಾಗಿರುತ್ತದೆ.

ಟೆಂಡರ್‌ನ್ನು ದಿನಾಂಕ:20.08.2024 ರ ಸಂಜೆ 5.00 ಗಂಟೆಯೊಳಗೆ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸತಕ್ಕದ್ದು. ದಿನಾಂಕ:21.08.2024ರಂದು ಸಂಜೆ 5:15 ಗಂಟೆಗೆ ಪೋರ್ಟಲ್‌ನಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯಲಾಗುವುದು (ಸಾಧ್ಯವಾಗದಿದ್ದಲ್ಲಿ ಮುಂದಿನ ದಿನಾಂಕದಂದು ಟೆಂಡರ್ ತೆರೆಯಲಾಗುವುದು ಹಾಗೂ ತಿದ್ದುಪಡಿ/ಬದಲಾವಣೆಗಳಿದ್ದಲ್ಲಿ ಪತ್ರಿಕೆ ಪ್ರಕಟಣೆ ಹೊರಡಿಸಲಾಗುವುದಿಲ್ಲ) ಟೆಂಡರ್ ಅಂಗೀಕರಿಸುವ ತಿರಸ್ಕರಿಸುವ ಹಕ್ಕನ್ನು ಪಟ್ಟಣ ಪಂಚಾಯಿತಿ ಬೋಗಾದಿ ಕಾಯ್ದಿರಿಸಿಕೊಂಡಿದೆ.

ಸಹಿ/-ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಬೋಗಾದಿ
DIPR/DDMYS-370/KSMCA-259/2024-25

ಭಾರತಕ್ಕೂ 'ಬಾಂಗ್ಲಾ ಸ್ಥಿತಿ': ಕಾಂಗ್ರೆಸ್ ನಾಯಕ ಎಚ್ಚರಿಕೆ

ಸಲ್ಮಾನ್ ಖುರ್ಷಿದ್ ಹೇಳಿಕೆಗೆ ಬಿಜೆಪಿ ಖಂಡನೆ



ದೆಹಲಿ: ಬಾಂಗ್ಲಾದೇಶದಲ್ಲಿ ಈಗೇನು ನಡೆದಿದೆಯೋ ಅಂತಹುದೇ ಘಟನೆಗಳು ಭಾರತದಲ್ಲೂ ಜರುಗಬಹುದು ಎಂದು ಕಾಂಗ್ರೆಸ್ ಮುಖಂಡ ಸಲ್ಮಾನ್ ಖುರ್ಷಿದ್ ಎಚ್ಚರಿಕೆ ದಾಟಿಯ ಮಾತು ಹೇಳಿದ್ದಾರೆ. ಸಲ್ಮಾನ್ ಹೇಳಿಕೆಯನ್ನು ಬಿಜೆಪಿ ಮುಖಂಡರು ತೀವ್ರವಾಗಿ ಖಂಡಿಸಿದ್ದಾರೆ.

ಮುಜಿಬುರ್ ರೆಹಮಾನ್ ಕುರಿತ ಪುಸ್ತಕ 'ಶಿಕ್ವಾ-ಎ-ಹಿಂದ್' ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಖುರ್ಷಿದ್ 'ಕಾಶ್ಮೀರದಲ್ಲಿ, ದೇಶದಲ್ಲಿ ಎಲ್ಲವೂ ಯಥಾಸ್ಥಿಯಲ್ಲಿದೆ ಎಂಬಂತೆ ಕಾಣಬಹುದು. ಆದರೆ ಪ್ರಶಾಂತ ಸ್ಥಿತಿಯ ಒಳಗೇ ಏನೋ ನಡೆಯುತ್ತಿದೆ ಎಂದರು. 2024ರ ಚುನಾವಣೆ ಫಲಿತಾಂಶ ಸಂಭ್ರಮಿಸುತ್ತಾ ಮತ್ತಷ್ಟು ಸಾಧಿಸಬೇಕೆಂಬ ಯೋಚನೆ ಹೊಂದಿದ್ದಾರೆ. ಸತ್ಯ ಏನೆಂದರೆ ಬಾಂಗ್ಲಾದಲ್ಲಿ ಈಗೇನು ಆಗುತ್ತಿದೆಯೋ ಅದೆಲ್ಲವೂ ಇಲ್ಲೂ ನಡೆಯಬಹುದು ಎಂದು ಹೇಳಿದರು. ಸಂಸದ ಶಶಿ ತರೂರ್ ಮಾತನಾಡಿ, ಖುರ್ಷಿದ್ ಮಾತಿನ ಒಳಾರ್ಥ ವಿಶ್ಲೇಷಿಸಲಾರೆ. ಆದರೆ ಬಾಂಗ್ಲಾ ಮುಕ್ತ-ನ್ಯಾಯಸಮ್ಮತ ಚುನಾವಣೆ ಮತ್ತು ಪ್ರಜಾಪ್ರಭುತ್ವದ ಮಹತ್ವ ಸಾರಿದೆ ಎಂದು ಹೇಳಿದರು.

ರಾಹುಲ್ ಪ್ರವಾಸ ಉದ್ದೇಶ ಶಂಕಾಸ್ಪದ

ಕಾಂಗ್ರೆಸ್ ನಾಯಕ ಖುರ್ಷಿದ್, ದೇಶದಲ್ಲಿ ಪ್ರತಿಭಟನೆ-ದಂಗೆ ಜರುಗಬಹುದೆಂದು ಎಚ್ಚರಿಕೆ ನೀಡುತ್ತಿದ್ದಾರೆ. ಇಂಥ ಪ್ರಚೋದನಕಾರಿ ಹೇಳಿಕೆಗೆ ಸಭೆಯಲ್ಲಿದ್ದ ಶಶಿ ತರೂರ್ ಸೇರಿದಂತೆ ಕಾಂಗ್ರೆಸ್ ನಾಯಕರು ಯಾರೂ ಪ್ರತಿಕ್ರಿಯಿಸದೇ ಇರುವುದನ್ನು ನೋಡಿದರೆ ಅವರ ಬೆಂಬಲವೂ ಇದೆ ಎಂಬುದು ಖಚಿತವಾಗುತ್ತದೆ ಎಂದು ಬಿಜೆಪಿ ಸಂಸದ ಸಂಬಿತ್ ಪಾತ್ರಾ ಕಿಡಿಕಾರಿದ್ದಾರೆ. ರಾಹುಲ್ ಗಾಂಧಿ ವಿದೇಶ ಪ್ರವಾಸ ವೇಳೆ ಕೆಲವರೊಂದಿಗೆ ಗೌಪ್ಯ ಭೇಟಿ ನಡೆಸಿ ಭಾರತದ ವಿರುದ್ಧ ಚರ್ಚಿಸುತ್ತಾರೆ. ಅವರ ಪ್ರವಾಸದ ಉದ್ದೇಶ ಈಗ ಅರಿವಾಗಿದೆ ಎಂದು ಪಾತ್ರಾ ವಾಗ್ದಾಳಿ ನಡೆಸಿದ್ದಾರೆ. ಬಾಂಗ್ಲಾ ವಿಚಾರದಲ್ಲಿ ಕೇಂದ್ರ ಸರಕಾರದ ಜತೆ ಇರುವುದಾಗಿ ಕಾಂಗ್ರೆಸ್ ಭರವಸೆ ನೀಡಿದೆ. ಆದರೆ ಅದೇ ಪಕ್ಷದ ಮುಖಂಡ ಖುರ್ಷಿದ್ ಭಾರತದ ಜನರನ್ನು ಪ್ರಚೋದಿಸುವ ಮಾತನಾಡುತ್ತಿದ್ದಾರೆ. ಇದು ಚರ್ಚಿಸುವಂತಹ ರಾಜಕೀಯ ವಿಷಯವಲ್ಲ ಎಂದು ಬಿಜೆಪಿ ಮುಖಂಡ ಷಹಜಾದ್ ಪೂನಾವಾಲಾ ಕಿಡಿಕಾರಿದ್ದಾರೆ.

ರಾಷ್ಟ್ರೀಯ ವಿಪತ್ತೆಂದು ಘೋಷಿಸಿ: ರಾಹುಲ್

ದೆಹಲಿ: ಕೇರಳದ ವಯನಾಡಿನಲ್ಲಾದ ಭೂಕುಸಿತವನ್ನು 'ರಾಷ್ಟ್ರೀಯ ವಿಪತ್ತು' ಎಂದು ಘೋಷಿ ಸುವಂತೆ ಹಾಗೂ ಸಂತ್ರಸ್ತರಿಗೆ ಹೆಚ್ಚಿನ ಪರಿಹಾರ ನೀಡುವಂತೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಬುಧವಾರ ಲೋಕಸಭೆಯಲ್ಲಿ ಕೇಂದ್ರ ಸರಕಾರವನ್ನು ಒತ್ತಾಯಿಸಿದ್ದಾರೆ.

ಶೂನ್ಯವೇಳೆ ವಿಷಯ ಪ್ರಸ್ತಾಪಿಸಿದ ರಾಹುಲ್, ವಯನಾಡು ಭೂಕುಸಿತ ಸ್ಥಳಕ್ಕೆ ಭೇಟಿ ನೀಡಿ ಹಾನಿಯನ್ನು ವೀಕ್ಷಿಸಿದ್ದೇನೆ. ಕೆಲವೆಡೆ ಇಡೀ ಕುಟುಂಬವೇ ಕಣ್ಮರೆಯಾಗಿದೆ, ಕೆಲ ಕುಟುಂಬಗಳಲ್ಲಿ ಒಬ್ಬರಷ್ಟೇ ಬದುಕಿದ್ದಾರೆ ಎಂದು ಸದನಕ್ಕೆ ಹಾನಿಯ ತೀವ್ರತೆ ಮನದಟ್ಟು ಮಾಡಿಕೊಡಲು ಯತ್ನಿಸಿದರು. ಅದೊಂದು ಭೀಕರ ಭೂಕುಸಿತ. ಮೃತರ ಸಂಖ್ಯೆ 400 ಮೀರಬಹುದು. ದೊಡ್ಡ ದುರಂತವಾಗಿರುವು ದರಿಂದ ವಯನಾಡಿಗೆ ಸಮಗ್ರ ಪುನರ್ವಸತಿ ಪ್ಯಾಕೇಜ್ ಒದಗಿ ಸಬೇಕು. ವಿಪತ್ತು-ನಿರೋಧಕ ಮೂಲ ಸೌಕರ್ಯ ನಿರ್ಮಾಣಕ್ಕೆ ಹೆಚ್ಚಿನ ಹಣ ನೀಡಬೇಕು ಎಂದು ಕೇಂದ್ರವನ್ನು ಒತ್ತಾಯಿಸಿದರು. ಕರ್ನಾಟಕ, ತಮಿಳುನಾಡು, ತೆಲಂಗಾಣ ರಾಜ್ಯ ಸರಕಾರಗಳು ನೀಡಿದ ನೆರವು ಹಾಗೂ ಸೇನಾಪಡೆ, ಎನ್‌ಡಿಆರ್‌ಎಫ್, ಸ್ವಯಂ ಸೇವಕರು ರಕ್ಷಣಾ ಕಾರ್ಯವನ್ನು ರಾಹುಲ್ ಶ್ಲಾಘಿಸಿದರು.

ರಾಹುಲ್, 6 ಸಂಸದರಿಗೆ ಪಾಕ್ ಮಾವಿನಹಣ್ಣು: ದೆಹಲಿ: ದೆಹಲಿಯಲ್ಲಿನ ಪಾಕಿಸ್ತಾನದ ಹೈಕಮಿಷನ್ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷದ 6 ಸಂಸದರಿಗೆ ಮಾವಿನಹಣ್ಣು ಕಳುಹಿಸಿಕೊಟ್ಟಿದೆ. ಕಾಂಗ್ರೆಸ್‌ನ ಶಶಿ ತರೂರ್, ಸಮಾಜವಾದಿ ಪಕ್ಷದ ಮೊಹಿಬ್ಬುಲ್ಲಾ ನದ್ವಿ, ಜಿಯಾಉರ್ ರೆಹಮಾನ್ ಬಾಕರ್, ಅಫ್ಜಲ್ ಅನ್ಸಾರಿ, ಇಕ್ರಾ ಚೌಧರಿ ಮತ್ತು ಕಪಿಲ್ ಸಿಬಲ್ ಅವರಿಗೆ ಪಾಕ್ ಹೈಕಮಿಷನ್ ಬುಟ್ಟಿಗಳಲ್ಲಿ ಮಾವಿನ ಹಣ್ಣು ಕಳುಹಿಸಿದೆ. 1981ರಲ್ಲಿ ಪಾಕ್ ಅಧ್ಯಕ್ಷ ಜಿಯಾ ಉಲ್ ಹಕ್ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರಿಗೆ ಅನ್ವರ್ ರತೌಲ್ ಮಾವಿನ ಹಣ್ಣು ಕಳುಹಿಸಿದ್ದರು. 2015ರ ಈದ್ ಸಂದರ್ಭ ಪಾಕ್ ಪ್ರಧಾನಿ ನವಾಜ್ ಷರೀಫ್, ಪ್ರಧಾನಿ ಮೋದಿ, ರಾಷ್ಟ್ರಪತಿ ಪ್ರಣಬ್ ಮುಖರ್ಜಿ, ಮನಮೋಹನ್ ಸಿಂಗ್ ಮತ್ತು ಅಟಲ್ ಬಿಹಾರಿ ವಾಜಪೇಯಿ ಮತ್ತಿತರ ನಾಯಕರಿಗೆ 10 ಕೆಜಿ ಮಾವಿನ ಹಣ್ಣು ಕಳುಹಿಸಿದ್ದರು.

ಪುರಸಭಾ ಕಾರ್ಯಾಲಯ, ಕೋನಪ್ಪನ ಅಗ್ರಹಾರ
ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560100.
E-Mail: ka.konappanaagrahara.tmc@gmail.com
ಸ್ವಚ್ಛ ಭಾರತ
ಸಂಖ್ಯೆ:ಕೋ:ಪು:ಕಾ: ಕಲ್ಯಾಣ ಶಾಖೆ/ಸಿ.ಆರ್/01/2024-25 ದಿನಾಂಕ: 06.08.2024

ಸಾರ್ವಜನಿಕ ಪ್ರಕಟಣೆ

ಕೋನಪ್ಪನ ಅಗ್ರಹಾರ ಪುರಸಭೆ ವ್ಯಾಪ್ತಿಯಲ್ಲಿ ಬರುವ ಪ.ಜಾತಿ ಮತ್ತು ಪ.ಪಂಗಡ, ಇತರೆ ಹಿಂದುಳಿದ ಜನಾಂಗದ ಮತ್ತು ವಿಶೇಷ ಚೇತನರ ಅಭಿವೃದ್ಧಿಗೆ ಸರ್ಕಾರದ ಮಾರ್ಗಸೂಚಿಯಂತೆ 2024-25ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿ ಮತ್ತು ಪುರಸಭಾ ನಿಧಿಯ ಶೇ.24.10, 7.25 ಮತ್ತು ಶೇ.5ರ ಕಾರ್ಯಕ್ರಮದಡಿ ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಂಗಳೂರು ನಗರ ಜಿಲ್ಲೆ ರವರ ಪತ್ರದ ಸಂಖ್ಯೆ:ಜಿನಕೋ/ತಾ.ಶಾ/ಸಿ.ಆರ್/160716/2024-25, ದಿನಾಂಕ:02.07.2024 ಹಾಗೂ ಜಿನಕೋ/ತಾ.ಶಾ/ಸಿ.ಆರ್.174745/2024-25, ದಿನಾಂಕ:23.07.2024ರ ಆದೇಶದಂತೆ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಕ್ರಮ ಕೈಗೊಂಡಿದ್ದು, ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಅರ್ಹ ಫಲಾನುಭವಿಗಳು ಕಛೇರಿಗೆ ದಿನಾಂಕ: 31.08.2024ರ ಸಂಜೆ 5:00 ಗಂಟೆಯ ಒಳಗಾಗಿ ಅರ್ಜಿ ಸಲ್ಲಿಸಲು ಈ ಮೂಲಕ ತಿಳಿಯಪಡಿಸಿದೆ.

ಸಹಿ/-
ಆಡಳಿತಾಧಿಕಾರಿಗಳು
ಪುರಸಭೆ, ಕೋನಪ್ಪನ ಅಗ್ರಹಾರ

ಸಹಿ /-
ಮುಖ್ಯಾಧಿಕಾರಿ
ಪುರಸಭೆ, ಕೋನಪ್ಪನ ಅಗ್ರಹಾರ

ವಾಸಾಸಂಇ/ವಾ.ಪ್ರ/1345/ಎಸ್‌ಎಸ್‌ಸಿ/2024-25

ಬಾಂಗ್ಲಾ ಸ್ಥಿತಿ ಭಾರತಕ್ಕೆ ಪಾಠ

ಶ್ರೀನಗರ: ಪರಮಾಧಿಕಾರ ಧೋರಣೆ ದೀರ್ಘ ಕಾಲ ಉಳಿಯಲ್ಲ. ಬಾಂಗ್ಲಾದೇಶದ ಪರಿಸ್ಥಿತಿ ಭಾರತಕ್ಕೆ ದೊಡ್ಡ ಪಾಠ ಎಂದು ಪೀಪಲ್ಸ್ ಡೆಮೊಕ್ರೆಟಿಕ್ ಪಕ್ಷದ(ಪಿಡಿಪಿ) ನಾಯಕಿ ಮೆಹಬೂಬಾ ಮುಫ್ತಿ ಬುಧವಾರ ಶ್ರೀನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಹಣದುಬ್ಬರ, ನಿರುದ್ಯೋಗ ಸಮಸ್ಯೆ ಪರಿಹರಿಸದೇ ಯುವಜನರನ್ನು ಕತ್ತಲಿಗೆ ದೂಡಿದಾಗ ಶಿಕ್ಷಣ ಪಡೆದೂ ಅಸಹಾಯಕತೆ ಅನುಭವಿಸಿದಾಗ ಬಾಂಗ್ಲಾದಂತಹ ಸ್ಥಿತಿ ಭಾರತದಲ್ಲೂ ಕಾಣಬಹುದು. ಜನವಿರೋಧಿ ಯೋಜನೆ-ಕಾನೂನು ಜಾರಿಗೊಳಿಸಿದರೆ ಜನ ತಾಳ್ಮೆ ಕಳೆದುಕೊಳ್ಳುತ್ತಾರೆ. ದೇಶದ ಆಡಳಿತಗಾರರೂ ಕೂಡಾ ಶೇಖ್ ಹಸೀನಾ ರೀತಿಯೇ ದೇಶ ತೊರೆಯಬೇಕಾಗುತ್ತದೆ ಎಂದು ಮುಫ್ತಿ ಪರೋಕ್ಷವಾಗಿ ಪ್ರಧಾನಿ ನರೇಂದ್ರ ಮೋದಿಗೆ ಎಚ್ಚರಿಕೆಯ ಮಾತುಗಳನ್ನಾಡಿದ್ದಾರೆ.

ದೇಶದ ಯುವಕರು ಯುಎಪಿಎ ಹಾಗೂ ಪಿಎಸ್‌ಎ ಕಾಯ್ದೆಯಿಂದ ಸಂಕಷ್ಟಕ್ಕೀಡಾಗಿದ್ದಾರೆ, ಅಸಹಾಯಕರಾಗಿದ್ದಾರೆ ಎಂದು ಜಮ್ಮು ಕಾಶ್ಮೀರ ಮಾಜಿ ಸಿಎಂ ಮೆಹಬೂಬಾ ಹೇಳಿದ್ದಾರೆ.

ಹೆಲಿಕಾಪ್ಟರ್ ದುರಂತ; 5 ಸಾವು

ಕಠ್ಮಂಡು: 'ಏರ್ ಡೈನಾಸ್ಟಿ' ಸಂಸ್ಥೆಗೆ ಸೇರಿದ ಹೆಲಿಕಾಪ್ಟರ್ ಬುಧವಾರ ಕಠ್ಮಂಡುನಲ್ಲಿ ಪತನವಾಗಿದ್ದು ನಾಲ್ವರು ಚೀನಾ ಪ್ರಯಾಣಿಕರು ಸೇರಿ ಐವರು ದುರ್ಮರಣಕ್ಕೀಡಾಗಿದ್ದಾರೆ. ಇಬ್ಬರು ಪುರುಷರು, ಒಬ್ಬ ಮಹಿಳೆ, ಪೈಲಟ್ ಮೃತರಲ್ಲಿದ್ದಾರೆ. ಇನ್ನೊಂದು ಮೃತದೇಹ ಗುರುತು ಸಿಗದಷ್ಟು ಸುಟ್ಟು ಹೋಗಿದೆ ಎಂದು ತಿಳಿದುಬಂದಿದೆ. ಹೆಲಿಕಾಪ್ಟರ್ 9ಎನ್-ಎಜೆಡಿ ಕಠ್ಮಂಡುವಿನಿಂದ ರಸುವಾಗೆ ಹೊರಟಿತ್ತು. ಆದರೆ ತ್ರಿಭುವನ ಅಂತಾ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಟೇಕಾಫ್ ಆದ 3 ನಿಮಿಷಗಳಲ್ಲೇ ಸಂಪರ್ಕ ಕಳೆದುಕೊಂಡಿದೆ. ನುವಾಕೋಟ್‌ನ ಶಿವಪುರಿ ರೂರಲ್ ಮುನ್ಸಿಪಾಲ್ಟಿ ವಾರ್ಡ್‌ನಲ್ಲಿ ಪತನಗೊಂಡಿದೆ

ಎಂದು ನೇಪಾಳದ ನಾಗರಿಕ ವಿಮಾನಯಾನ ಸಂಸ್ಥೆ ಮಾಹಿತಿ ನೀಡಿದೆ.

ಇದೇ ವರ್ಷದ ಜು.24ರಂದು ಸೌರ್ಯ ಏರ್‌ಲೈನ್ಸ್ ವಿಮಾನ ಪತನಗೊಂಡು 18 ಮಂದಿಯನ್ನು ಬಲಿ ಪಡೆದಿತ್ತು. ನೇಪಾಳ ವಾಯು ವ್ಯಾಪ್ತಿಯಲ್ಲಿ ಪದೇ ಪದೇ ವಿಮಾನ ದುರಂತ ನಡೆಯುತ್ತಿದ್ದು ಆತಂಕ ಹೆಚ್ಚಿಸಿದೆ.

ಕರ್ನಾಟಕಕ್ಕೇ ಅತ್ಯಧಿಕ ನೆರವು

ದೆಹಲಿ: ಪ್ರಕೃತಿ ವಿಕೋಪ ಅವಘಡಕ್ಕೆ ಪರಿಹಾರ ಒದಗಿಸಲು ಕಳೆದೆರಡು ವರ್ಷಗಳಲ್ಲಿ ಕರ್ನಾಟಕ, ಹಿಮಾಚಲ ಪ್ರದೇಶ, ಅಸ್ಸಾಂ ರಾಜ್ಯಗಳಿಗೆ ಎನ್‌ಡಿಆರ್‌ಎಫ್ ಅತಿ ಹೆಚ್ಚು ನೆರವು ನೀಡಿದೆ ಎಂದು ಕೇಂದ್ರ ಗೃಹ ಖಾತೆ ಸಹಾಯಕ ಸಚಿವ ನಿತ್ಯಾನಂದ ರಾಯ್ ಹೇಳಿದ್ದಾರೆ.

ರಾಜ್ಯಸಭೆಗೆ ಬುಧವಾರ ಮಾಹಿತಿ ನೀಡಿದ ಸಚಿವರು, 2022-24ರಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ(ಎನ್‌ಡಿಆರ್‌ಎಫ್) ಯಿಂದ ಪ್ರಕೃತಿ ವಿಕೋಪಕ್ಕೆ ಗುರಿಯಾದ ಪ್ರದೇಶದ ಜನರ ಪುನರ್ವಸತಿ-ಪರಿಹಾರ ವಿತರಣೆಗಾಗಿ ರಾಜ್ಯಗಳಿಗೆ ಆರ್ಥಿಕ ನೆರವು ನೀಡಲಾಗಿದೆ. ಇದರಲ್ಲಿ ಕರ್ನಾಟಕಕ್ಕೇ ಅತಿ ಹೆಚ್ಚು ಹಣ ಬಿಡುಗಡೆಯಾಗಿದೆ ಎಂದು ತಿಳಿಸಿದ್ದಾರೆ.

ನೆರೆ, ಪ್ರವಾಹ ಹಾಗೂ ಭೂಕುಸಿತ ಅವಘಡಗಳ ಪರಿಹಾರಕ್ಕೆ ಕೇಂದ್ರದ ಉನ್ನತ ಮಟ್ಟದ ಸಮಿತಿ ಕರ್ನಾಟಕಕ್ಕೆ 941 ಕೋಟಿ ರು, ಹಿಮಾಚಲ ಪ್ರದೇಶಕ್ಕೆ 873 ಕೋಟಿ ರು, ಅಸ್ಸಾಂಗೆ 594 ಕೋಟಿ ರು. ನೆರವು ನೀಡಿದೆ. ಎನ್‌ಡಿಆರ್‌ಎಫ್‌ನಿಂದ ಕರ್ನಾಟಕಕ್ಕೆ 939 ಕೋಟಿ ರು, ಹಿಮಾಚಲಕ್ಕೆ 812 ಕೋಟಿ, ಅಸ್ಸಾಂಗೆ 160 ಕೋಟಿ ರು. ನೀಡಲಾಗಿದೆ. ತಮಿಳುನಾಡಿಗೆ ನೆರೆ-ಚಂಡಮಾರುತ ಸಂದರ್ಭ ಸಂತ್ರಸ್ತರಿಗೆ ಪರಿಹಾರ ನೀಡಲು 276 ಕೋಟಿ ರು, ಸಿಕ್ಕಿಂಗೆ 267 ಕೋಟಿ ರು, ನಾಗಾಲ್ಯಾಂಡ್‌ಗೆ 68 ಕೋಟಿ ರು ಕಳೆದ 2 ವರ್ಷದಲ್ಲಿ ನೀಡಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಐಎಎಸ್ ಆಕಾಂಕ್ಷಿ ಸಾವು: ಸಿಬಿಐ ತನಿಖೆ ಆರಂಭ

ದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ ಐಎಎಸ್ ಕೋಚಿಂಗ್ ಸೆಂಟರ್‌ನ ನೆಲಮಾಳಿಗೆಗೆ ಮಳೆ ನೀರು ನುಗ್ಗಿದ್ದರಿಂದ ಇಬ್ಬರು ಯುವತಿಯರು ಸೇರಿದಂತೆ ಮೂವರು ಐಎಎಸ್ ಆಕಾಂಕ್ಷಿಗಳು ಸಾವನ್ನಪ್ಪಿದ ಪ್ರಕರಣದ ತನಿಖೆಯನ್ನು ಸಿಬಿಐ ಬುಧವಾರ ಕೈಗೆತ್ತಿಕೊಂಡಿದೆ. ದೆಹಲಿ ಹೈಕೋರ್ಟ್ ಆದೇಶದ ಮೇರೆಗೆ ಪ್ರಕರಣ ದೆಹಲಿ ಪೊಲೀಸರಿಂದ ಸಿಬಿಐಗೆ ವರ್ಗಾವಣೆಗೊಂಡಿತ್ತು. 3 ಪರೀಕ್ಷಾರ್ಥಿಗಳ ಸಾವಿನ ಬಗ್ಗೆ ದೆಹಲಿ ಪೊಲೀಸ್ ಹಾಗೂ ಮುನ್ಸಿಪಲ್ ಕಾರ್ಪೋರೇಶನ್ ಆಡಳಿತವನ್ನು ತರಾಟೆಗೆ ತೆಗೆದುಕೊಂಡ ಹೈಕೋರ್ಟ್, ನೆಲಮಹಡಿಗೆ ಮಳೆ ನೀರು ತುಂಬಿಕೊಳ್ಳಲು ಆರಂಭಿಸಿದಾಗಲೇ 3 ವಿದ್ಯಾರ್ಥಿಗಳಿಗೆ ಕಟ್ಟಡದಿಂದ ಹೊರ ಬರಲು ಏಕೆ ಸಾಧ್ಯವಾಗಲಿಲ್ಲ? ಕೋಚಿಂಗ್ ಸೆಂಟರ್ ಮೆಟ್ಟಿಲು ಅಷ್ಟೊಂದು ಇಕ್ಕಟ್ಟಾಗಿವೆಯೇ? ಬಾಗಿಲು ಲಾಕ್ ಆಗಿತ್ತೇ? ಎಂದು ಕೋರ್ಟ್ ಪ್ರಶ್ನಿಸಿದೆ.

ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿದ ಹೈಕೋರ್ಟ್ ಪೀಠ, ತನಿಖೆ ಮೇಲ್ವಿಚಾರಣೆಗೆ ಹಿರಿಯ ಅಧಿಕಾರಿ ನೇಮಿಸುವಂತೆ ಕೇಂದ್ರ ಜಾಗೃತ ಆಯೋಗಕ್ಕೆ ಸೂಚಿಸಿದೆ.

Norican Group
Shaping Industry

ಡೀಸಾ ಇಂಡಿಯಾ ಲಿಮಿಟೆಡ್
ನೋಂದಾಯಿತ ಕಚೇರಿ: ವರ್ಲ್ಡ್ ಟ್ರೇಡ್ ಸೆಂಟರ್ (ಡಬ್ಲ್ಯುಟಿಸಿ), 6ನೇ ಮಹಡಿ, ಯೂನಿಟ್ ಸಂ. ಎಸ್-604, ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, 26/1, ಡಾ. ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಂ-ರಾಜಾಜಿನಗರ, ಬೆಂಗಳೂರು-560055.
ಫೋನ್: +91 80 22496700. ಇ-ಮೇಲ್: bangalore@noricangroup.com, www.disagroup.com
CIN No: L85110KA1984PLC006116

ಜೂನ್ 30, 2024ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಲೆಕ್ಕ ಪರಿಶೋಧನೆಗೊಳ್ಳದ ಹಣಕಾಸು ಫಲಿತಾಂಶದ ಸಂಕ್ಷಿಪ್ತ ವರದಿ
(ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ಸ್ವತಂತ್ರ			ಕ್ರೋಢೀಕರಿಸಿದ		
	30.06.2024ಕ್ಕೆ ಕೊನೆಗೊಂಡ 3 ತಿಂಗಳು	31.03.2024ಕ್ಕೆ ಕೊನೆಗೊಂಡ ಹಿಂದಿನ ವರ್ಷ	ಹಿಂದಿನ ವರ್ಷಕ್ಕೆ ಅನುಗುಣವಾಗಿ 30.06.2023ಕ್ಕೆ ಕೊನೆಗೊಂಡ 3 ತಿಂಗಳು	30.06.2024ಕ್ಕೆ ಕೊನೆಗೊಂಡ 3 ತಿಂಗಳು	31.03.2024ಕ್ಕೆ ಕೊನೆಗೊಂಡ ಹಿಂದಿನ ವರ್ಷ	ಹಿಂದಿನ ವರ್ಷಕ್ಕೆ ಅನುಗುಣವಾಗಿ 30.06.2023ಕ್ಕೆ ಕೊನೆಗೊಂಡ 3 ತಿಂಗಳು
	ಲೆಕ್ಕಪರಿಶೋಧನೆಗೊಳ್ಳದ	ಲೆಕ್ಕಪರಿಶೋಧಿತ	ಲೆಕ್ಕಪರಿಶೋಧನೆಗೊಳ್ಳದ	ಲೆಕ್ಕಪರಿಶೋಧನೆಗೊಳ್ಳದ	ಲೆಕ್ಕಪರಿಶೋಧಿತ	ಲೆಕ್ಕಪರಿಶೋಧನೆಗೊಳ್ಳದ
ವಹಿವಾಟಿನಿಂದ ಬಂದ ಆದಾಯ	940.3	3,191.5	880.2	959.3	3,285.5	906.9
ಅವಧಿಯ ನಿವ್ವಳ ಲಾಭ (ನಷ್ಟ)(ತೆರಿಗೆ ಅಸಾಧಾರಣ ಮತ್ತು/ ಅಥವಾ ಅಸಾಮಾನ್ಯ ಅಂಶಗಳ ಮೊದಲು)	201.1	584.5	204.6	205.4	602.5	210.1
ಅವಧಿಯ ನಿವ್ವಳ ಲಾಭ (ನಷ್ಟ) (ತೆರಿಗೆಯ ಮೊದಲು, ಅಸಾಧಾರಣ ಮತ್ತು/ ಅಥವಾ ಅಸಾಮಾನ್ಯ ಅಂಶಗಳ ನಂತರ)	201.1	559.0	204.6	205.4	577.0	210.1
ಅವಧಿಯ ನಿವ್ವಳ ಲಾಭ (ನಷ್ಟ) (ತೆರಿಗೆ, ಅಸಾಧಾರಣ ಮತ್ತು ಅಸಾಮಾನ್ಯ ಅಂಶಗಳ ನಂತರ)	148.7	415.4	152.4	151.9	428.8	156.6
ಅವಧಿಯ ಒಟ್ಟಾರೆ ವ್ಯಾಪಕ ಆದಾಯ (ತೆರಿಗೆಯ ನಂತರದ ಲಾಭ (ನಷ್ಟ) ಮತ್ತು ತೆರಿಗೆಯ ನಂತರದ ವ್ಯಾಪಕ ಆದಾಯ)	147.7	411.4	151.6	150.9	424.6	155.8
ಈಕ್ವಿಟಿ ಷೇರು ಬಂಡವಾಳ	14.5	14.5	14.5	14.5	14.5	14.5
ಇತರೆ ಮೀಸಲುಗಳು (ಮರು-ಮೌಲ್ಯಮಾಪನ ಮೀಸಲು ಹೊರತುಪಡಿಸಿ ವರ್ಷಾಂತ್ಯದ ಲೆಕ್ಕ ಆಯವ್ಯಯ ಪಟ್ಟಿ ಪ್ರಕಾರ)	–	2,376.2	–	–	2,444.6	–
ಒಂದು ಷೇರಿನ ಗಳಿಕೆ (ಮುಖಬೆಲೆ ರೂ. 10/- ಪ್ರತಿ) ಮೂಲ : ರೂ.	102.26	285.65	104.80	104.46	294.87	107.69
ನಿಸಾರಗೊಂಡದ್ದು: ರೂ.	102.26	285.65	104.80	104.46	294.87	107.69

ಟಿಪ್ಪಣಿ: ಮೇಲೆ ಹೇಳಿದ ವರದಿಯು 2015ರ ಸೆಬಿ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ಗೆ ಸಲ್ಲಿಸಿರುವ ತ್ರೈಮಾಸಿಕಕ್ಕೆ ಕೊನೆಗೊಂಡ ಲೆಕ್ಕಪರಿಶೋಧನೆಗೊಳ್ಳದ ಹಣಕಾಸಿನ ಫಲಿತಾಂಶಗಳ ವಿವರಗಳ ಸಂಕ್ಷಿಪ್ತ ವಿವರ. ಪೂರ್ಣ ವಿವರವು ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣ www.bseindia.com ಮತ್ತು ಸಂಸ್ಥೆಯ ಜಾಲತಾಣ www.disagroup.com ನಲ್ಲಿ ಕೂಡ ಲಭ್ಯವಿದೆ.

ಸ್ಥಳ : ಬೆಂಗಳೂರು
ದಿನಾಂಕ : ಆಗಸ್ಟ್ 07, 2024

ಡೀಸಾ ಇಂಡಿಯಾ ಲಿಮಿಟೆಡ್ ಪರವಾಗಿ
ಲೋಕೇಶ್ ಸಕ್ಸೇನ,
ವ್ಯವಸ್ಥಾಪಕ ನಿರ್ದೇಶಕರು.

ಸಮಾಚಾರ ಸಣ್ಣದಲ್ಲ

ಅರಸು ಜನ್ಮ ದಿನಾಚರಣೆ ಪೂರ್ವಭಾವಿ ಸಭೆ 13ಕ್ಕೆ

ಧಾರವಾಡ: ಡಿ.ದೇವರಾಜು ಅರಸು ಅವರ 109 ನೇ ಜನ್ಮ ದಿನಾಚರಣೆಯ ಪೂರ್ವಭಾವಿ ಸಭೆಯನ್ನು ಆಗಸ್ಟ್ 9 ರಂದು ಸಂಜೆ 5 ಗಂಟೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದ ನೂತನ ಸಭಾಭವನದಲ್ಲಿ ಆಯೋಜಿಸಲಾಗಿದೆ. ಸಭೆಯನ್ನು ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದ್ದು, ಸಭೆಯಲ್ಲಿ ಅಧಿಕಾರಿಗಳು, ಸಾರ್ವಜನಿಕರು ತಪ್ಪದೇ ಭಾಗವಹಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀಸಂತ ನಾಮ ದೇವರ ಮಹಾರಾಜರ ಪುಣ್ಯತಿಥಿ

ನವಲಗುಂದ: ನವಲಗುಂದ ನಗರದ ಗಾಂಧಿ ಮಾರ್ಕೆಟನಲ್ಲಿರುವ ಸಾರ್ವಜನಿಕ ಹರಿಮಂದಿರದಲ್ಲಿ ಶ್ರೀಸಂತ ನಾಮ ದೇವರ ಮಹಾರಾಜರ ಪುಣ್ಯತಿಥಿಯ ಅಂಗವಾಗಿ ಚತುರ್ದಶಿ ದಿವಸ ಬೆಳಗ್ಗೆ 4 ಗಂಟೆಯಿಂದ 6 ಗಂಟೆ ವರೆಗೆ ಕಾಕಡಾರತಿ ಮತ್ತು 8 ಗಂಟೆಗೆ ಪಾಲಕಿ ದಿಂಡಿಸೋಳಾ ಕಾರ್ಯಕ್ರಮವು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಪಾಲಕಿ ದಿಂಡಿಸೋಳಾ ಭವ್ಯ ಕಾರ್ಯಕ್ರಮದಲ್ಲಿ ಗಂಗಾಧರ ಕತ್ತಿ ವಿಠ್ಠಲ್ ವೇಷಧಾರತೊಟ್ಟು ಭಕ್ತಿ ಪರಕಾಷ್ಟೆ ಮರೆದನು. ನಗರದ ಲಾಲಗುಡಿ ಮಾರುತಿ ದೇವಸ್ಥಾನದಲ್ಲಿರುವ ಹರಿಮಂದಿರದಲ್ಲಿ ಕಾಕಡಾರತಿ ಬೆಳಗಿದ್ರು ನಂತರ ಕಮಿಟಿಯವರು ಸುಮಾರು 30 ವರ್ಷಗಳಿಂದ ಪಾಲಿಕೋತ್ಸವದಲ್ಲಿ ಹವಾಲ್ದಾರ ಆಗಿ ಸೇವೆ ಸಲ್ಲಿಸುತ್ತಾ ಬಂದಿರುವ ಮಾಯಪ್ಪ ಚಿಲಮೂರ ಅವರನ್ನ ಸನ್ಮಾನಿಸಿ ಗೌರವಿಸಿದರು. ಈ ವೇಳೆಯಲ್ಲಿ ರಾಯನಗೌಡ ಪಾಟೀಲ, ಅಣ್ಣಪ್ಪ ಭಾಗಿ, ರಾಮಣ್ಣ ಕುಲಕರ್ಣಿ, ವೀರಣ್ಣ ಚವಡಿ, ನವೀನ ಹರಿಹರ, ಪ್ರಭುಗೌಡ ಇಬ್ರಾಹಿಂಪುರ, ಮಂಜುನಾಥ ಆರೇರ, ಚನ್ನಪ್ಪ ನಾಗರಳ್ಳಿ, ಗುರುಹಿರಿಯರು ಸೇರಿದಂತೆ ಅನೇಕರು ಹಾಜರಿದ್ದರು.

ಧಾರವಾಡ ಜಿಲ್ಲಾ ಪಂಚಾಯತ ಆವರಣದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯದಡಿ ರಚನೆಗೊಂಡಿರುವ ಮಹಿಳಾ ಸ್ವ-ಸಹಾಯ ಸಂಘಗಳ ಸದಸ್ಯರು ಉತ್ಪಾದಿಸಿದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ವರೂಪ ಟಿ.ಕೆ. ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಹಲವು ಅಧಿಕಾರಿಗಳು ಸ್ವ-ಸಹಾಯ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಆಗಸ್ಟ್ 21 ರಂದು ನಾಗಸ್ವಾಮಿ ರಥೋತ್ಸವ

ಧಾರವಾಡ: ನವಲಗುಂದ ತಾಲೂಕಿನ ಅಮರಗೋಳ ಗ್ರಾಮದ ಶ್ರೀ ನಾಗಸ್ವಾಮಿ ರಥೋತ್ಸವವಿದ್ದು, ಇಲ್ಲಿಗೆ ರಾಜ್ಯ ಹಾಗೂ ಹೊರ ರಾಜ್ಯಗಳಿಂದ ವಿಶೇಷವಾಗಿ ಮಹಾರಾಷ್ಟ್ರ ರಾಜ್ಯದಿಂದ ಬಂದಂತಹ ಭಕ್ತಾದಿಗಳು ಹಣ್ಣು-ಕಾಯಿ ಮಾಡಿಸಿಕೊಂಡು ನಾಗಸ್ವಾಮಿಯ ಕೃಪೆಗೆ ಪಾತ್ರರಾಗಿ ಸಂಜೆ 5.30ಕ್ಕೆ ನಡೆಯುವ ರಥೋತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಹುಬ್ಬಳ್ಳಿ-ಧಾರವಾಡ, ಗದಗ, ರೋಣ ಮಾರ್ಗದಿಂದ ಬರುವವರಿಗೆ ನವಲಗುಂದದಿಂದ ಹಾಗೂ ಬೆಳಗಾವಿ, ಬಾಗಲಕೋಟ, ಬಿಜಾಪೂರ ಮಾರ್ಗದಿಂದ ಬರುವವರಿಗೆ ವಿಶೇಷ ಜಾತ್ರಾ ಬಸ್ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಭ್ರಮದ ರೊಟ್ಟಿ ಪಂಚಮಿ ಸಂಪನ್ನ

ಗಜೇಂದ್ರಗಢ: ಪಟ್ಟಣ ಸೇರಿದಂತೆ ಸುತ್ತಲಿನ ಗ್ರಾಮಗಳಲ್ಲಿ ನಾಗರ ಪಂಚಮಿ ಮುನ್ನಾ ದಿನವಾದ ಬುಧವಾರ ರೊಟ್ಟಿ ಪಂಚಮಿಯನ್ನು ಮಹಿಳೆಯರು, ಚಿಣ್ಣರು ಸಂಭ್ರಮದಿಮದ ಆಚರಿಸಿದರು. ಶ್ರಾವಣ ಮಾಸ ಆರಂಭವಾಗುತ್ತಿದ್ದಂತೆ ಉತ್ತರ ಕರ್ನಾಟಕದಲ್ಲಿ ನಾನಾ ಹಬ್ಬಗಳಿಗೆ ಮುನ್ನಡಿ ಬರೆಯಲಾಗುತ್ತದೆ. ತಿಂಗಳ ಪೂರ್ತಿ ಮನೆಯಲ್ಲಿ ಒಂದಿಲ್ಲೊಂದು ಪೂಜೆ, ವ್ರತ ಕೈಗೊಳ್ಳುತ್ತಾರೆ. ಅದರಲ್ಲೂ ಆರಂಭದಲ್ಲೇ ಬರುವ ಪಂಚಮಿ ಹಬ್ಬದ ರೊಟ್ಟಿ ಸಂಭ್ರಮ ಉತ್ತರ ಕರ್ನಾಟಕದ ಹಬ್ಬ ಹರಿದಿನಗಳಲ್ಲಿ ವಿಶೇಷತೆ ಪಡೆದುಕೊಂಡಿದೆ. ನಾಗರ ಪಂಚಮಿ ಮುನ್ನಾ ದಿನವನ್ನು ರೊಟ್ಟಿ ಹಬ್ಬ ಎಂದು ಆಚರಿಸಲಾಗುತ್ತದೆ. ಪ್ರತಿ ವರ್ಷ ಮುಂಗಾರು ಮಳೆ ಅನ್ನದಾತನಿಗೆ ಅನುಕುಲವಾಗುಷ್ಟು ಸುರಿದು ಕೃಷಿ ಭೂಮಿಯಲ್ಲಿ ಬೆಳೆದ ಬೆಳೆಗಳ ಮೊದಲು ಫಸಲಿನ ಸಂತಸವನ್ನು ರೊಟ್ಟಿ ಮತ್ತು ವಿವಿಧ ತರಕಾರಿ ಹಾಗೂ ಕಾಳುಗಳ ಪಲ್ಯದೊಂದಿಗೆ ಎಲ್ಲರೂ ಪರಸ್ಪರ ಹಂಚಿಕೊಳ್ಳುವುದು ಈ ರೊಟ್ಟಿ ಹಬ್ಬದ ವಿಶೇಷತೆ. ಅದರಂತೆ ನಾಗ ಪಂಚಮಿ ಮುನ್ನದಿನ ಬೆಳಗ್ಗೆ ಮನೆಯನ್ನು ಶುದ್ಧಗೊಳಿಸಿ ಮನೆ ಮಂದಿಯಲ್ಲಾ ಅಭ್ಯಂಗ ಸ್ನಾನ ಮಾಡಿ, ಮನೆ ಮುಂದೆ ವಿವಿಧ ರೀತಿಯಲ್ಲಿ ಬಣ್ಣ, ಬಣ್ಣದ ರಂಗೋಲಿಯಿಂದ ಅಂಗಳವನ್ನು ಅಲಂಕಾರಗೊಳಿಸಿದರು. ಎಲ್ಲರೂ ಮನೆಗಳಲ್ಲಿ ಜೋಳದ ರೊಟ್ಟಿ, ಸಜ್ಜಿ ರೊಟ್ಟಿ, ಅಕ್ಕಿರೊಟ್ಟಿ, ಚಪಾತಿ, ಎಣ್ಣೆಗಾಯಿ, ಬದನೆಕಾಯಿ, ಮಡಿಕೆ ಕಾಳು, ಹೆಸರುಕಾಳು ಪಲ್ಯೆ, ಗೊರೆಳ್ಳು ಚಟ್ನಿ, ಮೊಸರು ಚಟ್ನಿ, ಶೇಂಗಾ ಚಟ್ನಿ, ಕಡಲೆ ಚಟ್ನಿ, ಹಸಿರು ತರಕಾರಿ ಹೀಗೆ ಬಾಯಲ್ಲಿ ನೀರೂರಿಸುವ ವಿವಿಧ ಬಗೆಯ ಖಾದ್ಯಗಳನ್ನು ರೊಟ್ಟಿ ಹಬ್ಬದ ಸಡಗರಕ್ಕೆಂದು ತಯಾರಿಸಿ ಹಬ್ಬದ ಸವಿ ಸವಿದರು. ಚಿಕ್ಕಮಕ್ಕಳು ಕೈಯಲ್ಲಿ ರೊಟ್ಟಿಗಳನ್ನು ಹಿಡಿದುಕೊಂಡು ಮನೆ ಮನೆಗೆ ತಲುಪಿಸುವ ಮೂಲಕ ಜಾತಿ-ಭೇದ ಮರೆತು ಭಾವೈಕ್ಯತೆಯ ಸಂದೇಶ ಸಾರಿದರು.

ಸೃಷ್ಟಿಯಲ್ಲಿ ಯಾವುದೂ ಶಾಶ್ವತವಲ್ಲ: ರಾಘವೇಶ್ವರ ಶ್ರೀ

ಅನಾವರಣ ಚಾತುರ್ಮಾಸ್ಯದಲ್ಲಿ ರಾಘವೇಶ್ವರ ಭಾರತೀ ಸ್ವಾಮೀಜಿಗಳ ಜೀವಯಾನ ಪ್ರವಚನ ಸರಣಿ

ಗೋಕರ್ಣ: ಸೃಷ್ಟಿಯಲ್ಲಿ ಶಾಶ್ವತ ಯಾವುದೂ ಅಲ್ಲ; ಸೃಷ್ಟಿ ಅದಕ್ಕೆ ಅವಕಾಶ ನೀಡುವುದಿಲ್ಲ. ಸ್ವತಃ ದೇವರೇ ಅವತಾರವೆತ್ತಿ ಬಂದರೂ ಅಂತ್ಯ ಇರುತ್ತದೆ. ಅಂತೆಯೇ ಯಾವುದೂ ಮೂಲಸ್ವರೂಪದಲ್ಲಿ ಉಳಿಯುವುದಿಲ್ಲ ಎಂದು ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ ನುಡಿದರು.

ಅಶೋಕೆಯ ಗುರುದೃಷ್ಟಿಯಲ್ಲಿ ಚಾತುರ್ಮಾಸ್ಯ ಕೈಗೊಂಡಿರುವ ಶ್ರೀಗಳು 18ನೇ ದಿನವಾದ ಬುಧವಾರ ಜೀವಯಾನ ಮಾಲಿಕೆಯಲ್ಲಿ 'ಯಮನನ್ನು ಗೆದ್ದವರುಂಟೇ' ಎಂಬ ವಿಷಯದ ಬಗ್ಗೆ ಪ್ರವಚನ ನೀಡಿದರು. ಜೀವಗಳ ದುರವಸ್ಥೆ ಬಗ್ಗೆ ಒಂದನೇ ಮಾಲಿಕೆಯಲ್ಲಿ ಪ್ರವಚನ ನೀಡಲಾಗಿತ್ತು. ಪ್ರತಿಯೊಬ್ಬರೂ ಯಮನ ಕೈವಶ. ಆದರೆ ಯಮನೊಂದಿಗೆ ಹೋರಾಡಿ ಗೆದ್ದ ಮಹಾತ್ಮರ ಕಥಾ ಸರಣಿ ಈ ಪ್ರವಚನ ಮಾಲಿಕೆಯಲ್ಲಿ ಪ್ರವಚನ ನೀಡಲಾಗುತ್ತಿದೆ ಎಂದರು.

ಎಲ್ಲರೂ ಕಾಲವಶವೇ ಸರಿ. ಶ್ರೀರಾಮ, ಪಾಂಡವರು, ಶ್ರೀಕೃಷ್ಣ, ಬಲಿ ಚಕ್ರವರ್ತಿ, ನಳ, ರಾವಣನಂಥವರು ಕೂಡಾ ಕಾಲನ ಕಾರಣದಿಂದ ಸಂಕಷ್ಟ ಎದುರಿಸಬೇಕಾಯಿತು. ಯಮನಿಗೆ ತುತ್ತಾಗದವರು ಯಾರು ಎಂಬ ಪ್ರಶ್ನೆ ಉದ್ಭವಿಸುತ್ತದೆ ಎಂದು ವಿವರಿಸಿದರು.

10 ಸಾವಿರ ವರ್ಷಗಳ ಉಪವಾಸವಿದ್ದು, ಘೋರ ತಪಸ್ಸು ಮಾಡಿದ ರಾವಣ ಅಮರತ್ವದ ವರ ಕೇಳುತ್ತಾನೆ. ಒಂದೊಂದು ಸಾವಿರ ವರ್ಷದ ತಪಸ್ಸು ಪೂರ್ತಿಯಾದಾಗ ತನ್ನದೇ ತಲೆ ಕತ್ತರಿಸಿ ಹೋಮಕ್ಕೆ ಆಹುತಿ ನೀಡಿದ. ಒಂಬತ್ತು ಸಾವಿರ ವರ್ಷ ಮುಗಿದ ಮೇಲೆ ಕೊನೆಗೆ ಹತ್ತು ಸಾವಿರ ವರ್ಷ ಪೂರ್ತಿಯಾದಾಗ ಕೊನೆಯ ತಲೆಯನ್ನೂ ಕತ್ತರಿಸುವ ನಿರ್ಧಾರಕ್ಕೆ ಬಂದ. ಆಗ ಬ್ರಹ್ಮ ಪ್ರತ್ಯಕ್ಷವಾಗಿ ಯಾವ ವರ ಬೇಕು ಎಂದು ಪ್ರಶ್ನಿಸುತ್ತಾನೆ. ಮೃತ್ಯುವಿಗಿಂತ ದೊಡ್ಡ ಶತ್ರು ಯಾರೂ ಇಲ್ಲ; ಆದ್ದರಿಂದ ಮೃತ್ಯುವನ್ನೇ ಗೆಲ್ಲುವ ಅಮರತ್ವದ ವರ ನೀಡು ಎಂದು ರಾವಣ ಕೇಳುತ್ತಾನೆ. ಅದಕ್ಕೆ ಬ್ರಹ್ಮ ನಿರಾಕರಿಸಿದಾಗ ರಾವಣ, ಮನುಷ್ಯ ಮತ್ತು ವಾನರರು ಬಿಟ್ಟು ಯಾರಿಂದಲೂ ಮರಣ ಬರಬಾರದು ಎಂದು ಬೇಡುತ್ತಾನೆ. ಜತೆಗೆ ಬೇಕಾದ ರೂಪ ಪಡೆಯುವ ಶಕ್ತಿಯನ್ನೂ ಕತ್ತರಿಸಲ್ಪಟ್ಟ ಒಂಬತ್ತು ತಲೆಗಳು ಮರಳಿ ಬರುವಂತೆ ಬ್ರಹ್ಮ ವರ ನೀಡುತ್ತಾನೆ ಎಂದು ಬಣ್ಣಿಸಿದರು.

ರಾವಣನು ವರ ಪಡೆದು ಬಂದ ತಕ್ಷಣದ ಆತನ ದುಷ್ಟತನ ಹೆಚ್ಚಿತು. ಇಡೀ ಭೂಮಿ ಸ್ಮಶಾನವಾಯಿತು. ಚೀತ್ಕಾರ, ದುಃಖ, ಗೋಳಿನಿಂದ ಪ್ರಪಂಚ ತುಂಬಿಹೋಯಿತು. ಆ ಸಂದರ್ಭದಲ್ಲಿ ಮೋಡಗಳ ನಾಡಿನಲ್ಲಿ ರಾವಣ ನಾರದನನ್ನು ಭೇಟಿ ಮಾಡಿದ. ರಾವಣನ ಗುಣಗಾನ ಮಾಡಿ, ಯಃ ಕಶ್ಚಿತ್ ಮನುಷ್ಯರಿಗೆ ಕಾಟ ನೀಡಬಾರದು ಎಂದು ನಾರದ ಕೇಳಿದ. ಸಾಯುವವರಿಗೆ ಪೀಡೆ ನೀಡುವ ಬದಲು ಸಾಯಿಸುವವನ್ನೇಕೆ ಕೆಣಕಬಾರದು ಎಂದು ಪ್ರಶ್ನಿಸುತ್ತಾನೆ. ಪರೋಕ್ಷವಾಗಿ ಯಮನ ಮೇಲೆ ಪರಾಕ್ರಮ ತೋರಿಸುವಂತೆ ಸವಾಲು ಹಾಕುತ್ತಾನೆ ಎಂದು ವಿವರಿಸಿದರು.

ರಾವಣನನ್ನು ವಿಮುಖಗೊಳಿಸುವಂತೆ ಮಾಡುವುದು ನಾರದನ ಉದ್ದೇಶವಾಗಿತ್ತು. ಆ ಹಂತದಲ್ಲಿ ರಾವಣ ಸಮುದ್ರಮಥನ ಮಾಡಿ ಅಮೃತ ಪಡೆದು ಅಮರತ್ವ ಪಡೆಯುವ ಯೋಚನೆ ಮಾಡಿದ್ದ. ಆದರೆ ದಕ್ಷಿಣಾಭಿಮುಖವಾಗಿ ಹೋಗಿ ಪ್ರೇತರಾಜನನ್ನು ಯುದ್ಧದಲ್ಲಿ ಸೋಲಿಸು ಎಂದು ಮನವೊಲಿಸುತ್ತಾನೆ. ಅದರಂತೆ ನಾಲ್ಕು ಮಂದಿ ಪ್ರಧಾನ ಲೋಕಪಾಲಕರನ್ನು ಗೆಲ್ಲುವ ಪ್ರತಿಜ್ಞೆಯಂತೆ ದಕ್ಷಿಣ ದಿಕ್ಕಿನ ಯಮನನ್ನು ಸೋಲಿಸುವ ಪಣದೊಂದಿಗೆ ರಾವಣ ತೆರಳುತ್ತಾನೆ. ಅಲ್ಲಿ ರಾವಣ ರೌರವ ನರಕವನ್ನು ನೋಡಿ, ಪಾಪಿಗಳನ್ನು ಶಿಕ್ಷೆಯಿಂದ ಬಿಡಿಸುತ್ತಾನೆ ಎಂದು ಹೇಳಿದರು.

ಇದರಿಂದ ಕೋಪಗೊಂಡ ಪ್ರೇತಭೂಪರು, ಯಮಯೋಧರು ಪುಷ್ಪಕವಿಮಾನದ ಮೇಳೆ ದಾಳಿ ಮಾಡುತ್ತಾರೆ. ಆದರೆ ಪುಷ್ಪಕ ವಿಮಾನಕ್ಕೆ ಏನೂ ಆಗುವುದಿಲ್ಲ. ಯಮಸೈನಿಕರು ದೊಡ್ಡ ಸಂಖ್ಯೆಯಲ್ಲಿ ಬಂದು ದಾಳಿ ಮಾಡುತ್ತಾರೆ. ಆಗ ಯಮಸೈನಿಕರ ಜತೆ ಯುದ್ಧಕ್ಕೆ ರಾವಣನ ಮಂತ್ರಿಗಳು ಬಂದಾಗ, ಅಮಾತ್ಯರು ಪ್ರತಿಹತರಾದರು. ಆಗ ಯಮದೂತರು ಮತ್ತು ರಾವಣನ ಮಧ್ಯೆ ಭೀಕರ ಕದನ ನಡೆಯುತ್ತದೆ. ಪಾಶುಪತಾಸ್ತ್ರದಿಂದ ಯಮಧೂತರೆಲ್ಲರೂ ಸುಟ್ಟುಹೋದರು ಎಂದು ಬಣ್ಣಿಸಿದರು.

> ಯಮಯಾತನೆಯಿಂದ ಮುಕ್ತಿ ಪಡೆಯಲು ದಾನವೊಂದೇ ಮಾರ್ಗ. ಜೀವನದಲ್ಲಿ ದಾನ ಮಾಡಿದವನು ಯಮನ ಕೃಪೆಗೂ ಪಾತ್ರನಾಗುತ್ತಾನೆ. ಜೀವಯಾನ ಎನ್ನುವುದು ಕಾಲಕ್ಕೆ ಅನುಗುಣವಾಗಿ ನಡೆಯುತ್ತಾರೆ. ಪುಣ್ಯಾತ್ಮರು ಕಾಲವನ್ನು ದಾಟಿ ಮುನ್ನಡೆಯುತ್ತಾರೆ.
>
> -ರಾಘವೇಶ್ವರ ಶ್ರೀ

ಹವ್ಯಕ ಮಹಾಮಂಡಲ ಪ್ರಧಾನ ಕಾರ್ಯದರ್ಶಿ ಉದಯಶಂಕರ ಭಟ್ ಮಿತ್ತೂರು, ಮಾತೃಪ್ರಧಾನರಾದ ವೀಣಾ ಗೋಪಾಲಕೃಷ್ಣ ಪುಳು, ಯುವ ಪ್ರಧಾನ ಕೇಶವ ಪ್ರಕಾಶ್ ಮುಣ್ಚಿಕಾನ, ವಿವಿವಿ ಕೇಂದ್ರೀಯ ಸಮಿತಿ ಕಾರ್ಯದರ್ಶಿ ನಾಗರಾಜ ಭಟ್ ಪೆದಮಲೆ, ಚಾತುರ್ಮಾಸ್ಯ ಸೇವಾ ಸಮಿತಿ ಕಾರ್ಯದರ್ಶಿ ಶ್ರೀಕಾಂತ್ ಪಂಡಿತ್, ಕೋಶಾಧ್ಯಕ್ಷ ಸುಧಾಕರ ಬಡಗಣಿ, ಶ್ರೀಕಾರ್ಯದರ್ಶಿ ಜಿ.ಕೆ.ಮಧು, ವ್ಯವಸ್ಥಾಪಕ ಪ್ರಮೋದ್ ಮುಡಾರೆ, ಶಾಸ್ತ್ರಿಗಳಾದ ಸುಬ್ರಾಯ ಅಗ್ನಿಹೋತ್ರಿ, ಶ್ರೀಶ ಶಾಸ್ತ್ರಿ, ವಿವಿವಿ ಆಡಳಿತಾಧಿಕಾರಿ ಡಾ.ಪ್ರಸನ್ನ ಕುಮಾರ್ ಟಿ.ಜಿ, ಹಿರಿಯ ಲೋಕಸಂಪರ್ಕಾಧಿಕಾರಿ ಜಿ.ಕೆ.ಹೆಗಡೆ, ಜಿ.ವಿ.ಹೆಗಡೆ, ಮೋಹನ ಭಟ್ ಹರಿಹರ, ಕುಮಟಾ ಮಂಡಲ ಅಧ್ಯಕ್ಷ ಸುಬ್ರಾಯ ಭಟ್ ಮುರೂರು, ಹೊನ್ನಾವರ ಮಂಡಲ ಅಧ್ಯಕ್ಷ ಆರ್.ಜಿ.ಹೆಗಡೆ ಹೊಸಾಕುಳಿ, ಪರಂಪರಾ ವಿಭಾಗದ ವರಿಷ್ಠಾಚಾರ್ಯ ಸತ್ಯನಾರಾಯಣ ಶರ್ಮಾ, ಪರಂಪರಾ ಗುರುಕುಲದ ಮುಖ್ಯಸ್ಥರಾದ ನರಸಿಂಹ ಭಟ್ ಮತ್ತಿತರರು ಉಪಸ್ಥಿತರಿದ್ದರು. ರವೀಂದ್ರ ಭಟ್ ಸೂರಿ ಕಾರ್ಯಕ್ರಮ ನಿರೂಪಿಸಿದರು.

ವೇಗ ನಿಯಂತ್ರಕ ಳವಡಿಕೆಗೆ ಒತ್ತಾಯ

ಗಜೇಂದ್ರಗಢ: ಪಟ್ಟಣದ ಕುಷ್ಟಗಿ ರಸ್ತೆಯ ಇದ್ಗಾ ಮೈದಾನ ಮುಂಭಾಗದಲ್ಲಿನ ರಸ್ತೆಗೆ ಬ್ರೇಕರ್ ಹಾಕುವಂತೆ ಒತ್ತಾಯಿಸಿ ನಮ್ಮ ಕರ್ನಾಟಕ ಸೇನೆ ಸಂಘಟನೆ ನೇತೃತ್ವದಲ್ಲಿ ಸಾರ್ವಜನಿಕರು ಬುಧವಾರ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಅತಿಹೆಚ್ಚು ವಾಹನ ದಟ್ಟನೆ ಜೊತೆಗೆ ಜನನಿಬಿಡ ಪ್ರದೇಶವಾದ ಕುಷ್ಟಗಿ ರಸ್ತೆಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 367ರಲ್ಲಿ ನಿತ್ಯ ಸಾವಿರಾರು ವಾಹನಗಳು ವೇಗದ ಮಿತಿಯಿಲ್ಲದೇ ಸಂಚರಿಸುತ್ತಿವೆ. ದೊಡ್ಡ, ದೊಡ್ಡ, ಟೌರಸ್, ಟಿಪ್ಪರನಂತಹ ವಾಹನಗಳ ಓಡಾಟ ಹೆಚ್ಚಾಗಿದ್ದು ಅತಿವೇಗದ ಸಂಚಾರದಿಂದ ಪಾದಾಚಾರಿಗಳಿಗೆ ಯಾವುದೇ ರಕ್ಷಣೆ ಇಲ್ಲದಂತಾಗಿ ಅಪಘಾತಗಳು ನಿತ್ಯ ಸಂಭವಿಸುತ್ತಿವೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ರೋಡ್ ಬ್ರೇಕರ್ ಹಾಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಈ ರಸ್ತೆ ದಾಟಿ ಸರ್ಕಾರಿ ಉರ್ದು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಅಲ್ಲದೇ, ಬಾಲಕಿಯರ ವಸತಿ ನಿಲಯವು ಇದ್ದು, ನಿತ್ಯ ನೂರಾರು ವಿದ್ಯಾರ್ಥಿಗಳು ರಸ್ತೆ ದಾಟಿ ಶಾಲೆಗೆ ತೆರಳುತ್ತಾರೆ. ಆದರೆ ಅತಿ ವೇಗದಿಂದ ಸಂಚರಿಸುತ್ತಿರುವ ವಾಹನಗಳಿಂದಾಗಿ ವಿದ್ಯಾರ್ಥಿಗಳು ಜೀವ ಭಯದಲ್ಲಿ ರಸ್ತೆ ದಾಟುವ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನು ಕೆಲ ಪೋಷಕರು ರಸ್ತೆಯಲ್ಲಿ ಆಗುತ್ತಿರುವ ಅಪಘಾತಗಳನ್ನು ಕಂಡು ಬೇರೆ ಶಾಲೆಗೆ ಮಕ್ಕಳನ್ನು ವರ್ಗಾಯಿಸಿಕೊಳ್ಳುತ್ತಿದ್ದರೂ ಸಹ ಸಂಬಂಧ ಪಟ್ಟ ಅಧಿಕಾರಿಗಳು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಬ್ರೇಕರ್ ಹಾಕುವ ಗೋಜಿಗೆ ಹೋಗದಿರುವುದು ಖಂಡನೀಯ.

ಕೂಡಲೇ ಸಂಭಂಧ ಪಟ್ಟ ಇಲಾಖೆ ಅಧಿಕಾರಿಗಳು ಸ್ಥಳಕ್ಕಾಗಮಿಸಬೇಕು ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದು ಕುಳಿತರು. ಇದ್ಗಾ ಮೈದಾನದ ಮುಂಭಾಗದ ಒಂದು ಬದಿಯ ರಸ್ತೆ ತಡೆದು ಪ್ರತಿಭಟನೆ ನಡೆಸಿದ್ದರಿಂದ ಆಕ್ರೋಶಗೊಂಡ ಠಾಣೆ ಪಿಎಸ್ಐ ಸೋಮನಗೌಡ ಗೌಡರ ಸ್ಥಳಕ್ಕಾಗಮಿಸಿ, ರಸ್ತೆ ಬಿಟ್ಟು ಪ್ರತಿಭಟನೆ ಮಾಡಿ ಎಂದು ಪ್ರತಿಭಟನಾಕಾರರಿಗೆ ಸೂಚಿಸಿದರು. ಇದರಿಂದ ಪ್ರತಿಭಟನಾಕಾರರು ಮತ್ತು ಪೊಲೀಸರ ನಡುವೆ ಮಾತಿನ ಚಕುಮಕಿ ಏರ್ಪಟ್ಟಿತು.

ಬಳಿಯ ಪ್ರತಿಭಟನಾ ಸ್ಥಳಕ್ಕೆ ತಹಶೀಲ್ದಾರ ಕಿರಣಕುಮಾರ ಕುಲಕರ್ಣಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಮತ್ತು ಪುರಸಭೆ ಅಧಿಕಾರಿಗಳು ಆಗಮಿಸಿ, ಪ್ರತಿಭನಾಕಾರರ ಅಹವಾಲು ಆಲಿಸಿದರು. ಇನ್ನೊಂದು ತಿಂಗಳಲ್ಲಿ ಬ್ರೆಕ್‌ರ ಹಾಕಲು ಎಲ್ಲ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ ಬಳಿಕ ಪ್ರತಿಭಟನೆ ಹಿಂಪಡೆದರು. ಸಂಘಟನೆ ಜಿಲ್ಲಾಧ್ಯಕ್ಷ ಭೀಮಣ್ಣ ಇಂಗಳೆ, ಪ್ರಾಂತ ಕೃಷಿ ಕೂಲಿಕಾರ ಸಂಘಟನೆ ಮುಖಂಡ ಬಾಲು ರಾಠೋಡ, ಶಾಮೀದ ಮಾಲ್ದಾರ, ರಾಜು ಮಾಳೋತ್ತರ, ವಿರೇಶ ಶಿವಶಿಂಪಗೇರ, ಜಗದೀಶ ಮಡಿವಾಳರ, ಮೆಹಬೂಬ ಮುದಗಲ್ಲ, ತಿರುಪತಿ ಕುರಿ, ಪರಶುರಾಮ ಮೇಟಿ, ಆಸೀಫ್ ತಟಗಾರ, ಬಾಷಾ ಮುದಗಲ್ಲ, ಇಬ್ರಾನ್ ಅತ್ತಾರ, ಯಮನೂರ ಗೌಡರ, ಕಳಕಪ್ಪ ಹಾಳಕೇರಿ, ಸಿರಾಜ್ ಸಯ್ಯದ, ಸಮೀರ ಅತ್ತಾರ, ಲಕ್ಷ್ಮಣ ಮಾಳೋತ್ತರ ಪಾಲ್ಗೊಂಡಿದ್ದರು.

ವಿಶ್ವ ಸ್ತನ್ಯಪಾನ ಸಪ್ತಾಹ ಸಂಪನ್ನ

ಹುಬ್ಬಳ್ಳಿ: ತಾಯಿಯ ಎದೆಹಾಲು ಮಗುವಿಗೆ ಅಮೃತವಿದ್ದಂತೆ. ಆದ್ದರಿಂದ ತಾಯಂದಿರು ಹೆರಿಗೆ ಆದ ಒಂದು ಗಂಟೆಯೊಳಗಾಗಿ ಮಗುವಿಗೆ ಸ್ತನ್ಯಪಾನ ಮಾಡಿಸಬೇಕೆಂದು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಉಮಾ ಡೊಳ್ಳಿ ತಾಯಂದಿರಿಗೆ ಸಲಹೆ ನೀಡಿದರು.

ಹುಬ್ಬಳ್ಳಿ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ ಬ್ಯಾಹಟ್ಟಿ ವ್ಯಾಪ್ತಿಯಲ್ಲಿ ಬರುವ ಕಿರೇಸೂರ ಗ್ರಾಮದ ದ್ಯಾಮವ್ವನ ದೇವಸ್ಥಾನದಲ್ಲಿ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪ್ರಾಥಮಿಕ ಆರೋಗ್ಯ ಕೇಂದ್ರ ಬ್ಯಾಹಟ್ಟಿ ಹಾಗೂ ಗ್ರಾಮ ಪಂಚಾಯತ್ ಕಿರೇಸೂರ ಜಂಟಿಯಾಗಿ ಆಯೋಜಿಸಿದ ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ ಗ್ರಾಮ ಪಂಚಾಯತಿಯ ಸದಸ್ಯರಾದ ನೀಲಪ್ಪ ಗಾಳಪ್ಪನವರ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ತಾಯಿಯ ಹಾಲು ಪರಿಶುದ್ಧ ಹಾಗೂ ರೋಗಾಣು ರಹಿತವಾಗಿದ್ದು, ಮಗುವಿಗೆ ಯಾವುದೇ ರೋಗ ಬರದಂತೆ ಅನೇಕ ಸೋಂಕುಗಳಿಂದ ವಿಶೇಷವಾಗಿ ನ್ಯೂಮೋನಿಯಾ, ಅತಿಸಾರ ಬೇಧಿಯಿಂದ ರಕ್ಷಿಸುತ್ತದೆ ಹಾಗೂ ತಡೆಗಟ್ಟುತ್ತದೆ. ಅಲ್ಲದೆ ತಾಯಿ ಮತ್ತು ಮಗುವಿನ ಮಧ್ಯ ಬಾಂಧವ್ಯ, ಮಮತೆ, ವಾತ್ಸಲ್ಯ ಹಾಗೂ ಕರುಣೆಗಳನ್ನು ಬೆಸೆಯುತ್ತದೆ. ಆದ್ದರಿಂದ ತಾಯಂದಿರು ಹೆರಿಗೆ ಆದ ಒಂದು ಗಂಟೆಯೊಳಗಾಗಿ ತಪ್ಪದೇ ಸ್ತನ್ಯಪಾನ ಮಾಡಿಸಬೇಕು. ಮಗುವಿಗೆ ಆರು ತಿಂಗಳವರೆಗೆ ತಾಯಿಯ ಎದೆಹಾಲು ಬಿಟ್ಟು ಬೇರೆ ಏನನ್ನೂ ಕೊಡಬಾರದು. ತಾಯಿ ಹಾಲು ಮಗುವಿಗಾಗಿ ಸಿದ್ಧಪಡಿಸಿದ ಆಹಾರವಾಗಿದ್ದು, 6 ತಿಂಗಳ ಬಳಿಕ ತಾಯಿಯ ಎದೆಹಾಲಿನ ಜೊತೆ ಪೂರಕ ಆಹಾರ ಪ್ರಾರಂಭಿಸಬೇಕು. ಒಟ್ಟಾರೆ ಮಗು 2 ವರ್ಷ ಆಗುವವರೆಗೆ ಸಂಪೂರ್ಣ ತಾಯಿಯ ಎದೆಹಾಲು ನೀಡಬೇಕು ಇದರಿಂದ ಮಗುವಿಗೆ ಯಾವುದೇ ಖಾಯಿಲೆ ಬರುವುದಿಲ್ಲ ಜೊತೆಗೆ ಮಗು ಜಾಣ ಆಗುತ್ತದೆ ಎಂದು ಹೇಳಿದರು. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಪೂರ್ಣಿಮಾ ವಿರೇಶ, ಹುಬ್ಬಳ್ಳಿ ಕೆ.ಎಲ್.ಇ ನರ್ಸಿಂಗ್ ಕಾಲೇಜಿನ ಅಸೋಸಿಯಟೆಡ್ ಪ್ರೊಫೆಸರ್ ವಾಣಿ ಕೆ, ಉಪನ್ಯಾಸಕರಾದ ಹನ್ನಾ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವೀರಣ್ಣ ಎಸ್. ಮೋಟಗಿ, ಸಮುದಾಯ ಆರೋಗ್ಯ ಅಧಿಕಾರಿ ಶಕುಂತಲಾ ಹೆಬ್ಬಳ್ಳಿ, ವಿದ್ಯಾರ್ಥಿಗಳು, ತಾಯಂದಿರು, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ರಾಜಶ್ರೀ ಕುಸುಲಾಪುರ ಇವರು ಸ್ವಾಗತಿಸಿ, ವಂದಿಸಿ ಕಾರ್ಯಕ್ರಮ ನಿರೂಪಿಸಿದರು.

ನೌಕರರಿಂದ 7ನೇ ವೇತನ ಜಾರಿ: ಕೋನರಡ್ಡಿಗೆ ಅಭಿನಂದನೆ

ನವಲಗುಂದ: ರಾಜ್ಯದ ಸಮಸ್ತ ಸರಕಾರಿ ನೌಕರರಿಗೆ ರಾಜ್ಯ ಸರಕಾರ ಇತ್ತೀಚಿಗೆ ಜಾರಿಗೊಳಿಸಿದ 7ನೇ ವೇತನ ಆಯೋಗದ ಅನುಷ್ಠಾನದ ಪ್ರಯುಕ್ತ ಶನಿವಾರ ದಿವಸ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ. 4ರ ಸಭಾ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನ್ಮದಿನಾಚರಣೆಯ ಅಂಗವಾಗಿ ಕೇಕ್ ಕತ್ತರಿಸುವುದರ ಮೂಲಕ 7ನೇ ವೇತನ ಜಾರಿಗೊಳಿಸಿದ ಅವರಿಗೆ ಹಾಗೂ ನೌಕರರ ಕಣ್ಮಣಿಗಳು ಆದ ನವಲಗುಂದ ಶಾಸಕರಾದ ಎನ್.ಎಚ್. ಕೋನರಡ್ಡಿ ಅವರಿಗೆ ತಾಲೂಕಿನ ಸಮಸ್ತ ನೌಕರರ ಪರವಾಗಿ ಅಭಿಮಾನ ಪೂರ್ವಕವಾಗಿ ಗೌರವಾರ್ಪಣೆ ಮಾಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕರಾದ ಎನ್.ಎಚ್.ಕೋನರಡ್ಡಿಯವರು, 7ನೇ ವೇತನ ಆಯೋಗದ ವರದಿಯನ್ನು ಯತಾವತ್ತಾಗಿ ಜಾರಿಗೊಳಿಸಿ ನಮ್ಮ ಸರಕಾರ ನುಡಿದಂತೆ ನಡೆದಿದೆ. ಸರಕಾರಿ ನೌಕರರ ಬಹುದಿನಗಳ ಬೇಡಿಕೆಯಂತೆ ಆಯೋಗ ಶಿಫಾರಸ್ಸು ಮಾಡಿದಂತೆ ಎಲ್ಲ ಸೌಲಭ್ಯಗಳು ನೌಕರರಿಗೆ ದೊರೆಯಲಿವೆ. ಇದರ ಜೊತೆಗೆ ನೂತನ ಪಿಂಚಣಿ ಯೋಜನೆ ರದ್ಧತಿ ಹಾಗೂ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನೂ ಸಹ ಖಂಡಿತವಾಗಿ ನಮ್ಮ ಸರಕಾರ ಜಾರಿಗೊಳಿಸುವ ಬದ್ಧತೆಯನ್ನು ತೋರಿಸುತ್ತದೆ. ಈ ದಿಶೆಯಲ್ಲಿ ದಿಟ್ಟ ನಿರ್ಧಾರವನ್ನು ತೆಗೆದುಕೊಂಡಿರುವ ಸಿದ್ಧರಾಮಯ್ಯನವರು ಸಕಾರಾತ್ಮಕ ಚಿಂತನೆಯನ್ನು ಹೊಂದಿದ್ದು ರಾಜ್ಯದ ಪ್ರಗತಿಗಾಗಿ ಎಲ್ಲ ನೌಕರರು ಕ್ರಿಯಾಶೀಲರಾಗಿ ಕೆಲಸ ಮಾಡುವ ಅಭಿಲಾಷೆಯನ್ನು ಹೊಂದಿದ್ದಾರೆ. ಈ ನಾಡಿನ ಜನರ ಸೇವೆಗೆ ತಾವೆಲ್ಲರೂ ಕಟಿಬದ್ಧರಾಗಿರಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅಭಿನಂದನಾ ನುಡಿಗಳನ್ನು ನುಡಿದ ತಾಲೂಕಾ ನೌಕರರ ಸಂಘದ ಅಧ್ಯಕ್ಷರಾದ ಎ.ಬಿ.ಕೊಪ್ಪದ ರವರು ಮಾತನಾಡಿ , ತಾಲೂಕಿನ ನೌಕರರ ಜೊತೆ ಸದಾ ಜೊತೆಯಾಗಿದ್ದು ನಮ್ಮ ನೋವು ನಲಿವುಗಳಿಗೆ ಸದಾ ಸ್ಪಂದಿಸುತ್ತಿರುವ ಹಾಗೂ ನಮ್ಮ ಎಲ್ಲ ಹೋರಾಟಗಳಿಗೆ ಧ್ವನಿಯಾಗಿ ಸರಕಾರಕ್ಕೆ ನಮ್ಮ ಆಶೋತ್ತರಗಳನ್ನು ಮುಟ್ಟಿಸುವಲ್ಲಿ ಸದಾ ಮುಂಚೂಣಿಯಲ್ಲಿರುವ ಎನ್.ಎಚ್. ಕೋನರಡ್ಡಿ ಯವರ ಕಾರ್ಯ ಶ್ಲಾಘನೀಯ. 7ನೇ ವೇತನ ಆಯೋಗದ ಜಾರಿಯಲ್ಲಿ ಶಾಸಕರ ಪಾತ್ರ ಬಹಳ ದೊಡ್ಡದು. ಆ ಕಾರಣಕ್ಕಾಗಿ ಇಂದು ನಾವೆಲ್ಲರೂ ಸೇರಿ ಸರಕಾರದ ಪರವಾಗಿ ಸಮಸ್ತ ನೌಕರರು ಮುಖ್ಯಮಂತ್ರಿಗಳ ಹುಟ್ಟುಹಬ್ಬ ಆಚರಿಸಿ ಶಾಸಕರನ್ನು ಸನ್ಮಾನಿಸುವ ಮೂಲಕ ಸರಕಾರದ ಉಪಕಾರ ಸ್ಮರಣೆಯನ್ನು ಮಾಡುತ್ತಿದ್ದೇವೆ. ಸರಕಾರಿ ನೌಕರರಿಗೆ ನೂತನ ಪಿಂಚಣಿ ಯೋಜನೆ ರದ್ಧತಿ ಮತ್ತು ಆರೋಗ್ಯ ಸಂಜೀವಿನಿ ಯೋಜನೆ ಅತ್ಯಂತ ಅಗತ್ಯವಾಗಿದ್ದು ಅದರ ಜಾರಿಗಾಗಿಯೂ ಸಹ ಸರಕಾರ ಮುಂದಾಗಬೇಕು ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ನವಲಗುಂದ ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕ-ಶಿಕ್ಷಕಿಯರ ಗುರುಸ್ಪಂದನಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ನವಲಗುಂದ ತಾಲೂಕಿನ ಇತ್ತೀಚಿಗೆ ನಿವೃತ್ತರಾದ ಎಲ್ಲ ಶಿಕ್ಷಕರನ್ನು ಕಾರ್ಯಕ್ರಮದಲ್ಲಿ ಗೌರವಿಸಲಾಯಿತು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪರವಾಗಿ ಸಿ ಆರ್ ತಿದ್ದುಪಡಿ ಸಲುವಾಗಿ ರಾಜ್ಯ ಸಂಘದಿಂದ ಕೈಗೊಂಡಿರುವ ಫ್ರೀಡಮ್ ಪಾರ್ಕ ಚಲೋ ಹೋರಾಟಕ್ಕೆ ಬೆಂಬಲವನ್ನು ಸೂಚಿಸುವಂತೆ ಶಾಸಕರಿಗೆ ಹಾಗೂ ತಹಶೀಲ್ದಾರರವರಿಗೆ ಮನವಿಯನ್ನು ಸಲ್ಲಿಸಲಾಯಿತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಸ್. ಬಿ. ಮಲ್ಲಾಡ ವಹಿಸಿದ್ದರು. ತಹಸೀಲ್ದಾರರು, ಪುರಸಭೆ ಮುಖ್ಯಾಧಿಕಾರಿಗಳು, ವೈದ್ಯಾಧಿಕಾರಿಗಳಾದ ಡಾ. ಎನ್.ಬಿ. ಕರ್ಲವಾಡ, ಪುರಸಭೆ ಸದಸ್ಯರು, ಹಾಗೂ ವಾಯ್.ಎಚ್.ಬಣವಿ, ಎಸ್.ಎಫ್.ನೀರಲಗಿ, ವ್ಹಿ.ಎಮ್.ಹಿರೇಮಠ, ಎಸ್.ಕೆ.ಕುರಹಟ್ಟಿ, ಸುಮಿತ್ರಾ ಕೋನರಡ್ಡಿ, ಎ.ಎಮ್.ಮುಲ್ಲಾ, ಜಯಲಕ್ಷ್ಮೀ ಬೋಳನವರ, ಪಿ.ಕೆ. ಹಿರೇಗೌಡ್ರ, ವಾಯ್.ಎಸ್.ಬೆಣ್ಣಿ, ಎನ್.ವೈ. ಕಳಸಾಪೂರ, ವ್ಹಿ.ಆರ್. ಹಾದಿಮನಿ, ಎಮ್.ಎನ್.ವಗ್ಗರ, ಎಸ್.ಎಚ್.ಹರಕುಣಿ, ಜಿ.ವ್ಹಿ. ಸುಜಾತಾ ದೊಡಮನಿ, ಎನ್.ಎಸ್. ತಾಳಿಕೋಟಿಮಠ, ಎಲ್.ಬಿ.ಕಮತ, ಗಣೇಶ ಹೊಳೆಯಣ್ಣವರ, ವಾಯ್.ಕೆ.ಹಾಲವರ, ಎಸ್.ಎಂ. ಬೆಂಚಿಕೇರಿ, ಬಿ.ಕೆ.ಹಾಲವರ, ಎಸ್.ಸಿ. ಹೊಳೆಯಣ್ಣವರ, ಸಾವಿತ್ರಿ ಅಳಗವಾಡಿ, ವಸಂತ ಚಾಕಲಬ್ಬಿ, ಪಿ.ಸಿ.ಸೂರಪ್ಪನವರ, ಎಸ್.ಡಿ. ಬೆಟ್ಟಣ್ಣವರ, ಎ.ಆರ್.ಮೆಣಸಿನಕಾಯಿ, ಎಸ್.ಎಫ್. ಈರಡ್ಡಿ, ಸಿ.ಆರ್.ಪಿ.ಗಳಾದ ಎಂ.ಎಚ್.ಚಿಕನಾಳ, ಮಹೇಶ ಮಂತ್ರಿ, ಬಿ.ಎಂ.ಯಲಿಗಾರ, ಶ್ರೀನಿವಾಸ ಅಮಾತೆಣ್ಣವರ ಉಪಸ್ಥಿತರಿದ್ದರು.

ಕ್ರೀಡಾ ಸಾಮಾಗ್ರಿ ವಿತರಣೆ

ಅಣ್ಣಿಗೇರಿ: ಧೀಮಂತ ನಾಯಕ ಅಪ್ಪಟ ದೇಶ ಭಕ್ತ ಚಂದ್ರಶೇಖರ್ ಆಜಾದ್ ಜನ್ಮ ದಿನಾಚರಣೆಯ ಅಂಗವಾಗಿ ಪಟ್ಟಣದ ಸರಕಾರಿ ಹಿರಿಯ ಹೆಣ್ಣು ಮಕ್ಕಳ ಶಾಲೆಯಲ್ಲಿ, ನೆಹರು ಯುವ ಕೇಂದ್ರ, ಧಾರವಾಡ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಇವುಗಳ ಆಶ್ರಯದಲ್ಲಿ ಸ್ಥಳೀಯ ನೇತಾಜಿ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಮಕ್ಕಳಿಗೆ ಕ್ರೀಡಾ ಸಾಮಗ್ರಿ ಮತ್ತು ನೋಟಬುಕ್ ವಿತರಣೆ ಮಾಡಲಾಯಿತು. ಕಾರ್ಯಕ್ರಮ ಉದ್ಘಾಟನೆ ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ರೈಮಾನಸಾಬ ಹೊರಗಿನಮನಿ ವಹಿಸಿದ್ದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷರಾದ ಬುಡ್ಡಾ ಬೆಟಗೇರಿ, ಭಾರತ ಸ್ವತಂತ್ರವಾಗಲು ದಿಟ್ಟ ಸ್ವಾಭಿಮಾನದ ರೂವಾರಿ ತಿವಾರಿ ಚಂದ್ರಶೇಖರ್ ಆಜಾದ್ ಎಂದೇ ಗುರುಸಲ್ಪಡುವ ಯುವ ಪೀಳಿಗೆಗೆ ಆದರ್ಶ ವ್ಯಕ್ತಿಯನ್ನು ಸ್ಮರಣೆ ಮಾಡುತ್ತಿರುವದು ವಿಶೇಷ.

ಇನ್ನು ಹೆಚ್ಚಿನ ರೀತಿ ಇಲಾಖೆ ಸಂಯೋಗದಲ್ಲಿ ಬಡಮಕ್ಕಳಿಗೆ ಸಹಾಯ ಸಹಕಾರ ನೀಡಲಾಗುವದು ಎಂದು ಹೇಳಿದರು. ಜಗದೀಶ್ ಕುಂದಗೋಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರದಾನ್ ಗುರುಗಳಾದ ಎ ಆರ್ ಅಕ್ಕಿ ಮಾತನಾಡಿ, ಸರಕಾರಿ ಶಾಲೆಯ ಮಕ್ಕಳಿಗೆ ಇಂತಹ ಹಲವಾರು ಸಾಮಾಜಿಕ ಕಾರ್ಯಕ್ರಮಗಳು ಮುಖ್ಯವಾಗಿದ್ದು, ಮಕ್ಕಳು ಇದರ ಸದುಪಯೋಗ ಪಡಿಸಿಕೊಳ್ಳಲು ಸಹಕಾರ ನೀಡುತ್ತೀರುವ ನೇತಾಜಿ ಸ್ಪೋರ್ಟ್ಸ್ ಕ್ಲಬ್‌ನ ಎಲ್ಲ ಸದಸ್ಯರಿಗೆ ಧನ್ಯವಾದಗಳು ಎಂದು ಹೇಳಿ, ಆಜಾದ್ ಅಂತಹ ಮಹಾನ್ ತ್ಯಾಗಿಗಳ ಜಯಂತಿ ಮಾಡುವದು ನಮ್ಮೆಲ್ಲರ ಕರ್ತವ್ಯ ಕೂಡ ಎಂದರು. ಈ ಸಂದರ್ಭದಲ್ಲಿ ಕೆ.ಐ. ಅಣ್ಣಿಗೇರಿ, ಆರ್ ಜಿ ಸುಕನ್ಯಾ, ಚಾಂದುಸಾಬ್ ಹೂಲಿ ಸೇರಿದಂತೆ ಮಕ್ಕಳು ಉಪಸ್ಥಿತರಿದ್ದರು. ಕೆ ಎ ಬಾಣದ ನಿರೂಪಿಸಿದರು. ವಿ ಬಿ ಹದ್ಲಿ ಸ್ವಾಗತಿಸಿದರು.

ಆಯೋಗದಿಂದ ವ್ಯಾಪಾರಿಗೆ ನ್ಯಾಯ

ಧಾರವಾಡ: ಹುಬ್ಬಳ್ಳಿಯ ದಾಜಿಬಾನ್ ಪೇಟ್‌ನ ಸತೀಶ ಅವಘಾನ ಇವರು ಭವಾನಿ ಫ್ಯಾಷನ್ ಅನ್ನುವ ಬಟ್ಟೆ ಅಂಗಡಿ ನಡೆಸುತ್ತಿದ್ದು ಮಂಜೂರ ನಸಾಬಿ ಹಾನಗಲ್ ಎಂಬುವವರ ಬಳಿ ಹೊಸ ಬಟ್ಟೆಯ ತಾಗೆಗಳನ್ನು ಖರೀದಿಸಿ ಎದುರುದಾರರಿಗೆ ದೂರುದಾರರ ನೀಡಿದ ಅಳತೆಯಂತೆ ರೆಡಿಮೆಡ್ ಬಟ್ಟೆ ಹೊಲಿದು ಕೊಡಲು ಇಬ್ಬರು ಮಧ್ಯ ಒಪ್ಪಂದವಾಗಿ ತಯಾರಿಕಾ ಶುಲ್ಕ ಅಂತಾ ದೂರುದಾರರು ಕೊಟ್ಟಿದ್ದರು.

ಆದರೆ ಎದುರುದಾರರು ಕಳಪೆ ಗುಣಮಟ್ಟದ ಬಟ್ಟೆ ಹೊಲಿದು ತಯಾರಿಸಿದ್ದರಿಂದ ದೂರುದಾರರು ಅದನ್ನು ಸರಿಪಡಿಸಿ ಕೊಡುವಂತೆ ಕೇಳಿದ್ದರು. ಆದರೆ ಎದುರುದಾರರು ಮಾತಿನಂತೆ ನಡೆದುಕೊಳ್ಳದೆ ದೂರುದಾರರಿಗೆ ಸರಿಯಾಗಿ ಹೊಲೆದ ರೆಡಿಮೆಡ್ ಬಟ್ಟೆಗಳನ್ನು ಕೊಡದೆ ಸೇವಾ ನ್ಯೂನ್ಯತೆಯನ್ನು ಎಸಗಿದ್ದರು.

ಧಾರವಾಡ ಜಿಲ್ಲಾ ಗ್ರಾಹಕರ ಆಯೋಗಕ್ಕೆ ಫೀರ್‌ಯಾದಿಯನ್ನು ಸಲ್ಲಿಸಿದ್ದರು. ಈ ಪ್ರಕರಣದ ವಿಚಾರಣೆ ನಡೆಸಿದ ಆಯೋಗ ಅಧ್ಯಕ್ಷರಾದ ಈಶಪ್ಪ. ಭೂತೆ ಹಾಗೂ ವಿಶಾಲಾಕ್ಷಿ. ಅ. ಬೋಳಶೆಟ್ಟಿ ಮತ್ತು ಪ್ರಭು. ಸಿ. ಹಿರೇಮಠ ಸದಸ್ಯರು, ದೂರುದಾರರು ಸಲ್ಲಿಸಿದ ನದಾಖಲೆಗಳನ್ನು ಪರಿಶೀಲಿಸಿದಾಗ ದೂರುದಾರರು ತಮ್ಮ ಉಪಜೀವನಕ್ಕಾಗಿ ಎದುರುದಾರರ ಬಳಿ ಬಟ್ಟೆಯ ತಾಗೆಗಳನ್ನು ಕೊಟ್ಟು ಅದರಿಂದ ಸಿದ್ದ ಉಡುಪುಗಳನ್ನು ತಯಾರಿಸಿ ಕೊಡಲು ಒಪ್ಪಂದ ಮಾಡಿಕೊಂಡಿರುವುದು ಕಂಡುಬರುತ್ತದೆ. ಆದರೆ ಎದುರುದಾರರು ಒಪ್ಪಂದದಂತೆ ನಡೆದುಕೊಳ್ಳದೆ ದೂರುದಾರರಿಗೆ ಸೇವಾ ನ್ಯೂನ್ಯತೆಯನ್ನು ಎಸಗಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

ಆದ್ದರಿಂದ ಎದುರುದಾರರು ದೂರುದಾರರಿಗೆ ಬಟ್ಟೆಯ ಮೊತ್ತ 1,85,846 ರೂಪಾಯಿಗಳನ್ನು ಈ ಆದೇಶವಾದ ಒಂದು ತಿಂಗಳ ಒಳಗಾಗಿ ಕೊಡುವಂತೆ ತಪ್ಪಿದ್ದಲ್ಲಿ ಒಟ್ಟು ಮೊತ್ತಕ್ಕೆ ಶೇ 8 ರಂತೆ ಬಡ್ಡಿ ಲೆಕ್ಕ ಹಾಕಿ ಕೊಡಲು ಹಾಗೂ ದೂರುದಾರರಿಗೆ ಆಗಿರುವ ಅನಾನುಕೂಲ ಮತ್ತು ಮಾನಸಿಕ ಹಿಂಸೆಗಾಗಿ 10,000 ಪರಿಹಾರ ಮತ್ತು ಪ್ರಕರಣದ ಖರ್ಚು ವೆಚ್ಚ 5000 ರು.ಪಾಯಿಗಳನ್ನು ದೂರುದಾರರಿಗೆ ನೀಡುವಂತೆ ಎದುರುದಾರರಾದ ಮಂಜೂರ ನಸಾಬಿ ಎನ್ನುವವರಿಗೆ ಆಯೋಗ ಆದೇಶಿಸಿದೆ.

ನಿವೃತ್ತ ಯೋಧನಿಗೆ ಸನ್ಮಾನ

ಧಾರವಾಡ: ಸತತ 24 ವರ್ಷಗಳ ಕಾಲ ಭಾರತಾಂಬೆಯ ಸೇವೆ ಸಲ್ಲಿಸಿ ಧಾರವಾಡ ಜಿಲ್ಲೆ ಸ್ವಗ್ರಾಮಕ್ಕೆ ನಿವೃತ್ತಿಯಾಗಿ ಬಂದ ಮಾಂತೇಶ ಅವರಿಗೆ ಧಾರವಾಡ ರೈಲ್ವೆ ಸ್ಟೇಷನ್ ದಲ್ಲಿ ಅದ್ದೂರಿಯಾಗಿ ಸ್ವಾಗತಿಸಲಾಯಿತು. ಈ ಸಂದರ್ಭದಲ್ಲಿ ಧಾರವಾಡ ಜಿಲ್ಲಾ ಕೆಪಿಸಿಸಿ ಮಾಜಿ ಸೈನಿಕರ ಘಟಕದ ಅಧ್ಯಕ್ಷರಾದಂತ ಸಿಕಂದರ ಮತ್ತು ಗದಗ ಜಿಲ್ಲಾ ಕೆಪಿಸಿಸಿ ಮಾಜಿ ಸೈನಿಕರ ಘಟಕದ ಅಧ್ಯಕ್ಷರಾದ ಶಿವಯೋಗಿ . ಮಾಜಿ ಸೈನಿಕರಾದ ಎಂಎಚ್ ಶಿವಳ್ಳಿ. ರಮೇಶ್ ಎಂ ಹೆಚ್ ಮತ್ತು ಅವರ ಬಂಧು-ಬಳಗದವರು ಮತ್ತು ಗುರು ಹಿರಿಯರನ್ನು ಸ್ವಾಗತಿಸಿ ಸನ್ಮಾನಿಸಿ ಗೌರವಿಸಿದರು.

ಸಮಾಚಾರ ಸಣ್ಣದಲ್ಲ

ಬಾಡಿಗೆ ಕಟ್ಟಡಕ್ಕೆ ಪ್ರಸ್ತಾವನೆ ಆಹ್ವಾನ

ಕೊಪ್ಪಳ: ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಮೆಟ್ರಿಕ್ ನಂತರದ ವಸತಿ ನಿಲಯಗಳಿಗೆ ಬಾಡಿಗೆ ಕಟ್ಟಡ ಪಡೆಯಲು ಆಸಕ್ತ ಖಾಸಗಿ ಕಟ್ಟಡ ಮಾಲೀಕರಿಂದ ಪ್ರಸ್ತಾವನೆ ಆಹ್ವಾನ. 100 ವಿದ್ಯಾರ್ಥಿಗಳ ಸಂಖ್ಯಾಬಲವುಳ್ಳ ಒಟ್ಟು 4 ವಿದ್ಯಾರ್ಥಿನಿಲಯ ಮಂಜೂರಾಗಿವೆ. ಅದರಲ್ಲಿ 3 ಬಾಲಕರ ವಸತಿ ನಿಲಯಗಳಿಗೆ (ಕೊಪ್ಪಳ ನಗರ-2 ವಸತಿ ನಿಲಯಗಳು ಮತ್ತು ಗಂಗಾವತಿ ತಾಲೂಕಿನ ಶ್ರೀರಾಮನಗರ-1 ವಸತಿ ನಿಲಯ) 100 ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಹಾಗೂ ಅಗತ್ಯ ಮೂಲ ಸೌಕರ್ಯ ಹೊಂದಿರುವ ಬಾಡಿಗೆ ಕಟ್ಟಡ ಅವಶ್ಯಕವಿರುತ್ತದೆ. ಆಸಕ್ತರು ಖಾಸಗಿ ಕಟ್ಟಡ ಮಾಲೀಕರು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಭವನ ಹೊಸಪೇಟೆ ರಸ್ತೆ ಕೊಪ್ಪಳ ಇಲ್ಲಿ ಭೇಟಿ ನೀಡಿ ಅಗತ್ಯ ದಾಖಲೆಯೊಂದಿಗೆ ಪ್ರಸ್ತಾವನೆ ಸಲ್ಲಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾರತ್ ಸೌಟ್ ಗೈಡ್ಸ್ ದೀಕ್ಷಾ ಸಮಾರಂಭ

ಕೊಪ್ಪಳ: ಜಿಲ್ಲಾ ಸಂಸ್ಥೆಯಿಂದ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕೊಪ್ಪಳ ತಾಲೂಕಿನ ಕಿನ್ನಾಳ ಗ್ರಾಮದ ಕುವೆಂಪು ಶತಮಾನೋತ್ಸವ ಮಾದರಿ ಶಾಲೆಯಲ್ಲಿ ಆಗಸ್ಟ್ 6ರಂದು ಸುಭಾಸ್ ಚಂದ್ರ ಬೋಸ್ ಸ್ಕೌಟ್ಸ್ ಘಟಕದ ವಿದ್ಯಾರ್ಥಿಗಳಿಗೆ ದೀಕ್ಷಾ ಸಮಾರಂಭ ಕಾರ್ಯಕ್ರಮ ನಡೆಯಿತು. ಶಾಲೆಯ ಸ್ಕೌಟ್ಸ್ ಶಿಕ್ಷಕ ಪ್ರಭಾಕರ್ ದಾಸರ್ ವಿದ್ಯಾರ್ಥಿಗಳಿಗೆ ದೀಕ್ಷೆ ನೀಡಿದರು. ಜಿಲ್ಲಾ ಕಾರ್ಯದರ್ಶಿಗಳು ಮತ್ತು ಶಾಲೆಯ ಮುಖ್ಯ ಶಿಕ್ಷಕ ಮಾರುತಿ ಅರೇರ್ ಮಾತನಾಡಿ, ಘಟಕಕ್ಕೆ ಸೇರಿದ ಎಲ್ಲ ಸ್ಕೌಟ್ ವಿದ್ಯಾರ್ಥಿಗಳಿಗೆ ಶುಭ ಕೋರಿದರು. ಕೊಪ್ಪಳ ಎ.ಎಸ್.ಒ.ಸಿ ಶರೀಫ ಹತ್ತಿಮತ್ತೂರ್, ಗೈಡ್ಸ್ ಶಿಕ್ಷಕಿ ಬಸಮ್ಮ ಗುಜ್ಜಲ್ ಇದ್ದರು.

ಚಂದಯ್ಯ ಜಯಂತಿ: ಪ್ರತಿಭಾ ಪುರಸ್ಕಾರ

ಲಿಂಗಸ್ಗೂರು: ಶರಣ ನೂಲಿ ಚಂದಯ್ಯ ಜಯಂತಿಯ ಪ್ರಯುಕ್ತ ಕೊರವ ಸಮಾಜ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ಸಂಸ್ಥೆ ಅಧ್ಯಕ್ಷ ರಾಜೇಶ್ ಮಾಣಿಕ್ ಹೇಳಿದರು. ಪಟ್ಟಣದ ಪತ್ರಿಕಾ ಭವನದಲ್ಲಿ ಮಾತಾಡಿ, ಎಸ್ಸೆಸ್ಸೆಲ್ಸಿಯಲ್ಲಿ 85%, ಪಿಯುಸಿಯಲ್ಲಿ 90% ಕಿಂತ ಹೆಚ್ಚಿನ ಅಂಕ ಪಡೆದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳಲಾಗಿದ್ದು ಆ. 20 ರ ಒಳಗೆ ನೂಲಿ ಚಂದಯ್ಯ ಟ್ರಸ್ಟ್ ಜೈಲ್ ರೋಡ್ ಲಿಂಗಸ್ಗೂರು ಕಾರ್ಯಾಲಯದಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು, ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ -9480043736 ನಂಬರಿಗೆ ಸಂಪರ್ಕಿಸಲು ತಿಳಿಸಿದ್ದಾರೆ. ಪತ್ರಿಕಾ ಗೋಷ್ಠಿಯಲ್ಲಿ ಸಚಿನ್, ಸಂಗಣ್ಣ, ಕಾಶೀನಾಥ ಇದ್ದರು.

ದಿ. ಶಿವಕುಮಾರರ 9ನೇ ಪುಣ್ಯ ಸ್ಮರಣೆ

ಕುಕನೂರ: ಪಟ್ಟಣದಲ್ಲಿ ಸಂಗೀತ ದಿಗ್ಗಜ, ತಬಲಾ ಪ್ರವೀಣ ಕುಕನೂರಿನ ಅಪ್ರತಿಮ ಕಲಾವಿದ ದಿ. ಶಿವಕುಮಾರ ಕುಕನೂರ ಹೆಸರಿನಲ್ಲಿ ದೊಡ್ಡದಾದ ಸಂಗೀತ ಭವನ ನಿರ್ಮಾಣವಾಗಬೇಕಿದೆ ಎಂದು ಕುಕನೂರಿನ ಶ್ರೀ ಅನ್ನದಾನೇಶ್ವರ ಶಾಖಾಮಠದ ಶ್ರೀಗಳಾದ ಡಾ. ಮಹದೇವ ಮಹಾಸ್ವಾಮಿಗಳು ಹೇಳಿದರು. ಪಟ್ಟಣದ ಶ್ರೀ ಜಗದ್ಗುರು ಅನ್ನದಾನೇಶ್ವರ ಭವನದಲ್ಲಿ ಶ್ರೀ ಪಂಚಾಕ್ಷರಿ ಸಂಗೀತ ಸಾಹಿತ್ಯ ಕ್ರೀಡೆ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ (ರೀ) ಕುಕುನೂರು ಪಂಚಾಕ್ಷರಿ ಸಂಗೀತ ಪಾಠಶಾಲೆ ಅಭಿಮಾನಿ ಬಳಗ ಹಾಗೂ ಶಿಷ್ಯ ಬಳಗದ ವತಿಯಿಂದ ಕರ್ನಾಟಕ ಕಲಾ ಶ್ರೀ ಪ್ರಶಸ್ತಿ ಪುರಸ್ಕೃತ ತಬಲಾ ಪ್ರವೀಣ ದಿ. ಪಂ.ಶಿವಕುಮಾರ ಕುಕನೂರ ರವರ 9ನೇ ವರ್ಷದ ಪುಣ್ಯ ಸ್ಮರಣೆ ಹಾಗೂ ಸಂಗೀತ ಸ್ವರ ನಮನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿ, ಜೀವನದುದ್ದಕ್ಕೂ ಸಂಗೀತ ಕಲೆಯನ್ನು ಮೈಗೂಡಿಸಿಕೊಂಡು ಸಾವಿರಾರು ಶಿಷ್ಯ ಬಳಗ ವನ್ನು ಹೊಂದಿರುವ ಮೇರು ಕಲಾವಿದರು ಇಂತಹ ಮಹಾನೀಯ ಕಲಾವಿದರ ಪ್ರತಿ ವರ್ಷ ಅವರ ಹೆಸರಿನಲ್ಲಿ ಕಾರ್ಯಕ್ರಮವಾಗಬೇಕು ಸಂಗೀತಗಾರರಿಗೆ ಜಾತಿ ಧರ್ಮ ಮತ ಭೇದವಿಲ್ಲ ಸಂಗೀತ ಒಂದು ದಿವ್ಯಶಕ್ತಿ ಕಠಿಣ ಪರಿಶ್ರಮದಿಂದ ಮಾತ್ರ ಸಂಗೀತ ಒಲಿಯುತ್ತದೆ ಎಂದರು.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

{ಜಿ. ಪರಮೇಶ್ವರ} ಗೃಹ ಸಚಿವ

ಪಿಎಸ್ಐ ಪರಶುರಾಮ ಅವರ ಮರಣೋತ್ತರ ಪರೀಕ್ಷೆ ಮಾಡಲಾಗಿದೆ. ಈ ಸಾವು ಗೃಹ ಸಚಿವನಾಗಿ ನನಗೆ ನೋವು ತರಿಸಿದೆ. ಇಡೀ ಕುಟುಂಬದ ಜವಾಬ್ದಾರಿ ಮೃತ ಪರಶುರಾಮ ಮೇಲೆ ಇತ್ತು. ಅವರ ಅಗಲುವಿಕೆ ಇಡೀ ಕುಟುಂಬವನ್ನು ಸಂಕಷ್ಟಕ್ಕೆ ದೂಡಿದೆ. ಸರಕಾರ ಗಂಭೀರವಾಗಿ ಪರಿಗಣಿಸಿದ್ದು, ಈಗಾಗಲೇ ಸಿಐಡಿ ತನಿಖೆಗೆ ಒಪ್ಪಿಸಲಾಗಿದೆ. ತನಿಖಾ ವರದಿ ಆಧರಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಚರಂಡಿ ಇಲ್ಲದೇ ಅಧ್ವಾನ, ಅಧಿಕಾರಿಗಳ ಅಲಕ್ಷ್ಯ

ಕೋಳೂರು, ಬೊಮ್ಮನಾಳ ಗ್ರಾಮದಲ್ಲಿ ಸಾಂಕ್ರಾಮಿಕ ರೋಗಗಳ ಭೀತಿಯಲ್ಲಿ ಗ್ರಾಮಸ್ಥರು

ದೇವದುರ್ಗ: ರಸ್ತೆ ಮೇಲೆ ಚರಂಡಿ ನೀರು, ಸೊಳ್ಳೆಗಳ ಕಾಟ, ಗಬ್ಬು ವಾಸನೆಯ ನಡುವೆಯೇ ಬದುಕು ಸಾಗಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ದೇವದುರ್ಗ ತಾಲೂಕಿನ ಹೇಮನಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಕೋಳೂರು ಹಾಗೂ ಬೊಮ್ಮನಾಳ ಗ್ರಾಮದ ವಿವಿಧಡೆ ಜನರಿಗೆ ರಸ್ತೆ ಸ್ವಚ್ಛತೆ ಎಂಬುದು ಮರೀಚಿಕೆಯಾಗಿದೆ. ಇಲ್ಲಿನ ನಿವಾಸಿಗಳು ಇವುಗಳ ನಡುವೆ ಜೀವನ ನಡೆಸಬೇಕಾದ ದುಸ್ಥಿತಿ ಒದಗಿ ಬಂದಿದೆ.

ಗ್ರಾಮದ ಪ್ರತಿ ಮುಖ್ಯ ರಸ್ತೆಯಲ್ಲಿ ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಚರಂಡಿ ನೀರು ಸರಾಗವಾಗಿ ಜನರು ತಿರುಗಾಡುವ ರಸ್ತೆಯ ಮಧ್ಯೆ ಹರಿಯುತ್ತವೆ. ರಸ್ತೆ ಪಕ್ಕದಲ್ಲಿ ಚರಂಡಿ ವ್ಯವಸ್ಥೆ ಮಾಡದ ಕಾರಣ ನೀರು ಸಂಗ್ರಹಗೊಂಡು ಸಾಂಕ್ರಾಮಿಕ ರೋಗಗಳಿಗೆ ಆಹ್ವಾನ ನೀಡುತ್ತದೆ. ಇಲ್ಲಿನ ನಿವಾಸಿಗಳು ಹೇಮನಾಳ ಗ್ರಾಮ ಪಂಚಾಯಿತಿ ಪಿಡಿಒ ರಂಗಪ್ಪ ಹಾಗೂ ತಾಲೂಕು ಪಂಚಾಯಿತಿ ಇಒ ಗಮನಕ್ಕೆ ತಂದರೂ ಕೂಡಾ ಯಾವುದೇ ಪ್ರಯೋಜನವಾಗಿಲ್ಲ ಎಂಬುದು ಸ್ಥಳೀಯ ನಿವಾಸಿಗಳ ಆರೋಪವಾಗಿದೆ.

ರಸ್ತೆ, ಚರಂಡಿ, ಕುಡಿಯುವ ನೀರು, ಶಾಲೆಗೆ ಶೌಚಾಲಯ, ಬೀದಿ ದೀಪ, ಕೋಳೂರು ಗ್ರಾಮಕ್ಕೆ ಬಸ್ ಸಂಪರ್ಕ ವ್ಯವಸ್ಥೆ ಇಲ್ಲದೆ ಕಾರಣಕ್ಕೆ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ, ಹಾಗೂ ಇತರೆ ಸೌಲಭ್ಯಗಳಿಲ್ಲದೆ ಜನರು ಪರದಾಡುತ್ತಿದ್ದಾರೆ. ಗ್ರಾಮದಲ್ಲಿ ಕಸ ವಿಲೇವಾರಿ ಸಮರ್ಪಕವಾಗಿ ಆಗುತ್ತಿಲ್ಲ. ಎಲ್ಲೆಂದರಲ್ಲಿ ತ್ಯಾಜ್ಯ ಬಿಸಾಡಲಾಗಿದೆ. ಚರಂಡಿಗಳಲ್ಲಿ ಮನೆಯ ಕಸ, ಪ್ಲಾಸ್ಟಿಕ್, ಒಡೆದ ಗಾಜುಗಳು, ಹಳೆಯ ವಸ್ತ್ರಗಳು, ತ್ಯಾಜ್ಯ ಕಣ್ಣಿಗೆ ಕಾಣುತ್ತದೆ. ಆದರೆ ಪಂಚಾಯಿತಿಗೆ ಸರಕಾರ ಕೊಟ್ಟ ಕಸ ವಿಲೇವಾರಿ ವಾಹನ ಹೆಸರಿಗೆ ಎಂಬುವಂತೆ ಪಂಚಾಯಿತಿ ಮುಂದೆ ನಿಲ್ಲುತ್ತದೆ ಕೂಡಲೇ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ತಿರುಗಿ ಹಸಿ ಕಸ ಮತ್ತು ಒಣ ಕಸವನ್ನು ವಿಲೇವಾರಿ ಮಾಡಲು ಬಳಕೆ ಮಾಡಲು ಜನರು ಒತ್ತಾಯಿಸಿದರು.

ದೇವದುರ್ಗ ತಾಲೂಕಿನ ಹೇಮನಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಕೋಳೂರು ಹಾಗೂ ಬೊಮ್ಮನಾಳ ಗ್ರಾಮದ ವಿವಿಧಡೆ ಸೌಕರ್ಯಗಳ ಕೊರತೆಯಿಂದ ರಸ್ತೆ ಮೇಲೆ ಚರಂಡಿ ನೀರು ಹರಿಯುತ್ತಿದೆ.

ಗ್ರಾಮದಲ್ಲಿ ಹಂದಿಗಳ ಹಾವಳಿ ಹೆಚ್ಚಾಗಿದೆ. ಕಸದ ತೊಟ್ಟಿ ಹಾಗೂ ತಿಪ್ಪೆಗುಂಡಿಗಳಲ್ಲಿನ ಕಸ ರಸ್ತೆ ಮೇಲೆ ಚೆಲ್ಲಾಡುತ್ತಿರುವುದು ಒಂದೆಡೆಯಾದರೆ, ಮೊತ್ತೊಂದೆಡೆ ಹಂದಿಗಳಿಗೆ ಮುಖ್ಯ ರಸ್ತೆಯ ಚರಂಡಿಯೇ ವಾಸಸ್ಥಾನವಾಗಿದೆ.

ಸೊಳ್ಳೆಗಳು ಗ್ರಾಮಸ್ಥರ ರಕ್ತ ಹೀರುವುದರ ಜತೆಗೆ ಹಲವು ಸಾಂಕ್ರಾಮಿಕ ಕಾಯಿಲೆಗಳಾದ ಮಲೇರಿಯಾ, ಡೆಂಘೀ ಹರಡುವಿಕೆಗೆ ಕಾರಣವಾಗುತ್ತಿದ್ದೆ ಆದ್ದರಿಂದ ಕೂಡಲೇ ಅಧಿಕಾರಿಗಳು ಹೆಚ್ಚೆತ್ತುಕೊಂಡು ರೋಗ ನಿಯಂತ್ರಣ ಮಾಡಬೇಕೆಂದು ಗ್ರಾಮಸ್ಥರು ಒತ್ತಾಯಿಸಿದರು.

> ರಸ್ತೆಯ ಮೇಲೆ ದಿನನಿತ್ಯ ಶಾಲಾ - ಕಾಲೇಜು ವಿದ್ಯಾರ್ಥಿಗಳು ಓಡಾಡುತ್ತಿದ್ದು ಸಾಕಷ್ಟು ವಿದ್ಯಾರ್ಥಿಗಳಿಗೆ ಮನೆಯಿಂದ ಶಾಲೆಗೆ ಬರುವಾಗ ಹೋಗುವಾಗ ಕೊಳಚೆ ನೀರು ಶಾಲಾ ಸಮವಸ್ತ್ರಕ್ಕೆ ಬಿದ್ದಿರುವ ಉದಾಹರಣೆಗಳು ಇವೆ. ಈ ಹದಗೆಟ್ಟ ರಸ್ತೆಗಳಿಗೆ ಇಲ್ಲಿಯವರೆಗೆ ಹಿಡಿ ಮಣ್ಣು ಹಾಕುವವರಿಲ್ಲ, ನಮ್ಮ ಕೋಳೂರಿಗೆ ಇದುವರೆಗೆ ಯಾವುದೇ ಬಸ್ ಸಂಪರ್ಕ ವ್ಯವಸ್ಥೆ ಇಲ್ಲದೆ ಇರುವುದ್ದರಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಕೊಡ್ಲಿ ಬಿದ್ದಾಂತಾಗಿದೆ. ಕೂಡಲೇ ಗ್ರಾಮಕ್ಕೆ ಮೂಲ ಸೌಲಭ್ಯಗಳನ್ನು ಒದಗಿಸದೆ ಪಂಚಾಯಿತಿ ಆಡಳಿತ ಸಂಪೂರ್ಣ ಕಣ್ಣುಮುಚ್ಚಿ ಕುಳಿತಿದೆ.
>
> - ಜಾಕೋಬ್ ಟೇಲರ್ ಬೊಮ್ಮನಾಳ, ಕಾರ್ಮಿಕ ಹಕ್ಕುಗಳ ವೇದಿಕೆ ತಾಲೂಕು ಅಧ್ಯಕ್ಷರು.

ಹದಗೆಟ್ಟ ರಸ್ತೆ: ಗ್ರಾಮದಲ್ಲಿ ಬಹುತೇಕ ರಸ್ತೆಗಳು ಹದಗೆಟ್ಟಿದ್ದು. ಮಳೆಗಾಲದಲ್ಲಿ ರಸ್ತೆಗಳೆಲ್ಲ ಕೆಸರು ಗದ್ದೆಗಳಂತಾಗಿ ಮಾರ್ಪಟ್ಟು, ಜನರ ಓಡಾಟಕ್ಕೆ ಅಡಚಣೆ ಉಂಟಾಗುತ್ತಿದೆ. ಗ್ರಾಮದ ನಾನಾ ಕಡೆ ರಸ್ತೆಗಳು ಹದಗೆಟ್ಟು, ಒಂದು ದಶಕ ಕಳೆದರೂ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ ಮುಂದಾಗಿಲ್ಲ.

ಪಿಡಿಒ ನಿರ್ಲಕ್ಷ್ಯ: ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ, ಆದರೆ ಇಲ್ಲಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮದಲ್ಲಿನ ಮೂಲಭೂತ ಸೌಕರ್ಯಗಳ ಬಗ್ಗೆ ಗಮನಹರಿಸುತ್ತಿಲ್ಲ, ಅವರು ಅಭಿವೃದ್ಧಿ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸುತ್ತಿದ್ದಾರೆ.

ಈ ಬಗ್ಗೆ ಗ್ರಾಮ ಪಂಚಾಯಿತಿಗೆ ಹಲವು ಬಾರಿ ಗಮನಕ್ಕೆ ತಂದರು ಸಮಸ್ಯೆಗಳು ಮಾತ್ರ ಪರಿಹಾರವಾಗಿಲ್ಲ ಜನಗಳು ಕಷ್ಟದಲ್ಲಿ ಜೀವನ ನಡೆಸಬೇಕಾಗಿದೆ ಕೂಡಲೇ ಸಂಬಂಧಪಟ್ಟ ತಾಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು ಎಚ್ಚೆತ್ತುಕೊಂಡು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಬೇಕು ಎಂಬುದು ಗ್ರಾಮಸ್ಥರ ಒತ್ತಾಯವಾಗಿದೆ.

ಪತ್ರಕರ್ತರ ಕರೆ ಸ್ವೀಕರಿಸದ ಪಿಡಿಒ: ಜನರ ಸಮಸ್ಯೆಗಳ ಬಗ್ಗೆ ಅಧಿಕಾರಿಗಳ ಗಮನಕ್ಕೆ ತರಲು ಪತ್ರಕರ್ತರು ದೂರವಾಣಿ ಕರೆ ಮಾಡಿದರೆ ಪತ್ರಕರ್ತರ ಕರೆಯನ್ನು ಬ್ಲಾಕ್ ಲಿಸ್ಟಿಗೆ ಹಾಕುತ್ತಾರೆ. ಪತ್ರಕರ್ತರ ಕರೆಯನ್ನೇ ಸ್ವೀಕರಿಸುದಿಲ್ಲ. ಎಂದ ಮೇಲೆ ಇನ್ನು ಸಾಮಾನ್ಯ ಜನರಿಗೆ ಯಾವ ರೀತಿ ಸ್ಪಂದಿಸುತ್ತಾರೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ.

ಭಾರತೀಯ ಉಪಕರಣಗಳ ಗುಣಮಟ್ಟ। ಬಿಐಎಸ್ ಕೇರ್ ಆ್ಯಪ್ ಸಹಕಾರಿ

ಬಿಐಎಸ್‌ನಿಂದ ಸಂವೇದನಾಶೀಲ ತರಬೇತಿ

ಕೊಪ್ಪಳದ ಡಿಸಿ ಕಚೇರಿ ಸಭಾಂಗಣದಲ್ಲಿ ಕೇಂದ್ರ ಸರಕಾರದ ಅಂಗ ಸಂಸ್ಥೆ ಭಾರತೀಯ ಮಾನಕ ಬ್ಯೂರೋ(ಬಿಐಎಸ್) ಅವರಿಂದ ಭಾರತೀಯ ಗುಣಮಟ್ಟದ ಕುರಿತು ಅರಿವು ಮೂಡಿಸುವ ಸಂವೇದನಾಶೀಲ ತರಬೇತಿ ಕಾರ್ಯಕ್ರಮ ಬುಧವಾರ ನಡೆಯಿತು.

ಕೊಪ್ಪಳ: ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕೇಂದ್ರ ಸರಕಾರದ ಅಂಗ ಸಂಸ್ಥೆಯಿಂದ ಭಾರತೀಯ ಮಾನಕ ಬ್ಯೂರೋ(ಬಿಐಎಸ್) ಅವರಿಂದ ಭಾರತೀಯ ಗುಣಮಟ್ಟದ ಕುರಿತು ಅರಿವು ಮೂಡಿಸುವ ಸಂವೇದನಾಶೀಲ ತರಬೇತಿ ಕಾರ್ಯಕ್ರಮ ನಡೆಯಿತು.

ಜಿಲ್ಲಾಧಿಕಾರಿ ನಲಿನ್ ಅತುಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ತರಬೇತಿಯಲ್ಲಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಗುಣಮಟ್ಟ, ಭಾರತೀಯ ಮಾನದಂಡಗಳಂತೆ ಗುಣಮಟ್ಟದ ಸರಕಾರದ ಯೋಜನೆ, ಸರಕಾರದ ಕಾಮಗಾರಿ, ಗ್ರಾಹಕ ವಸ್ತುಗಳ ಗುಣಮಟ್ಟ, ಆರೋಗ್ಯ ಸೇವೆಯ ಗ್ರಾಹಕ ವಸ್ತು, ಉತ್ಪನ್ನಗಳು, ಸುರಕ್ಷತಾ ವಸ್ತುಗಳ ಗುಣಮಟ್ಟ, ಉಪಕರಣಗಳ ಪ್ರಮಾಣಿತ ಗುಣಮಟ್ಟ, ಸುಧಾರಣೆ ಹಾಗೂ ವಿವಿಧ ವಿಷಯಕ್ಕೆ ಸಂಬಧಪಟ್ಟಂತೆ ಬಿಐಎಸ್‌ನ ಅಧಿಕಾರಿಗಳು ಐಎಸ್ಐ, ಹಾಲ್ ಮಾರ್ಕ್, ಎಫ್ಎಸ್ಎಸ್ಐ ಹಾಗೂ ವಿವಿಧ ದಿನನಿತ್ಯ ಬಳಕೆ ವಸ್ತುಗಳಾದ ಗ್ಯಾಸ್ ಸಿಲಿಂಡರ ಮತ್ತು ಅದರ ಬಿಡಿ ಭಾಗ, ಮೊಬೈಲ್ ಮತ್ತು ಎಲೆಕ್ಟ್ರಾನಿಕ್ ವಸ್ತು ಹಾಗೂ ಚಿನ್ನ ಖರೀದಿಸುವಾಗ ಉತ್ಪನ್ನಗಳ ಮೇಲಿನ ಮಾರ್ಕ್ ಖಚಿಪಡಿಸಿಕೊಂಡು ವಸ್ತು ಖರೀದಿಸುವುದು ಬಹುಮುಖ್ಯವಾಗಿದೆ ಎಂದು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಅರಿವು ಮೂಡಿಸಿ ಮತ್ತು ಮಾರ್ಗದರ್ಶನ ನೀಡಿದರು.

ಭಾರತೀಯ ಮಾನಕ ಬ್ಯೂರೋ(ಬಿಐಎಸ್) ಅವರಿಂದ ಭಾರತೀಯ ಉತ್ಪನ್ನಗಳ ಗುಣಮಟ್ಟವನ್ನು ತಿಳಿಯಲು ಮತ್ತು ದೂರು ನೀಡಲು ಬಿಐಎಸ್ ಕೇರ (BIS CARE)ಆ್ಯಪ್ ನ್ನು ಪ್ಲೇ ಸ್ಟೋರ್ ನ ಮೂಲಕ ಪಡೆದುಕೊಂಡು ಅದರಲ್ಲಿ ಉತ್ಪನ್ನಗಳ ಕುರಿತು ಸಂಪೂರ್ಣ ಮಾಹಿತಿ ಮತ್ತು ಉತ್ಪನ್ನಗಳ ಉತ್ಪಾದಕರ ವಿಳಾಸ ಹಾಗೂ ಉತ್ಪನ್ನಗಳ ವಿವರ ಹಾಗೂ ದೂರುಗಳನ್ನು ನೀಡಲು ಬಿಐಎಸ್ ಕೇರ ಆ್ಯಪ್‌ವು ತುಂಬಾ ಉಪಯುಕ್ತವಾಗಿದೆ. ಎಲ್ಲರೂ ಇದನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಈ ತರಬೇತಿಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮಾಹಿತಿ ನೀಡಿದರು.

ಎಡಿಸಿ ಸಿದ್ರಾಮೇಶ್ವರ, ಜಿಪಂ ಉಪ ಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪ ನಿರ್ದೇಶಕ ಚಿದಾನಂದ, ಭಾರತೀಯ ಮಾನಕ ಬ್ಯೂರೋ(ಬಿಐಎಸ್)ನ ಮರ್ಸಿರಾಣಿ, ಮಹ್ಮದ್ ಅಹ್ಮದ್ ಇದ್ದರು.

ವೀರಶೈವ ಸಮಾಜದ ಸದಸ್ಯತ್ವಕ್ಕೆ ಮನವಿ

ನಗರದ ಪತ್ರಿಕಾ ಭವನದಲ್ಲಿ ವೀರಶೈವ ಸಮಾಜ ಸದಸ್ಯತ್ವ ನೋಂದಾವಣೆಗೆ ಸುದ್ದಿಗೋಷ್ಠಿಯಲ್ಲಿ ಮನವಿ ಸಲ್ಲಿಸಲಾಯಿತು.

ಸಿಂಧನೂರು: ವೀರಶೈವ ಲಿಂಗಾಯತ ಸಮಾಜದಿಂದ ಸದಸ್ಯತ್ವ ನೋಂದಾವಣೆ ಅಭಿಯಾನ ಹಮ್ಮಿಕೊಂಡಿದ್ದು , ಎಲ್ಲರು ನೋಂದಾವಣೆ ಮಾಡಿಸುವಂತೆ ಎಪಿಎಂಸಿ ಮಾಜಿ ರಾಜ್ಯ ಉಪಾಧ್ಯಕ್ಷರು ಹಾಗೂ ವೀರಶೈವ ಲಿಂಗಾಯತ ಸಮಾಜದ ಮುಖಂಡ ರಾಜಶೇಖರ ಪಾಟೀಲ ಸಮಾಜದ ಬಂಧುಗಳಲ್ಲಿ ಮನವಿ ಮಾಡಿಕೊಂಡರು.

ನಗರದ ಪತ್ರಿಕಾ ಭವನದಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಮಾಜದ ಸಂಘಟನೆ ಈ ಮುಂಚೆ ನಗರಕ್ಕೆ ಮಾತ್ರ ಸೀಮಿತವಾಗಿದ್ದು ಈಗ ತಾಲೂಕಿನಾದ್ಯಂತ ಸಂಘಟನೆ ವಿಸ್ತರಿಸುವ ಉದ್ದೇಶದಿಂದ ಸದಸ್ಯತ್ವ ಮೂಡಿಸಲಾಗುತ್ತದೆ ಎಂದರು.

ಸದಸ್ಯತ್ವ ನೋಂದಾವಣೆಗೆ ಅಭಿಯಾನ ಜು. 14 ರಿಂದ ಆರಂಭವಾಗಿದ್ದು ಈಗಾಗಲೆ ಸಾಕಷ್ಟು ಸಂಖ್ಯೆಯಲ್ಲಿ ಜನರು ನೋಂದಾವಣೆ ಮಾಡಿಸಿದ್ದು ಆ. 14 ಸದಸ್ಯತ್ವ ನೋಂದಾವಣೆ ಮಾಡಿಸುವ ಕೊನೆಯ ದಿನಾಂಕವಾಗಿದೆ ಎಂದು ವಕೀಲರ ಸಂಘದ ತಾಲೂಕಾ ಅಧ್ಯಕ್ಷ ಎನ್. ರಾಮನಗೌಡ ಹೇಳಿದರು.

ನಗರದ ಕೋಟೆ ಈರಣ್ಣ ಕಲ್ಯಾಣ ಮಂಟಪದಲ್ಲಿ ಪ್ರತಿದಿನ ಮುಂಜಾನೆ 10 ಗಂಟೆಯಿಂದ ಸಂಜೆ 6 ಗಂಟೆ ತನಕ ಸದಸ್ಯತ್ವ ನೋಂದಾಯಿಸಿಕೊಳ್ಳಲಾಗುತ್ತಿದೆ.

ಪೋಷಕ ಸದಸ್ಯತ್ವ 50 ಸಾವಿರ, ದಾನಿಗಳ ಸದಸ್ಯತ್ವ 25 ಸಾವಿರ, ಅಜೀವ ಸದಸ್ಯತ್ವ 5 ಸಾವಿರ ವಾರ್ಷಿಕ ಸದಸ್ಯತ್ವ 500 ರುಪಾಯಿ ನಿಗದಿ ಪಡಿಸಲಾಗಿದೆ ಎಂದರು.

50 ಸಾವಿರ ಪೋಷಕ ಸದಸ್ಯತ್ವ ಚುನಾವಣೆ ನಡೆಸಲಾಗುವುದು 5 ಜನರು ಚುನಾವಣೆಗೆ ಸ್ಪರ್ಧಿಸುವ ಅವಕಾಶ ಇದೆ 25 ಸಾವಿರ ಸದಸ್ಯತ್ವದ ಚುನಾವಣೆಗೆ 5 ಜನ ಸ್ಪರ್ಧೆ ಮಾಡಬಹುದು 5 ಸಾವಿರ ಸದಸ್ಯತ್ವ ಚುನಾವಣೆಯಲ್ಲಿ 10 ಜನ ಸ್ಪರ್ಧೆ ಮಾಡಬಹುದು ಇದರಲ್ಲಿ 3 ಜನ ಮಹಿಳೆಯರಿಗೆ ಅವಕಾಶ ಕಲ್ಪಿಸಲಾಗಿದೆ 5 ಸಾವಿರ ಸದಸ್ಯತ್ವ ಚುನಾವಣೆಗೆ 7 ಜನರು ಸ್ಪರ್ಧಿಸುವ ಅವಕಾಶ ಇದ್ದು ಒಂದು ಸ್ಥಾನ ಮಹಿಳೆಗೆ ಮೀಸಲಿರಿಸಲಾಗಿದೆ ಎಂದರು.

ಆರ್‌ಡಿಸಿಸಿ ಬ್ಯಾಂಕ ಮಾಜಿ ಅಧ್ಯಕ್ಷ ಪಂಪನಗೌಡ ಬಾದರ್ಲಿ, ಸಮಾಜದ ಮುಖಂಡ ಅಮರೇಶ ಕುಂಬಾರ, ಹಂಪಯ್ಯ ಸ್ವಾಮಿ ರಾವಿಹಾಳ, ಶರಣಪ್ಪ ಟೆಂಗಿನಕಾಯಿ, ವಿರೇಶಪ್ಪ ಮಸ್ಕಿ, ವೀರಯ್ಯ ಸ್ವಾಮಿ ಇದ್ದರು.

ಕಾಮಗಾರಿ ಪರಿಶೀಲಿಸಿದ ಜಿಪಂ ಸಿಇಒ

ಕಾರಟಗಿ: ತಾಲೂಕಿನ ಸಿದ್ದಾಪುರ ಗ್ರಾಮದಲ್ಲಿ ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ರತ್ನಂ ಪಾಂಡೆ ಅವರು, ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಸ್ಥಳಗಳಿಗೆ ಭೇಟಿ ನೀಡಿ, ಕಾಮಗಾರಿ ಪರಿಶೀಲಿಸಿದರು.

ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ, ಅಧ್ಯಕ್ಷರು ಹಾಗೂ ಸರ್ವ ಸದಸ್ಯರೊಂದಿಗೆ ಮೂಲ ಸೌಕರ್ಯ ಮತ್ತು ಇನ್ನಿತರ ಗ್ರಾಮದ ಸಮಸ್ಯೆಗಳ ಕುರಿತು ಚರ್ಚಿಸಿದರು. ಬಳಿಕ ಗ್ರಾಮ ಪಂಚಾಯಿತಿ ಆವರಣದ ಡಿಜಿಟಲ್ ಗ್ರಂಥಾಲಯಕ್ಕೆ ಭೇಟಿ ನೀಡಿ, ಗ್ರಂಥಾಲಯಕ್ಕೆ ಬರುವ ಮಕ್ಕಳ ಹಾಗೂ ಸಾರ್ವಜನಿಕರ ಹಾಜರಾತಿ ಪರಿಶೀಲನೆ ಮಾಡಿ, ಮೇಲ್ವಿಚಾರಕರೊಂದಿಗೆ ಸಮಾಲೋಚಿಸಿದರು. ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ತೆರಳಿ, ಗ್ರಾಮದಲ್ಲಿನ ಹಸಿ, ಒಣ ಕಸ ವಿಂಗಡಣೆ ಘಟಕದಲ್ಲಿ ಪ್ರಾರಂಭಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಕಾರಟಗಿ ತಾಲೂಕು ಸಿದ್ದಾಪುರ ಗ್ರಾಮದಲ್ಲಿ ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೆ ಅವರು, ಗ್ರಾಪಂ ವ್ಯಾಪ್ತಿಯ ವಿವಿಧ ಸ್ಥಳಗಳಿಗೆ ಭೇಟಿ ನೀಡಿ, ಹಾಜರಾತಿ ಪರಿಶೀಲಿಸಿದರು.

ಅಲ್ಲದೇ ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಭೋಜನಾಲಯಕ್ಕೆ ಭೇಟಿ ನೀಡಿ, ಬಿಸಿಯೂಟದ ಅಡುಗೆ ಸಹಾಯಕರೊಂದಿಗೆ ಮಕ್ಕಳಿಗೆ ನೀಡುವ ಬಿಸಿಯೂಟದ ಮಾಹಿತಿ ಪಡೆದರು. ಬಳಿಕ ಶಾಲೆ ಶೌಚಾಲಯ ಪರಿಶೀಲನೆ ಮಾಡಿ, ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಸೂಚಿಸಿದರು. ತಾಲೂಕು ಪಂಚಾಯಿತಿ ಇಒ ಲಕ್ಷ್ಮೀದೇವಿ ಯಾದವ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಿವಗಂಗಮ್ಮ ಪಂಪಾಪತಿ ಭೋವಿ, ಉಪಾಧ್ಯಕ್ಷೆ ಗಂಗಪ್ಪ ಸುಂಕದ್ ಇದ್ದರು.

ಅಹಿಂದ ಸಂಘಟನೆ ರಾಜ್ಯಾದ್ಯಂತ ಹೋರಾಟದ ಎಚ್ಚರಿಕೆ

ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದಿರಿ

ತಾಲೂಕು ಅಹಿಂದ ಒಕ್ಕೂಟ ಹಾಗೂ ಕನ್ನಡ ಪರ ಸಂಘಟನೆಗಳು ಶೋಷಿತ ಸಮಾಜಗಳ ವತಿಯಿಂದ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.

ಲಿಂಗಸ್ಗೂರು: ರಾಜ್ಯಪಾಲರು ಸಿಎಂ ಸಿದ್ದರಾಮಯ್ಯನವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟರೆ, ರಾಜ್ಯದ್ಯಾಂತ ಹೋರಾಟ ಮಾಡಲಾಗುತ್ತದೆ ಎಂದು ಸಹಾಯಕ ಆಯುಕ್ತರ ಮುಖಾಂತರ ರಾಷ್ಟ್ರಪತಿಗಳಿಗೆ ತಾಲೂಕು ಅಹಿಂದ ಒಕ್ಕೂಟ ಹಾಗೂ ಕನ್ನಡ ಪರ ಸಂಘಟನೆಗಳು ಶೋಷಿತ ಸಮಾಜಗಳ ವತಿಯಿಂದ ಮನವಿ ಸಲ್ಲಿಸಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿದೆ, ಎನ್ನಲಾದ ಅತಿಕ್ರಮಣ ಮತ್ತು ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಹಗರಣಗಳು ವಿಪಕ್ಷಗಳು ಆರೋಪಿಸುತ್ತಿರುವ, ಈ ಅಕ್ರಮಗಳ ಕುರಿತಾಗಿ ಸಿದ್ದರಾಮಯ್ಯನವರು ತನಿಖೆಗೆ ಆದೇಶಿಸಿದ್ದಾರೆ. ಈ ಅಕ್ರಮ ಕುರಿತಾಗಿ ತನಿಖೆ ನಡೆಯುತ್ತಿದ್ದರು, ಕೂಡ ಸಿದ್ದರಾಮಯ್ಯ ಪಾತ್ರ ಇದೆಯೋ, ಇಲ್ಲವೋ, ಎಂಬುವದು ತನಿಖೆಯಿಂದ ಹೊರಬರಬೇಕು. ರಾಜಕೀಯವಾಗಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಅವರ ವಿರುದ್ಧ ಪಿತೂರಿ ಮಾಡುತ್ತಿದ್ದು, ಇದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ.

40 ವರ್ಷಗಳ ಕಾಲ ಕಪ್ಪು ಚುಕ್ಕೆ ಇಲ್ಲದೆ, ಆಡಳಿತ ನಡೆಸಿದ ಸಿದ್ದರಾಮಯ್ಯ ನವರ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಷಡ್ಯಂತರ ರೂಪಿಸಿವೆ, ಅವರ ವಿರುದ್ಧ ವಿರೋಧ ಪಕ್ಷಗಳು ಸುಳ್ಳು ಆರೋಪಗಳು ಮಾಡವುದನ್ನು ನಿಲ್ಲಿಸಬೇಕು. ಇಲ್ಲವಾದರೆ ಇಡಿ ಅಖಂಡ ಅಹಿಂದ ಸಂಘಟನೆ ಒಗ್ಗೂಡಿ ರಾಜ್ಯದ್ಯಾಂತ ಹೋರಾಟ ಮಾಡಬೇಕಾಗುತ್ತದೆ ಎಂದು ಪ್ರತಿಭಟನೆ ಮಾಡುವ ಮೂಲಕ ಎಚ್ಚರಿಕೆ ಮನವಿ ನೀಡಿದ್ದಾರೆ.

ಗ್ರಾಮದ ಸುಡುಗಾಡಿಗೆ ದಾರಿ ತೋರಿಸ ಬನ್ನಿ

ರಾಯಚೂರು: ಜಿಲ್ಲೆಯ ಮಸ್ಕಿ ತಾಲೂಕಿನ ಪಾಮನಕಲ್ಲೂರು ಗ್ರಾಮದಲ್ಲಿ ಊರ ಮುಂದೆ ಇರುವ ಸ್ಮಶಾನ (ರುದ್ರಭೂಮಿ) ಸರಕಾರಿ ಜಾಲಿಗಿಡಗಳು ಬೆಳೆದು ಹಾಳಾಗಿದ್ದು, ಅಲ್ಲದೇ ಸ್ಮಶಾನಕ್ಕೆ ತೆರಳುವ ರಸ್ತೆ ಕೂಡ ಹಳ್ಳದ ನೀರಿನಿಂದ ಹದಗೆಟ್ಟಿದೆ ಕೂಡಲೇ ಸ್ಮಶಾನ ಮತ್ತು ಸ್ಮಶಾನಕ್ಕೆ ತೆರಳುವ ರಸ್ತೆಯನ್ನು ದುರಸ್ತಿಗೊಳಿಸಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಯ ಹೋಬಳಿ ಘಟಕದ ಮುಖಂಡರು ಆಗ್ರಹಿಸಿದ್ದಾರೆ. ಮಾಧ್ಯಮದವರೊಂದಿಗೆ ಮಾತನಾಡಿ, ಕರವೇ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಚೌಡ್ಕಿ, ಅಧ್ಯಕ್ಷ ರಮೇಶ್ ಗಂಟ್ಲಿ, ಮುಖಂಡ ಅಮರೇಶ್ ಡಿ ಪೂಜಾರಿರವರು, ಪಾಮನಕಲ್ಲೂರಿನ ಸುಡುಗಾಡಿಗೆ ಹೋಗುವ ದಾರಿ ಹಾಳಾಗಿದೆ. ಅಲ್ಲದೇ ಸುಡುಗಾಡು ಕೂಡ ಸರಕಾರಿ ಜಾಲಿಗಿಡಗಳಿಂದ ತುಂಬಿ ಹೋಗಿದೆ. ಇದರಿಂದ ಗ್ರಾಮದಲ್ಲಿ ಮೃತಪಟ್ಟವರನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಅಂತ್ಯಕ್ರಿಯೆ ಮಾಡುವುದು ಸವಾಲಿನ ಕೆಲಸವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ನಾವು ನಮ್ಮೂರಿನ ಸ್ಮಶಾನ ದುರಸ್ತಿಗೆ ಸಂಬಂಧಿಸಿದಂತೆ ಕಳೆದು ಮೂರು ವರ್ಷಗಳಿಂದ ಗ್ರಾಮ ಪಂಚಾಯಿತಿಗೆ ಮನವಿ ಮಾಡಿಕೊಂಡು ಬಂದಿದ್ದೇವೆ. ನಾವು ಎಷ್ಟು ಬಾರಿ ಮನವಿ ಮಾಡಿದರು ಕೂಡ ಅವರು ಶಾಶ್ವತ ಪರಿಹಾರ ಒದಗಿಸಿಕೊಡುವ ಕೆಲಸ ಮಾಡುತ್ತಿಲ್ಲ. ಹೀಗೆ ನಡೆದರೆ ಮುಂದಿನ ದಿನಗಳಲ್ಲಿ ಗ್ರಾಮ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ ಕಚೇರಿಗೆ ಬೀಗಮುದ್ರೆ ಹಾಕಿ ಹೋರಾಟ ನಡೆಸುತ್ತೇವೆ ಎಂದರು.

ವಿಶ್ವವಾಣಿ ವರದಿಗೆ ಎಚ್ಚತ್ತ ಅಧಿಕಾರಿ ತಂಡ

ನಮ್ಮ ವರದಿ ಪಲಶೃತಿ

ಮುದಗಲ್: ಪಟ್ಟಣ ಸಮೀಪದ ಹೂನೂರು, ರಾಮತ್ನಾಳ, ವಂದಾಲಿ ಗ್ರಾಮಗಳಲ್ಲಿ ಜೆಜೆಎಂ ಕಾಮಗಾರಿ ಅಪೂರ್ಣ ಸಾರ್ವಜನಿಕರಿಗೆ ತೊಂದರೆಯಾಗಿದೆ ಎಂಬ ಶೀರ್ಷಿಕೆ ಅಡಿ ಮಂಗಳವಾರ ವಿಶ್ವವಾಣಿ ಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸಲಾಗಿತ್ತು. ವರದಿಗೆ ಸ್ಪಂದಿಸಿದ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆಯ ಉಪ ವಿಭಾಗ ಲಿಂಗಸ್ಗೂರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಪ್ರಭು ಬೊಮ್ಮಗೊಂಡ ಬುಧುವಾರ ಜಲ್ ಜೀವನ್ ಮಿಷನ್ ಯೋಜನೆಯಡಿಯಲ್ಲಿ ನಡೆಯುವ ಹೂನೂರು, ವಂದಾಲಿ, ರಾಮತ್ನಾಳ, ಸೇರಿದಂತೆ 12 ಕಾಮಗಾರಿ ನೆಡೆಯುವ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಿದರು. ಈ ಕೂಡಲೇ ಗುತ್ತಿಗೆದಾರರು ಕಾಂಕ್ರೀಟ್ ರಸ್ತೆ ಸೇರಿದಂತೆ ಎಲ್ಲಾ ರೀತಿಯ ಕಾಮಗಾರಿಗಳನ್ನು ಬೇಗ ಬೇಗ ಮುಗಿಸಿ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಒಂದು ವೇಳೆ ನಿರ್ಲಕ್ಷ್ಯವಹಿಸಿದರೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಗುತ್ತಿಗೆದಾರರಿಗೆ ಖಡಕ್ ಸೂಚನೆ ನೀಡಿದರು. ಈ ವೇಳೆ ಇಲಾಖೆ ಅಧಿಕಾರಿಗಳಾದ ಮಹಾದೇವಪ್ಪ, ಕಲ್ಲಮೇಶ ಉಪಸ್ಥಿತರಿದ್ದರು.

ವಿಶ್ವವಾಣಿ

ಕಾಮಗಾರಿ ಅಪೂರ್ಣ ಗ್ರಾಮಸ್ಥರು ಆಕ್ರೋಶ

ಮುದಗಲ್: ಪಟ್ಟಣ ಸಮೀಪದ ಹೂನೂರು, ರಾಮತ್ನಾಳ, ವಂದಾಲಿ ಗ್ರಾಮದಲ್ಲಿ ಜೆಜೆಎಂ ಕಾಮಗಾರಿ ಅಪೂರ್ಣವಾದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಸಂ ಚಾರ ಮಾಡಲು ತು ಂಬಾ ತೊಂದರ ೆಯಾಗಿದೆ ಎಂದು ಗ್ರಾಮಸ್ಥರು ಆರೋಪಿಸಿದರು.

ಕುಡಿಯುವ ನೀರು ಹಾಗೂ ನೈರ್ಮಲ್ಯ ಲಿಂಗಸುಗೂರ ಉಪವಿಭಾಗ ಇಲಾಖೆಯಿಂದ ಜಲ ಜೀವನ್ ಮಿಷನ್ ಯೋಜನೆಯಡಿ ಮನೆ ಮನೆಗೆ ನೀರು ಒದಗಿಸುವ ಸಲುವಾಗಿ ಹೂನೂರು, ರಾಮತ್ನಾಳ, ವಂದಾಲಿ, ಗ್ರಾಮಗಳಲ್ಲಿ ಈ ಕಾಮಗಾರಿ ನಡೆದಿದೆ ಗುತ್ತಿಗೆದಾರ ಅರ್ಧ ಕಾಮಗಾರಿ ಮಾಡಿರುವದರಿಂದ ಗ್ರಾಮಗಳಲ್ಲಿ ಸಂಚಾರ ಮಾಡಲು ತುಂಬಾ ತೊಂದರೆ ಅನುಭವಿಸಬೇಕಾಗಿದೆ. ಕುಡಿಯುವ ನೀರಿನ ಪೈಪ್ ಲೈನ್ ಹಾಕಲು ತಗ್ಗುಗಳು ತಗೆದು ಹಾಗೆ ಬಿಟ್ಟಿರುವದರಿಂದ ಚರಂಡಿ ನೀರು ನಿಂತು ಮಲಿನವಾಗಿ ಸೊಳ್ಳೆಗಳು ಹೆಚ್ಚಾಗಿ ಜನರಿಗೆ ಡೆಂಗ್ಯೂ ಮಲೇರಿಯಾ ಸೇರಿದಂತೆ ವಿವಿಧ ರೋಗಗಳಿಗೆ ತುತ್ತಾಗುತ್ತಿದ್ದಾರೆ ಆದರೆ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಕೂಡ ಯಾವುದೇ ಗ್ರಾಮದಲ್ಲಿ ಫಾಗಿಂಗ್ ಮಾಡಿಲ್ಲ ಎಂದು ಜನರು ಆರೋಪಿಸಿದರು. ಪೈಪ್ ಲೈನ್ ಹಾಕಿದ ನಂತರ ಸಿಸಿ ರಸ್ತೆ ಮಾಡದೆ ಇರುವದರಿಂದ ಸುಮಾರು ಜನರು ಬಿದ್ದು ಗಾಯಗಳು ಮಾಡಿಕೊಂಡಿರುವ ಉದಾಹರಣೆ ಇವೆ ಎಂದು ಗ್ರಾಮಸ್ಥರು ತಿಳಿಸಿದರು.

ರಾಮತ್ನಾಳ ಗ್ರಾಮದಲ್ಲಿ ಕಾಮಗಾರಿ ಮಾಡುವಾಗ ಕುಡಿಯುವ ನೀರಿನ ಪೈಪ್ ಲೈನ್ ಹೊಡೆಯದಿರುವುದರಿಂದ ಕಲುಷಿತ ನೀರು ಗ್ರಾಮದಲ್ಲಿ ಸರಬರಾಜು ಆಗುತ್ತಿದೆ ಸಮಸ್ಯೆ ಕುರಿತು ಜೆಜೆಎಂ ಕಾಮಗಾರಿ ಮಾಡುವತ್ತಿರುವ ಗುತ್ತಿಗೆದಾರನ ಗಮನಕ್ಕೆ ತೊಂದರೆ ಸಾರ್ವಜನಿಕರ ಉಡಾಫೆ ಉತ್ತರ ನೀಡುತ್ತಿದ್ದಾನೆ ಎಂದು ಗಂಭೀರ ಆರೋಪಿಸಿದರು. ಈ ಕೂಡಲೇ ಸಂಬಂಧಪಟ್ಟ ಕುಡಿಯುವ ನೀರು ಮತ್ತು ನೈರ್ಮಲ್ಯ ಲಿಂಗಸುಗೂರ ಉಪ ವಿಭಾಗ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಗುತ್ತಿಗೆದಾರನ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯ ಮಾಡಿದರು.

ಮುದಗಲ್ ಪಟ್ಟಣದ ಗ್ರಾಮಗಳಲ್ಲಿ ಅಪೂರ್ಣ ಕಾಮಗಾರಿಗಳ ಸ್ಥಳಗಳನ್ನು ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸುತ್ತಿರುವುದು.

ಮಕ್ಕಳ ಉತ್ತಮ ಭವಿಷ್ಯ ಗುರುಗಳ ಪಾತ್ರ ಅಪಾರ

ಕುಷ್ಟಗಿ: ವಿದ್ಯಾರ್ಥಿಗಳು ತಮ್ಮ ಭವಿಷ್ಯ ಕಟ್ಟಿಕೊಳ್ಳುಲು ಶಾಲಾ ಮತ್ತು ಕಾಲೇಜಿನಲ್ಲಿ ಗುರುಗಳು ಹೇಳಿದ ಪಾಠವನ್ನು ಚೆನ್ನಾಗಿ ಕಲಿತು ಪೋಷಕರ ಕೀರ್ತಿ, ಗುರುಗಳ ಕೀರ್ತಿ ತರುವಲ್ಲಿ ಯಶಸ್ವಿಯಾಗಿ ತಮ್ಮ ಜೀವನದಲ್ಲಿ ಸಾಧನೆ ಮಾಡುವ ಮೂಲಕ ಸಾಧನೆ ಶಿಖರವಾಗಬೇಕು ಎಂದು ಶಾಸಕ ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಹೇಳಿದರು. ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜು, ಕುಷ್ಟಗಿ 2023-24ನೇ ಸಾಲಿನ ಪದವಿ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಸಾಂಸ್ಕೃತಿಕ, ಕ್ರೀಡೆ, ರೆಡ್ ಕ್ರಾಸ್, ಎನ್,ಎಸ್.ಎಸ್. ಮತ್ತು ಸ್ಕೌಟ್ ಗೈಡ್ ಚಟುವಟಿಕೆಗಳ ಸಮಾರೋಪ ಸಮಾರಂಭ ಕಾರ್ಯಕ್ರಮದ ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಪೋಷಕರು ಕಷ್ಟಪಟ್ಟು ನಮಗೆ ಶಿಕ್ಷಣ ಕಲಿಸುತ್ತಾರೆ ಅದರಂತೆ ಕಾಲೇಜಿನಲ್ಲಿ ಗುರುಗಳು ಎಲ್ಲಾ ವಿದ್ಯಾರ್ಥಿಗಳನ್ನು ಸಮಾನ ರೀತಿಯಲ್ಲಿ ನೋಡಿಕೊಂಡು ಪ್ರತಿಯೊಬ್ಬ ವಿದ್ಯಾರ್ಥಿಗೆ ವಿದ್ಯಾಭ್ಯಾಸವನ್ನು ಕಲಿಸುತ್ತಾರೆ ಗುರುವಿನ ಮಾರ್ಗದ ಅರಿವಿನೊಂದಿಗೆ ವಿದ್ಯಾರ್ಥಿಗಳಾದ ನಾವುಗಳು ನಮ್ಮ ಜೀವನದ ಉತ್ತಮ ಭವಿಷ್ಯಕ್ಕಾಗಿ ತಂದೆ ತಾಯಿಗಳ ಆಸೆಯನ್ನು ಈಡೇರಿಸಲು ಸಾಧನೆಯ ಶಿಖರವನ್ನು ಏರಿ ಕಾಲೇಜಿಗೆ ಕೀರ್ತಿ ತರಬೇಕು ಎಂದು ಹೇಳಿದರು. ಈ ವೇಳೆ ಉಪನ್ಯಾಸಕ ಪ್ರವೀಣ ಪಾಟೀಲ ಉಪನ್ಯಾಸವನ್ನು ನೀಡಿದರು. ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಎಸ್.ವ್ಹಿ.ಡಾಣಿ, ಮಾಜಿ ಪುರಸಭೆ ಅಧ್ಯಕ್ಷ ಹಾಗೂ ಹಾಲಿ ಪುರಸಭೆ ಸದಸ್ಯ ಜಿ.ಕೆ.ಹಿರೇಮಠ, ಶಶಿಧರ ಕವಲಿ ಸೇರಿದಂತೆ ಕಾಲೇಜಿನ ಶಿಕ್ಷಕರು, ಶಿಕ್ಷಕಿಯರು, ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಇದ್ದರು.

ಸಮಾಚಾರ ಸಣ್ಣದಲ್ಲ

ಜನಸ್ಪಂದನ ಸಭೆ ಆ.16 ರಂದು

ಬಳ್ಳಾರಿ: ಜಿಲ್ಲಾ ಮಟ್ಟದ "ಜನಸ್ಪಂದನ" ಕಾರ್ಯಕ್ರಮವನ್ನು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅಧ್ಯಕ್ಷತೆಯಲ್ಲಿ ಆ.16 ರಂದು ಬೆಳಗ್ಗೆ 10.30 ಗಂಟೆಗೆ ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಅವರು ತಿಳಿಸಿದ್ದಾರೆ. ಸಾರ್ವಜನಿಕರು ಸರಕಾರಿ ಕೆಲಸಕ್ಕೆ ಸಂಬಂಧಿಸಿದಂತೆ ತಮ್ಮ ಅಹವಾಲುಗಳೇನಾದರು ಇದ್ದಲ್ಲಿ ಆ.16 ರಂದು ನಡೆಯುವ "ಜನಸ್ಪಂದನ" ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಅಹವಾಲುಗಳನ್ನು ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ಗ್ರಾಹಕರ ಕೊರತೆ ಸಭೆ ಇಂದು

ಬಳ್ಳಾರಿ: ಜಿಲ್ಲೆಯ ಹೆಚ್‌ಟಿ ಮತ್ತು ಇಹೆಚ್‌ಟಿ ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ ಜೆಸ್ಕಾಂನ ಕಾರ್ಯ ಮತ್ತು ಪಾಲನೆ ವಲಯ ಮುಖ್ಯ ಅಭಿಯಂತರರ ಅಧ್ಯಕ್ಷತೆಯಲ್ಲಿ ಆ.8 ರಂದು ವಲಯ ಕಚೇರಿಯ ಮೊದಲ ಮಹಡಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 11 ಗಂಟೆಗೆ ಸಭೆ ನಡೆಯಲಿದೆ. ಜೆಸ್ಕಾಂ ವಿಭಾಗ ವ್ಯಾಪ್ತಿಯ ಬಳ್ಳಾರಿ ನಗರ, ಬಳ್ಳಾರಿ ಗ್ರಾಮೀಣ, ಸಿರುಗುಪ್ಪ, ಸಂಡೂರು ನಗರ, ಉಪವಿಭಾಗ 1 ಮತ್ತು 2 ರಲ್ಲಿ ಒಳಪಡುವ ಎಚ್‌ಟಿ ಮತ್ತು ಇಹೆಚ್‌ಟಿ ವಿದ್ಯುತ್ ಗ್ರಾಹಕರು ಭಾಗವಹಿಸಿ ಸಭೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜೆಸ್ಕಾಂನ ಕಾರ್ಯ ಮತ್ತು ಪಾಲನಾ ವೃತ್ತದ ಅಧೀಕ್ಷಕ ಅಭಿಯಂತರರು ತಿಳಿಸಿದ್ದಾರೆ.

ಸಚಿವರ ಪ್ರವಾಸ ಕಾರ್ಯಕ್ರಮ ಆ.16 ಕ್ಕೆ

ಬಳ್ಳಾರಿ: ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಆ.16 ಮತ್ತು 17 ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು. ಆ.16 ರಂದು ಬೆಳಗ್ಗೆ 9.30 ಗಂಟೆಗೆ ಹೊಸಪೇಟೆಯಿಂದ ಹೊರಟು, ಬೆಳಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಸಭಾ ಭವನದಲ್ಲಿ ಏರ್ಪಡಿಸಿರುವ ಜನತಾ ದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 3 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಜಿಲ್ಲಾ ಪಂಚಾಯಿತಿ ನಜೀರ್‌ಸಾಬ್ ಸಭಾಂಗಣದಲ್ಲಿ ಜಿಲ್ಲೆಯ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಬಳಿಕ ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡುವರು. ಆ.17 ರಂದು ಬೆಳಗ್ಗೆ 10 ಗಂಟೆಗೆ ಪಕ್ಷದ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಬೆಳಿಗ್ಗೆ 11.30 ಗಂಟೆಗೆ ಬಳ್ಳಾರಿಯಿಂದ ಕೇಂದ್ರಸ್ಥಾನ ಬೆಂಗಳೂರಿಗೆ ಪ್ರಯಾಣ ಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿಯವರು ತಿಳಿಸಿದ್ದಾರೆ.

ಸ್ವಾತಂತ್ರ್ಯೋತ್ಸವ: ದೀಪಾಲಂಕಾರ ವ್ಯವಸ್ಥೆ

ಬಳ್ಳಾರಿ: ಜಿಲ್ಲೆಯಲ್ಲಿ 78ನೇ ಸ್ವಾತಂತ್ರ್ಯೋತ್ಸವ ನಿಮಿತ್ತ ಹಿಂದೂ ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಧಾರ್ಮಿಕ ಸಂಸ್ಥೆಗಳು ಹಾಗೂ ದೇವಸ್ಥಾನಗಳಲ್ಲಿ ಆ.14 ಮತ್ತು ಆ.15ರಂದು ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಹಾಗೂ ಆ.15ರಂದು ವಿಶೇಷ ಪೂಜೆ, ಪ್ರಾರ್ಥನೆ ವ್ಯವಸ್ಥೆ ಕೈಗೊಳ್ಳಬೇಕು ಎಂದು ಹಿಂದೂ ಧಾರ್ಮಿಕ ದತ್ತಿಗಳ ಇಲಾಖೆ ಸಹಾಯಕ ಆಯುಕ್ತ ಗಂಗಾಧರಪ್ಪ ತಿಳಿಸಿದ್ದಾರೆ.

ಡಿ.ದೇವರಾಜ ಅರಸು ಜನ್ಮದಿನ ಸಭೆ ನಾಳೆ

ಬಳ್ಳಾರಿ: ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ 109ನೇ ಜನ್ಮದಿನ ಅರ್ಥಪೂರ್ಣ ಆಚರಿಸುವ ಸಲುವಾಗಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಗಸ್ಟ್ 8 ರಂದು ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ. ಅಂದು ಸಂಜೆ 4.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ ತಿಳಿಸಿದ್ದಾರೆ.

ವಿ+ ಸೋಮವಾರ

{ಸಿ.ಟಿ ರವಿ} ವಿಧಾನ ಪರಿಷತ್ ಸದಸ್ಯ

ನನ್ನ ವಿರುದ್ಧ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲ ಎಂದು ಸಿದ್ದರಾಮಯ್ಯ ಹೇಳುತ್ತಾರೆ, ಆದರೆ, ಮುಡಾದಲ್ಲಿ ನಡೆದಿರೋದು, ವಾಲ್ಮೀಕಿ ನಿಗಮದ ಹಣ ಅಕ್ರಮವಾಗಿ ವರ್ಗಾವಣೆ ಆಗಿರುವುದು ಕಪ್ಪು ಚುಕ್ಕೆ ಅಲ್ವಾ?.

ಶಾಸಕ ಎಚ್.ಆರ್. ಗವಿಯಪ್ಪ ರಿಗೆ ಶಿಕ್ಷಕರ ಸಂಘ ಮನವಿ ಸಲ್ಲಿಕೆ

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಿದ್ದುಪಡಿ ವಿರೋಧಿಸಿ ಪ್ರತಿಭಟನೆ

ಹೊಸಪೇಟೆ: 2017ರ ಸಿ ಅಂಡ್ ಆರ್ ನಿಯಮದ ಜಾರಿಯಿಂದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಆಗಿರುವ ಅನ್ಯಾಯದ ವಿರುದ್ಧ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕದ ಪದಾಧಿಕಾರಿಗಳು, ಮುಖಂಡರು ನಗರದಲ್ಲಿ ಪ್ರತಿಭಟನೆ ನಡೆಸಿದರು.

> **2017ರ ಸಿ ಅಂಡ್ ಆರ್ ನಿಯಮ ಜಾರಿಯಾದ ನಂತರ ಯಾವುದೇ ಕಾರಣಕ್ಕೂ ಪೂರ್ವಾನ್ವಯಗೊಳಿಸಬಾರದು. ಸರಕಾರ 2017ರ ನಂತರ ನೇಮಕಾತಿಗಳಿಗೆ ಈ ನಿಯಮ ಅನ್ವಯಿಸಿದರೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ನ್ಯಾಯ ದೊರಕಿದಂತಾಗುತ್ತದೆ. ಅಲ್ಲದೇ ಪ್ರಾಥಮಿಕ ಶಾಲಾ ಶಿಕ್ಷಕರು ವಿದ್ಯಾರ್ಹತೆ ಹಾಗೂ ಸೇವಾ ಹಿರಿತನ ಹೊಂದಿದ್ದರು ಬಡ್ತಿಗೆ ಪರಿಗಣಿಸದೆ 1 ರಿಂದ 5ಕ್ಕೆ ಹಿಂಬಡ್ತಿ ನೀಡಿರುವುದು ನ್ಯಾಯ ಸಮ್ಮತವಾಗಿರುವುದಿಲ್ಲ.**
> - ಮಲ್ಲಯ್ಯ, ಪ್ರದಾನ ಕಾರ್ಯದರ್ಶಿ

ನಗರದ ವಿವಿಧ ರಸ್ತೆಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದ ಬಳಿಕ ಶಾಸಕ ಎಚ್.ಆರ್. ಗವಿಯಪ್ಪ ಮೂಲಕ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸಿದರು. ಶಿಕ್ಷಕರಿಗೆ ಆಗಿರುವ ಅನ್ಯಾಯ ಸರಿಪಡಿಸಬೇಕು ಎಂದು ಒತ್ತಾಯಿಸಿ ತಹಸೀಲ್ದಾರ್ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹೋರಾಟದ ನಿಲುವಳಿ ಪತ್ರದ ಮನವಿ ಸಲ್ಲಿಸಲಾಯಿತು.

ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಬಸವರಾಜ ಮಾತನಾಡಿ, ಸರಕಾರ 2017ರಲ್ಲಿ ಸಿ ಅಂಡ್ ಆರ್ ನಿಯಮ ತಿದ್ದುಪಡಿ ಮಾಡಿ 2016ಕ್ಕಿಂತ ಪೂರ್ವದಲ್ಲಿ ನೇಮಕಾತಿ ಹೊಂದಿದ ಶಿಕ್ಷಕರಿಗೂ ಅನ್ವಯ ಆಗಿದ್ದರಿಂದ ಪ್ರಾಥಮಿಕ ಶಾಲಾ ಶಿಕ್ಷಕರು ಅಗತ್ಯ ವಿದ್ಯಾರ್ಹತೆ ಹೊಂದಿದ್ದರು ಪ್ರೌಢ ಶಾಲಾ ಶಿಕ್ಷಕರ ಹುದ್ದೆಗೆ ಹಾಗೂ ಸೇವಾನುಭವ ಹಿರಿತನ ಇದ್ದರೂ ಬಡ್ತಿ ಮುಖ್ಯಗುರುಗಳು, ಹಿರಿಯ ಬಡ್ತಿ ಮುಖ್ಯಗುರುಗಳ ಹುದ್ದೆಗೆ ಬಡ್ತಿ ಹೊಂದದೆ ನಿವೃತ್ತಿಯಾಗುತ್ತಿರುವುದು ತುಂಬ ದುಖಃದ ಸಂಗತಿಯಾಗಿದೆ ಎಂದರು.

ಈ ಕುರಿತು ಹಲವಾರು ಬಾರಿ ಸಂಘಟನೆಯಿಂದ ಮನವಿ ಸಲ್ಲಿಸಿದ್ದರೂ ಸರಕಾರ ಸ್ಪಂದಿಸದಿರುವುದು ತರಗತಿಯಲ್ಲಿ ಬೋಧಿಸಬೇಕಾದ ಶಿಕ್ಷಕರು ಬೀದಿಗಿಳಿಯುವ ಪರಿಸ್ಥಿತಿ ಬಂದಿದೆ ಎಂಧು ಪ್ರತಿಭಟನಾ ನಿರತರು ದೂರಿದರು.

ಶಿಕ್ಷಕರ ವಿದ್ಯಾರ್ಹತೆ ಸೇವಾ ಅನುಭವ ಪರಿಗಣಿಸಿ ಸೇವಾ ಜೇಷ್ಠತೆ ಆಧಾರದ ಮೇಲೆ ಬಡ್ತಿಗೆ ಪರಿಗಣಿಸಬೇಕು. ಈ ಎಲ್ಲ ಬೇಡಿಕೆಗಳು ನ್ಯಾಯುತವಾಗಿದ್ದು, ಸದಾ ಶಿಕ್ಷಕರ ಮನವಿಗೆ ಸ್ಪಂಧಿಸುತ್ತಿರುವ ಸರಕಾರ ಈ ಬೇಡಿಕೆಗಳನ್ನು ಈಡೇರಿಸಿ ನಮಗೆ ನ್ಯಾಯ ಒದಗಿಸಬೇಕೆಂದು ಪ್ರತಿಭಟನಾಕಾರರು ಮನವಿ ಮಾಡಿದರು.

ಸಂಘಟನೆ ಪದಾಧಿಕಾರಿಗಳಾದ ಮಾರ್ಗದಪ್ಪ, ಎ. ಕುಬೇರ್ ಆಚಾರಿ, ಆರ್.ಸುಧಾದೇವಿ, ಜಾಕೀರ್ ಹುಸೇನ್, ದ್ಯಾಮಾನಾಯ್ಕ್, ಹೇಮರೆಡ್ಡಿ, ಬಸವನಗೌಡ, ಪರಶುರಾಮ, ನೀಲಮ್ಮ ಗಚ್ಚಿನಮಠ, ಎಚ್.ಎಂ. ಗುರುಬಸವರಾಜ್, ಕಡ್ಲಿ ವೀರಭದ್ರೇಶ್, ಪ್ರಕಾಶ, ರಿಜ್ವಾನ ರಶೀದಾ ಇತರರಿದ್ದರು.

ತಹಸೀಲ್ದಾರ್ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹೋರಾಟದ ನಿಲುವಳಿ ಪತ್ರದ ಮನವಿ ಸಲ್ಲಿಸಲಾಯಿತು.

ಸಾಮೂಹಿಕ ಷಷ್ಠಿಪೂರ್ತಿ ಶಾಂತಿ ಆಗಸ್ಟ್ 11ರಂದು

ನಗರದ ಸುದ್ದಿಗೋಷ್ಠಿಯಲ್ಲಿ ಪ್ರಭುಕುಮಾರ್ ಮಾತನಾಡಿದರು.

ಹೊಸಪೇಟೆ: ಸ್ಥಳೀಯ ಶ್ರೀಉತ್ತರಾಧಿ ಮಠದ ಪ್ರಮೋದಾತ್ಮ ಸಭಾ ಭವನದಲ್ಲಿ ಆ.10 ಹಾಗೂ 11ರಂದು ಪ್ರತಿಭಾ ಪುರಸ್ಕಾರ ಹಾಗೂ ವಿಪ್ರ ಬಾಂಧವರಿಗೆ ಸಾಮೂಹಿಕ ಷಷ್ಠಿಪೂರ್ತಿ ಶಾಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂಧು ವಿಪ್ರ ಅಡುಗೆದಾರರು ಹಾಗೂ ಸಹಾಯಕರ ಕ್ಷೇಮಾಬಿವೃದ್ಧಿ ಸಂಘದ ಕಾರ್ಯಾಧ್ಯಕ್ಷ ನರಸಿಂಹಮೂರ್ತಿ ಹಾಗೂ ಅಧ್ಯಕ್ಷ ಎಂ.ಎನ್. ಪ್ರಭುಕುಮಾರ್ ತಿಳಿಸಿದರು.

ನಗರದಲ್ಲಿ ಕರೆದಿದ್ದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಆ. 10ರಂದು ಬೆಳಗ್ಗೆ ಶ್ರಿಮಾತಾ ಅನ್ನಪೂರ್ಣೇಶ್ವರಿ ದೇವಿಗೆ ಕುಂಕುಮಾರ್ಚನೆ, ಭಾರತ ಮಾತೆಗೆ ಪೂಜೆ, ಸಂಘದ ಧ್ವಜಾರೋಹಣ ನೆರವೇರಿಸಲಾಗುವುದು ಎಂದರು. ನಗರದ ಶ್ರೀವಡಕರಾಯ ದೇವಸ್ಥಾನದಿಂದ ಕಾರ್ಯಕ್ರಮದ ಸ್ಥಳದ ವರೆಗೆ ಅನ್ನಪೂರ್ಣೇಶ್ವರಿ ದೇವಿಯ ಮೆರವಣಿಗೆ ನಡೆಯಲಿದೆ. ಸಂಜೆ ಪ್ರತಿಭಾ ಪುರಸ್ಕಾರ ಜರುಗಲಿದ್ದು ನಂತರ ವೇಣುಗೋಪಾಲ್ ವರಪ್ ಅವರಿಂದ ದಾಸವಾಣಿ ನಡೆಯಲಿದೆ ಎಂದರು. ಆ. 11ರಂದು ಬೆಳಗ್ಗೆ ಹೋಮ, ಶಾಂತಿ ಪೂಜೆ, ದಂಪತಿಗಳಿಗೆ ತುಲಾಭಾರ, ಸನ್ಮಾನ ನಡೆಯಲಿದೆ. ಭಜನಾ ಮಂಡಳಿಗಳಿಂದ ಭಜನೆ ಜರುಗಲಿದೆ. ವಿಷ್ಣುಸಹಸ್ರ ನಾಮ ಪಾರಾಯಣ, ಗಂಗಾಖೇಡ ವರದೇಂದ್ರ ಅವರಿಂದ ದಾಸವಾಣಿ ನಡೆಯಲಿದೆ. 11ಗಂಟೆಗೆ ವೇದಿಕೆ ಕಾರ್ಯಕ್ರಮಕ್ಕೆ ಸಂಸದ ತುಕರಾಂ ಚಾಲನೆ ನೀಡಲಿದ್ದಾರೆ. ಶಾಸಕ ಗವಿಯಪ್ಪ, ಹುಡಾ ಅಧ್ಯಕ್ಷ ಇಮಾಮ್ ನಿಯಾಜಿ, ಸಮಾಜ ಸೇವಕರಾದ ರಾಣ ಸಂಯುಕ್ತಾ, ಸಿದ್ಧಾರ್ಥ ಸಿಂಗ್ ಇತರರು ಭಾಗವಹಿಸಲಿದ್ದಾರೆ ಎಂದು ಹೇಳಿದರು. ಸಂಘದಿಂದ ಅಡುಗೆದಾರರು, ಸಹಾಯಕರಿಗೆ ನಿವೇಶ, ಮನೆಗಳನ್ನು ನೀಡುವಂತೆ ಈಗಾಗಲೇ ಶಾಸಕರಿಗೆ ಮನವಿ ಸಲ್ಲಿಸಲಾಗಿದ್ದು ಕಾರ್ಯಕ್ರಮದಲ್ಲಿಯೂ ಸಂಘದ ಇತರೆ ಬೇಡಿಕೆಗಳ ಮನವಿಯನ್ನು ಜನಪ್ರತಿನಿಧಿಗಳ ಮೂಲಕ ಸರಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರದಾನ ಕಾರ್ಯದರ್ಶಿ ಟಿ. ರಾಮಚಾರ್, ಖಜಾಂಚಿ ಸತ್ಯನಾರಾಯಣ, ಪದಾಧಿಕಾರಿಗಳಾದ ಸುರೇಶ್, ಎಸ್.ಎನ್. ಮುರಳಿ ಕೃಷ್ಣ, ಆರ್. ರಾಮಾಚಾರ್, ಅನಿಲ್, ಅಂಬರೀಶ್ ಇತರರಿದ್ದರು.

ದೇಶದ ಕಾನೂನು ಅರಿತು ಪಾಲಿಸಬೇಕು: ನ್ಯಾ. ಹೇಮಲತಾ ಹುಲ್ಲೂರ

ಜೇಸಿಸ್ ಶಾಲೆಯಲ್ಲಿ ಕಾನೂನು ಅರಿವು ನೆರವು

ಹೊಸಪೇಟೆ: ಭಾರತ ದೇಶದ ಪ್ರಜೆಗಳಾದ ನಾವು ನಮ್ಮ ದೇಶದ ಕಾನೂನನ್ನು ಅರಿತು ಅದನ್ನು ಪಾಲಿಸಬೇಕು ಎಂದು ಪ್ರದಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷೆ ಹೇಮಲತಾ ಬಿ. ಹುಲ್ಲೂರ ತಿಳಿಸಿದರು.

> **ಬಾಲ್ಯ ವಿವಾಹ ನಿಷೇಧ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ ಕಾಯ್ದೆ–2012ರ ಬಗ್ಗೆ ಅರಿಯಬೇಕು. ಹದಿಹರೆಯದವರಲ್ಲಿ ಆಕರ್ಷಣೆ ಸಹಜ. ತಂದೆ ತಾಯಿಯ ಗೌರವವನ್ನು ನೆನೆದು ಶ್ರದ್ಧೆಯಿಂದ ಓದುವ ಹವ್ಯಾಸ ಬೆಳೆಸಿಕೊಳ್ಳಿ.**
> -ಹೇಮಲತಾ ಬಿ. ಹುಲ್ಲೂರ, ಸಿವಿಲ್ ನ್ಯಾಯಾಧೀಶರು

ಸ್ಥಳೀಯ ಜೇಸಿಸ್ ಶಾಲೆಯಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ತಾ ಮತ್ತು ಸಾರ್ವನಿಕ ಸಂಪರ್ಕ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಬಾಲ್ಯ ವಿವಾಹ ನಿಷೇಧ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ ಕಾಯ್ದೆ–2012ರ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಮ್ಮ ಸಂವಿಧಾನ ಒದಗಿಸಿರುವ ಹಕ್ಕುಗಳಿಗೆ ಚ್ಯುತಿ ಬಂದರೆ ಸುಮ್ಮನೆ ಕೂರದೆ ಕಾನೂನಿನ ಸಹಾಯ ಪಡೆದುಕೊಳ್ಳಬೇಕು. ಕಾನೂನುಗಳು ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ ಎಂದರು.

ಪ್ರದಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಪ್ರಶಾಂತ್ ನಾಗಲಾಪುರ್ ಮಾತನಾಡಿ, ಹೈಕೋರ್ಟ್ ನಿರ್ದೇಶನದಂತೆ ರಾಜ್ಯದ ಎಲ್ಲಾ ತಾಲೂಕುಗಳಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ರೂಪಿಸಿ ಸಾರ್ವಜನಿಕರಿಗೆ ದೇಶದಲ್ಲಿರುವ ಕಾನೂನನ್ನು ತಿಳಿಸಲು ಕಾನೂನು ಅರಿವು ನೆರವು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಮಕ್ಕಳು ಈ ಕಾನೂನುಗಳ ಬಗ್ಗೆ ಕಲಿತು ಸಾರ್ವಜನಿಕರಿಗೂ ಜಾಗೃತಿ ಮೂಡಿಸಲು ಪ್ರಯತ್ನಿಸಬೇಕು ಎಂದು ಹೇಳಿದರು.

ಈ ಸಂಧರ್ಭದಲ್ಲಿ ಜೇಸೀಸ್ ಶಾಲೆ ಮುಖ್ಯಶಿಕ್ಷಕ ಕೆ.ಬಿ.ಲಿಂಗಪ್ಪ, ನ್ಯಾಯಾಧೀಶ ಅಶೋಕ್ ಆರ್. ಎಚ್, ವಕೀಲರ ಸಂಘದ ಪ್ರದಾನ ಕಾರ್ಯದರ್ಶಿ ಪಿ. ಶ್ರೀನಿವಾಸಮೂರ್ತಿ, ಕಾನೂನು ಪರಿವೀಕ್ಷಣಾಧಿಕಾರಿ ಶ್ರೀಕಾಂತ್, ವಕೀಲರ ಸಂಘದ ಶ್ವೇತಾಂಭರಿ ಎಸ್.ಪಿ. ಹಾಗೂ ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮಕ್ಕಳನ್ನು ರಕ್ಷಿಸುವ ಕಾಯ್ದೆ–2012ರ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಅಧ್ಯಕ್ಷೆ ಹೇಮಲತಾ ಬಿ. ಹುಲ್ಲೂರ ಉದ್ಘಾಟಿಸಿದರು.

ವಿವಿಧ ಸಂಘಟನೆಗಳ ಮುಖಂಡರಿಂದ ಮನವಿ, ಸಲಹೆ

ಸ್ವಾತಂತ್ರ್ಯೋತ್ಸವದ ಪೂರ್ವಭಾವಿ ಸಭೆ

ಪಟ್ಟಣದ ತಾಲೂಕು ಕಚೇರಿಯಲ್ಲಿ 78ನೇ ಸ್ವತಂತ್ರ ದಿನಾಚರಣೆ ನಿಮಿತ್ತ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿತ್ತು.

ಸಂಡೂರು: ಶ್ರೀ ಛತ್ರಪತಿ ಶಿವಾಜಿ ವಿದ್ಯಾಮಂದಿರದ ಆವರಣದಲ್ಲಿ ಆ.15 ರಂದು ಬೆಳಗ್ಗೆ 9 ಗಂಟೆಗೆ ಧ್ವಜಾರೋಹಣ ನಡೆಯಲಿದೆ. ನಾಡಗೀತೆ, ರೈತಗೀತೆ, ರಾಷ್ಟ್ರಗೀತೆಗೆ ಸರ್ವರೂ ಎದ್ದು ನಿಂತು ಗೌರವವನ್ನು ಕಡ್ಡಾಯವಾಗಿ ಸಲ್ಲಿಸಬೇಕು, ಪಥ ಸಂಚಲನ ಕಾರ್ಯಕ್ರಮ ಆರಕ್ಷಕರು ನಡೆಸಿಕೊಡಲಿದ್ದಾರೆ ಎಂದು ತಹಸೀಲ್ದಾರ್ ಅನಿಲ್ ಕುಮಾರ್ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ 78ನೇ ಸ್ವತಂತ್ರ ದಿನಾಚರಣೆ ನಿಮಿತ್ತ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿತ್ತು.

ಪುರಸಭೆಯ ಮಾಜಿ ಉಪಾಧ್ಯಕ್ಷ ಕೆ.ವಿ. ಸುರೇಶ್ ಮಾತನಾಡಿ, ಮಳೆಗಾಲ ಹಿನ್ನೆಲೆ ಧ್ವಜಾರೋಹಣ ವೀಕ್ಷಣೆಗೆ ಆಗಮಿಸುವವರಿಗೆ ತೊಂದರೆಯಾಗದಂತೆ ಅಗತ್ಯ ವ್ಯವಸ್ಥೆ ಮಾಡಬೇಕು ಎಂದು ಮನವಿಮಾಡಿದರು. ರೈತ ಸಂಘದ ಉಪಾಧ್ಯಕ್ಷ ಎಂ.ಎಲ್.ಕೆ. ನಾಯ್ಡು ಮಾತನಾಡಿ, ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಚಿತ್ರೀಕರಣದ ತೋರಿಸುವುದರ ಮೂಲಕ ಸ್ವಚ್ಛತೆ ಕಾರ್ಯಕ್ರಮದ ಬಗ್ಗೆ ಜಾಗೃತಿ ಮೂಡಿಸಲು ಮನವಿ ಮಾಡಿದರು.

ರೈತ ಮುಖಂಡ ಶ್ರೀಪಾದ ಸ್ವಾಮಿ ಮಾತನಾಡಿ, 32 ರಿಂದ 35 ವರ್ಷಗಳ ಅಖಂಡ ಸೇವೆ ಸಲ್ಲಿಸಿದ ಡಾ. ರಾಮಶೆಟ್ಟಿ ಅವರಿಗೆ ಸನ್ಮಾನಿಸಲು ಮನವಿ ಮಾಡಿದರು. ರೈತ ಮುಖಂಡ ಸುಶೀಲಾನಗರದ ಧರ್ಮನಾಯ್ಕ ಮಾತನಾಡಿ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಜೇತರಾದ ಮಕ್ಕಳಿಗೆ ತಾರತಮ್ಯ ಮಾಡದೇ ಬಹುಮಾನಗಳನ್ನು ವಿತರಿಸಿ ಎಂದು ಸಲಹೆ ನೀಡಿದರು. ಅರಣ್ಯ ಇಲಾಖೆಯವರಿಂದ ಸಸಿ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲು ತಳವಾರು ಪರಶುರಾಮ ಮನವಿ ಮಾಡಿದರು.

28 ಇಲಾಖೆಗಳ ಪೈಕಿ 22 ಇಲಾಖೆಯವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು 6 ಇಲಾಖೆಯವರು ಗೈರು ಹಾಜರಾದರು. ಕೆ.ಆರ್. ಕುಮಾರಸ್ವಾಮಿ ಮಾತನಾಡಿ, ಪ್ಲಾಸ್ಟಿಕ್ ಬಾವುಟಗಳು ನಿಷೇಧವಿದ್ದರು ಜಾರಿಗೆ ಬಂದಿಲ್ಲ ಕನಿಷ್ಠ ಪಕ್ಷ ಈ ವರ್ಷವಾದರೂ ಪ್ಲಾಸ್ಟಿಕ್ ಬಾವುಟಗಳನ್ನು ನಿಷೇಧ ಮಾಡಲು ಕ್ರಮ ಕೈಗೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಎನ್.ಕೆ. ವೆಂಕಟೇಶ್, ಹನುಮಪ್ಪನಾಯಕ, ಪ್ರಭುದೇವ, ದಾದಾಖಲಂದರ್. ಆರಕ್ಷಕ ನಾಗರಾಜ್, ರವಿಕುಮಾರ್ ಕಡ್ಲೆಬಾಳು, ಐ.ಆರ್. ಅಕ್ಕಿ, ಕಾರ್ಯನಿರ್ವಾಹಕ ಅಧಿಕಾರಿ ಎಚ್. ಷಡಾಕ್ಷರಿ. ವಲೀಬಾಷಾ ಸೇರಿದಂತೆ ವಿವಿಧ ಇಲಾಖಾಧಿಕಾರಿಗಳು ಇದ್ದರು.

ವಿಜಯನಗರ ಜಿಲ್ಲಾ ಪೊಲೀಸ್ ಇಲಾಖೆ ಅತ್ಯುತ್ತಮ ಕಾರ್ಯ
ಎಸ್‌ಪಿ- ತಂಡದ ಬಗ್ಗೆ ಗೃಹ ಸಚಿವ ಡಾ.ಪರಮೇಶ್ವರ್ ಶ್ಲಾಘನೆ

ಪೊಲೀಸ್ ಪೆರೇಡ್ ಮೈದಾನ ಲೋಕಾರ್ಪಣೆ

ಹೊಸಪೇಟೆ: ನೂತನ ವಿಜಯನಗರ ಜಿಲ್ಲಾ ಪೊಲೀಸ್ ಇಲಾಖೆಯಿಂದ ವಿಜಯನಗರ ಜಿಲ್ಲೆಯಲ್ಲಿ ಪೊಲೀಸ್ ಅಧೀಕ್ಷಕರ ಕಚೇರಿ, ಡಿಎಆರ್ ಘಟಕದ ಆಡಳಿತ ಕಟ್ಟಡ, ಪೇರೆಡ್ ಮೈದಾನ ನಿರ್ಮಾಣ ಸೇರಿದಂತೆ ಅತ್ಯುತ್ತಮ ಕಾರ್ಯಗಳಾಗುತ್ತಿವೆ ಎಂದು ಗೃಹ ಸಚಿವರಾದ ಡಾ.ಜಿ.ಪರಮೇಶ್ವರ್ ಹೇಳಿದರು.

> **ಯಾವುದೇ ಇರಲಿ ಹೊಸ ಜಿಲ್ಲೆಯಾಗಿ ರಚನೆಯಾದಾಗ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಒಂದಷ್ಟು ಸಮಯ ಹಿಡಿಯುತ್ತದೆ. ಆದರೆ, ಒಂದು ವರ್ಷ 10 ತಿಂಗಳಿನಲ್ಲಿ ವಿಜಯನಗರ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗಿರುವುದು ಒಳ್ಳೆಯ ಬೆಳವಣಿಗೆ. ಈ ದಿಶೆಯಲ್ಲಿ ಸ್ಥಳೀಯ ಶಾಸಕರಾದ ಎಚ್.ಆರ್.ಗವಿಯಪ್ಪ ಅವರ ಶ್ರಮ, ಬದ್ಧತೆಯು ಶ್ಲಾಘನೀಯವಾದುದು.**
> - ಡಾ.ಜಿ.ಪರಮೇಶ್ವರ್, ಸಚಿವ

2021–22ನೇ ಸಾಲಿನ ವಿಶೇಷ ಅನುದಾನ ಪ್ರಯೋಜನೆ ಅಡಿ ಹೊಸಪೇಟೆ ನಗರದಲ್ಲಿ ಮಂಜೂರಾದ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಕಚೇರಿಯ ನೂತನ ಕಟ್ಟಡವನ್ನು ಹೊಸಪೇಟೆಯ ಡಿಎಆರ್ ಕಟ್ಟಡ ಪರೇಡ್ ಗ್ರೌಂಡ್ ಆವರಣದಲ್ಲಿ ಲೋಕಾರ್ಪಣೆಗೊಳಿಸಿ ಮಾತನಾಡಿದರು.

ನೂತನ ಜಿಲ್ಲೆಯಾಗಿ ಕೆಲವೇ ವರ್ಷಗಳಲ್ಲಿ ವಿಜಯನಗರ ಜಿಲ್ಲೆಯಲ್ಲಿ ಜಿಲ್ಲಾ ಪೊಲೀಸ್ ಇಲಾಖೆಯು ಸುಸಜ್ಜಿತವಾಗಿ ಬೃಹತ್ ವಿಶಾಲ ಆವರಣದಲ್ಲಿ ನಿರ್ಮಾಣವಾಗಿರುವುದು ಸಂತಸದ ಸಂಗತಿ. ಈ ದಿಶೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು ಬಿ.ಎಲ್. ಮತ್ತು ಅವರ ತಂಡದವರ ಕಾರ್ಯವೈಖರಿಯು ಶ್ಲಾಘನೀಯವಾದುದು ಎಂದರು.

ಇಡೀ ದೇಶದಲ್ಲಿ ಉತ್ತಮ ಎಂದು ಕರ್ನಾಟಕ ಪೊಲೀಸ್ ಇಲಾಖೆ ಬಿರುದು ಪಡೆದುಕೊಂಡಿದೆ. ಕರ್ನಾಟಕ ರಾಜ್ಯದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರು.

ಜಿಲ್ಲಾ ಸಶಸ್ತ್ರ ಮೀಸಲು ಪಡೆ ಕಚೇರಿಯ ನೂತನ ಕಟ್ಟಡವನ್ನು ಹೊಸಪೇಟೆಯ ಡಿಎಆರ್ ಕಟ್ಟಡ ಪರೇಡ್ ಗ್ರೌಂಡ್ ಆವರಣದಲ್ಲಿ ಸಚಿವ ಡಾ.ಜಿ.ಪರಮೇಶ್ವರ್ ಲೋಕಾರ್ಪಣೆಗೊಳಿಸಿದರು.

ಮೊಬೈಲ್ ಹಾವಳಿಗೆ ಜಾನಪದ ಕಲೆ ಮಾಯ

ಹೂವಿನಹಡಗಲಿ: ಯುವಜನತೆ ಗ್ರಾಮೀಣ ಭಾಗದ ಜಾನಪದ ಕಲೆಗಳನ್ನು ಉಳಿಸಿ ಬೆಳೆಸಲು ಮುಂದಾಗಬೇಕು ಇಲ್ಲದಿದ್ದರೆ ಮೊಬೈಲ್ ಹೆಚ್ಚು ಬಳಕೆಯಿಂದ ನಮ್ಮ ಪೂರ್ವಜರು ಉಳಿಸಿಕೊಂಡು ಬಂದಿರುವ ಜಾನಪದ ಕಲೆಗಳು ನಶಿಸಿ ಹೋಗಲಿವೆ ಎಂದು ಜಾನಪದ ಕಲಾವಿದರಾದ ಹಾಲಪ್ಪ ವಿಷಾದ ವ್ಯಕ್ತಪಡಿಸಿದರು.

ಪಟ್ಟಣದ ಸೊಪ್ಪಿನ ಕಾಳಮ್ಮ ಪದವಿ ಪೂರ್ವ ಕಾಲೇಜಿನಲ್ಲಿ ಕರ್ನಾಟಕ ಜಾನಪದ ಪರಿಷತ್, ಚಂದ್ರಶೇಖರ್ ಕಲಾ ಬಳಗ ಅಂಗೂರು ಹಾಗೂ ಕನ್ನಡ ಮತ್ತು ಸಂಸ್ಕೃತ ಇಲಾಖೆ ಇವರ ಸಹಯೋಗದಲ್ಲಿ ಆಯೋಜಿಸಿದ ಜಾನಪದ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ಗ್ರಾಮೀಣ ಭಾಗದ ಜನತೆ ಇಂದಿಗೂ ನಮ್ಮ ಮನೋರಂಜನೆಗಾಗಿ ಹಬ್ಬ ಹರಿದಿನಗಳಲ್ಲಿ ನಾಟಕ, ಬಯಲಾಟ, ಸಣ್ಣಾಟ, ತೊಗಲುಗೊಂಬೆ, ಹಂತಿಪದ ಮುಂತಾದ ಜಾನಪದ ಕಲೆಗಳು ಪ್ರದರ್ಶನಗೊಳಿಸಿ ಸಂತೋಷ ಪಡುತ್ತಿದ್ದರು ಆದರೆ ಇಂದಿನ ಯುವ ಪೀಳಿಗೆ ನಮ್ಮ ಸಂಸ್ಕೃತಿ ಆಚಾರ ವಿಚಾರ ಪದ್ಧತಿಗಳು ಮೊಬೈಲ್ ಬಂದ ಮೇಲೆ ಜಾನಪದ ಕಲೆಗಳನ್ನು ಮರೆಯುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಉಪ ಪ್ರಾಚಾರ್ಯರಾದ ಡಿ.ವೀರಣ್ಣ ಅಧ್ಯಕ್ಷತೆವಹಿಸಿದ್ದರು. ಜಾನಪದ ಕಲೆಗಳ ಕುರಿತು ಶಿಕ್ಷಕ ರಾಮಪ್ಪ ಕೋಟಿಹಾಳ ಉಪನ್ಯಾಸ ನೀಡಿದರು. ಪುರಸಭೆಯ ಮಾಜಿ ಅಧ್ಯಕ್ಷ ಕೋಡಿಹಳ್ಳಿ ಕೊಟ್ರೇಶ್, ಹಿರಿಯ ಕಲಾವಿದ ಬೀರಬ್ಬಿ ಬಸವರಾಜ್, ಕಬ್ಬು ಬೆಳೆಗಾರ ಸಂಘದ ಅಧ್ಯಕ್ಷ ಬೆನ್ನೂರು ಹಾಲೇಶಪ್ಪ, ಜಾನಪದ ಕಲಾವಿದ ಕೆಸಿ ಪರಶುರಾಮ್ ಅಂಗೂರ್, ಉಪಸ್ಥಿತರಿ ದ್ದರು. ನಂತರ ರಂಗ ಗೀತೆಗಳನ್ನು ಎಚ್.ಅಂಜಿನಪ್ಪ ಮತ್ತು ತಂಡ, ಜಾನಪದ ಗೀತೆಗಳನ್ನು ಟಿ. ರಾಮಪ್ಪ ಮತ್ತು ತಂಡ ನಡೆಸಿಕೊಟ್ಟರು.

ಕೆ.ಮೌಲಾಸಾಬ್ ಪ್ರಾರ್ಥನೆ ಹಾಡಿದರು. ಶಿಕ್ಷಕ ಗಡ್ಡಿ ಶಿವ್‌ಕುಮಾರ್ ಸ್ವಾಗತಿಸಿದರು. ಶಿಕ್ಷಕ ಸುಂಕದ ಬಸವರಾಜ್ ನಿರೂಪಿಸಿ ವಂದಿಸಿದರು.

ಜಾನಪದ ಸಂಭ್ರಮ ಕಾರ್ಯಕ್ರಮವನ್ನು ಜಾನಪದ ಕಲಾವಿದರಾದ ಹಾಲಪ್ಪ ಉದ್ಘಾಟಿಸಿದರು.

ರಸ್ತೆ ಕಾಮಗಾರಿಗೆ ಸಂಸದರಿಂದ ಚಾಲನೆ

ಸಂಡೂರು: ತಾಲೂಕಿನಾದ್ಯಂತ ರಸ್ತೆಗಳ ಸಂಪರ್ಕ ಕ್ರಾಂತಿಯನ್ನು ಮಾಡಲಾಗಿದೆ ಎಂದು ಸಂಸದ ಈ.ತುಕಾರಾಂ ತಿಳಿಸಿದರು. ತಾಲೂಕಿನ ಮೆಟ್ರಿಕ್ ಗ್ರಾಮದಿಂದ ಮುರಾರ್ಜಿ ದೇಸಾಯಿ ವಸತಿ ಶಾಲೆ ವರೆಗೆ ರಸ್ತೆ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಿದರು ಮಾತನಾಡಿದರು. ತಾಲೂಕು ಕೇಂದ್ರದಿಂದ ಎಲ್ಲಾ ಗ್ರಾಮಗಳಿಗೆ, ಹೋಬಳಿಗಳಿಗೆ ಪೂರ್ಣ ರಸ್ತೆಗಳನ್ನು ಮಾಡುವ ಮೂಲಕ ಎಲ್ಲಾ ರೀತಿಯ ಸಂಪರ್ಕ ಪ್ರಗತಿ ಮಾಡಿದ್ದು ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು. ರಸ್ತೆಗಳಿಂದ ಗ್ರಾಮೀಣ ಜನರು ತಾಲೂಕು ಕೇಂದ್ರದ ಸಂಪರ್ಕ ಬಹು ಸರಳವಾಗುತ್ತಿದೆ, ಅಲ್ಲದೆ ವ್ಯಾಪಾರ ವಹಿವಾಟು ಹೆಚ್ಚುವುದರ ಜತೆಗೆ ಆರ್ಥಿಕ ಪ್ರಗತಿಗೆ ಸಹಕಾರಿಯಾಗಲಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಮೆಟ್ರಿಕ್ ಗ್ರಾಮದಲ್ಲಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 1 ಕೋಟಿ ರುಪಾಯಿ ವೆಚ್ಚದಲ್ಲಿ ವೈದ್ಯರ ವಸತಿ ಗೃಹಗಳ ನಿರ್ಮಣಕ್ಕೆ ಭೂಮಿ ಪೂಜೆ ಮಾಡಿ ಪ್ರತಿಯೊಬ್ಬ ಆರೋಗ್ಯ ಸಿಬ್ಬಂದಿ ಇಲ್ಲಿಯೇ ಇದ್ದು ಆರೋಗ್ಯ ರಕ್ಷಣೆಗೆ ಮುಂದಾಗಬೇಕು. ನೂತನವಾಗಿ 108 ಹೊಸ ಅಂಬ್ಯುಲೆನ್ಸ್ ವ್ಯವಸ್ಥೆ ಮಾಡಲಾಗಿದ್ದು ಅದರ ಪೂರ್ಣ ಬಳಕೆಯನ್ನು ಮಾಡಿಕೊಳ್ಳಬೇಕು ಎಂದು ಹೇಳಿದರು. ಮುಖಂಡರಾದ ತುಮಟಿ ಲಕ್ಷ್ಮಣ, ಹೊಸಗೇರಪ್ಪ, ದೇವದಾಸ, ಸೋಮಪ್ಪ, ಶಿವಕುಮಾರ್, ತಾಪಂ ಇಒ ಷಡಾಕ್ಷರಿ, ತಹಸೀಲ್ದಾರ್ ಅನಿಲ್ ಕುಮಾರ್, ತಾಲೂಕು ಆರೋಗ್ಯಾಧಿಕಾರಿ ಡಾ. ಭರತ್, ಡಾ. ಐ.ಆರ್. ಅಕ್ಕಿ ಇತರರಿದ್ದರು.

ಹೊಸಪೇಟೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಹಿಂದಿನ ನೂತನ ಡಿಎಆರ್ ಕಟ್ಟಡ ಪರೇಡ್ ಗ್ರೌಂಡ್ ಆವರಣದಲ್ಲಿ ಆಗಸ್ಟ್ 7ರಂದು ನಡೆದ ಈ ಕಾರ್ಯಕ್ರಮದಲ್ಲಿ, ಪೊಲೀಸ್ ಗೃಹ–25 ಯೋಜನೆಯಡಿ 36 ವಸತಿ ಗೃಹಗಳನ್ನು ನಿರ್ಮಾಣ ಮಾಡುವುದಕ್ಕೆ ಗೃಹ ಸಚಿವ ಡಾ.ಪರಮೇಶ್ವರ ಅವರು ಭೂಮಿಪೂಜೆ ನೆರವೇರಿಸಿದರು. ಜತೆಗೆ ಪೊಲೀಸ್ ಕವಾಯತು ಮೈದಾನ, ಧ್ವಜ ಸ್ತಂಭವನ್ನು ಸಹ ಉದ್ಘಾಟಿಸಿದರು.

ಶಿಕ್ಷಕರ ಹೋರಾಟಕ್ಕೆ ಶಿಕ್ಷಕ ಸಂಘ ಬೆಂಬಲ

ಹೂವಿನಹಡಗಲಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಿಕ್ಷಕರ ಸಂಘ ಹೋರಾಟಕ್ಕಾಗಿ ಪ್ರಾಥಮಿಕ ಶಿಕ್ಷಕರ ಸಂಘ ತಾಲೂಕು ಘಟಕದಿಂದ ಸುಮಾರು 300 ಜನ ಶಿಕ್ಷಕರು 2016ರ ವೃಂದ ಹಾಗೂ ನೇಮಕಾತಿ ತಿದ್ದುಪಡಿ ಅವೈಜ್ಞಾನಿಕ ವಿರುದ್ಧ ಬೆಂಗಳೂರಿನಲ್ಲಿ ಫ್ರೀಡಂ ಪಾರ್ಕಿನಲ್ಲಿ ನಡೆಯುವ ಹೋರಾಟಕ್ಕೆ ಬೆಂಬಲ ಸೂಚಿಸಿ ಶಾಸಕರಾದ ಕೃಷ್ಣನಾಯ್ಕ್ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಮಾನ್ಯ ತಹಸಿಲ್ದಾರರಿಗೆ ಗುರುಗಳು ಗುರುಮಾತಿಯರು ಮನವಿ ಸಲ್ಲಿಸಿದರು.

ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷ ಆನಂದ್, ಕಾರ್ಯದರ್ಶಿ ವಿ.ಎಚ್.ಯೇಸು ಉಪಾಧ್ಯಕ್ಷರಾದ ಸಿ. ಮೈಲಾರಿ ಕೋಶದಕ್ಷರದ ಪಕ್ಕೀರಸಾಬ್, ಮಹಿಳಾ ಘಟಕದ ಜಿಲ್ಲಾ ಸಹ ಕಾರ್ಯದರ್ಶಿ ಸಿದ್ದಮ್ಮ ಉಪಾಧ್ಯಕ್ಷರಾದ ವಿನೋದಕುಮಾರಿ, ತಾಲೂಕು ಸಂಘಟನಾ ಕಾರ್ಯದರ್ಶಿಯಾದ ಸರೋಜಮ್ಮ ತಾಲೂಕು ಸಹಕಾರ್ಯದರ್ಶಿ ಎನ್.ಡಿ.ರೇಖಾ, ಮಾಜಿ ಅಧ್ಯಕ್ಷರಾದ ವಿ ಬಿ ಜಗದೀಶ್ ನಿರ್ದೇಶಕದ ಚಂದ್ರಪ್ಪ ತಳವಾರ್ ಸಂಘಟನೆ ಕಾರ್ಯದರ್ಶಿ ಮಹಾಂತೇಶ್ ಹಾಜರಿದ್ದರು

ಹೂವಿನಹಡಗಲಿ ಪಟ್ಟಣದಲ್ಲಿ ಶಿಕ್ಷಕರ ಹೋರಾಟಕ್ಕೆ ಬೆಂಬಲಿಸಿ ತಾಲೂಕು ಶಿಕ್ಷಕ ಸಂಘದಿಂದ ಬೆಂಬಲಿಸಿ ತಹಸಿಲ್ದಾರರಿಗೆ ಮನವಿ ಸಲ್ಲಿಸಿದರು.

ಇದು ಭಾರತ ಮತ್ತು ಭಾರತೀಯ ಕುಸ್ತಿಪಟುಗಳ ವಿರುದ್ಧ ದೊಡ್ಡ ಪಿತೂರಿಯಾಗಿದೆ. ವಿನೇಶ್ ಪ್ರದರ್ಶನ ಮೆಚ್ಚುವಂಥದ್ದು. ಬಹುಶಃ ಕೆಲವರಿಗೆ ಈ ಸಂತಸವನ್ನು ಅರಗಿಸಿಕೊಳ್ಳಲಾಗಿಲ್ಲ. ಒಂದೇ ರಾತ್ರಿಯಲ್ಲಿ ಐದರಿಂದ ಆರು ಕೆ.ಜಿ.ತೂಕವನ್ನು ನಾವು ಇಳಿಸಿಕೊಳ್ಳಬಹುದು,ಹೀಗಾಗಿ 100 ಗ್ರಾಂ ಹೆಚ್ಚುವರಿ ತೂಕಕ್ಕೆ ಸಮಸ್ಯೆಯೇನಿತ್ತು?

– ವಿಜೇಂದರ್ ಸಿಂಗ್, ಮಾಜಿ ಕುಸ್ತಿಪಟು

ಪದಕ ಪಟ್ಟಿ

	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಭಾರತ	0	0	3	3
ಅಮೆರಿಕ	24	31	32	87
ಚೀನಾ	23	22	16	61
ಆಸ್ಟ್ರೇಲಿಯಾ	15	12	10	37
ಫ್ರಾನ್ಸ್	13	16	19	48
ಗ್ರೇಟ್ ಬ್ರಿಟನ್	11	8	7	26
ದಕ್ಷಿಣ ಕೊರಿಯಾ	11	8	7	26
ಜಪಾನ್	11	6	12	29
ಇಟಲಿ	9	10	7	26
ನೆದರ್ಲೆಂಡ್ಸ್	9	5	6	20

ಮೈಕ್ರೋ ಮಾಹಿತಿ

ಹಾಕಿ ಸ್ಟಿಕ್‌ನ ಆಕಾರ

- ಹಾಕಿಯಲ್ಲಿ ಮೂರು ವಿಧಗಳಿವೆ.
- ಲ್ಯಾಕ್ರಾಸ್, ಫೀಲ್ಡ್ ಹಾಕಿ ಮತ್ತು ಐಸ್‌ಫೀಲ್ಡ್ ಹಾಕಿ
- ಈ ಮೂರು ಆಟಗಳು ಒಂದೆ ಆದರೂ ಸ್ಟಿಕ್‌ಗಳು ಮಾತ್ರ ಬೇರೆ ಬೇರೆಯಾಗಿವೆ.
- ಹಾಕಿ ಸ್ಟಿಕ್‌ಗಳಲ್ಲಿ ಮತ್ತೆ ವಿಭಾಗಗಳಿದ್ದು, ಮೂರು ಬಗೆಯ ಸ್ಟಿಕ್‌ಗಳಿವೆ.
- ಜ್ಯೂನಿಯರ್ ಸ್ಟಿಕ್

- ಇಂಟರ್ ಮಿಡಿಯೆಟ್
- ಸೀನಿಯರ್ ಸ್ಟಿಕ್
- ಜ್ಯೂನಿಯರ್ ಸ್ಟಿಕ್ 49 ರಿಂದ 52 ಇಂಚು ಇರುತ್ತದೆ.
- ಇಂಟರ್ ಮಿಡಿಯೆಟ್ ಸ್ಟಿಕ್ 57 ರಿಂದ 58 ಇಂಚು ಇರುತ್ತದೆ.
- ಸೀನಿಯರ್ ಸ್ಟಿಕ್ 59 ರಿಂದ 60 ಇಂಚು ಇರುತ್ತದೆ.



ಆಕಾರ

- ಹಾಕಿ ಸ್ಟಿಕ್‌ನ ಕೆಳ ಭಾಗ 4.33–4.88 ಇಂಚು ಮತ್ತು 110–124 ಮೀಲಿಮೀ. ಇರುತ್ತದೆ.
- ಸ್ಟಿಕ್‌ನ ಹ್ಯಾಂಡಲ್ 30.5–35.6 ಸೆಂಟಿ ಮೀ. ಇರುತ್ತದೆ.
- ಪೂರ್ಣ ಹಾಕಿ ಸ್ಟಿಕ್ 104 ಸೆಂಟಿಮೀ ಇರುತ್ತದೆ.



ಲೋಕಸಭೆಯಲ್ಲಿ ಚರ್ಚೆ

ಭಾರತದ ಕುಸ್ತಿಪಟು ವಿನೇಶ್ ಫೋಗಟ್ ಅವರನ್ನು ಒಲಿಂಪಿಕ್ಸ್‌ನಿಂದ ಅನರ್ಹಗೊಳಿಸಿರುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವಂತೆ ಭಾರತ ಒಲಿಂಪಿಕ್ ಸಂಸ್ಥೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಸೂಚನೆ ನೀಡಿದ್ದಾರೆ ಎಂದು ಲೋಕಸಭೆಗೆ ಕೇಂದ್ರ ಸರಕಾರ ಬುಧವಾರ ತಿಳಿಸಿದೆ. ಈ ಕುರಿತು ಲೋಕಸಭೆಗೆ ಮಾಹಿತಿ ನೀಡಿರುವ ಕೇಂದ್ರ ಸಚಿವ ಮನ್ಸುಖ್ ಮಾಂಡವೀಯ, 'ಫೋಗಟ್ ಅನರ್ಹ ಸಂಬಂಧ ಯುನೈಟೆಡ್ ವರ್ಲ್ಡ್ ರೆಸ್ಲಿಂಗ್‌ಗೆ ಭಾರತ ಒಲಿಂಪಿಕ್ಸ್ ಸಂಸ್ಥೆ ತೀವ್ರ ಪ್ರತಿಭಟನೆ ದಾಖಲಿಸಿದೆ' ಎಂದು ತಿಳಿಸಿದ್ದಾರೆ. ಭಾರತ ಪ್ರಧಾನಿ ನರೇಂದ್ರ ಮೋದಿ ಅವರು ಐಒಎ ಅಧ್ಯಕ್ಷೆ ಪಿ.ಟಿ.ಉಷಾ ಅವರೊಂದಿಗೆ ಮಾತನಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ' ಎಂದು ಅವರು ಹೇಳಿದ್ದಾರೆ. ಫೋಗಟ್ ಅನರ್ಹಗೊಂಡಿರುವುದಕ್ಕೆ ಸಂಬಂಧಿಸಿದಂತೆ ವಿಪಕ್ಷಗಳು ಸದನವನ್ನು ಸಭಾತ್ಯಾಗ ಮಾಡಿದ. 100 ಗ್ರಾಂ ತೂಕ ಹೆಚ್ಚಿದ್ದರಿಂದ ಭಾರತದ ಕುಸ್ತಿಪಟು ವಿನೇಶಾ ಫೋಗಟ್ ಅವರು ಒಲಿಂಪಿಕ್ಸ್‌ನಿಂದ ಅನರ್ಹಗೊಂಡಿದ್ದಾರೆ. ವಿನೇಶ್ ಅವರು ಮಹಿಳೆಯರ 50 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸಿದ್ದರು. ಸ್ಪರ್ಧೆಯ ನಿಯಮದ ಅನ್ವಯ ಅವರ ತೂಕ 50 ಕೆ.ಜಿ ಇರಬೇಕಿತ್ತು' ಎಂದು ಅವರು ತಿಳಿಸಿದ್ದಾರೆ. ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ ನಿಯಮದ ಅನ್ವಯ ಸ್ಪರ್ಧೆಗೂ ಮುನ್ನ ಪ್ರತಿದಿನ ಬೆಳಿಗ್ಗೆ ತೂಕವನ್ನು ಅಳೆಯಲಾಗುತ್ತದೆ. ಆಗಸ್ಟ್ 7 ಬೆಳಿಗ್ಗೆ 7.15ರಿಂದ 7.15ರ (ಪ್ಯಾರಿಸ್ ಸಮಯ) ನಡುವೆ ನಡೆಸಿದ ಪರೀಕ್ಷೆಯಲ್ಲಿ ವಿನೇಶಾ ಅವರ ತೂಕ 50 ಕೆ.ಜಿ 100 ಗ್ರಾಂ ಇತ್ತು. ಇದರಿಂದಾಗಿ ಅನರ್ಹಗೊಂಡರು ಎಂದು ಅವರು ಮಾಹಿತಿ ನೀಡಿದ್ದಾರೆ.

ಫೈನಲ್‌ನಲ್ಲಿ ಆಡುವುದು ಯಾರು?

ಸೆಮಿಫೈನಲ್‌ನಲ್ಲಿ ವಿನೇಶ್ ವಿರುದ್ಧ ಸೋತ ಕ್ಯೂಬಾ ಆಟಗಾರ್ತಿ ಈಗ ಫೈನಲ್‌ನಲ್ಲಿ ಅದೃಷ್ಟ ಪರೀಕ್ಷೆ ನಡೆಸಲಿದ್ದಾರೆ.

ಆಸ್ಪತ್ರೆಗೆ ದಾಖಲಾದ ಫೋಗಾಟ್

ತೂಕ ಹೆಚ್ಚಾದ ಕಾರಣ ಅನರ್ಹಗೊಂಡಿದ್ದ ಭಾರತದ ಕುಸ್ತಿಪಟು ವಿನೇಶ್ ಫೋಗಟ್ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ತಿಳಿದುಬಂದಿದೆ. ಮೂಲಗಳ ಪ್ರಕಾರ ತೂಕ ಇಳಿಕೆಗಾಗಿ ಇಡೀ ರಾತ್ರಿ ನೀರು ಸೇವಿಸದೇ ವರ್ಕೌಟ್ ಮಾಡಿದ ಕಾರಣ ವಿನೇಶ್ ಫೋಗಟ್ ದೇಹದ ತೀವ್ರ ನಿರ್ಜಲೀಕರಣ ಸಮಸ್ಯೆಗೆ ತುತ್ತಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎನ್ನಲಾಗಿದೆ. ಈ ಬಗ್ಗೆ ಇಂಡಿಯನ್ ಒಲಿಂಪಿಕ್ಸ್ ಅಸೋಸಿಯೇಷನ್‌ನ ಅಧ್ಯಕ್ಷೆ ಪಿ.ಟಿ ಉಷಾ ಮಾಹಿತಿ ನೀಡಿದ್ದು, ದೇಹದ ತೀವ್ರ ನಿರ್ಜಲೀಕರಣದಿಂದಾಗಿ ಸುಸ್ತಾಗಿದ್ದ ವಿನೇಶ್ ಫೋಗಟ್ ರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಕ್ರೀಡಾಕೂಟದ ವಿಲೇಜ್ ಪಾಲಿಕ್ಲಿನಿಕ್ಗೆ ಕರೆದೊಯ್ಯಲಾಗಿತ್ತು. ಅಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ವೈದ್ಯರು ಐವಿ ದ್ರಾವಣ ನೀಡಿದ್ದಾರೆ. ನಾವು ಸ್ಥಳೀಯ ಆಸ್ಪತ್ರೆಯಲ್ಲಿ ರಕ್ತ ಪರೀಕ್ಷೆಯನ್ನು ಸಹ ಮಾಡಿಸಿದ್ದೇವೆ. ವರದಿಯಲ್ಲಿ ಎಲ್ಲವೂ ಸರಿಯಾಗಿದೆ ಎಂದು ಖಚಿತಪಡಿಸಿಕೊಳ್ಳುತ್ತಿದ್ದೇವೆ. ಈ ಪ್ರಕ್ರಿಯೆಯ ಉದ್ದಕ್ಕೂ ವಿನೇಶ್ರ ಎಲ್ಲಾ ನಿಯತಾಂಕಗಳು ಸಾಮಾನ್ಯವಾಗಿದ್ದವು. ಆಕೆ ಆರೋಗ್ಯವಾಗಿದ್ದಾಳೆ ಎಂದು ಹೇಳಿದ್ದಾರೆ.

ದೂರು ದಾಖಲು

ವಿನೇಶ್ ಫೋಗಟ್ ಅವರನ್ನು ಅನರ್ಹ ಮಾಡಿದ ಕುರಿತು ಭಾರತದ ನಿಯೋಗದಿಂದ ದೂರು ದಾಖಲಿಸಲಾಗಿದೆ. ಭಾರತೀಯ ಒಲಿಂಪಿಕ್ಸ್ ಸಂಸ್ಥೆ ಕೂಡ ವಿನೇಶ್ ಫೋಗಟ್ ಅನರ್ಹತೆಯನ್ನು ಖಚಿತಪಡಿಸಿದೆ. ವಿನೇಶ್ ಅವರು 50 ಕೆಜಿ ತೂಕ ವಿಭಾಗದಲ್ಲಿ ಸ್ಪರ್ಧಿಸಿದ್ದರು, ಆದರೆ ಅವರ ತೂಕ ನಿಗದಿತ ಮಿತಿಗಿಂತ ಹೆಚ್ಚಿರುವುದರಿಂದ ಅವರನ್ನು ಕುಸ್ತಿ ಪಂದ್ಯದಿಂದ ಅನರ್ಹಗೊಳಿಸಲಾಗಿದೆ. ಇದನ್ನು ಪ್ರಶ್ನಿಸಿ ನಾವು ಅಂತಾರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಗೆ ದೂರು ದಾಖಲಿಸಿದ್ದೇವೆ. ಸ್ಪರ್ಧೆಯ ನಂತರ ಕೆಲವೊಮ್ಮೆ ಮರುಕಳಿಸುವ ತೂಕ ಹೆಚ್ಚಾಗುತ್ತದೆ ಎಂದು ಭಾರತೀಯ ಒಲಿಂಪಿಕ್ ಸಮಿತಿ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

50 ಕೆಜಿ ಕುಸ್ತಿ ವಿಭಾಗದಿಂದ ಫೈನಲಿಸ್ಟ್ ಫೊಗಾಟ್ ಅನರ್ಹ | ತೂಕದಲ್ಲಿ ಹೆಚ್ಚಳ | ಮೇಲ್ಮನವಿ ಸಲ್ಲಿಕೆ | ಐಒಸಿ ವಿರುದ್ಧ ತೀವ್ರ ಪ್ರತಿಭಟನೆ

100 ಗ್ರಾಂ ತೂಕದಿಂದ ವಿನೇಶ ಕನಸು ನಾಶ



ಪ್ಯಾರಿಸ್: ಸೆಮಿಫೈನಲ್‌ನಲ್ಲಿ ಭರ್ಜರಿ ಗೆಲುವು ಸಾಧಿಸುವ ಮೂಲಕ 50ಕೆಜಿ ಮಹಿಳಾ ಫ್ರೀಸ್ಟೈಲ್ ಕುಸ್ತಿ ವಿಭಾಗದಲ್ಲಿ ಫೈನಲ್‌ಗೇರಿದ್ದ ವಿನೇಶ್ ಫೊಗಾಟ್ ಅವರು ಒಲಿಂಪಿಕ್ಸ್‌ನ ಫೈನಲ್ ಆಡಲು ಅನರ್ಹರಾಗಿದ್ದಾರೆ!.

ಭಾರತ ಈ ಬಾರಿ ಒಲಿಂಪಿಕ್ಸ್‌ನಲ್ಲಿ ಪದಕದ ಹತ್ತಿರ ಬಂದು ಸೋಲನುಭವಿಸುತ್ತಿದೆ. ಈ ಹಿಂದೆ ಪಿ.ವಿ.ಸಿಂಧು ಅವರು ಬ್ಯಾಡ್ಮಿಂಟನ್ ವಿಭಾಗದಲ್ಲಿ ಕ್ವಾ.ಫೈನಲ್ ಪ್ರವೇಶಿಸಿ ಕೊನೇ ಕ್ಷಣದಲ್ಲಿ ಸೋಲನುಭವಿಸಿದ್ದರು. ಅದಕ್ಕೂ ಮುನ್ನ ಬಬುಟಾ ಅವರು ಶೂಟಿಂಗ್‌ನಲ್ಲಿ ಆಘಾತ ಅನುಭವಿಸಿ ನಾಲ್ಕನೇ ಸ್ಥಾನ ಪಡೆಯುವ ಮೂಲಕ ನಿರಾಸೆ ಮೂಡಿಸಿದ್ದರು. ಇದೀಗ ಅದೆಲ್ಲದಕ್ಕೂ ಮೀರಿ ಸೆಮಿಸ್‌ನಲ್ಲಿ ಗೆಲ್ಲುವ ಮೂಲಕ ಪದಕ ಖಚಿತ ಪಡಿಸಿಕೊಂಡಿದ್ದ ವಿನೇಶ್ ಫೊಗಾಟ್ ಅವರಿಗೂ ಪದಕ ಕೈ ತಪ್ಪಿದೆ.

ಫೈನಲ್‌ಗೇರಿದ್ದ ಫೊಗಾಟ್ ಅವರ ತೂಕದಲ್ಲಿ ಹೆಚ್ಚಳ ಕಂಡಿರುವ ಹಿನ್ನಲೆಯಲ್ಲಿ ಅವರು ಒಲಿಂಪಿಕ್ಸ್‌ನಲ್ಲಿ ಉಳಿದ ಪಂದ್ಯಗಳಲ್ಲಿ ಭಾಗವಹಿಸುವ ಅರ್ಹತೆ ಕಳೆದುಕೊಂಡಿದ್ದಾರೆ. ಈ ಹಿಂದೆ ಅವರು ಫೈನಲ್ ಪ್ರವೇಶಿಸಿದ್ದರು. ಅಲ್ಲದೆ, ಕನಿಷ್ಠ ಬೆಳ್ಳಿ ಗೆಲ್ಲಲು ಅರ್ಹರಾಗುದ್ದರು. ಆದರೆ ಅವರು ಅನರ್ಹರಾದ ನಂತರ ಈ ಅವಕಾಶ ಕೈತಪ್ಪಿದೆ.

ಕುಸ್ತಿ ವಿಭಾಗದಲ್ಲಿ ಫೈನಲ್ ಪ್ರವೇಶ ಮಾಡಿದ್ದ ವಿನೇಶ್ ಫೋಗಟ್ ಅವರು, ಭಾರತಕ್ಕೆ ಈ ಬಾರಿ ಚಿನ್ನದ ಪದಕ ಗೆಲ್ಲಿಸಿಕೊಡುವ ಹುಮ್ಮಸ್ಸಿನಲ್ಲಿ ಇದ್ದರು. ಮಂಗಳವಾರ ಅವರು ಸೆಮಿಫೈನಲ್ ಗೆದ್ದಂತೇ ಭಾರತಕ್ಕೆ ಮತ್ತೊಂದು ಪದಕ ಖಚಿತವಾಗಿತ್ತು.

ಆದರೆ ಇದೀಗ ಭೀಕರ ಆಘಾತ ನೀಡಿದ್ದು, ವಿನೇಶ್ ಫೋಗಟ್ ಅವರು ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂಟದಿಂದ ಹೊರಗಡೆ ಬಿದ್ದಿದ್ದಾರೆ. ಫೈನಲ್ ಪಂದ್ಯಕ್ಕೂ ಮುನ್ನ ನಡೆದ ವಿನೇಶ್ ಅವರ ತೂಕ ಪರೀಕ್ಷೆಯಲ್ಲಿ ಅವರ ತೂಕ ನಿಗದಿತ ಮಿತಿಗಿಂತಲೂ ಹೆಚ್ಚಾದ ಕಾರಣಕ್ಕೆ ಅವರನ್ನು ಅನರ್ಹ ಎಂದು ಐಒಸಿ ಘೋಷಣೆ ಮಾಡಿದೆ.

ಕಳೆದ ಬಾರಿ ಗಾಯಕ್ಕೆ ತುತ್ತು: ವಿನೇಶ್‌ಗೆ ಗಾಯ ಮೊದಲಿನಿಂದಲೂ ಕಾಡುತ್ತಲೇ ಇತ್ತು. ಟೋಕಿಯೋ ಒಲಿಂಪಿಕ್ಸ್‌ನಲ್ಲಿ ವಿನೇಶ್ ಗಾಯದ ಸಮಸ್ಯೆಯಿಂದ ಬಳಲಿ ದೂರ ಉಳಿದಿದ್ದರು. ಈ ಬಾರಿ ಅವರ ಮೇಲೆ ಎಲ್ಲ ಕಣ್ಣು ಸಹ ನೆಟ್ಟಿದ್ದವು. ಅಲ್ಲದೆ ಮೈದಾನದಲ್ಲೂ ಅವರು ಭರ್ಜರಿ ಪ್ರದರ್ಶನವನ್ನು ಸಹ ನೀಡಿದ್ದರು. ಈ ಮೂಲಕ ಬಂಗಾರದ ಆಸೆಯನ್ನು ಚಿಗುರಿಸಿದ್ದರು. ಆದರೆ ಈಗ ಅವರ ಬಹುದಿನಗಳ ಆಸೆಗೆ ಪೆಟ್ಟು ಬಿದ್ದಿದೆ.

ದಿನವೂ ತೂಕ ಪರೀಕ್ಷೆ

ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಕುಸ್ತಿ ಪಟುಗಳನ್ನು ಒಲಿಂಪಿಕ್ ಅಸೋಸಿಯೇಷನ್ ದಿನವೂ ಪರೀಕ್ಷೆಗೆ ಒಳ ಪಡಿಸುತ್ತದೆ. ಮೊದಲು ಅವರ ಆರೋಗ್ಯ ತಪಾಸಣೆಯನ್ನು ನಡೆಸುವ ಅಸೋಸಿಯೇಷನ್, ಬಳಿಕ ತೂಕವನ್ನು ಪರೀಕ್ಷಿಸುತ್ತದೆ. ಈ ವೇಳೆ ಕ್ರೀಡಾ ಪಟುಗಳ ತೂಕ ಹೆಚ್ಚಳವಾದಲ್ಲಿ ಅವರನ್ನು ಒಲಿಂಪಿಕ್‌ನಿಂದ ಅನರ್ಹಗೊಳಸಿಲಾಗುತ್ತದೆ.

ಆಗಿದ್ದೇನು?

ಮಂಗಳವಾರ ಪಂದ್ಯಗಳನ್ನು ಆಡಿದ ಬಳಿಕ ವಿನೇಶ್ ಎಂದಿನಂತೆ ಆಹಾರ ಸೇವನೆ ಮಾಡಿದ್ದಾರೆ. ಅಥ್ಲೀಟ್‌ಗಳ ಆಹಾರವನ್ನು ಎನರ್ಜಿ ಹಾಗೂ ವಿಟಾಮಿನ್‌ಗಳನ್ನು ರೂಪದಲ್ಲಿ ಪಡೆಯಬೇಕಾಗುತ್ತದೆ. ಇದರಂತೆ ವಿನೇಶ್ ಊಟ ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಆಗ ಅವರ ತೂಕದಲ್ಲಿ ವ್ಯತ್ಯಾಸ ಕಾಣಿಸಿಕೊಂಡಿದ್ದು, ತೂಕ ಇಳಿಸಿಕೊಳ್ಳಲು ರಾತ್ರಿ ಇಡಿ ಅವರು ಬೆವರು ಹರಿಸಿದ್ದಾರೆ ಎಂದು ತಿಳಿಸಿದ್ದಾರೆ. ಮಂಗಳವಾರವೇ ಅವರ ತೂಕ ಹೆಚ್ಚಾಗಿರುವ ಅವರ ಅರಿವೆಗೆ ಬಂದಿತ್ತು. ಅವರು ಹೀಗಾಗಿ ರಾತ್ರಿ ಇಡಿ ವ್ಯಾಯಾಮ ಮಾಡಿ ತೂಕ ನಷ್ಟಕ್ಕೆ ಮುಂದಾಗಿದ್ದರು. ಆದರೆ ನಿಗದಿತ ತೂಕಕ್ಕಿಂತ 100 ಗ್ರಾಮ್ ಹೆಚ್ಚು ತೂಕ ಹೊಂದಿದ್ದರಿಂದ ಅವರನ್ನು ಅನರ್ಹಗೊಳಿಸಲಾಗಿದೆ.

15 ನಿಮಿಷಗಳ ಪ್ರಕ್ರಿಯೆ

ವಿಶ್ವ ಕುಸ್ತಿ ನಿಯಮಗಳ ಆರ್ಟಿಕಲ್ 11ರ ಅಧ್ಯಾಯ 3 ರ ಪ್ರಕಾರ ಎಲ್ಲಾ ಸ್ಪರ್ಧೆಗಳಿಗೂ ಪ್ರತಿ ದಿನ ಬೆಳಿಗ್ಗೆ ಸಂಬಂಧಪಟ್ಟ ತೂಕ–ವಿಭಾಗದಲ್ಲಿ ತೂಕವನ್ನು ಪರಿಶೀಲಿಸಲಾಗುತ್ತದೆ. ತೂಕ ಮತ್ತು ವೈದ್ಯಕೀಯ ಸಂಬಂಧಿತ ಪ್ರಕ್ರಿಯೆಗಳನ್ನು 30 ನಿಮಿಷಗಳವರೆಗೆ ನಡೆಸಲಾಗುತ್ತದೆ. ಸಂಬಂಧಿತ ತೂಕ ವಿಭಾಗದ ಎರಡನೇ ದಿನ ಬೆಳಿಗ್ಗೆ ರೆಪೆಚೇಜ್ ಮತ್ತು ಫೈನಲ್‌ಗಳಲ್ಲಿ ಭಾಗವಹಿಸುವ ಕುಸ್ತಿಪಟುಗಳು ಮಾತ್ರ ತೂಕ ಪರಿಶೀಲನೆ ಬರಬೇಕು. ಇದರ ಸಂಬಂಧಿತ ಪ್ರಕ್ರಿಯೆಗಳು 15 ನಿಮಿಷಗಳವರೆಗೆ ಇರುತ್ತದೆ.

ಲೈಸೆನ್ಸ್ ಮತ್ತು ವೈದ್ಯಕೀಯ ಪರೀಕ್ಷೆ

ಕುಸ್ತಿಪಟುಗಳು ತಮ್ಮ ಲೈಸೆನ್ಸ್ ಮತ್ತು ಮಾನ್ಯತೆಯೊಂದಿಗೆ ವೈದ್ಯಕೀಯ ಪರೀಕ್ಷೆ ಮತ್ತು ತೂಕದ ಟೆಸ್ಟ್‌ನಲ್ಲಿ ಕಾಣಿಸಿಕೊಳ್ಳಬೇಕು. ಸಮವಸ್ತ್ರದ ಮೂಲಕ ಸ್ಪರ್ಧಿಗಳು ತೂಕಕ್ಕೆ ಹಾಜರಾಗಬೇಕು.

ಮಂಗಳವಾರ ಏನಾಗಿತ್ತು?

ಮಹಿಳೆಯರ 50 ಕೆಜಿ ಫ್ರಿ ಸ್ಟೈಲ್ ಕುಸ್ತಿ ಪಂದ್ಯಗಳು ಮಂಗಳವಾರ ಆರಂಭವಾದವು. ಈ ವೇಳೆ ಒಲಿಂಪಿಕ್ಸ್ ಅಸೋಸಿಯೇಷನ್ ಮಾನದಂಡದಡಿ ಕುಸ್ತಿ ಪಟುಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಈ ವೇಳೆ ವಿನೇಶ್ ಸಹ ಪರೀಕ್ಷೆಗೆ ಒಳಪಟ್ಟಿದ್ದರು.

ಸಾಂಕ್ರಾಮಿಕ ರೋಗದ ಅಪಾಯವನ್ನು ನಿಯಂತ್ರಿಸುವ ಸಲುವಾಗಿ ಅರ್ಹ ವೈದ್ಯರಿಂದ ಪರೀಕ್ಷಿಸಲ್ಪಟ್ಟ ನಂತರ ಕುಸ್ತಿಪಟುವಿನ ತೂಕಕ್ಕೆ ಅನುಮತಿ ನೀಡಲಾಗುತ್ತದೆ.

ವಿವಿಧ ನಿಯಮಗಳು

ಸ್ಪರ್ಧಿಗಳು ದೈಹಿಕ ಸ್ಥಿತಿ ಪರಿಪೂರ್ಣವಾಗಿರಬೇಕು. ಅವರ ಉಗುರುಗಳನ್ನು ತುಂಬಾ ಚಿಕ್ಕದಾಗಿ ಕತ್ತರಿಸಬೇಕು. ತೂಕದ ಅವಧಿಯುದ್ದಕ್ಕೂ ಕುಸ್ತಿಪಟುಗಳು ಅವರು ಬಯಸಿದಷ್ಟು ಬಾರಿ ತೂಕವನ್ನು ಪರಿಶೀಲಿಸಲು ಅವಕಾಶವನ್ನು ನೀಡಲಾಗಿರುತ್ತದೆ. ಎಲ್ಲಾ ಕುಸ್ತಿಪಟುಗಳು ತೂಕಕ್ಕೆ ಅನುಗುಣವಾದ ತೂಕವನ್ನು ಹೊಂದಿದ್ದಾರೆಯೇ ಎಂದು ರೆಫರಿಗಳು ಪರಿಶೀಲಿಸಬೇಕು

ವಿನೇಶ್‌ಗೆ ಪದಕ ಇಲ್ಲ

ಕುಸ್ತಿಯಲ್ಲಿ ಮೊದಲಿಗೆ ಅರ್ಹತಾ ಸುತ್ತು ನಡೆಯುತ್ತದೆ. ಅದಾದ ಬಳಿಕ 16ರ ಸುತ್ತು ಹಾಗೂ ಕ್ವಾರ್ಟರ್‌ಫೈನಲ್ ಆಡಿಸಲಾಗುತ್ತದೆ. ಅದರಲ್ಲಿ ಗೆದ್ದ ಕ್ರೀಡಾಪಟುಗಳು ಸೆಮಿಫೈನಲ್ ಆಡುತ್ತಾರೆ. ಸೆಮಿಸ್‌ನಲ್ಲಿ ಗೆದ್ದ ಆಟಗಾರರು ಫೈನಲ್‌ಗೆ ತಲಪುತ್ತಾರೆ. ಅಲ್ಲಿ ಅವರು ಚಿನ್ನದ ಪದಕಕ್ಕಾಗಿ ಆಡುತ್ತಾರೆ. ಫೈನಲ್ ಪಂದ್ಯದಲ್ಲಿ ಸೋತ ಆಟಗಾರರು ಬೆಳ್ಳಿ ಗೆಲ್ಲುತ್ತಾರೆ. ಸೆಮಿಸ್‌ನಲ್ಲಿ ಸೋತ ಆಟಗಾರರು ಕಂಚಿಗಾಗಿ ಸ್ಪರ್ಧಿಸುತ್ತಾರೆ. ಆದರೆ ಸೆಮಿಸ್ ಅಥವಾ ಫೈನಲ್‌ಗೆ ಬಂದು ಅನರ್ಹರಾದ ಆಟಗಾರರ ಎಲ್ಲ ಗೆಲುವುಗಳೂ ರದ್ದಾಗುತ್ತವೆ. ಹೀಗಾಗಿ ವಿನೇಶ್‌ಗೆ ಯಾವುದೇ ಪದಕ ಸಿಗುವುದಿಲ್ಲ.

ಮ್ಯಾರಥಾನ್: ಭಾರತಕ್ಕೆ ಹಿನ್ನಡೆ

ಪ್ಯಾರಿಸ್: ಮ್ಯಾರಥಾನ್ ಓಟದ ನಡಿಗೆ ಮಿಶ್ರ ರಿಲೇ ಫೈನಲ್‌ನಲ್ಲಿ ಸೂರಜ್ ಪನ್ವಾರ್ ಮತ್ತು ಪ್ರಿಯಾಂಕಾ ಗೋಸ್ವಾಮಿ ಅವರ ಭಾರತೀಯ ತಂಡವು ನಿರಾಸೆ ಅನುಭವಿಸಿದೆ. ಈ ಜೋಡಿಯ ಓಟವು ಮೂರನೇ ವಿನಿಮಯದ ಸ್ವಲ್ಪ ಸಮಯದ ನಂತರ 33.4 ಕಿ.ಮೀ ಮಾರ್ಕ್‌ನಲ್ಲಿ ಕೊನೆಗೊಂಡಿತು, ಸ್ಪೇನ್‌ನ ಅಲ್ವಾರೊ ಮಾರ್ಟಿನ್ ಮತ್ತು ಮರಿಯಾ ಪೆರೆಜ್, 2:50:31ರಲ್ಲಿ ಓಟ ಪೂರ್ಣಗೊಳಿಸಿ ಚಿನ್ನದ ಪದಕವನ್ನು ಪಡೆದರು. ಈಕ್ವೆಡಾರ್ ಮತ್ತು ಆಸ್ಟ್ರೇಲಿಯಾ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದವು.

ಕುಶಾರೆಗೆ ಆಘಾತ: ಪುರುಷರ ಹೈಜಂಪ್ ಅರ್ಹತಾ ಸುತ್ತಿನಲ್ಲಿ ಭಾರತದ ಸ್ವಪ್ನಿಲ್ ಕುಶರೆ ಅವರು ನಿರಾಸೆ ಅನುಭವಿಸಿದ್ದಾರೆ. ಬುಧವಾರ ನಡೆದ ಸ್ಪರ್ಧೆಯಲ್ಲಿ ಅರ್ಹತೆಗೆ ಬೇಕಾದ ದೂರವನ್ನು ದಾಟಲಿಲ್ಲ. ಹಾಗಾಗಿ ಅವರು ಒಲಿಂಪಿಕ್ಸ್‌ನ ತಮ್ಮ ಪಯಣ ಅಂತ್ಯಗೊಳಿಸಿದ್ದಾರೆ.

ಫೊಗಾಟ್

ಚಿನ್ನದ ನಿರೀಕ್ಷೆಯಲ್ಲಿ ನೀರಜ್

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಐತಿಹಾಸಿಕ ಸಾಧನೆ ಮಾಡಿದ್ದ, ಜಾವೆಲಿನ್ ಎಸೆತಗಾರ ನೀರಜ್ ಚೋಪ್ರಾ, ಇಂದು ನಡೆಯುವ ಫೈನಲ್ ಪಂದ್ಯದಲ್ಲಿ ಸ್ಪರ್ಧಿಸಲಿದ್ದಾರೆ. ಈ ಬಾರಿಯೂ ಚಿನ್ನದ ಪದಕ ಗೆಲ್ಲುವ ವಿಶ್ವಾಸದಲ್ಲಿದ್ದಾರೆ. ಮಂಗಳವಾರ ನಡೆದಿದ್ದ ಅರ್ಹತಾ ಸುತ್ತಿನ ಪಂದ್ಯದಲ್ಲಿ ತಮ್ಮ ಮೊದಲ ಪ್ರಯತ್ನದಲ್ಲೇ 89.34 ಮೀ. ದೂರ ಜಾವೆಲಿನ್ ಎಸೆದು ನೇರವಾಗಿ ಫೈನಲ್ ಪ್ರವೇಶಿಸಿದ್ದರು. ನೀರಜ್ ಅವರೇ ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಪಡೆದಿದ್ದರು. ಹೀಗಾಗಿ ಫೈನಲ್‌ನಲ್ಲಿಯೂ ಅವರ ಮೇಲೆ ನಿರೀಕ್ಷೆ ಇರಿಸಲಾಗಿದೆ.

ಟಿಟಿ: ಕ್ವಾ.ಫೈನಲ್‌ನಲ್ಲಿ ಮುಗ್ಗರಿಸಿದ ಭಾರತ

ಪ್ಯಾರಿಸ್: ಟೇಬಲ್ ಟೆನಿಸ್‌ನಲ್ಲಿ ಏಕೈಕ ಭರವಸೆಯಾಗಿ ಉಳಿದಿದ್ದ ಭಾರತ ಮಹಿಳಾ ಟೇಬಲ್ ಟೆನಿಸ್ ತಂಡ ಸೋಲನುಭವಿಸಿದೆ. ಈ ಮೂಲಕ ಭಾರತದ ಟಿಟಿ ಅಭಿಯಾನ ಕೊನೆಗೊಂಡಿದೆ. ಈ ಹಿಂದೆ ನಡೆದಿದ್ದ ಪಂದ್ಯಗಳಲ್ಲಿ ಭರ್ಜರಿ ಪ್ರದರ್ಶನ ತೋರುವುದರೊಂದಿಗೆ ಕ್ವಾ.ಫೈನಲ್‌ನಲ್ಲಿ ಪ್ರವೇಶ ಪಡೆದಿದ್ದ ಭಾರತ ತಂಡವು ಜರ್ಮನಿ ವಿರುದ್ಧ 1–3 ಅಂತರದಲ್ಲಿ ಸೋಲು ಕಂಡಿದೆ. ಇದರೊಂದಿಗೆ ಭಾರತದ ಮೂವರು ಆಟಗಾರ್ತಿಯರು ಸೆಮಿಫೈನಲ್ ಪ್ರವೇಶಿಸುವ ಅವಕಾಶವನ್ನು ಕೈಚೆಲ್ಲಿದ್ದಾರೆ.

ಮೊದಲ ಸಿಂಗಲ್ಸ್‌ನಲ್ಲಿ ಭಾರತದ ಅಗ್ರ ಆಟಗಾರ್ತಿ ಮಣಿಕಾ ಬಾತ್ರ ಉತ್ತಮ ಲಯದಲ್ಲಿರಲಿಲ್ಲ. ಅವರು ಆಯನೆಟ್ ಕಾಫ್ಮನ್ ವಿರುದ್ಧ ಮೊದಲ ಗೇಮ್ ಅನ್ನು 11–8ರಲ್ಲಿ ಪಡೆದರೂ, ಮುಂದಿನ ಮೂರು ಗೇಮ್‌ಗಳಲ್ಲಿ 5–11, 7–11, 5–11ರಲ್ಲಿ ಕಳೆದುಕೊಂಡು ಪಂದ್ಯ ಸೋತರು. ಈ ಹಂತದಲ್ಲಿ ಅರ್ಚನಾ 19–17, 1–11, 11–5, 11–9 ರಿಂದ ಶಿಯೊನಾ ಶಾನ್ ಅವರನ್ನು



ಸೋಲಿಸಿ ತಂಡದ ಹಿನ್ನಡೆಯನ್ನು 1–2ಕ್ಕೆ ಇಳಿಸಿದರು. ಆದರೆ ಮೂರನೇ ಸಿಂಗಲ್ಸ್‌ನಲ್ಲಿ ಕಾಫ್ಮನ್ 11–6, 11–7, 11–7 ರಿಂದ ಶ್ರೀಜಾ ಅವರನ್ನು ಮಣಿಸಿ ಜರ್ಮನಿ ಗೆಲುವನ್ನು ಖಾತರಿಪಡಿಸಿದರು.

ಜೋಡಿ ವಿಭಾಗ

ಇನ್ನು ಜೋಡಿ ವಿಭಾಗದ ಮೊದಲ ಪಂದ್ಯದಲ್ಲಿ ಭಾರತದ ಪರ ಮೊದಲ ಪಂದ್ಯವನ್ನು ಅರ್ಚನಾ ಕಾಮತ್ ಮತ್ತು ಶ್ರೀಜಾ ಅಕುಲಾ ಅವರು ಜರ್ಮನಿಯ ವಾನ್ ಯುವಾನ್ ಮತ್ತು ಶಾನ್ ಕ್ಸಿಯೋನಾ ವಿರುದ್ಧ ಆಡಿದರು. ಈ ಪಂದ್ಯದಲ್ಲಿ ಭಾರತದ ಜೋಡಿ 1–3 ಅಂತರದಲ್ಲಿ ಸೋಲನುಭವಿಸಿತ್ತು. ಮೊದಲ ಸೆಟ್ನಲ್ಲಿ ಭಾರತ 5–11 ರಿಂದ ಸೋತಿತು. ಆದರೆ ಭಾರತದ ಜೋಡಿ ಎರಡನೇ ಸೆಟ್ನಲ್ಲಿ ತಿರುಗಿ ಬಿದ್ದು 11–8 ರಿಂದ ಗೆದ್ದಿತು. ಇದಾದ ಬಳಿಕ ಜರ್ಮನಿ 10–11, 6–11 ಅಂತರದಲ್ಲಿ ಜಯ ಸಾಧಿಸಿತು.

ಎರಡನೇ ಪಂದ್ಯ: ಟೀಮ್ ಇಂಡಿಯಾ ಪರ ಮನಿಕಾ ಬಾತ್ರಾ ಮತ್ತು ಜರ್ಮನಿ ಕೌಫ್ಮನ್ ಆನೆಟ್ ಎರಡನೇ ಪಂದ್ಯವನ್ನು ಆಡಿದರು. ಈ ಪಂದ್ಯದಲ್ಲಿ ಭಾರತ 1–3 ಅಂತರದಿಂದ ಸೋಲನುಭವಿಸಿತು. ಭಾರತ ಮೊದಲ ಸೆಟ್ ಅನ್ನು 11–5 ರಿಂದ ಗೆದ್ದಿತ್ತು. ಆದರೆ ಉಳಿದ ಮೂರು ಸೆಟ್ಗಳನ್ನು ಕ್ರಮವಾಗಿ 5–11, 7–11, 5–11 ರಿಂದ ಜರ್ಮನಿ ಆಟಗಾರ್ತಿ ಗೆದ್ದರು. ನಾಲ್ಕನೇ ಪಂದ್ಯ: ಈ ಪಂದ್ಯದಲ್ಲಿ ಶ್ರೀಜಾ ಅಕುಲಾ ಮತ್ತು ಜರ್ಮನಿಯ ಕೌಫ್ಮನ್ ಆನೆಟ್ ನಡುವೆ ನಡೆಯಿತು. ಭಾರತ ಕ್ರಮವಾಗಿ 6–11, 7–11, 7–11 ರಿಂದ ಸೋತಿತ್ತು. ಕೊನೆಯಲ್ಲಿ ಭಾರತ 1–3ರಿಂದ ಸೋಲೊಪ್ಪಿಕೊಂಡಿತು.

ಸಮಾಚಾರ ಸಣ್ಣದಲ್ಲ

ನೀರಜ್ ಗೆದ್ದರೆ, ಪಂತ್ ಕಡೆಯಿಂದ ಬಹುಮಾನ

ದೆಹಲಿ: ಕ್ರಿಕೆಟಿಗ ರಿಷಭ್ ಪಂತ್ ಅವರು ನೀರಜ್ ಚೋಪ್ರಾ ಅವರಿಗೆ ಬೆಂಬಲ ಸೂಚಿಸಿದ್ದಾರೆ. ಅಲ್ಲದೆ, ನೀರಜ್‌ಗೆ ಬೆಂಬಲ ಸೂಚಿಸುವ ಅಭಿಮಾನಿಗಳಿಗೆ ಕ್ರಿಕೆಟಿಗ ರಿಷಭ್ ಪಂತ್ ಭಾರೀ ನಗದು ಬಹುಮಾನ ಘೋಷಣೆ ಮಾಡಿದ್ದಾರೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಜಾವೆಲಿನ್ ಎಸೆತಗಾರ ನೀರಜ್ ಚೋಪ್ರಾ ಅವರು ಈ ಬಾರಿಯ ಒಲಿಂಪಿಕ್ಸ್‌ನಲ್ಲಿಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ. ಅದರಂತೆ ಇಡೀ ದೇಶ ಅವರ ಬೆಂಬಲಕ್ಕೆ ನಿಂತಿದೆ. ಈ ಮಧ್ಯೆ ತಮ್ಮ ಅಧಿಕೃತ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪಂತ್, ನೀರಜ್ ಚೋಪ್ರಾ ಚಿನ್ನದ ಪದಕ ಗೆದ್ದರೆ, ಟ್ವೀಟ್ ಅನ್ನು ಲೈಕ್ ಮಾಡಿದ ಮತ್ತು ಅತಿಹೆಚ್ಚು ಕಾಮೆಂಟ್ ಮಾಡುವ ಅದೃಷ್ಟಶಾಲಿ ವಿಜೇತರಿಗೆ ನಾನು 1,00,089 ರುಪಾಯಿಗಳನ್ನು ನೀಡುತ್ತೇನೆ ಎಂದು ಟ್ವೀಟ್ ಮಾಡಿದ್ದಾರೆ. ಇದು ಮಾತ್ರವಲ್ಲದೆ ಉಳಿದ ಟಾಪ್ 10 ಜನರಿಗೆ ವಿಮಾನ ಟಿಕೆಟ್‌ಗಳನ್ನು ನೀಡಲಾಗುವುದು.

ಇಂದು ಕಣದಲ್ಲಿ

- ಅಥ್ಲೆಟಿಕ್ಸ್: 3,000 ಮೀ. ಸ್ಟೀಪಲ್‌ಚೇಸ್ ಫೈನಲ್: ಅವಿನಾಶ್ ಸಾಬ್ಲೆ. (ಆರಂಭ; ರಾತ್ರಿ 1.13)
- ಗಾಲ್ಫ್: ಮಹಿಳೆಯರ ವೈಯಕ್ತಿಕ ಸ್ಟ್ರೋಕ್ ಪ್ಲೇ ರೌಂಡ್ 2; ಅದಿತಿ ಅಶೋಕ್, ದಿಶಾ ದಾರ್ಗ. (ಆರಂಭ: ಮಧ್ಯಾಹ್ನ 12.30)
- ಹಾಕಿ: ಪುರುಷರ ಕಂಚಿನ ಸ್ಪರ್ಧೆ; ಭಾರತ VS ಸ್ಪೇನ್. (ಆರಂಭ; ಸಂಜೆ 5.30)
- ಜಾವೆಲಿನ್ ಫೈನಲ್: ನೀರಜ್ ಚೋಪ್ರಾ. ಆರಂಭ(ರಾತ್ರಿ 11.55)

ಮಿಂಚಿದ ಕನ್ನಡತಿ ಅದಿತಿ

ಪ್ಯಾರಿಸ್: ಗಾಲ್ಫ್ ಆಟಗಾರ್ತಿ ಅದಿತಿ ಅಶೋಕ್ ಅವರು ಮಹಿಳಾ ಗಾಲ್ಫ್ ಪಂದ್ಯಾವಳಿಯ ಮೊದಲ ಸುತ್ತಿನಲ್ಲಿ ಭರ್ಜರಿ ಮುನ್ನಡೆ ಸಾಧಿಸಿದ್ದಾರೆ. ಬುಧವಾರ ಲೆ ಗಾಲ್ಫ್ ನ್ಯಾಷನಲ್‌ನಲ್ಲಿ ನಡೆದ ಗಾಲ್ಫ್ ಪಂದ್ಯಾವಳಿಯಲ್ಲಿ ಅವರು ಉತ್ತಮ ಫಲಿತಾಂಶ ಪಡೆದಿದ್ದಾರೆ. ಗಾಲ್ಫ್ ವಿಭಾಗದ 18–ಹೋಲ್ ಕೋಸ್‌ನಲ್ಲಿ 72 ಸ್ಕೋರ್ ಮಾಡುವುದು ಉತ್ತಮ ಸ್ಕೋರ್ ಆಗಿದೆ. ಬುಧವಾರದಂದು ಅದಿತಿ ಅಶೋಕ್ ಅವರು ಈ ಸ್ಕೋರ್ ಅನ್ನು ಸರಿಗಟ್ಟಿದ್ದಾರೆ.

ಮಹಿಳಾ ಗಾಲ್ಫ್‌ನಲ್ಲಿ ಇನ್ನೂ ಮೂರು ಸುತ್ತುಗಳಿದ್ದು, ಮುಂದಿನ ಮೂರು ದಿನಗಳಲ್ಲಿ ನಡೆಯಲಿದೆ. ನಾಲ್ಕು ಸುತ್ತುಗಳ ಕೊನೆಯಲ್ಲಿ ಅಗ್ರ ಮೂರು ಗಾಲ್ಫ್ ಆಟಗಾರರು ವಿಜೇತರಾಗುತ್ತಾರೆ.

ಸ್ಕೋರ್: ಮಹಿಳಾ ಗಾಲ್ಫ್ ಪಂದ್ಯಾವಳಿಯ ಮೊದಲ ಸುತ್ತಿನಲ್ಲಿ ಅದಿತಿ ಅಶೋಕ್ 72 ಸ್ಕೋರ್ ಗಳಿಸಿದರು.

ಸಮಾರೋಪ ಬಹಿಷ್ಕರಿಸಿದ ರೊಮೇನಿಯಾ

ಪ್ಯಾರಿಸ್: ರೊಮೇನಿಯಾದ ಜಿಮ್ನಾಸ್ಟಿಕ್ಸ್‌ಗೆ ಕಂಚಿನ ಪದಕ ತಪ್ಪುವುದಕ್ಕೆ ಕೊನೆ ಕ್ಷಣದಲ್ಲಿ ನಡೆದ ಹೈಡ್ರಾಮಾವೇ ಕಾರಣ ಎಂದು ಆರೋಪಿಸಿ ಒಲಿಂಪಿಕ್ಸ್‌ನ ಸಮಾರೋಪ ಬಹಿಷ್ಕರಿಸುವುದಾಗಿ ರೊಮೇನಿಯಾ ಪ್ರಧಾನಿ ಮಾರ್ಸೆಲ್ ಸಿಯೊಲಾಕು ಘೋಷಿಸಿದ್ದಾರೆ.

ಜಿಮ್ನಾಸ್ಟ್ ಕ್ರೀಡೆಯಲ್ಲಿ 3ನೇ ಸ್ಥಾನದಲ್ಲಿದ್ದ ರೊಮೇನಿಯಾ ಸ್ಪರ್ಧಿ ಬಾರ್ಬೋಸು ಅಮೆರಿಕದ ಸ್ಪರ್ಧಿಗಳು ಮತ್ತು ಅಧಿಕಾರಿಗಳು ಪುನರ್ ಪರಿಶೀಲನೆಗೆ ಮನವಿ ಸಲ್ಲಿಸಿದ ಬಳಿಕ 4ನೇ ಸ್ಥಾನಕ್ಕೆ ಕುಸಿದಿದ್ದರು. ಇದು ರೊಮೇನಿಯಾ ಕ್ರೀಡಾಭಿಮಾನಿಗಳ ಆಕ್ರೋಶಕ್ಕೆ ಕಾರಣವಾಗಿದೆ. ಹಿಂದಿನ ದಿನ ರೊಮೇನಿಯಾ ಸ್ಪರ್ಧಿ ಅನಾ ಬಾರ್ಬೋಸು ಕಂಚಿನ ಪದಕ ಖಚಿತ ಎಂದು ಸಂಭ್ರಮಿಸಿದ್ದರು. ಆದರೆ ಅಮೆರಿಕ ತಂಡ ಪುನರ್ ಪರಿಶೀಲನೆಗೆ ಮನವಿ ಮಾಡಿದಾಗ ಅಮೆರಿಕ 3ನೇ ಸ್ಥಾನಕ್ಕೆ ಜಿಗಿದು ರೊಮೇನಿಯಾ 4ನೇ ಸ್ಥಾನಕ್ಕೆ ಕುಸಿದಿತ್ತು. ಇದು ರೊಮೇನಿಯಾಗೆ ಕಂಚಿನ ಪದಕ ಮಿಸ್ ಆಗುವಂತೆ ಮಾಡಿತ್ತು. ಇದೀಗ ಆಕ್ರೋಶಕ್ಕೆ ಕಾರಣವಾಗಿದೆ.

ರೊಮೇನಿಯಾ ಪ್ರಧಾನಿ ಆಕ್ರೋಶ: ಇನ್ನು ಜಿಮ್ನಾಸ್ಟ್‌ನಲ್ಲಿ ಕಂಚಿನ ಪದಕ ತಮ್ಮದೇ ಎಂದು ಸಂಭ್ರಮಿಸಿದ್ದ ರೊಮೇ ನಿಯಾ ಅಭಿಮಾನಿಗಳು ರೆಫರಿಗಳ ನಿರ್ಧಾರ ದಿಂದ ತೀವ್ರ ಆಕ್ರೋಶಗೊಂಡಿದ್ದಾರೆ. ಈ ಘಟನೆಯನ್ನು ಗಂಭೀರವಾಗಿ ಪರಿಗಣಿ ಸಿರುವ ರೊಮೇನಿಯಾ ಪ್ರಧಾನಿ ''ಜಿಮ್ನಾಸ್ಟಿಕ್ಸ್ ನಲ್ಲಿನ ಹಗರಣ ಸ್ವೀಕಾರಾರ್ಹವಲ್ಲ. ಅಲ್ಲಿ ನಮ್ಮ ಕ್ರೀಡಾಪಟುಗಳನ್ನು ಸಂಪೂರ್ಣವಾಗಿ ಅವ ಮಾನಕರ ರೀತಿಯಲ್ಲಿ ನಡೆಸಿಕೊಳ್ಳಲಾಗಿದೆ. ಪ್ರಾಮಾಣಿಕ ಕೆಲಸಕ್ಕಾಗಿ ಗಳಿಸಿದ ಪದಕವನ್ನು ಹಿಂಪಡೆದಿರುವುದು ಸಂಪೂರ್ಣವಾಗಿ ಸ್ವೀಕಾರಾರ್ಹವಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಂತಿಮ್ ಪಂಘಲ್‌ಗೂ ನಿರಾಸೆ

ಪ್ಯಾರಿಸ್: ಫೋಗಾಟ್ ಅವರು ಅನರ್ಹರಾದ ಬೆನ್ನಲ್ಲೇ ಮಹಿಳೆಯರ 53 ಕೆ.ಜಿ ವಿಭಾಗದಲ್ಲಿ ಭಾರತದ ಕುಸ್ತಿಪಟು ಅಂತಿಮ್ ಪಂಘಲ್ ಸೋಲು ಅನುಭವಿಸಿದ್ದಾರೆ. ಬುಧವಾರ ನಡೆದ ಪಂದ್ಯದಲ್ಲಿ ಟರ್ಕಿಯ ಯೆಟ್ಗಿಲ್ ಝೆನೆಪ್ ವಿರುದ್ಧ ಅಂತಿಮ್ 10–0 ಅಂತರದ ಹೀನಾಯ ಸೋಲು ಕಂಡಿದ್ದಾರೆ. ಆದರೆ ಒಂದು ವೇಳೆ ಯೆಟ್ಗಿಲ್ ಝೆನೆಪ್ ಫೈನಲ್‌ಗೆ ಪ್ರವೇಶಿಸಿದ್ದಲ್ಲಿ 'ರೆಪೆಷಾಜ್' ಸುತ್ತಿನಲ್ಲಿ ಅಂತಿಮ್ ಇನ್ನೊಂದು ಅವಕಾಶವನ್ನು ಗಿಟ್ಟಿಸಿಕೊಳ್ಳಲಿದ್ದಾರೆ.

ಜಾವೆಲಿನ್ ಥ್ರೋ: ಸೋಲು

ಮಹಿಳೆಯರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಅನು ರಾಣಿ 31 ವರ್ಷದ ಅನು ರಾಣಿ, ಅರ್ಹತಾ ಸುತ್ತಿನಲ್ಲಿ 55.81 ಮೀಟರ್ ಜಾವೆಲಿನ್ ಎಸೆದು, 15ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು.